# ಸತ್ಯವೇದದ ಅಧ್ಯಯನಗಳು

## ಅಧ್ಯಾಯ–1

## ಭೂಮಿಯ ಪಾಪದ ರಾತ್ರಿಯು ಹರ್ಷವೆಂಬ ಮುಂಜಾವಿನಲ್ಲಿ ಮುಕ್ತಾಯವಾಗುವುದು.

**ದುಃಖದ ಒಂದು ರಾತ್ರಿ ಮತ್ತು ಹರ್ಷದ ಮುಂಜಾನೆ–ಸತ್ಯವನ್ನು ಹುಡುಕುವ ಎರಡು ವಿಧಾನಗಳು–ಇದರಲ್ಲಿ ಅನುಸರಿಸಲಾಗಿರುವ ವಿಧಾನ–ಕೆಲಸದ ವ್ಯಾಪ್ತಿ–ಸತ್ಯವೇದದ ಭಕ್ತಿಪೂರ್ವ ಅಧ್ಯಾಯನ ಮತ್ತು ಅಪಾಯಕರ ಊಹೆಯ ಅಭ್ಯಾಸದ ನಡುವೆ ಇರುವ ವ್ಯತ್ಯಾಸಗಳು–ಪ್ರವಾದನೆಯ ಉದ್ದೇಶ–ಪ್ರಪಂಚ ಪ್ರಸ್ತುತ ಧಾರ್ಮಿಕ ಸ್ಥಿತಿ ಎರಡು ದೃಷ್ಟಿಕೋನದಿಂದ ಗಮನಿಸಲ್ಪಟ್ಟಿರುವುದು–ಐಗುಪ್ತದ ಕತ್ತಲು–ವಾಗ್ದಾನದ ಬಿಲ್ಲು–ನೀತಿವಂತನ ಮಾರ್ಗ ಪ್ರಗತಿಶೀಲ–ಮಹಾಮತಭ್ರಷ್ಟತೆಗೆ ಕಾರಣ–ಸುಧಾರಣೆ–ಅದೇ ಕಾರಣ ಮತ್ತೊಮ್ಮೆ ನಿಜವಾದ ಪ್ರಗತಿಯನ್ನು ಅಡ್ಡಿಮಾಡುತ್ತದೆ–ಪರಿಪೂರ್ಣ ಜ್ಞಾನವು ಪೂರ್ವ ಕಾಲದ ವಿಚಾರವಲ್ಲ ಆದರೆ ಭವಿಷ್ಯತ್ತಿನ ವಿಷಯವಾಗಿದೆ.**

ದೇವರಿಂದ ನೇಮಿತವಾಗಿರುವ ಯೋಜನೆಗಳು ಆತನು ಅಪೇಕ್ಷಿಸುವ ಕ್ರಮದಲ್ಲಿಯೇ ನಡೆಯುತ್ತಿವೆ. ದೈವಿಕ ಯೋಜನೆಯನ್ನು ಪ್ರಕಟಿಸುವ ಸಂಗತಿಗಳು ಸುಂದರವಾಗಿಯೂ ಒಂದಕ್ಕೊಂದು ಸರಿಹೊಂದುವಂತವುಗಳಾಗಿಯೂ ಇರುವುವು. ಪಾಪದ ಪ್ರವೇಶದಿಂದಾಗಿ ಮಾನವ ಜನಾಂಗವು ಅಜ್ಞಾನ ದುಃಖ ಮತ್ತು ಸಂಕಟಕ್ಕೊಳಗಾಗಿದೆ. ಆದರೆ ಕ್ರಿಸ್ತನು ನೀತಿಸೂರ್ಯನಾಗಿ ಉದಯಿಸಿ ಮಾನವ ಜನಾಂಗವನ್ನು ಮುಚ್ಚಿರುವ ಕತ್ತಲನ್ನು ಹೋಗಲಾಡಿಸಿ ಎಲ್ಲರ ಕಣ್ಣೀರನ್ನು ಒರೆಸಿ ಬಿಡುವನು ಮತ್ತು ಸಂಕಷ್ಟಗಳಿಂದ ಪಾರುಮಾಡುವನು. "ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವುದು." ಕೀರ್ತನೆ 30:5.

ಮುಂದೆ ಬರುವ ಆ ಸುವರ್ಣಯಗವನ್ನು ಮಾನವನು ತಿಳಿದಿದ್ದರೂ ಯೆಹೋವನ ಉದ್ದೇಶವನ್ನು ಅರಿತುಕೊಳ್ಳದೆ ಕುರುಡನಂತೆ ಅದನ್ನು ಹುಡುಕುತ್ತಿರುವನು. ಆದರೆ ದೇವರು ಎಲ್ಲರ ಮೇಲೆ ಕರುಣೆಯಿಟ್ಟು ಮಾನವನು ಎಂದೂ ಕೇಳದ ಮತ್ತು ಎಂದೂ ಅಪೇಕ್ಷಿಸದ ಔತಣವನ್ನು ಸಿದ್ಧಪಡಿಸುತ್ತಿರುವನು. ದೇವರಪ್ರೀತಿಯ ಆಳ, ಅಗಲ, ಎತ್ತರಗಳನ್ನು ಅರಿಯದ ಸೃಷ್ಟಿಗಳನ್ನು ಕುರಿತು ಆತನು ಹೀಗೆ ಹೇಳಿರುವನು: "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ." ಯೆಶಾಯ 55: 8, 9.

ವರ್ತಮಾನ, ಭೂತ, ಭವಿಷತ್ ಕಾಲಗಳಿಗನು ಗುಣವಾಗಿರುವ ದೇವರ ಯೋಜನೆಯನ್ನು ತಿಳಿಸಲು ಈ ಗ್ರಂಥದ ಮೂಲಕರ್ತನು ಪ್ರಯತ್ನಿಸಿರುವನು. ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯಲ್ಲಿ ಉದಯವಾಗುವ ನೀತಿಸೂರ್ಯನು ಈಗಿನ ಸತ್ಯವನ್ನು ಶುದ್ಧ ಹೃದಯವನ್ನು ಪ್ರಶಸಂಸಿಸುವಂತೆ ಪ್ರಕಟಿಸುವನು.

ಯಥಾರ್ಥವಂತನು ಸತ್ಯದ ತಳಹದಿಯನ್ನು ಕುರಿತು ಪ್ರಶ್ನಿಸುವವನಾಗಿದ್ದಾನೆ. ಅಪನಂಬಿಗಸ್ತನಿಗೂ ಸಹ ಭರವಸೆ, ಸಾಕ್ಷಿ ಮತ್ತು ನಂಬಿಕೆಯನ್ನು ಹುಟ್ಟಿಸುವಂತೆ ದೇವರ ವಾಕ್ಯವು ಸತ್ಯವೆಂಬ ಅಸ್ತಿ ವಾರದ ಮೇಲೆ ನಿಂತಿರುವುದು, ಎಂಬುದನ್ನು ವಿವರಿಸಲು ಈ ಗ್ರಂಥದಲ್ಲಿ ಪ್ರಯತ್ನಿಸಲಾಗಿದೆ. ಬುದ್ಧಿವಂತಿಕೆಯಿಂದ ಶ್ರಮಪಟ್ಟು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಸತ್ಯವೇದವು ದೇವರ ಯೋಜನೆಯನ್ನು ಪ್ರಕಟಿಸುತ್ತದೆ ಎಂಬುದನ್ನು ಅರಿತುಕೊಳ್ಳಲು ಸಹಾಯಕವಾಗುವಂತೆ ಇದರ ಮೂಲಗ್ರಂಥವನ್ನು ಪ್ರಕಟಿಸಲಾಗಿದೆ. ಸತ್ಯವೇದವು ದೇವರ ಯೋಜನೆಯನ್ನು ಪ್ರಕಟಿಸುತ್ತದೆ ಎಂದು ನಂಬುವವರೆಲ್ಲರೂ ಇದರಲ್ಲಿ ತಿಳಿಸಿರುವ ಸಂಗತಿಗಳನ್ನು ಪ್ರಶಂಸಿಸುವರು. ದೇವರ ವಾಕ್ಯವನ್ನು ಹುಡುಕುವಂಥ ಆತನ ಸತ್ಯಮಕ್ಕಳಿಗೆ ತನ್ನ ವಾಗ್ದಾನದಂತೆ ಆತನು ಸತ್ಯದ ಆತ್ಮನನ್ನು ಕಳುಹಿಸುವನು. ಆತನು ನಮ್ಮನ್ನು ನಡೆಸಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಯೋಹಾನ 16:13

ಹುಡುಕುವವರಾದ ನಮಗೆ ಎರಡು ಮಾರ್ಗಗಳಿವೆ. ಮೊದಲನೆಯದು ವಿವಿಧ ಸಭೆಗಳು ಸೂಚಿಸಿರುವ ವಿವರಗಳಲ್ಲಿ ಸತ್ಯವನ್ನು ಪರಿಶೀಲಿಸುವುದು. ಇದು ತುಂಬಾ

ತೊಡಕಿನ ಕೆಲಸ. ಯಾಕೆಂದರೆ ಅನೇಕ ಶತಮಾನಗಳಿಂದ ಸಭೆಗಳಲ್ಲೇ ಬದಲಾವಣೆಗಳಾಗಿ ಇಂದಿನ ಪರಿಸ್ಥಿತಿಗೆ ತಕ್ಕಂತೆ ಅವುಗಳು ಸ್ಥಾಪಿತವಾಗಿವೆ ಮತ್ತು ಪ್ರತೀ ಸಭೆಯಲ್ಲಿ ಅನೇಕ ಲೋಪದೋಷಗಳಿರುವವು ಮತ್ತು ಅವುಗಳ ಉದ್ದೇಶವು ಒಂದಕ್ಕೊಂದು ವಿರುದ್ಧವಾಗಿರುವುದು. ಆದುದರಿಂದ ಈ ಮಾರ್ಗವನ್ನು ಅನುಸರಿಸಿದರೆ ಸತ್ಯದ ಮಾರ್ಗವನ್ನೇ ಬಿಟ್ಟುಬಿಡಬಹುದಾದ ಸಂಭವವಿರುವುದು ಮತ್ತು ಹುಡುಕುವವರಿಗೆ ಗೊಂದಲವಾಗುವುದು. ಎರಡನೆಯ ವಿಧಾನವೆಂದರೆ ದೇವರ ವಾಕ್ಯದಲ್ಲಿ ಪ್ರಕಟವಾಗಿರುವ ಆತನ ಯೋಜನೆಗಳನ್ನು ತಿಳಿಯುವುದು. ತಮ್ಮನ್ನು ತಗ್ಗಿಸಿಕೊಂಡು ಯಥಾರ್ಥತೆಯಿಂದ ಹುಡುಕುವವರಿಗೆ ಖಂಡಿತವಾಗಿ ದೇವರು ಮಾರ್ಗದರ್ಶಕನಾಗಿದ್ದು ತನ್ನ ರಹಸ್ಯಗಳನ್ನು ತಿಳಿಯ ಪಡಿಸುವನು. ಎಫೆಸ 4:11–16 ನೋಡಿರಿ. ಎರಡನೇ ವಿಧಾನವನ್ನು ಅನುಸರಿಸಿ ಹುಡುಕುವವರಿಗೆ ಈ ಪುಸ್ತಕವು ಮಾರ್ಗದರ್ಶಕವಾಗಿದೆ. ಇಲ್ಲಿ ಕೊಟ್ಟಿರುವ ಆಧಾರವಾಕ್ಯಗಳೆಲ್ಲಾ ಸತ್ಯವೇದದ್ದೇ. ಆದಿ ಪಿತೃಗಳು ಇಲ್ಲಿ ತಿಳಿಸಿರುವ ಸಂಗತಿಗಳನ್ನು ಕುರಿತು ಸಾಕ್ಷಿ ಹೇಳಿರುವರು. ಅವರಲ್ಲಿ ಅನೇಕರು ಸತ್ಯವನ್ನೇ ಅರಿಯದೆ ತಪ್ಪಾಗಿ ಬೋಧಿಸುತ್ತಿದ್ದರಿಂದ ಅವರ ಯಾವ ಸಾಕ್ಷಿಗೂ ಇಲ್ಲಿ ಮನ್ನಣೆ ಕೊಟ್ಟಿಲ್ಲ. ಅ.ಕೃ. 26:9. ಸತ್ಯವನ್ನು ಹುಡುಕುವವರು ಸಂಪ್ರದಾಯದ ಬೋಧನೆಗಳನ್ನು ತ್ಯಜಿಸಿ ಸತ್ಯದ ಅಡಿಗಲ್ಲಾಗಿರುವ ದೇವರ ವಾಕ್ಯವನ್ನು ಶೋಧಿಸಬೇಕು. ಸತ್ಯವೇದದ ಬೋಧನೆಯಲ್ಲಿ ಅಡಕವಾಗಿರುವ ಸತ್ಯಾಂಶವನ್ನು ಕ್ರೋಢೀಕರಿಸುವುದು ಸಾಮಾನ್ಯದ ಕೆಲಸವಲ್ಲ, ಆದರೂ ಸಾಧ್ಯವಾದಮಟ್ಟಿಗೆ ಪ್ರಯತ್ನಿಸಲಾಗಿದೆ.

ಅತಿ ಸಾಮಾನ್ಯರಿಗೂ ಅರ್ಥವಾಗುವ ಹಾಗೆ ಕ್ರಮಬದ್ಧವಾಗಿ ಸುಲಭವಾದ ಭಾಷೆಯಲ್ಲಿ ದೇವರ ಯೋಜನೆಯನ್ನು ಸ್ಪಷ್ಟಪಡಿಸಲಾಗಿದೆ. ದೈವಿಕ ಪ್ರಕಟನೆಯನ್ನು ತಿಳಿಯಬೇಕಾದರೆ ಆಳವಾದ ಅಭ್ಯಾಸ ಅಗತ್ಯ. ಕ್ರೈಸ್ತರಲ್ಲಿಯೇ ಅನೇಕರು ಈ ವಿಷಯವನ್ನು ಕುರಿತು ಅಭ್ಯಸಿಸುವಾಗ ಅನೇಕ ಮುಖ್ಯ ವಿಷಯಗಳನ್ನು ಅಲಕ್ಷ್ಯ ಮಾಡಿರುವರು. ಉದಾ. ಕರ್ತನ ಆಗಮನ ಹಳೆ ಒಡಂಬಡಿಕೆಯ ಪ್ರವಾದನೆಗಳು ಮತ್ತು ಹಳೆ ಮತ್ತು ಹೊಸ ಒಡಂಬಡಿಕೆಗಿರುವ ಹೋಲಿಕೆಗಳು ಸತ್ಯವೇದದಲ್ಲಿರುವ ಪ್ರಾಮುಖ್ಯ ವಿಷಯಗಳನ್ನೇ ಬಿಟ್ಟು ಬೋಧಿಸುವ ಯಾವ ಧರ್ಮ ಬೋಧನೆಯನ್ನಾಗಿ ಅಂಗೀಕರಿಸುವುದು ತಪ್ಪು. ಯಥಾರ್ಥತೆಯಿಂದ ಸತ್ಯವೇದದ ಪ್ರವಾದನೆಗಳನ್ನು ಅಭ್ಯಸಿಸುವವರಿಗೂ ಕೇವಲ ಚಾರಿತ್ರಿಕ ದೃಷ್ಟಿಯಿಂದ ಅಭ್ಯಸಿಸುವವರಿಗೂ ವ್ಯತ್ಯಾಸ ಉಂಟು. ಪ್ರವಾದನೆಗಳನ್ನು ತಿಳಿಯುವ ಬದಲು ತಾವೇ ಪ್ರವಾದಿಸಲು ಹೊರಟರೆ ಅದಕ್ಕೆ ಯಾವ ಅರ್ಥವಿರುವುದಿಲ್ಲ.

ದೇವರು ಪ್ರಕಟಿಸಿರುವ ಯೋಜನೆಗಳನ್ನು ತಿಳಿಯುವುದಕ್ಕಿಂತ ಉತ್ತಮವಾದ ಕೆಲಸ ಬೇರೊಂದಿಲ್ಲ. "'ದೇವದೂತರಿಗೂ ಈ ಸಂಗತಿಗಳನ್ನು ಲಕ್ಷ್ಯವಿಟ್ಟು ನೋಡಬೇಕೆಂಬ ಅಪೇಕ್ಷೆ ಉಂಟು. 1 ಪೇತ್ರ 1:12. ದೇವರು ತನ್ನ ಜ್ಞಾನದಿಂದ ಈಗಿರುವ ಹಿಂದೆ ನಡೆದ ಮತ್ತು ಮುಂದೆ ನಡೆಯುವ ಎಲ್ಲಾ ಸಂಗತಿಗಳನ್ನು ಪ್ರವಾದನೆಯ ರೂಪದಲ್ಲಿ ಪ್ರಕಟಿಸಿರುವನು. ಆದರೆ ಅವಿವೇಕಿಗಳು ಸೋಮಾರಿಗಳಾಗಿ ಆತನ ವಾಕ್ಯವನ್ನು ಅಭ್ಯಸಿಸದೆ ಮನುಷ್ಯನು ರಕ್ಷಣೆ ಹೊಂದಬೇಕಾದರೆ ಕೇವಲ ಮತ್ತಾಯ 5ನೇ ಅಧ್ಯಾಯವನ್ನು ಓದಿದರೆ ಸಾಕು ಎಂದು ಹೇಳುವವರಾಗಿದ್ದಾರೆ. ಮುಂದೆ ಸಂಭವಿಸುವ ಸಂಗತಿಗಳಲ್ಲಿ ನಮಗಿರುವ ಕುತೂಹಲವನ್ನು ತೃಪ್ತಿಪಡಿಸುವುದಕ್ಕಾಗಿ ಪ್ರವಾದನೆಗಳಿವೆ ಎಂದು ತಿಳಿಯಬಾರದು. ತನ್ನ ಉದ್ದೇಶವನ್ನು ತನ್ನ ಅಭಿಷಕ್ತ ಮಕ್ಕಳಿಗೆ ಪ್ರಕಟಿಸುವುದೇ ದೇವರ ಯೋಜನೆಯಾಗಿದೆ. ಕರ್ತನ ಸೇವೆಯಲ್ಲಿ ನಿಜವಾದ ಅಭಿಲಾಷೆಯುಳ್ಳವರಿಗೆ ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಆತನು ಕೊಡುವನು. ಆಗ ಅವರ ನಂಬಿಕೆಯು ಹೆಚ್ಚಾಗಿ ಪವಿತ್ರಾತ್ಮನಿಂದ ಪ್ರೇರೇಪಿಸಲ್ಪಡುವುದು.

ಅನೇಕ ಸಭೆಗಳು ಪಾಪ ಮತ್ತು ಅದರ ಫಲದಿಂದ ಲೋಕದ ಬಿಡುಗಡೆಗೋಸ್ಕರವಾಗಿರುವ ದೇವರ ಯೋಜನೆಯನ್ನೇ ತಿಳಿದುಕೊಂಡಿಲ್ಲ. ಸುಮಾರು 19 ಶತಮಾನಗಳಿಂದ ಸುವಾರ್ತಾ ಸೇವೆಯು ನಡೆಯುತ್ತಿದ್ದರು ಅನೇಕರ ಮನಸ್ಸಿನಲ್ಲಿ ಸಂಶಯ ತುಂಬಿದೆ. ಸಭೆಗಳ ಕೆಲಸ ಇಡೀ ಲೋಕವನ್ನೇ ಮತಾಂತರಗೊಳಿಸುವುದೋ? ಅಥವಾ ದೇವರ ಯೋಜನೆಯನ್ನು ಪ್ರಕಟಿಸುವುದೋ ? ಜನರ ಸಂಶಯ ನಿವಾರಣೆಗಾಗಿ ಇದರ ಮೂಲಗ್ರಂಥದ ರಚನೆಯಾಯಿತು.

ಚಿಕಾಗೋ ಪಟ್ಟಣದ ವೈ.ಎಂ.ಸಿ.ಎ. ಎಂಬ ಪತ್ರಿಕೆಯಲ್ಲಿ ಕ್ರೈಸ್ತತ್ವವನ್ನು ಕುರಿತು ಒಂದು ವ್ಯಸನಕರವಾದ ಪ್ರಬಂಧವು ಮುದ್ರಿತವಾಗಿದೆ. ಅದರ ಸಾರಾಂಶವು ಈ ರೀತಿಯಲ್ಲಿದೆ.

ಸ್ವದೇಶ ಮತ್ತು ವಿದೇಶಗಳಲ್ಲಿ ಸುವಾರ್ತೆ ಸೇವೆಗಾಗಿ ಮಿಷನರಿ ಕೇಲಸಗಳು ನಡೆಯುತ್ತಿವೆ. ಸುವಾರ್ತಾ ಪ್ರಚಾರಕ್ಕಾಗಿ ಅಪಾರ ಹಣವನ್ನು ವೆಚ್ಚಮಾಡಲಾಗಿದೆ. ಲೋಕದ ಒಟ್ಟು ಜನಸಂಖ್ಯೆ 1,424,000,000 ಇದರಲ್ಲಿ $^{2}/_{3}$ ಭಾಗದಷ್ಟು ಜನರು ವಿಗ್ರಹಾರಾಧಕರು. ಉಳಿದವರಲ್ಲಿ ಅರ್ಧಮಂದಿ ಇಸ್ಲಾಂ ಮತಸ್ಥರು. ಉಳಿದವರು ಕ್ರೈಸ್ತ ವಿಗ್ರಹಾರಾಧಕರು. ಅಂದರೆ ಕ್ರಿಸ್ತನ ಬೋಧನೆಯನ್ನೇ ಅರಿಯದವರು. 116 ಮಿಲಿಯನ್ ಪ್ರಾಟಸ್ಟೆಂಟರು ಹೆಸರಿನ ಕ್ರೈಸ್ತರಾಗಿರುವರು. 8 ಮಿಲಿಯನ್ ಯೆಹೂದ್ಯರು ನಜರೇತಿನ ಯೇಸುಕ್ರಿಸ್ತನನ್ನು ತಿರಸ್ಕರಿಸಿರುವರು. 300 ಮಿಲಿಯನ್ ಜನರು ಆತನ ಹೆಸರನ್ನು ಹೊಂದಿದ್ದರೂ ಆತನ ನಂಬಿಕೆಯಿಂದ ದೂರವಾಗಿರುವರು. ಉಳಿದವರು

**DIAGRAM**
*Exhibiting the Actual and Relative Numbers of Mankind Classified According to Religion*




ಸೃಷ್ಟಿಕರ್ತನನ್ನು ಬಿಟ್ಟು ಕಲ್ಲುಬಂಡೆಗಳನ್ನು ಪೂಜಿಸುವವರಾಗಿದ್ದಾರೆ. ಇಂತಹ ಒಂದು ಪರಿಸ್ಥಿತಿಯು ನಿಜಕ್ರೈಸ್ತರ ಮನಸ್ಸಿಗೆ ನೋವನ್ನುಂಟುಮಾಡುವುದಿಲ್ಲವೋ?

ಒಟ್ಟಿನಲ್ಲಿ ವಿಗ್ರಹಾರಾಧಕರು, ಮಹಮದೀಯರು ಮತ್ತು ಯೆಹೂದ್ಯರು ಎಲ್ಲರೂ ಕ್ರಿಸ್ತನನ್ನು ಅರಿಯದವರಾಗಿದ್ದಾರೆ. ಅನೇಕ ಪಂಗಡದವರು ಬೋಧಿಸುವುದೇನೆಂದರೆ ಪ್ರಾಟಸ್ಟೆಂಟರಲ್ಲಿ ಕೆಲವು ಭಕ್ತರು ಮಾತ್ರ ರಕ್ಷಿಸಲ್ಪಡುವರು. ಉಳಿದವರು ನರಕದಲ್ಲಿ ಯಾತನೆಪಡುವರು ಎಂದು ಹೇಳುವವರಾಗಿದ್ದಾರೆ. ಹೀಗೆ ಬೋಧಿಸಿ ಎಲ್ಲರನ್ನು ಅಜ್ಞಾನದಲ್ಲಿ ತಳ್ಳುತ್ತಿರುವರು. ಅಂತೂ ಕ್ರೈಸ್ತಮತ ಪ್ರಚಾರಕರು ಹೇಳುವುದೇನೆಂದರೆ ಯಾವ ನಿರೀಕ್ಷೆಯಿಲ್ಲದ, ಕ್ರಿಸ್ತನ ಹೆಸರನ್ನು ಅರಿಯದೆ ಸಾಯುವ ಜನಾಂಗಕ್ಕೆ ಸುವಾರ್ತೆ ಸಾರಬೇಕೆನ್ನುತ್ತಾರೆ.

ಇವೆಲ್ಲವು ವ್ಯಸನಕರವಾದ ಸಂಗತಿಯಾದರು ಸತ್ಯವೇದವು ಒಂದು ಭರವಸೆಯನ್ನು ಕೊಡುವುದಾಗಿದೆ. ಅದನ್ನು ತಿಳಿಸುವುದೇ ಈ ಪುಸ್ತಕದ ಉದ್ದೇಶವಾಗಿದೆ. ದೇವರ ರಕ್ಷಣಾಯೋಜನೆಯು ಎಂದಿಗೂ ಬಿದ್ದು ಹೋಗುವದಿಲ್ಲ. "ಇಗೋ ಕತ್ತಲು ಭೂಮಿಯನ್ನು ಆವರಿಸಿದೆ. ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ, ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವುದು. ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು, ಅರಸರು ನಿನ್ನಲ್ಲಿನ ಉದಯಪ್ರಕಾಶಕ್ಕೆ ಬರುವರು" ಯೆಶಾಯ 60:2–3. ಗೊಂದಲದಲ್ಲಿರುವವರಿಗೆ ಎಂಥ ಭರವಸೆ!

ಲೋಕದ ಸಂಕಷ್ಟ ಮತ್ತು ಸತ್ಯದ ನಿಧಾನವಾದ ಬೆಳವಣಿಗೆ ಸಭೆಗಳಿಗೆ ಒಂದು ಗೂಡಾರ್ಥವಾಗಿದೆ. ಮಾನವರ ಕಲ್ಪನಾ ಕಥೆಗಳಿಗೆ ಗಮನಕೊಡದೆ ಯಾರ್‍ಯಾರು ಸಂಪೂರ್ಣ ಮನಸ್ಸಿನಿಂದ ದೇವರ ವಾಕ್ಯವನ್ನು ಹುಡುಕುವರೋ ಅಂಥವರನ್ನು ಪರಲೋಕದಿಂದ ದೊರಕುವ ಆಶೀರ್ವಾದದಲ್ಲಿ ಪಾಲುಗಾರರಾಗಲು ಕರೆಯುವನು. ಯೆಶಾಯ 1:18. ಅಪನಂಬಿಗಸ್ತರೂ ಅನೀತಿವಂತರೂ ಸತ್ಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಕಷ್ಟ. ಯಾಕೆಂದರೆ ಕೀರ್ತನೆಕಾರನು ಹೇಳುವಂತೆ "ನೀತಿವಂತರಿಗೋಸ್ಕರ ಪ್ರಕಾಶವು ಬಿತ್ತಲ್ಪಟ್ಟಿವೆ." ಕೀರ್ತನೆ 97:11. ದೇವರ ಮಕ್ಕಳಿಗೆ ಕೊಡಲ್ಪಟ್ಟಿರುವ ದೀಪವು ಅವರ ದಾರಿಯಲ್ಲಿರುವ ಕತ್ತಲೆಯನ್ನು ಹೊಡೆದೋಡಿಸುವುದು. "ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ." ಕೀರ್ತ 119:105. "ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾಬರುವ ಬೆಳಗಿನ ಬೆಳಕಿನಂತಿದೆ." ಜ್ಞಾನೋಕ್ತಿ 4:18. ಆದರೆನೀತಿವಂತನು ಇಲ್ಲ ಒಬ್ಬನಾದರೂ ಇಲ್ಲ ರೋಮಾ.3:10 "ನೀತಿವಂತರು ಎಂದರೆ ನಂಬಿಕೆಯಿಂದ ನೀತಿವಂತರಾದ ಗುಂಪನ್ನು ಸೂಚಿಸಲಾಗಿದೆ. ಇವರು ಬೆಳಕಿನ ಮಾರ್ಗದಲ್ಲಿ ನಡೆಯುವ ಹಕ್ಕನ್ನು ಹೊಂದಿರುವರಲ್ಲದೆ ದೇವರ ಯೋಜನೆ ಕೈಗೂಡುವುದನ್ನು ಮತ್ತು ಮುಂದೆ ಸಂಭವಿಸುವ ಸಂಗತಿಗಳನ್ನು ನೋಡುವರು. ಪ್ರತಿಯೊಬ್ಬ ನಂಬಿಗಸ್ತನ ಮಾರ್ಗವು ಬೆಳಕಿನಿಂದ ಕೂಡಿದೆ. ಅದರಲ್ಲೂ ವಿಶೇಷವಾಗಿ ಮೂಲಪುರುಷರು, ಪ್ರವಾದಿಗಳು, ಅಪೋಸ್ತಲರು, ಹಿಂದಿನ ಮತ್ತು ಇಂದಿನ ದೈವ ಭಕ್ತರುಗಳ ಮಾರ್ಗವು ಹೆಚ್ಚು ಪ್ರಕಾಶವಾಗಿದೆ ಮತ್ತು ಪರಿಪೂರ್ಣತೆಯ ದಿನದವರೆಗೂ ಅದು ಹಾಗೆ ಮುಂದುವರಿಯುವುದು. ಆದುದರಿಂದ ನೀತಿವಂತರೇ ಕರ್ತನಲ್ಲಿ ಸಂತೋಷಪಡಿರಿ, ವಾಗ್ದಾನವು ಪೂರ್ಣವಾಗುವದನ್ನು ನಿರೀಕ್ಷಿಸಿರಿ. ಅನೇಕರು ಅಪನಂಬಿಕೆಯಿಂದ ಈ ಸೌಭಾಗ್ಯವನ್ನು ಕಳೆದುಕೊಂಡು ಕತ್ತಲಲ್ಲಿ ತಡವರಿಸುತ್ತಿರುವರು. ಸಭೆಯನ್ನು ಸತ್ಯದ ಮಾರ್ಗದಲ್ಲಿ ನಡೆಸಲು ಕೊಡಲ್ಪಟ್ಟಿರುವ ದೇವರ ಆತ್ಮನು ನಮ್ಮನ್ನು ದೇವರ ವಾಕ್ಯದ ಜ್ಞಾನದಲ್ಲಿ ನಡೆಸುವನು. ಸತ್ಯವೇದವು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆ ಹೊಂದಿಸುವ ಜ್ಞಾನವನ್ನು ಕೊಡುವುದಕ್ಕೆ ಶಕ್ತವಾಗಿದೆ. 2 ತಿಮೋಥಿ 3:15.

ಸದ್ಯದಲ್ಲಿ ಕತ್ತಲು ಲೋಕವನ್ನು ಮುಚ್ಚಿಕೊಂಡಿದೆ. ಆದರೆ ಈ ಕತ್ತಲು ಯಾವಾಗಲು ಇರುವುದಿಲ್ಲ. "ಉದಯವು ಬರುತ್ತದೆ" ಎಂಬ ಭರವಸೆ ನಮಗಿದೆ. ಯೆಶಾಯ 21:12. ಈಗ ನೀತಿವಂತರ ಮತ್ತು ಅನೀತಿವಂತರ ಮೇಲೆ ಸೂರ್ಯನು ಪ್ರಕಾಶಿಸುವಂತೆ ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯಲ್ಲಿ ಲೋಕದ ಉದ್ಧಾರಕ್ಕಾಗಿ ನೀತಿ ಸೂರ್ಯನಾದ ಕ್ರಿಸ್ತನು ಪ್ರಕಾಶಿಸುವನು ಮತ್ತು ಕತ್ತಲೆಯಲ್ಲಿರುವ ಗುಪ್ತ ಕಾರ್ಯಗಳನ್ನು ಬೆಳಕಿಗೆ ತರುವನು. 1 ಕೋರಿ 4:5. ಆ ಬೆಳಕು ಎಲ್ಲಾ ದುಷ್ಟ ಕಾರ್ಯಗಳನ್ನು ನಾಶಮಾಡಿ ಜೀವ, ಆರೋಗ್ಯ ಮತ್ತು ಸಮಾಧಾನವನ್ನು ಉಂಟುಮಾಡುತ್ತದೆ.

ಹಿಂದಿನ ಕಾಲದಲ್ಲಿ ದೇವರು ಅಬ್ರಹಾಮನಿಗೆ ಮತ್ತು ಇತರರಿಗೆ ಮಾಡಿದ ವಾಗ್ದಾನಗಳು ಮತ್ತು ಇಸ್ರಾಯೇಲ್ಯರ ಆಚಾರ ಪದ್ಧತಿಗಳೆಲ್ಲವೂ ದೇವರ ಅದ್ಭುತ ಯೋಜನೆಯನ್ನು ಮುಂತಿಳಿಸುವುದಾಗಿವೆ. ಕ್ರಿಸ್ತನ ದಿನಗಳು ಸಮೀಪವಾಗುತ್ತಿರುವ ಹಾಗೆಲ್ಲಾ ಆ ಬೆಳಕು ಹೆಚ್ಚುತ್ತಿದೆ. ಆ ಕಾಲದಲ್ಲಿ ಅವರಿಗಿದ್ದ ನಿರೀಕ್ಷೆಯೆಂದರೆ ಇಸ್ರಾಯೇಲ್ಯರನ್ನು ಶತ್ರುಗಳಿಂದ ಬಿಡಿಸಲು ಒಬ್ಬ ರಕ್ಷಕನನ್ನು ಕಳುಹಿಸುವನು ಎಂಬುದಾಗಿತ್ತು. ಅವರನ್ನುಲೋಕದ ಇತರ ಜನಾಂಗಗಳಿಗಿಂತ ಉತ್ತಮಸ್ಥಿತಿಗೆ ತಂದು ಅವರ ಮೂಲಕ ಸರ್ವಜನಾಂಗಗಳಿಗೆ ಆಶೀರ್ವಾದ ಉಂಟಾಗುವಂತೆ ದೇವರು ಅವರನ್ನು ಉಪಯೋಗಿಸಿಕೊಳ್ಳುವುದಕ್ಕಿದ್ದನು. ಆದರೆ ಅವರ ನಿರೀಕ್ಷೆಯೇ ಬೇರೆಯಾಗಿದ್ದುದ್ದರಿಂದ ಅವರು ದೇವರ ವಾಗ್ದಾನವನ್ನು ಅರಿತುಕೊಳ್ಳದೇ ಹೋದರು. ಅವರ ಅಜ್ಞಾನ ಮತ್ತು ಅವಿಧೇಯತೆ ಹೆಚ್ಚಾಗಿದ್ದರಿಂದ ಆ ವಾಗ್ದಾನವು ಅವರಿಂದ ತೆಗೆಯಲ್ಪಟ್ಟಿತು. ಯಾರ್‍ಯಾರು ದೇವರ ವಾಗ್ದತ್ತ ರಾಜ್ಯದಲ್ಲಿ ನಂಬಿಕೆಯಿಟ್ಟಿರುವರೋ ಅಂಥವರು ಆ ವಾಗ್ದಾನದಲ್ಲಿ ಭಾಗಿಗಳಾಗುವರು ಮತ್ತು ಅಬ್ರಹಾಮನ ಸಂತತಿಗೆ ಮಾಡಿದ ಆಶೀರ್ವಾದಕ್ಕೆ ಬಾಧ್ಯರಾಗುವರು.

ಪಂಚಾಶತ್ತಮ ಹಬ್ಬದ ತರುವಾಯ ಕ್ರಿಸ್ತನ ಸುವಾರ್ತೆಯ ಅರ್ಥವು ಅರಿವಾದಮೇಲೆ ದೇವರು ತನ್ನ ವಾಗ್ದಾನವನ್ನು ನೆರವೇರಿಸುವುದಕ್ಕಾಗಿ ಯೆಹೂದ್ಯರಿಂದ ಮತ್ತು ಅನ್ಯರಿಂದ ಕೂಡಿದ ಆತ್ಮೀಕ ಇಸ್ರಾಯೇಲ್ ಎಂಬು ಒಂದು ಚಿಕ್ಕಹಿಂಡನ್ನು ಆರಿಸಿಕೊಂಡು ಅವರನ್ನು ಆತ್ಮೀಯ ಶರೀರದಲ್ಲಿ ಉನ್ನತ ಪದವಿಗೇರಿಸುವನು ಎಂಬುದನ್ನು ಸಭೆಗಳವರು ಕಂಡುಕೊಳ್ಳುವರು. ಆದುದರಿಂದ ಕ್ರಿಸ್ತನು ಸುವಾರ್ತೆಯ ಮೂಲಕ ಜೀವವನ್ನು ನಿರ್ಲಯತ್ವವನ್ನು ಪ್ರಕಾಶಗೊಳಿಸಿದನು ಎಂದು ಓದುತ್ತೇವೆ. 2 ತಿಮೋ 1:10. ಕ್ರಿಸ್ತನ ಕಾಲದಲ್ಲಿ ಈ ಬೆಳಕು ಇನ್ನು ಇನ್ನೂ ಹೆಚ್ಚಾಗುವುದು. "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೇ ಸೇರಿಸುವನು... ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು." ಯೋಹಾ 16:12,13 ಎಂದು ಯೇಸು ಮುಂತಿಳಿಸಿರುವನು.

ಅಪೋಸ್ತಲರ ಕಾಲ ಮುಗಿದ ಮೇಲೆ ಅನೇಕ ಸಭೆಗಳು ಜೀವದ ಬೆಳಕನ್ನು ಬಿಟ್ಟು ಮಾರ್ಗದರ್ಶನಕ್ಕಾಗಿ ಮಾನವ ಬೋಧಕರ ಬೆಳಕಿಗೆ ಹೋಗಲು ಪ್ರಾರಂಭಿಸಿದರು. ಈ ಬೋಧಕರು ಗರ್ವದಿಂದ ಉಬ್ಬಿಕೊಂಡು ತಮಗೆ ಬೇಕಾದ ಅಧಿಕಾರವನ್ನು ವಹಿಸಿಕೊಂಡು ದೇವರ ವಾಗ್ದಾನದ ಮೇಲೆ ಆಳಲು ಪ್ರಾರಂಭಿಸಿದರು. ಹೀಗೆ (ಪಾದ್ರಿಗಳು) ವೈದಿಕಮಂಡಲಿ ಎಂಬ ಒಂದು ವಿಶೇಷ ಗುಂಪು ಬೆಳೆಯಿತು. ಈ ಜನರು ದೇವರ ವಾಕ್ಯವನ್ನು ಕಡೆಗಣಿಸಿ ತಮ್ಮದೇ ಆದ ಆಚಾರ ವಿಚಾರಗಳನ್ನು ಜನರಿಗೆ ಬೋಧಿಸಿ ಜನರನ್ನು ತಪ್ಪಾದ ಮಾರ್ಗಕ್ಕೆಳೆಯುವವರಾದರು. ಹೀಗೆ ಕಾಲಕ್ರಮದಲ್ಲಿ ಪೋಪನ ಅಧಿಕಾರ ಮತ್ತು ಉಪದೇಶವು ಬಲಯುತವಾಗಿ ಜನರು ದೇವರ ವಾಕ್ಯವನ್ನು ಸಂಪೂರ್ಣವಾಗಿ ಮರೆತುಹೋದರು. ಹೀಗೆ ಜನರು ಸತ್ಯವನ್ನೇ ಮರೆತದ್ದರಿಂದ ಅನೇಕ ದುಷ್ಟ ಪರಿಣಾಮಗಳುಂಟಾದವು. ಸಭೆಗಳವರು, ನಾಗರೀಕ ಜನರು ಈ ಬೋಧಕರ ಬೋಧನೆಯಂತೆ ನಡೆದು ಅವರ ಬಲೆಗೆಬಿದ್ದರು. ಇವರೆಲ್ಲರೂ ಮಾನವರಿಂದ ನಿರ್ಮಿತವಾದ ಸಂಪ್ರದಾಯಗಳನ್ನು ಕೈಗೊಂಡು ನಡೆಯುವವರಾಗಿ ದೇವರ ವಾಕ್ಯವನ್ನು ಅಲಕ್ಷಿಸಿದರು. ದೇವರು ಈ ಅಲಕ್ಷವನ್ನು ಸಹಿಸುವನೇ? ಎಂದಿಗೂ ಇಲ್ಲ. ಪೋಪನ ಅಧಿಕಾರವನ್ನು ಪ್ರತಿಭಟಿಸಲು ಕೆಲವು ನಾಯಕರು ಮುಂದಾದರು. ಇದನ್ನೇ ಧರ್ಮಸುಧಾರಣೆ ಎನ್ನುವರು. ಮಾರ್ಟಿನ್‌ಲೂಥರ್, ಜ್ವಿಂಗ್ಲಿ, ನೋಕ್ಸ, ವಿಕ್ಲಿಪ್, Melanchthon ಮುಂತಾದವರು ದೇವರ ವಾಕ್ಯವನ್ನು ಎತ್ತಿ ಹಿಡಿದರು. ಇವರು ಸತ್ಯಕ್ಕೆ ವಿರುದ್ಧವಾದ ಉಪದೇಶಗಳನ್ನು, ಸಭೆಗಳ ಕುರುಡುನಂಬಿಕೆಯನ್ನು, ಮಠಾಧಿಕಾರಿಗಳ ಆಚಾರ ಪದ್ಧತಿಗಳನ್ನು ಜನರಿಗೆ ಎತ್ತಿ ತೋರಿಸಿದರು. ಈ ಧರ್ಮಸುಧಾಕರು ಮತ್ತು ಅವರ ಹಿಂಬಾಲಕರು ಪೋಪನ ಅಧಿಕಾರವನ್ನು ಪ್ರತಿಭಟಿಸಿ ದೇವರ ವಾಕ್ಯದ ಸತ್ಯತೆಯನ್ನು ಶೃತಪಡಿಸಿದ್ದರಿಂದ ಇವರಿಗೆ ಪ್ರಾಟಸ್ಟೆಂಟರು ಎಂಬ ಹೆಸರು ಬಂತು. ಈ ಧರ್ಮಸುಧಾರಣೆಯ ಕಾಲದಲ್ಲಿ ಅನೇಕರು ಎಚ್ಚತ್ತುಕೊಂಡು ಬೆಳಕಿನ ಮಾರ್ಗದಲ್ಲಿ ನಡೆಯುವವರಾದರು. ಆದರೆ ಆ ಕಾಲದಿಂದೀಚೆಗೆ ಪ್ರಾಟಸ್ಟೆಂಟರು ಹೆಚ್ಚು ಅಭಿವೃದ್ಧಿ ಹೊಂದಿಲ್ಲ. ಸತ್ಯವಾಕ್ಯದ ಬೆಳಕಿನಲ್ಲಿ ನಡೆಯುವ ಬದಲು ನಾಯಕರ ಬೋಧನೆಯನ್ನೇ ಅನುಸರಿಸುವವರಾಗಿ ಸತ್ಯಕ್ಕೆ ಒಂದು ಮಿತಿಯನ್ನು ಗೊತ್ತುಪಡಿಸಿಕೊಂಡು ಅನೇಕ ಸುಳ್ಳುಪದ್ಧತಿಗಳನ್ನು ಬೆಳಸಿಕೊಂಡಿರುವರು. ಹೀಗೆ ಕ್ರೈಸ್ತರು ಸತ್ಯವನ್ನೇ ಅರಿಯದೆ ಬೋಧಕರ ಬೋಧನೆಯನ್ನು ನಂಬಿ ಅನುಸರಿಸುತ್ತಿರುವುದರಿಂದ ದೇವರ ಯೋಜನೆಯನ್ನೇ

ಅರಿಯದವರಾಗಿರುವರು. ಅವರ ಕುರುಡು ನಂಬಿಕೆಯೇ ಅವರ ಸತ್ಯವನ್ನು ಅರಿಯದಂತೆ ಮಾಡಿದೆ. ಹಿಂದೆ ನೋಹನ ಕಾಲದಲ್ಲಿಯೂ ಹೀಗೆ ನಡೆಯಿತು. ಸತ್ಯವನ್ನು ನಂಬಿ ಬೆಳಕಿನಲ್ಲಿ ನಡೆಯುತ್ತಿದ್ದ ಕೆಲವು ಜನರಿಗೆ ಮಾತ್ರ ಜಲಪ್ರಳಯವಾಗುವುದೆಂದು ತಿಳಿದಿತ್ತು. ಆದರೆ ಆದಾಮನಿಗೂ ಮತ್ತಿತರಿಗೆ ಅದು ತಿಳಿದಿರಲಿಲ್ಲ.ಹೀಗೆ ಸತ್ಯವನ್ನು ಅರಿಯದೆ ಬೆಳಕಿನ ಮಾರ್ಗದಲ್ಲಿ ನಡಿಯದೇ ಇರುವುದರಿಂದ ಅಜ್ಞಾನದ ಕತ್ತಲು ಜನರನ್ನು ಆವರಿಸಿಕೊಂಡಿದೆ.

ಆದರೆ ಬೆಳಕಿನ ಮಾರ್ಗದಲ್ಲಿ ನಡೆಯುವ ಹಸಿದ ಯಾತ್ರಿಕರಿಗೆ ದೇವರ ವಾಕ್ಯವು ಒಂದು ದೊಡ್ಡ ಉಗ್ರಾಣವಾಗಿದೆ. ಅದರಲ್ಲಿ ಮಕ್ಕಳಿಗೆ ಹಾಲು ಮತ್ತು ಪ್ರಾಯಸ್ಥರಿಗೆ ಗಟ್ಟಿಯಾದ ಆಹಾರವಿದೆ. 1 ಪ್ರೇತ 2:2, ಇಬ್ರಿಯ 5:14. ಅಷ್ಟೇ ಅಲ್ಲದೆ ಕಾಲಕಾಲಕ್ಕೆ ತಕ್ಕಂತೆ ಆಹಾರವು ಸಿದ್ಧವಾಗಿರುವುದು. ಯೇಸು ಹೇಳಿರುವಂತೆ ನಂಬಿಗಸ್ತನಾದ ಮನೆವಾರ್ತೆಯವನು ಕಾಲಕ್ಕೆ ತಕ್ಕಂತೆ ಹೊಸ ಮತ್ತು ಹಳೆಯ ವಸ್ತುಗಳನ್ನು ಉಗ್ರಾಣದಿಂದ ಹೊರತರುವನು. ಲೂಕ 12:42, ಮತ್ತಾ 13:52. ಯಾವ ಧರ್ಮಬೋಧನೆಯಿಂದಲೂ ಈ ರೀತಿ ಹೊರತರಲು ಸಾಧ್ಯವಿಲ್ಲ. ಒಳ್ಳೆಯದನ್ನು ಹೊರತರಬಹುದೇ ಹೊರತು ಹೊಸದನ್ನು ಹೊರತರಲು ಸಾಧ್ಯವಿಲ್ಲ. ವಿವಿಧ ಸಭೆಗಳ ಧರ್ಮಗಳಲ್ಲಿರುವ ತಪ್ಪಾದ ನಂಬಿಕೆಯು ಸತ್ಯದ ಸೌಂದರ್ಯವನ್ನು ಮುಚ್ಚಿಬಿಟ್ಟಿರುವುದು.ಪ್ರತಿಯೊಂದು ಗುಂಪಿನವರು ಸತ್ಯವೇದವನ್ನು ಆಧಾರವಾಗಿಟ್ಟುಕೊಡು ತಮ್ಮ ಅಭಿಪ್ರಾಯಗಳನ್ನು ತೋರಿಸುತ್ತಿರುವರು. ಮಾತ್ರವಲ್ಲದೆ ದೇವರ ವಾಕ್ಯವನ್ನು ಗಲಿಬಿಲಿಮಾಡಿ ಅಂಧಕಾರದಲ್ಲಿ ನಡಿಯುತ್ತಿರುವರು. ಅವರಲ್ಲೇ ಹೊಡೆದಾಟಗಳಾಗಿ "ಸತ್ಯವೇದವು ಒಂದು ಹಳೆಯ ಪಿಟೀಲು ಅದರ ಮೇಲೆ ಯಾವ ರಾಗವನ್ನಾದರೂ ಬಾರಿಸಬಹುದು" ಎಂಬ ಗಾದೆಯು ಹುಟ್ಟಿಕೊಂಡಿದೆ.

ದೇವರ ವಾಕ್ಯವನ್ನು ತಪ್ಪಾಗಿ ಬೋಧಿಸಿ ಮಾನವ ಸಂಪ್ರದಾಯದಲ್ಲಿ ಮುಳುಗಿ ಕ್ರೈಸ್ತತ್ವದಲ್ಲಿ ನಂಬಿಕೆಯನ್ನು ಕಳೆದುಕೊಂಡಿದ್ದರೂ ಕೆಲವರು ಮಾತ್ರ ಈ ತಪ್ಪಾದ ಬೋಧನೆಗೆ ಒಳಗಾಗದೆ ಸತ್ಯವನ್ನು ಅರಿಯಲು ಪ್ರಯತ್ನಿಸುತ್ತಿರುವರು. ವಾಕ್ಯವನ್ನು ನಂಬಿರತಕ್ಕಂಥ ವಿದ್ಯಾರ್ಥಿಯು ತನ್ನ ನಂಬಿಕೆಯ ಒಳ ಅರ್ಥವನ್ನು ತಿಳಿಯಲು ಪ್ರಯತ್ನಿಸಬೇಕು. ದೇವರ ವಾಕ್ಯದ ಬಲದಿಂದ "ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು." ಇವರು ಇತರರ ಬೆದರಿಕೆಗೆ ಹೆದರದೆ ದೇವರ ವಾಕ್ಯದ ಆಹಾರವನ್ನೇ ಸಿದ್ಧಪಡಿಸುತ್ತಾರೆ ಮತ್ತು ದೇವರ ವಾಕ್ಯದಲ್ಲಿ ಅನುಭವವುಳ್ಳವರಾಗುತ್ತಾರೆ. 1 ಪ್ರೇತ 3:15, 2 ತಿಮೋ 3:15–17. ಸತ್ಯವೇದವೆಂಬ ಉಗ್ರಾಣವೊಂದೇ ಇಂತಹ ಆಹಾರವನ್ನು ಒದಗಿಸಬಲ್ಲದು. ಪರಿಪೂರ್ಣತೆಯ ದಿನದವರೆಗೆ ನೀತಿವಂತನ ಮಾರ್ಗವು ಪ್ರಕಾಶಿಸುವುದು ಎಂಬ ಸತ್ಯವಾಕ್ಯವನ್ನು ನಂಬದವರೆಲ್ಲರೂ ಪರಿಪೂರ್ಣತೆಯು ಲೂಥರನ ಕಾಲದಲ್ಲಿಯೇ ಉಂಟಾಯಿತು ಎಂದು ಹೇಳುವವರಾಗಿದ್ದಾರೆ. ಆದರೆ ಇದು ಎಚ್ಚರಿಕೆಯ ಕಾಲವಾಗಿದೆ. ಆ ಬೆಳಕು ಮೂಡಿ ಮುಂಜಾನೆಯಲ್ಲಿ ಪ್ರಕಾಶಿಸುವುದಕ್ಕೆ ನಾವು ಲಕ್ಷ್ಯ ಕೊಡಬೇಕು. 2 ಪ್ರೇತ 1:19.

ಬೆಳಕಿನ ಮಾರ್ಗವನ್ನು ಮಾತ್ರ ಕಂಡುಕೊಂಡರೆ ಸಾಲದು. ನಾವು ಆ ಬೆಳಕಿನ ಮಾರ್ಗಧಲ್ಲಿ ನಡೆಯುವವರಾಗಿರಬೇಕು. ನಾವು ಬೆಳಕಿನಲ್ಲಿ ನಡೆದು ಅದರಲ್ಲಿಯೇ ಮುಂದುವರಿಯಬೇಕು. ಇಲ್ಲವಾದರೆ ಆ ಬೆಳಕು ನಮ್ಮನ್ನು ದಾಟಿಹೋಗಿ ನಮ್ಮನ್ನು ಕತ್ತಲೆಂಬ ಅಂಧಕಾರದಲ್ಲಿ ಬಿಡುವುದು. ನಮ್ಮಲ್ಲಿ ಅನೇಕರು ಕುಳಿತುಕೊಳ್ಳುತ್ತಾರೆ. ಆದರೆ ಬೆಳಕಿನ ಮಾರ್ಗದಲ್ಲಿ ನಡೆಯುವುದಿಲ್ಲ. ಕೂತುಕೊಳ್ಳುವುದು, ನಿಂತಿಕೊಳ್ಳುವುದು, ಓಡುವುದು, ನಡೆಯುವುದು ಈ ಪದಗಳ ಅರ್ಥದಲ್ಲಿ ಹೆಚ್ಚಿನ ವ್ಯತ್ಯಾಸವುಂಟು. ಮನುಷ್ಯನು ದುಷ್ಟರೊಡನೆ ಕತ್ತಲಲ್ಲಿ ಕುಳಿತಿರುವನು, ಧರ್ಮನಿಂದಕರೊಡನೆ ನಿಂತಿರುವನು. ಆದರೆ ಯಾರು ಬೆಳಕಿನ ಮಾರ್ಗದಲ್ಲಿ ನಡೆಯುವರೋ ಅಂಥವರು ದೇವರ ಅಮೂಲ್ಯ ಬಹುಮಾನವನ್ನು ಪಡೆಯಲು ಓಡುವರು. ಯೆಶಾಯ 42:7, ಕೀರ್ತನೆ 1:1, ಇಬ್ರಿಯ 12:1.

ಜ್ಞಾನದಲ್ಲಿ ಪರಿಪೂರ್ಣತೆ ಪಡೆದಿರುವವರಿಗೂ ದೇವರ ಯೋಜನೆಯ ಮಹತ್ವವನ್ನು ತಿಳಿಯಲು ಸಾಧ್ಯವಿಲ್ಲ. ದೇವರು ಪ್ರವಾದಿಗಳ ಮತ್ತು ಅಪೋಸ್ತಲರ ಮೂಲಕವಾಗಿ ನಮ್ಮೊಂದಿಗೆ ಮಾತನಾಡಿರುವುದರಿಂದ ನಾವು ಅವರ ಮಾತುಗಳನ್ನು ತಿಳಿಯಬೇಕಾಗಿದೆ. ಅಪೋಸ್ತಲರು ಈ ಸಂಗತಿಗಳನ್ನು ಸ್ಪಷ್ಟಪಡಿಸಿರುವರು. ಪೌಲನು ಹೇಳಿರುವಂತೆ ದೇವರು ತನ್ನ ಉದ್ದೇಶದ ರಹಸ್ಯಗಳನ್ನು ಅಂದಿನ ಕ್ರೈಸ್ತ ಸಭೆಗಳಿಗೆ ತಿಳಿಯಪಡಿಸಿದ್ದರೂ ದೇವರ ವಾಕ್ಯವು ಬಿಡಿಸಲಾರದ ಒಗಟಾಗಿತ್ತು. ಆತನು ಕೃಪೆಯುಳ್ಳ ಸಂಕಲ್ಪವನ್ನು ಮೊದಲೇ ನಿಷ್ಕರ್ಷೆ ಮಾಡಿಕೊಂಡಿರುವನು ಮತ್ತು ಆತನೇ ಗುಪ್ತವಾಗಿರುವ ಸತ್ಯಾರ್ಥಗಳನ್ನು ತಿಳಿದುಕೊಳ್ಳುವ ಜ್ಞಾನವನ್ನು ದೇವ ಜನರಿಗೆ ದಯಪಾಲಿಸುವನು. ಎಫೆಸ 1:9, 10,17,18; 3:4–6. ಇದರಿಂದ ಪ್ರವಾದಿಗಳಿಗೂ ದೇವದೂತರಿಗೂ ತಾವು ಮುಂತಿಳಿಸಿದ ಪ್ರವಾದನೆಗಳ ಅರ್ಥವು ತಿಳಿದಿರಲಿಲ್ಲ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಅವರು ಅವುಗಳ ಅರ್ಥವನ್ನು ತಿಳಿಯಲು ಪ್ರಯತ್ನಿಸಿದಾಗ ಪ್ರವಾದನೆಗಳಲ್ಲಿರುವ ಸತ್ಯಾಂಶಗಳು ನಿಮಗಲ್ಲ; ಅದು ಮುಂದೆ ಬರುವ ಕ್ರೈಸ್ತಯುಗದವರಾದ ನಮಗೆ ಎಂದು ದೇವರು ತಿಳಿಸಿರುವನು

ಎಂದು ಪೌಲನು ಬರೆದಿರುವನು. ಆದ್ದರಿಂದ ಸಭೆಯ ವಿಷಯದಲ್ಲಿ ಹೆಚ್ಚಿನ ಜ್ಞಾನ ಪಡೆಯುವುದು ಅವಶ್ಯ. 1 ಪ್ರೇತ 1:10–13.

ಕ್ರಿಸ್ತನು ವಾಗ್ದಾನ ಮಾಡಿದಂತೆ ಕ್ರಮೇಣ ಸಭೆಯನ್ನು ಸತ್ಯ ಮಾರ್ಗದಲ್ಲಿ ನಡೆಸುವವನಾಗಿದ್ದಾನೆ. ಆದರೂ ಅಪೋಸ್ತಲರ ಕಾಲದಲ್ಲಿದ್ದ ಸಭೆಗಳಲ್ಲಿ ಪೋಪನ ಕಾಲದ ಯಾವ ದುಷ್ಟಪದ್ಧತಿಗಳಿರಲಿಲ್ಲದಿದ್ದರೂ ಇಂದಿನವರಿಗೆ ದೇವರ ಯೋಜನೆಯು ಅರ್ಥವಾಗಿರುವಂತೆ ಅಂದಿನವರಿಗೆ ತಿಳಿದಿರಲಿಲ್ಲ. ಅಪೋಸ್ತಲರು ಪವಿತ್ರಾತ್ಮನ ಶಕ್ತಿಯಿಂದ ನಡೆಸಲ್ಪಟ್ಟವರಾದ್ದರಿಂದ ದೇವರ ಯೋಜನೆಯನ್ನು ವಿವಿಧ ರೀತಿಯಲ್ಲಿ ಬರೆದಿರುವರು. ಪ್ರವಾದನೆಗಳಂತೆ ಇದರ ಬರವಣಿಗೆಯೂ ದೇವರಿಂದ ಪ್ರೇರಿತವಾದದ್ದೇ. ಉದಾ. ಪೇತ್ರನ ಕಾಲಕ್ಕೂ ಪೌಲನ ಕಾಲಕ್ಕಿರುವ ವ್ಯತ್ಯಾಸ. ಪೇತ್ರನ ಕಾಲದಲ್ಲಿ ಸುವಾರ್ತೆಯು ಅನ್ಯರಿಗೆ ಸಾರಲಾಯಿತು. ಅಕೃ 10: 28, 11:1–3, ಗಲಾತ್ಯ 2:11–14. ಉಳಿದ ಅಪೋಸ್ತಲರಿಗಿಂತ ಪೌಲನು ದೇವರ ರಹಸ್ಯಗಳನ್ನು ಹೆಚ್ಚುತಿಳಿದವನಾಗಿದ್ದರೂ ಅದನ್ನು ಇತರ ಅಪೋಸ್ತಲರಿಗಾಗಲಿ, ಸಭೆಗಾಗಲಿ ಸಂಪೂರ್ಣವಾಗಿ ತಿಳಿಸಲು ಅಶಕ್ತನಾಗಿದ್ದನು. 2 ಕೋರಿ 12:4, ಗಲಾತ್ಯ2:2. ಪೌಲನಿಗಾದ ದೈವಪ್ರಕಟನೆಯಿಂದ ಸಭೆಗಳಿಗಾದ ಲಾಭವನ್ನು ಕಂಡುಕೊಳ್ಳಬಹುದು. ಅವನು ತನಗಾದ ದೇವಪ್ರಕಟನೆಯನ್ನು ಸಂಪೂರ್ಣವಾಗಿ ಹೇಳಲು ಅಶಕ್ತನಾಗಿದ್ದರೂ ಅವನ ಮಾತಿನಲ್ಲಿ ಅಡಗಿರುವ ಸತ್ಯಾಂಶವನ್ನು ಕಂಡುಕೊಳ್ಳಬಹುದು.

ಮೇಲಿನ ಸತ್ಯಾಂಶಗಳಿಗೆ ಸರಿಹೊಂದುವಂತೆ ಸಂಗತಿಗಳು ಕ್ರಿ.ಶ. 96ರಲ್ಲಿ ಬರೆಯಲ್ಪಟ್ಟ ಸತ್ಯವೇದದ ಕಡೇ ಗ್ರಂಥವಾದ ಪ್ರಕಟನೆಯ ಪುಸ್ತಕದಲ್ಲಿ ಕಂಡುಬರುತ್ತದೆ. ಹಿಂದೆ ಯಾರಿಗೂ ಪ್ರಕಟವಾಗದಂಥ ಪ್ರವಾದನೆಗಳನ್ನು ಕುರಿತು ಇಲ್ಲಿ ಬರೆಯಲಾಗಿದೆ ಎಂದು ಪುಸ್ತಕದ ಪ್ರಾರಂಭದಲ್ಲಿ ತಿಳಿಸಲಾಗಿದೆ. ಇದರಿಂದ ಆ ಕಾಲದವರೆಗೆ ದೇವರ ಯೋಜನೆಯು ಸಂಪೂರ್ಣವಾಗಿ ಯಾರಿಗೂ ಪ್ರಕಟವಾಗಿರಲಿಲ್ಲವೆಂದು ತಿಳಿದುಬರುತ್ತದೆ. ಪುಸ್ತಕದ ಹೆಸರೇ ಸೂಚಿಸುವಂತೆ ಅದು ದೇವರ ಯೋಜನೆಯನ್ನು ಪ್ರಕಟಿಸುವುದಾಗಿದೆ. ಆದಿಸಭೆಗೂ ಈ ಪುಸ್ತಕದ ವಿಷಯಗಳು ಅರ್ಥವಾಗಿರಲಿಲ್ಲ. ಪುಸ್ತಕವನ್ನು ಬರೆದ ಯೋಹಾನನಿಗೂ ತಾನುಕಂಡ ವಿಷಯುಗಳು ಅರ್ಥವಾಗಿರಲಿಲ್ಲ. ಅವನು ಅಪೋಸ್ತಲನೂ ಪ್ರವಾದಿಯೂ ಆಗಿದ್ದನು. ಅಪೋಸ್ತಲನಾಗಿ ಆ ಕಾಲದ ಸತ್ಯಾಂಶಗಳನ್ನು ಬೋಧಿಸಿದನು, ಪ್ರವಾದಿಯಾಗಿ ಮುಂದೆ ನಡೆಯುವುದನ್ನು ಪ್ರವಾದಿಸಿದನು.

ಈ ಕ್ರೈಸ್ತ ಯುಗದಲ್ಲಿ ಸಭೆಯ ಭವಿಷ್ಯವನ್ನು ಅರಿಯಲು ಪ್ರಕಟನೆಯ ಗ್ರಂಥವನ್ನು ಪರಿಶೋಧಿಸುತ್ತಿರುವರು. ಯಾರು ಅದನ್ನು ಓದಿ ಅರ್ಥಮಾಡಿಕೊಳ್ಳುವರೋ ಅಂಥವರು ವಾಗ್ದಾನಕ್ಕನುಸಾರವಾದ ಆಶೀರ್ವಾದವನ್ನು ಹೊಂದುವರು. ಪ್ರಕಟ 1:13. ಈ ಗ್ರಂಥವು ಧರ್ಮಸುಧಾರಣೆಯ ಕಾಲದಲ್ಲಿ ಬಹಳ ಸಹಾಯಕವಾಗಿದ್ದಿತು. ಈ ಪ್ರಕಟನೆಯ ಪುಸ್ತಕದ ಸಹಾಯದಿಂದಲೇ ಲೂಥರನು ಪೋಪನನ್ನು ಕ್ರೈಸ್ತವಿರೋಧಿ ಎಂದು ಕರೆದದ್ದು.

ಹೀಗೆ ದೇವರು ತನ್ನ ಅಪಾರ ಕೃಪೆಯಿಂದ ಸತ್ಯಾಂಶವನ್ನು ಕಂಡುಕೊಳ್ಳುವ ಜ್ಞಾನವನ್ನು ದಯಪಾಲಿಸಿರುವನು. ಆತನು ನಮಗೆ ಬೆಳಕು ತೋರಿಸುವವನಾಗಿದ್ದಾನೆ. ಹಿಂದಿನದಕ್ಕಿಂತ ಈಗ ಆತನ ಬೆಳಕು ಹೆಚ್ಚು ಪ್ರಕಾಶವಾಗಿದೆ.

"And still new beauties shall we see,
And still increasing light."

# ಅಧ್ಯಾಯ-2

## ಸರ್ವೋನ್ನತ ಜ್ಞಾನವಂತನಾದ ಸೃಷ್ಟಿಕರ್ತನ ಇರುವಿಕೆಯನ್ನು ಧೃಢಪಡಿಸಲಾಗಿದೆ.

**ಸತ್ಯವೇದ ಹೊರತುಪಡಿಸಿದ ಸಾಕ್ಷಿಗಳು, ವಿಚಾರಗಳ ಬೆಳಕಿನಲ್ಲಿ ಪರೀಕ್ಷಿಸಲಾಗಿದೆ-ಒಂದು ಸಮರ್ಥಿಸಲಾಗದಂತ ಸಿದ್ಧಾಂತ-ಒಂದು ವಿವೇಕಪೂರ್ವಕವಾದ ಸಿದ್ಧಾಂತ-ದೇವರ ಗುಣಲಕ್ಷಣಗಳು ನಿರೂಪಿಸಲಾಗಿದೆ-ವಿವೇಕಪೂರ್ವಕವಾದ ವ್ಯವಕಲನಗಳು.**

ತಿಳಿವಳಿಕೆ (ಜ್ಞಾನವೆಂಬ) ಎಂಬ ಬೆಳಕಿನಿಂದ ತಿಳಿಯದೆ ಇರುವ ಸಂಗತಿಗಳನ್ನು ನಿಷ್ಕಪಟದಿಂದ ಹುಡುಕುವುದಾದರೆ ಅದು ಖಂಡಿತವಾಗಿಯು ನಮ್ಮನ್ನು ಸತ್ಯಮಾರ್ಗದಲ್ಲಿ ನಡೆಸುವುದು. ಆದರೂ ಮಾನವನು ದೇವರ ಉದ್ದೇಶ ಮತ್ತು ಆತನ ಯೋಜನೆಗಳ ಬಗ್ಗೆ ಸರಿಯಾದ ಅರಿವಿಲ್ಲದೆಯೇ ಅನಿರ್ದಿಷ್ಟವಾದ ತೀರ್ಮಾನಕ್ಕೆ ಬರುವವನಾಗಿದ್ದಾನೆ. ಆದುದರಿಂದ ಸತ್ಯವೇದವನ್ನು ಬದಿಗಿಟ್ಟು ಬುದ್ಧಿವಂತಿಕೆ ಯಿಂದಲೇ ವಿಷಯಗಳನ್ನು ಪರಿಶಿಲೀಸೋಣ.

ಯಾರೇ ಆಗಲಿ ಆಕಾಶವನ್ನು ನೋಡಿದರೆ ಅಲ್ಲಿ ಸೃಷ್ಟಿಯ ಅಪರಿಮಿತ ಅದ್ಭುತವನ್ನು ಕಾಣುವನು. ಅಲ್ಲಿ ಹೊಂದಾಣಿಕೆ, ಸೌಂದರ್ಯ, ಕ್ರಮ, ಏಕತೆ, ಭಿನ್ನತೆ ಇತ್ಯಾದಿಗಳೆಲ್ಲವೂ ಕಂಡುಬರುತ್ತದೆ. ಆದರೂ ಇವೆಲ್ಲವುಗಳನ್ನು ಸೃಷ್ಟಿಸಿದ ದೇವರ ಜ್ಞಾನ ಮತ್ತು ಶ್ರೇಷ್ಠತೆಯಲ್ಲಿ ಮಾನವನು ಅಪನಂಬಿಕೆಪಡುವವನಾಗಿದ್ದಾನೆ. ಸೃಷ್ಟಿಕರ್ತನಿಲ್ಲದೆ ಇವೆಲ್ಲವು ತನಗೆ ತಾನೇ ಉಂಟಾಯಿತು ಎಂದು ಹೇಳುವವನನ್ನು ಮೂರ್ಖನೆಂದು ಹೇಳಬಹುದು. “ದುರ್ಮತಿಗಳು ದೇವರಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ.” ಕೀರ್ತನೆ 14:1,53:1. ಹೇಗಿದ್ದರೂ ಕಣ್ಣಿಗೆ ಕಾಣುವ ಸಂಗತಿಗಳಿಂದಲೇ ಸೃಷ್ಟಿಕರ್ತನ ಇರುವಿಕೆಯು ಸ್ಪಷ್ಟವಾಗುತ್ತದೆ. ಪ್ರತಿ ಗಿಡ, ಮರ, ಹೂಗಳು ಇದಕ್ಕೆ ಸಾಕ್ಷಿಯಾಗಿವೆ. ಇವೆಲ್ಲವೂ ಮಾನವನ ಜ್ಞಾನಕ್ಕೆ ಮೀರಿದವುಗಳಾಗಿವೆ. ಆದರೂ ಈ ಅದ್ಭುತಸೃಷ್ಟಿಯ ಮೂಲವನ್ನು ತಿಳಿಯಲು ಪ್ರಯತ್ನಿಸದೆ ಸೃಷ್ಟಿಕರ್ತನ ಇರುವಿಕೆಯನ್ನು ಅಲ್ಲಗಳೆದು ಎಲ್ಲವೂ ಸೃಷ್ಟಿಯ ನಿಯಮಕ್ಕೆ ಒಳಪಟ್ಟಿದೆ ಎಂದು ವಾದಿಸುವ ಮಾನವನ ಅಜ್ಞಾನಕ್ಕೆ ಏನು ಹೇಳಬೇಕೋ ಅರಿಯದಾಗಿದೆ. ಜ್ಞಾನಿಯಾದ ಸೃಷ್ಟಿಕರ್ತನ ಇರುವಿಕೆಯನ್ನು ಒಪ್ಪದೆ ಇರುವಂತ ಕೆಲವರು ಪ್ರಕೃತಿಯೇ ದೇವರು ಎಂದು ಹೇಳುವವರಾಗಿದ್ದಾರೆ. ಜ್ಞಾನಿಯ ಕೈವಾಡವಿಲ್ಲದೆಯೇ ಗಿಡಮರಗಳೆಲ್ಲವೂ ವಿಕಾಸತ್ವ ಸಿದ್ಧಾಂತಕ್ಕೆ ಒಳಗಾಗಿ ಒಂದು ರೂಪಕ್ಕೆ ಬಂದುನಿಂತಿದೆ ಎಂದು ನಂಬುವವರಾಗಿದ್ದಾರೆ. ಆದರೆ ಈ ಸಿದ್ಧಾಂತಕ್ಕೆ ಯಾವ ಆಧಾರವಿಲ್ಲ. ಇವರು ಒಂದು ಜೀವಿಯಿಂದ ಮತ್ತೊಂದು ಜೀವಿಯನ್ನು ಮಾಡಲು ಪ್ರಯತ್ನಿಸಿ ವಿಫಲರಾಗಿರುವರು. ಸೃಷ್ಟಿಕರ್ತನ ಸೃಷ್ಟಿಯನ್ನು ಮಾರ್ಪಡಿಸಲು ಮಾನವರಿಗೆ ಸಾಧ್ಯವಿಲ್ಲ. ಮೀನು ರೆಕ್ಕೆಯ ಸಹಾಯದಿಂದ ಈಜ ಬಲ್ಲದೇ ಹೊರತು ಹಕ್ಕಿಯಂತೆ ಬದಲಾವಣೆ ಹೊಂದಲು ಸಾಧ್ಯವಿಲ್ಲ. ಕಪಿಗೂ ಮಾನವನಿಗೂ ಹೋಲಿಕೆಯಿದೆ ಎಂದು ಕೆಲವರು ಹೇಳುತ್ತಾರೆ. ಆದರೆ ಅದಕ್ಕೆ ಯಾವ ಆಧಾರವಿಲ್ಲ. ಒಂದು ಜಾತಿಯಿಂದ ಅದೇ ಜಾತಿಯುವುಗಳನ್ನು ಉತ್ಪತ್ತಿಮಾಡಬಹುದೇ ಹೊರತು ಒಂದು ಜಾತಿಯಿಂದ ಬೇರೆ ಜಾತಿಯವುಗಳನ್ನು ಉತ್ಪಾದಿಸಲು ಮಾನವನಿಗೆ ಸಾಧ್ಯವಿಲ್ಲ. ಉದಾ. ಕತ್ತೆಗೂ ಕುದುರೆಗೂ ಸ್ವಲ್ಪ ಹೋಲಿಕೆಯಿರಬಹುದು. ಆದರೆ ಅವೆರಡಕ್ಕೆ ಯಾವ ಸಂಬಂಧವಿಲ್ಲ.

ಒಂದು ವೇಳೆ ಸೃಷ್ಟಿಕರ್ತನು ಅಜ್ಞಾನಿಯಾಗಿದ್ದರೆ ಯಾವ ಜೀವಿಗೇ ಆಗಲಿ ಸ್ಥಿರಸ್ವಭಾವವಿರುತ್ತಿರಲಿಲ್ಲ. ವಿಕಾಸತ್ವದ ನಿಯಮಕ್ಕೆ ಅನುಗುಣವಾಗಿ ಮೀನು ಹಕ್ಕಿಯಾಗಿಯೂ ಕಪಿ ಮಾನವನಾಗಿಯೂ ಬದಲಾವಣೆ ಹೊಂದಬೇಕಾಗಿತ್ತು. ಆದರೆ ಈ ಸಿದ್ಧಾಂತವು ಸತ್ಯವೇದದಲ್ಲಿ ತಿಳಿಸಿರುವ ಸೃಷ್ಟಿಕಾರ್ಯಕ್ಕೆ ವಿರುದ್ಧವಾಗಿದೆ. ಮಹಾ ಮಹಿಮನಾದ ದೇವರು ಪ್ರತಿಯೊಂದನ್ನು ಅದರ ಸ್ಥಾನದಲ್ಲಿ ನೇಮಿಸಿರುವನು.

ಸದ್ಯಕ್ಕೆ ಪ್ರಕೃತಿಯಲ್ಲಿರುವ ಜೀವಿಗಳ ಸ್ವಭಾವ ಮತ್ತು ಆಕಾರವನ್ನು ಪರಿಶೀಲಿಸಿದರೆ ಈ ಜೀವಿಗಳು ಇನ್ನೂ ಉತ್ತಮಮಟ್ಟಕ್ಕೆ ಏರಬಹುದೇ ಹೊರತು ಯಾವ ಬದಲಾವಣೆಯನ್ನುಹೊಂದಲು ಸಾಧ್ಯವಿಲ್ಲ. ವಿಕಾಸತ್ವ ಸಿದ್ಧಾಂತದ ಪ್ರಕಾರ ಈ ಜೀವಿಗಳು ಪ್ರಾರಂಭದಲ್ಲಿಯೇ ಈರೀತಿಯಲ್ಲಿ ಸೃಷ್ಟಿಸಲ್ಪಡಲಿಲ್ಲ. ಅನಾದಿ ಕಾಲದಲ್ಲಿಯೇ ಇವುಗಳು ಭೂಮಿಯಿಂದ ಉತ್ಪತ್ತಿಯಾಗಿ ಬಂದು ಆಕಾರದಿಂದ ಮತ್ತೊಂದು ಆಕಾರಕ್ಕೆ ವಿಕಾಸತ್ವವನ್ನು ಹೊಂದಿರುವುದು. ಈ ವಿಕಾಸತ್ವವು ಒಂದು ದೈವಿಕ ನಿಯುಮಕ್ಕೆ ಒಳಪಟ್ಟಿರುವುದು. ಆಹಾರ ಮತ್ತು ವಾಯುಗುಣಕ್ಕೆ ಅನುಗಣವಾಗಿ ಅನೇಕ ರೂಪ ತಳೆದು ಇನ್ನೂ ಹೆಚ್ಚಿನ ಬದಲಾವಣೆ ಸಾಧ್ಯವಿಲ್ಲದೆ ಸಧ್ಯದ ರೂಪಕ್ಕೆ ಬಂದು ನಿಂತಿರುವುದು. ಯಾವ ಜೀವಿಯಾಗಲಿ, ಗಿಡಮರಗಳಾಗಲಿ ಅಭಿವೃದ್ಧಿ ಹೊಂದಬಹುದು ಅಥವಾ ನಶಿಸಿಹೋಗಬಹುದು. ಆದರೆ ಅವುಗಳಲ್ಲಿ ಬದಲಾವಣೆ ಸಾಧ್ಯವಿಲ್ಲ. ಇವೆಲ್ಲವು ಸೃಷ್ಟಿಕರ್ತನ ನಿಯಮದಂತೆ

ಜಾತಿಗನುಸಾರವಾಗಿ ಉತ್ಪತ್ತಿಯಾಗುತ್ತವೆ ಮತ್ತು ಪರಿಪೂರ್ಣತೆಯನ್ನು ಪಡೆಯಬಹುದೇ ಹೊರತು ಬದಲಾವಣೆ ಸಾಧ್ಯವಿಲ್ಲ.

ಈಗ ಕಂಡುಬರುವಂಥ ಪ್ರಾಣಿಗಳು ಮತ್ತು ಮರಗಳು ಮಾನವನ ಸೃಷ್ಟಿಗೆ ಮೊದಲೇ ಪರಿಪೂರ್ಣತೆಯನ್ನು ಪಡೆದಿವೆ. ಭೂಗರ್ಭದಲ್ಲಿ ಕಂಡುಬರುವ ಅಸ್ಥಿಪಂಜರಗಳು ಮತ್ತು ಇತರ ಅವಶೇಷಗಳು ಇದನ್ನು ಶೃತಪಡಿಸುತ್ತವೆ. ಮಾನವನು ಸೃಷ್ಟಿಕರ್ತನ ಸ್ವರೂಪದಲ್ಲಿಯೇ ಸೃಷ್ಟಿಸಲ್ಪಟ್ಟಿರುವನು. ಇದು ಸತ್ಯವೇದದ ಬೋಧನೆಯನ್ನು ಖಚಿತಪಡಿಸುತ್ತದೆ. ಸೃಷ್ಟಿಯ ನಿಯಮವನ್ನು ಮಾನವನು ಎಷ್ಟೇ ಆಳವಾಗಿ ಪರಿಶೀಲಿಸಿದರೂ ಈ ಸೃಷ್ಟಿಕಾರ್ಯದ ಹಿಂದೆ ಜ್ಞಾನಿಯಾದ ದೇವರ ಕೈವಾಡವಿದೆ ಎಂದು ಕಂಡುಬರುತ್ತದೆ.

ನಮ್ಮ ಸುತ್ತಮುತ್ತಲಿರುವ ವಸ್ತುಗಳು ಆತನ ಇರುವಿಕೆಯ ಸತ್ಯಾಂಶವನ್ನು ಪ್ರಕಟಿಸುತ್ತಿವೆ. ಮಾನವರಾದ ನಾವು ಆತನ ಕೈಕೆಲಸವಾಗಿದ್ದೇವೆ. ನಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಯು ನಮ್ಮ ಗ್ರಹಿಕೆಗೆ ಮೀರಿದ ಅದ್ಭುತ ಕೌಶಲ್ಯವನ್ನು ತಿಳಿಸುತ್ತದೆ. ಪ್ರಕೃತಿಯನ್ನು ರೂಪಿಸಿ ಸೃಷ್ಟಿಸಿದವನು ಆತನೇ. ನಾವು ಕಂಡು ಸಂತೋಷಿಸುವ ಪ್ರಕೃತಿಯ ನಿಯಮವನ್ನು ಸ್ಥಾಪಿಸಿದವನು ಆತನೇ. ಆತನೊಬ್ಬನೇ ತನ್ನ ಅದ್ಭುತವಾದ ಜ್ಞಾನ ಮತ್ತು ಶಕ್ತಿಯಿಂದ ಇಡೀ ಪ್ರಪಂಚವನ್ನು ತನ್ನ ಹಿಡಿತದಲ್ಲಿಟ್ಟು ಕೊಂಡಿರುವನು. ಇಂತಹ ಜ್ಞಾನ ನಮ್ಮ ಬುದ್ಧಿಗೆ ಮೀರಿದವುಗಳಾಗಿರುವುದರಿಂದ ಸ್ವಬುದ್ಧಿಯಿಂದ ಆತನನ್ನು ಪ್ರೀತಿಸುತ್ತೇವೆ ಮತ್ತು ಆರಾಧಿಸುತ್ತೇವೆ.

ಈ ಸರ್ವಶಕ್ತನಾದ ದೇವರ ಇರುವಿಕೆಯನ್ನು ಅರಿಯಬೇಕಾದರೆ ಆತನ ಶಕ್ತಿಗೆ ಹೆದರಬೇಕು ಮತ್ತು ಆತನಲ್ಲಿರುವ ಔದಾರ್ಯತೆ ಮತ್ತು ಒಳ್ಳೇತನವನ್ನು ಕಂಡುಕೊಳ್ಳಬೇಕು. ಪ್ರತಿಯೊಂದು ಆತನ ಜ್ಞಾನ ಮತ್ತು ಶಕ್ತಿಯನ್ನು ತೋರ್ಪಡಿಸುತ್ತದೆ. ಹೌದು! ಆತನ ಜ್ಞಾನ ಶಕ್ತಿಯು ಮಾನವರನ್ನು ಸೃಷ್ಟಿಸಿದರಲ್ಲೇ ಕಂಡುಬರುತ್ತದೆ. ಮಾನವನ ಅತ್ಯುನ್ನತ ಕೆಲಸವು ದೇವರ ಕೆಲಸದ ಮುಂದೆ ಬಹಳ ಅಲ್ಪವಾಗಿ ಕಂಡುಬಂದಿದೆ. ಮಾನವನ ಜ್ಞಾನ ಮತ್ತು ಶಕ್ತಿ ಹೇಗೆ ಸೃಷ್ಟಿ ಕರ್ತನ ಶಕ್ತಿಗಿಂತ ಕಡಿಮೆಮಟ್ಟದ್ದಾಗಿದೆ. ಆತನು ಬುದ್ಧಿವಂತನೂ, ನ್ಯಾಯವಂತನೂ, ಪ್ರೀತಿಮಯನೂ ಮತ್ತು ಸರ್ವಶಕ್ತನೂ ಆಗಿರುವುದರಿಂದ ಸಮಸ್ತ ಸೃಷ್ಟಿಗೆಲ್ಲಾ ಹೆಚ್ಚಿನವನಾಗಿದ್ದಾನೆ.

ಹೀಗೆ ಆತನ ಗುಣಲಕ್ಷಣಗಳ ಪರಿಚಯು ನಮಗಾದಮೇಲೆ ಇಂತಹ ಮಹಾವ್ಯಕ್ತಿಯಿಂದ ನಾವು ಅಪೇಕ್ಷಿಸುವುದೇನು? ದೇವರ ಶಕ್ತಿಯು ಆತನ ಸ್ವಭಾವಕ್ಕೆ ಅನುಗುಣವಾಗಿ ನ್ಯಾಯ, ಬುದ್ಧಿವಂತಿಕೆ ಮತ್ತು ಉದಾರತೆಯಿಂದ ಉಪಯೋಗಿ ಸಲ್ಪಡಬೇಕು. ಅದು ಯಾವ ರೀತಿಯಲ್ಲಿ ಉಪಯೋಗಿ ಸಲ್ಪಟ್ಟರೂ ಪ್ರತಿ ಹೆಜ್ಜೆಯಲ್ಲಿ ಆತನ ಅಪರಿಮಿತವಾದ ಜ್ಞಾನವು ಪ್ರಕಟವಾಗಬೇಕು.

ನಮ್ಮ ಸುತ್ತಲಿರುವ ಎಣಿಸಲಾಗದ ಲೋಕಗಳಿಂದ ಮತ್ತು ಭೂಮಿಯಲ್ಲಿ ಕಂಡುಬರುವ ವೈವಿಧ್ಯತೆಯಲ್ಲಿ ಆತನ ಶಕ್ತಿಯು ಅಡಕವಾಗಿರುವುದು ಕಂಡುಬರುವುದಿಲ್ಲವೋ? ಮಾನವನ ಸೃಷ್ಟಿಗಿಂತ ಮಿಗಿಲಾದದ್ದು ಬೇರೊಂದಿದೆಯೇ? ಆತನು ಸೃಷ್ಟಿಸಿದ ಮಾನವನಲ್ಲಿ ಆತನಲ್ಲಿರುವ ಸರ್ವಲಕ್ಷಣಗಳು ಕಂಡುಬರುತ್ತವೆ. ಇವೆಲ್ಲವು ನ್ಯಾಯ ಸಮ್ಮತವಾಗಿದೆ ಮತ್ತು ನಮಗೆ ತಿಳಿದಿರುವ ಸಂಗತಿಗಳಿಗೆ ಸರಿಹೊಂದುವಂತಹವುಗಳಾಗಿವೆ.

ಮಾನವನನ್ನು ಉಂಟುಮಾಡಿ ತನ್ನ ಕಾರ್ಯಗಳನ್ನು ವಿವೇಚಿಸುವ ಜ್ಞಾನವನ್ನು ಅವನಿಗೆ ಕೊಟ್ಟು ಕರುಣೆಯಿಂದ ಪ್ರೀತಿಸಿದ ದೇವರು ತನ್ನ ಕಾರ್ಯವನ್ನು ಅರಿಯುವಂತೆ ಮಾನವನಿಗೆ ಬುದ್ಧಿಯನ್ನು ಅನುಗ್ರಹಿಸಲೇ ಬೇಕು. ಇದರಿಂದ ಆತನ ಮುಂದಿನ ಯೋಜನೆಗಳನ್ನು ಮಾನವನು ಅರಿತಂತಾಗುತ್ತದೆ. ಮುಂದೆ ಸಂಭವಿಸುವ ಸಂಗತಿಗಳನ್ನು ದೇವರು ಮಾನವನಿಗೆ ತಿಳಿಸಿಲ್ಲ ಯಾಕೆಂದರೆ ಮುಂದಾಗುವುದನ್ನು ಮಾನವನು ತಿಳಿದರೆ ಸಂತೋಷಪಡುವ ಬದಲು ಭಯ, ಸಂದೇಹ ಮತ್ತು ಅಜ್ಞಾನಗಳಲ್ಲಿ ನರಳಬೇಕಾಗುವುದು. ಹೀಗಾಗಿ ದೇವರು ಮಾನವನನ್ನು ಒಂದು ಸ್ಥಿತಿಗೆ ತಂದು ಅದಕ್ಕಿಂತ ಹೆಚ್ಚಿನದನ್ನು ಆಶಿಸದಂತೆ ಮಾಡಿದರೂ ಕ್ಲುಪ್ತಕಾಲದಲ್ಲಿ ತನ್ನ ಯೋಜನೆಯನ್ನು ಪ್ರಕಟಿಸುವನು. ಸಧ್ಯದಲ್ಲಿ ನಮಗೆ ಸತ್ಯವೇದದ ಪರಿಚಯುವಿಲ್ಲದಿದ್ದರೂ ತಿಳುವಳಿಕೆಯಿಂದಾದರೂ ಅದರಲ್ಲಿ ತಿಳಿಸಿರುವ ಸಂಗತಿಗಳು ನೆರವೇರುವುದನ್ನು ನೋಡಲು ಪ್ರಯತ್ನಿಸುತ್ತೇವೆ. ಅಂತಹ ಒಂದು ಬದಲಾವಣೆಯು ಕಾಲಕ್ಕೆ ಅನುಗುಣವಾಗಿ ನಡೆಯಬೇಕೇ ಹೊರತು ಆಗಾಗ್ಗೆ ಸಂಭವಿಸುವ ಭೂಕಂಪ, ಬಿರುಗಾಳಿ ಅಥವಾ ಪ್ರಕೃತಿಯಲ್ಲಾಗುವ ಬದಲಾವಣೆಯಿಂದ ಅದನ್ನು ತೀರ್ಮಾನಿಸಲು ಸಾಧ್ಯವಿಲ್ಲ. ಇವುಗಳಿಂದ ನಮಗೆ ತಿಳಿದುಬರುವುದೇನೆಂದರೆ ಪ್ರಕೃತಿಯ ಕೆಲಸಗಳು ಸಧ್ಯದಲ್ಲಿ ಪರಿಪೂರ್ಣವಾಗಿಲ್ಲವೆಂದು ಆದರೆ ಮುಂದೆ ಅವು ಪರಿಪೂರ್ಣತೆಯನ್ನು ಪಡೆಯಬಲ್ಲವು ಎಂಬ ಭರವಸೆಯನ್ನು ನಮಗೆ ಕೊಡುತ್ತವೆ.

ನಮ್ಮ ಜೀವಿತವೆಂಬ ಓಟಕ್ಕಿರುವ ದೇವರ ಚಿತ್ತವನ್ನು ತಿಳಿದ ಅನಂತರ ದೇವರ ಯೋಜನೆಯನ್ನು ಪ್ರಕಟಿಸುವ ಸತ್ಯವೇದದ ಮುಖ್ಯಾಂಶಗಳನ್ನು ಪರಿಶೀಲಿಸುವುದು ಆವಶ್ಯಕ. ಅದರಲ್ಲಿ ಆತನು ಎಲ್ಲವನ್ನೂ ತಿಳಿಸಿದ್ದಾನೆ. ಅದು ದೇವರ ಪ್ರೀತಿ, ಜ್ಞಾನ, ಶಕ್ತಿ ಮತ್ತು ಕರುಣೆಯನ್ನು ಸಾರುತ್ತದೆ. ಅದು ಸತ್ಯಕ್ಕೆ ಸಾಕ್ಷಿ ಎಂದು ನಾವು ಒಪ್ಪಿಕೊಳ್ಳಲೇ ಬೇಕು.

"Ye curious minds, who roam abroad,
And trace creation's wonders o'er,
Confess the footsteps of your God,
And bow before him, and adore.

"The heavens declare thy glory, Lord;
In every star thy wisdom shines;
But when our eyes behold thy Word,
We read thy name in fairer lines."

# Sunshine Over All

"What folly, then," the faithless critic cries,
With sneering lip and wise, world-knowing eyes,
"While fort to fort and post to post repeat
The ceaseless challenge of the war-drum's beat,
And round the green earth, to the church-bell's chime,
The morning drum-roll of the camp keeps time,
To dream of peace amidst a world in arms;
Of swords to plowshares changed by Scriptural charms;
Of nations, drunken with the wine of blood,
Staggering to take the pledge of brotherhood,
Like tipplers answering Father Mathew's call.

* * *

"Check Bau or Kaiser with a barricade
Of 'Olive leaves' and resolutions made;
Spike guns with pointed Scripture texts, and hope
To capsize navies with a windy trope;
Still shall the glory and the pomp of war
Along their train the shouting millions draw;
Still dusky labor to the parting brave
His cap shall doff and beauty's kerchief wave;
Still shall the bard to valor tune his song;
Still hero-worship kneel before the strong;
Rosy and sleek, the sable-gowned divine,
O'er his third bottle of suggestive wine,
To plumed and sworded auditors shall prove
Their trade accordant with the law of love;
And Church for State, and State for Church shall fight,
And both agree that might alone is right."

Despite the sneers like these, O faithful few,
Who dare to hold God's Word and witness true,
Whose clear-eyed faith transcends our evil time,
And o'er the present wilderness of crime
Sees the calm future with its robes of green,
Its fleece-flecked mountains, and soft streams between,
Still keep the track which duty bids ye tread,
Though worldly wisdom shake the cautious head.
No truth from heaven descends upon our sphere
Without the greeting of the skeptic's sneer:
Denied, and mocked at, till its blessings fall
Common as dew and sunshine over all.

—*Whittier*

# ಅಧ್ಯಾಯ-3

## ಸತ್ಯವೇದವು ಒಂದು ದೈವೀಕ ಪ್ರಕಟನೆ ಎಂಬುದನ್ನು ವಿಚಾರಗಳ ಬೆಳಕಿನಲ್ಲಿ ಗಮನಿಸುವುದು

**ಬರಹಗಾರರ ಉದ್ದೇಶಗಳು-ಬರವಣಿಗೆಯ ಸಾಮಾನ್ಯ ಗುಣಲಕ್ಷಣಗಳು-ಮೋಶೆಯ ಗ್ರಂಥ-ಮೋಶೆಯ ಧರ್ಮಶಾಸ್ತ್ರ-ಮೋಶೆಯಿಂದ ರಚಿಸಲಾದಅದು ಪುರೋಹಿತಿಕ ಕ್ರಮವಲ್ಲ-ಲೋಕದ ರಾಜರಿಗೆ ಸೂಚನೆಗಳು-ಕಾನೂನಿನ ಮುಂದೆ ಬಡವ ಹಾಗೂ ಶ್ರೀಮಂತ ಒಂದೇ ಹಂತದಲ್ಲಿದ್ದಾರೆ-ಜನರ ಹಕ್ಕುಗಳನ್ನು ತೊಂದರೆ ಪಡಿಸುವುದರ ವಿರುದ್ಧ ಮುಂಜಾಗ್ರತೆಗಳು-ಯಾಜಕತ್ವ ದಯೆಯನ್ನು ಹೊಂದಿದ ಗುಂಪು ಅಲ್ಲ- ಹೇಗೆ ನೆರವು ಇತ್ಯಾದಿ-ಪರದೇಶಸ್ತರು ವಿಧವೇಯರು, ಅನಾಥರು ಮತ್ತು ಸೇವಕರನ್ನು ದಬ್ಬಾಳಿಕೆ ಮಾಡುವುದ ವಿರುದ್ಧ ರಕ್ಷಣೆ-ಸತ್ಯವೇದದ ಪ್ರವಾದಿಗಳು-ಧರ್ಮಶಾಸ್ತ್ರ, ಪ್ರವಾದಿಗಳು ಮತ್ತು ಹೊಸ ಒಡಂಬಡಿಕೆ ಬರಹಗಾರರ ನಡುವೆ ಸಾಮಾನ್ಯವಾದ ಐಕ್ಯದ ಬಂಧವಿದೆಯೇ?-ಅದ್ಭುತಗಳು ಅವಿವೇಕಯುತವಾದವುಗಳಲ್ಲ- ವಿವೇಕಪೂರ್ವಕವಾದ ಮುಕ್ತಾಯ.**

ನಾಗರಿಕತೆ ಮತ್ತು ಸ್ವಾತಂತ್ರ್ಯಕ್ಕೆ ಸತ್ಯವೇದವು ಒಂದು ದೀವಟಿಕೆಯಾಗಿದೆ. ಅದರಿಂದ ಸಮಾಜಕ್ಕಾಗಿರುವ ಒಳ್ಳೇತನವನ್ನು ಮಹಾ ವ್ಯಕ್ತಿಗಳು ಕಂಡುಕೊಂಡಿರುವರು. ಅನೇಕರು ಇದರ ಸತ್ಯಾಂಶವನ್ನು ಶೃತಪಡಿ ಸುವುದಕ್ಕಾಗಿಯೇ ತಮ್ಮ ಪ್ರಾಣವನ್ನು ಈಡುಕೊಟ್ಟಿರುವರು. ಸತ್ಯವೇದವನ್ನು ಪ್ರೀತಿಸುವವರು ಅದನ್ನು ಅದರ ಶತ್ರುಗಳಿಂದ ರಕ್ಷಿಸಲಾರರೋ?

ನಮ್ಮ ಸುತ್ತಲಿರುವ ಪ್ರಕೃತಿಯು ದೇವರ ಯೋಜನೆಯನ್ನು ಪ್ರಕಟಿಸಲು ಅಸಮರ್ಥವಾಗಿರುವಾಗ ಸತ್ಯವೇದವು ದೇವರ ಯೋಜನೆಯನ್ನು ಪ್ರಕಟಿಸುವಂಥದ್ದಾಗಿದೆ. ಅದು ಸತ್ಯವನ್ನೇ ಪ್ರಕಟಿಸುತ್ತದೆ ಎಂಬ ಹಕ್ಕನ್ನು ಸಾಧಿಸುವುದಕ್ಕೆ ಅದರಲ್ಲಿ ಅನೇಕ ಸಾಕ್ಷಿಗಳಿವೆ ಮತ್ತು ಅವು ನಮಗೆ ಭರವಸೆಯನ್ನು ಕೊಡುವುದಾಗಿದೆ. ಆದುದರಿಂದ ಗಮನವಿಟ್ಟು ಅದನ್ನು ಪರಿಶೀಲಿಸುವುದಾದರೆ ಅದು ಖಂಡಿತವಾಗಿಯೂ ದೇವರ ವಾಕ್ಯ ಎಂಬ ಸತ್ಯಾಂಶವನ್ನು ತಿಳಿಯಲು ಸಹಾಯಕವಾಗುತ್ತದೆ.

ಸತ್ಯವೇದವು ಲೋಕದಲ್ಲಿನ ಅತ್ಯಂತ ಪುರಾತನ ಗ್ರಂಥ. ಇದು 30 ಶತಮಾನಗಳ ಬಿರುಗಾಳಿಯನ್ನು ಎದುರಿಸಿ ದೃಢವಾಗಿ ನಿಂತಿದೆ. ಇದನ್ನು ಭೂಲೋಕದಿಂದ ನಾಶಮಾಡುವುದಕ್ಕಾಗಿ ಅನೇಕರು ಪ್ರಯತ್ನಿಸಿರುವರು. ಅದನ್ನು ಬಚ್ಚಿಟ್ಟರೂ, ಸುಟ್ಟು ಹಾಕಿದರೂ ಆ ಗ್ರಂಥವನ್ನು ಹೊಂದಿದವರಿಗೆ ಮರಣ ಶಿಕ್ಷೆಯನ್ನು ವಿಧಿಸಿದರು. ಅದರಲ್ಲಿ ನಂಬಿಕೆಯಿಟ್ಟವರಿಗೆ ಚಿತ್ರವಿಚಿತ್ರ ಹಿಂಸೆಯನ್ನು ಕೊಟ್ಟರು. ಆದರೂ ಆ ಪುಸ್ತಕವು ಇನ್ನೂ ಜೀವಂತವಾಗಿದೆ. ಆ ಗ್ರಂಥದ ಶತ್ರುಗಳು ಇಂದು ಸತ್ತುಹೋಗಿದ್ದಾರೆ. ಅದರ ಪ್ರಭಾವವನ್ನು ಕಡಿಮೆ ಮಾಡುವುದಕ್ಕಾಗಿ ನೂರಾರು ದೂಷಣೆಯ. ಗ್ರಂಥಗಳನ್ನು ಬರೆದರೂ ಅವುಗಳಲ್ಲಿ ಒಂದಾದರು ಇಂದಿನವರೆಗೆ ಉಳಿದಿಲ್ಲ. ಆದರೆ ಸತ್ಯವೇದವು ಈಗಲೂ ಇದೆ. ಅದು ತನ್ನ ಎಲ್ಲಾ ಕೆಡಕುಗಳನ್ನು ಎದುರಿಸಿ ಲೋಕದ ಎಲ್ಲಾ ಜನಾಂಗಗಳಲ್ಲಿ ಮತ್ತು ಎಲ್ಲಾ ಭಾಷೆಗಳಲ್ಲಿ ತನ್ನ ದಾರಿಯನ್ನು ಕಂಡುಕೊಂಡಿದೆ. 200ಕ್ಕೂ ಹೆಚ್ಚು ಭಾಷೆಗಳಲ್ಲಿ ಭಾಷಾಂತರವಾಡಲಾಗಿದೆ. ಅನೇಕ ಶತಮಾನಗಳಿಂದ ಬಂದೊದಗಿದ ಎಲ್ಲಾ ಕೇಡು ಗಂಡಾಂತರಗಳನ್ನು ಎದುರಿಸಿ ಇಂದಿಗೂ ದೃಢವಾಗಿ ನಿಂತಿರುವುದೇ ಒಂದು ಬಲವಾದ ಸಾಕ್ಷಿಯಾಗಿದೆ. ದೇವರೇ ಈ ಗ್ರಂಥದ ಲೇಖಕನೂ ರಕ್ಷಕನೂ ಆಗಿರುವನೆಂದು ಇದು ಸ್ಪಷ್ಟಪಡಿಸುತ್ತದೆ.

ಸತ್ಯವೇದದ ನೀತಿಯು ಅತ್ಯುತ್ತಮವಾದದ್ದು. ಇದನ್ನು ಆತ್ಯಾಸಕ್ತಿಯಿಂದ ಓದುವ ಪ್ರತಿ ವಿದ್ಯಾರ್ಥಿಯ ಜೀವಿತವು ಶುದ್ಧವಾಗಿ ಉನ್ನತ ಮಟ್ಟಕ್ಕೆ ಏರಿಸಲ್ಪಡುವುದು. ಮತ ಸಂಬಂಧವಾದ ಇತರ ಗ್ರಂಥಗಳು, ವಿಜ್ಞಾನದ ಗ್ರಂಥಗಳು ಮಾನವನು ಮುಂದುವರಿಯುವುದಕ್ಕ ಸ್ವಲ್ಪಮಟ್ಟಿಗೆ ಸಹಾಯಕಾರಿಯಾಗಿವೆಯೇ ಹೊರತು ಸಂಕಟಪಡುತ್ತಿರುವ ಮಾನವಕೋಟಿಗೆ ಬೇಕಾದ ಸಂತೋಷ, ಸಮಾಧಾನ ಮತ್ತು ಆಶೀರ್ವಾದವನ್ನು ಒದಗಿಸಲು ಸಾಧ್ಯವಿಲ್ಲ. ಆದರೆ ಸತ್ಯವೇದವು ಬಡವರಿಗೆ, ಶ್ರೀಮಂತರಿಗೆ, ವಿದ್ಯಾವಂತರಿಗೆ, ಅವಿದ್ಯಾವಂತರಿಗೆ, ಒಟ್ಟಿನಲ್ಲಿ ಸರ್ವರಿಗೂ ಅವಶ್ಯಕವಾದ ಸಮಾಧಾನವನ್ನು ಕೊಡಬಲ್ಲ ಶಕ್ತಿಯನ್ನುಪಡೆದಿದೆ. ಸಾಮಾನ್ಯ ಗ್ರಂಥವನ್ನು ಓದುವ ರೀತಿಯಲ್ಲಿ ಸತ್ಯವೇದವನ್ನು ಅಭ್ಯಸಿಸಿ ಅದರ ಅರ್ಥವನ್ನು ಗ್ರಹಿಸಿಕೊಳ್ಳಲು ಸಾಧ್ಯವಿಲ್ಲ. ಆಲೋಚನಾ ಶಕ್ತಿಯಿಂದ ಶ್ರದ್ಧೆಯಿಂದ ಗ್ರಂಥವನ್ನು ಅಭ್ಯಾಸಿಸಬೇಕು. ಯಾಕೆಂದರೆ ದೇವರ ಆಲೋಚನೆಗಳು ನಮ್ಮ ಆಲೋಚನೆಗಳಿಗಿಂತ ಹೆಚ್ಚಿನದಾಗಿದೆ ಮತ್ತು ಆತನ ಮಾರ್ಗಗಳು ನಮ್ಮ ಮಾರ್ಗಗಳಲ್ಲ. ಆದುದರಿಂದ ನಮ್ಮ ಜ್ಞಾನ, ಶಕ್ತಿ ಎಲ್ಲವನ್ನು ಪ್ರಯೋಗಿಸಿ ದೇವರ ಯೋಜನೆ ಮತ್ತು ಉದ್ದೇಶಗಳನ್ನು ಕಂಡುಕೊಳ್ಳಬೇಕಾಗಿದೆ. ಹೇಗೆ ಅಮೂಲ್ಯವಾದವು ಮೇಲ್ಭಾಗದಲ್ಲಿ ಸುಲಭವಾಗಿ ಸಿಕ್ಕುವುದಿಲ್ಲವೋ ಹಾಗೆಯೇ ಸತ್ಯವೇದದ ಸತ್ಯವನ್ನು ಕಂಡುಕೊಳ್ಳಬೇಕಾದರೆ ಆಳವಾದ ಅಭ್ಯಾಸ ಅಗತ್ಯ.

ಈ ಪುಸ್ತಕದ ಮೊದಲಿನಿಂದ ಕಡೆಯವರೆಗೆ

ನಜರೇತಿನ ಯೇಸುವನ್ನು ಕುರಿತು ತಿಳಿಸುತ್ತದೆ. ಆತನು ದೇವರ ಮಗನು ಎಂದು ತಿಳಿಸಲಾಗಿದೆ. ಆತನ ಸಮಸ್ತ ಕಾರ್ಯಗಳಿಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಯೇಸು ಜೀವಿಸಿದ ಕಾಲವನ್ನು ಸತ್ಯವೇದದಲ್ಲಿ ತಿಳಿಸಿರುವಂತೆ ಇತರ ಚರಿತ್ರೆಗಳಲ್ಲಿಯೂ ತಿಳಿಸಲ್ಪಟ್ಟಿದೆ ಮತ್ತು ಅವುಗಳಲ್ಲಿ ಪರಸ್ಪರ ಹೊಂದಾಣಿಕೆ ಇದೆ. ಯೇಸು ಯೆಹೂದ್ಯರ ಅನೀತಿಯನ್ನು ಖಂಡಿಸಿ ಅವರಿಂದ ದೂಷಿತನಾಗಿ ಶಿಲುಬೆಯ ಮರಣವನ್ನು ಅನುಭವಿಸಿದನು ಎಂಬ ಸಂಗತಿಯನ್ನು ಚರಿತ್ರೆಯಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ಆದರೆ ಹೊಸ ಒಡಂಬಡಿಕೆಯ ಬರಹಗಾರರು ಈ ವಿಷಯವನ್ನು ಅಷ್ಟಾಗಿ ಸ್ಪಷ್ಟಪಡಿಸಿಲ್ಲ. ಪೌಲ ಮತ್ತು ಲೂಕ ಇವರಿಬ್ಬರನ್ನು ಬಿಟ್ಟರೆ ಉಳಿದ ಹೊಸ ಒಡಂಬಡಿಕೆಯ ಲೇಖಕರೆಲ್ಲಾ ಯೇಸುವಿನ ಆಪ್ತ ಶಿಷ್ಯರಾಗಿದ್ದು ಆತನ ಜೀವಿತದ ಸತ್ಯಾಂಶವನ್ನು ಬರೆದಿರುವರು. ಪ್ರತಿ ಲೇಖಕನು ಯೇಸುವಿನ ವ್ಯಕ್ತಿತ್ವವನ್ನು ಕುರಿತು ಬರೆದಿರುವುದರಿಂದ ಈತನೊಬ್ಬನ ವಿಷಯವಾಗಿಯೇ ಎಲ್ಲರೂ ಬರೆಯಲು ಕಾರಣವೇನು? ಎಂಬ ಪ್ರಶ್ನೆಯು ನಮ್ಮಲ್ಲಿ ಉದ್ಭವಿಸುವುದು ಸಹಜ. ಯೆಹೂದ್ಯರು ಯೇಸುವನ್ನು ತಪ್ಪಿತಸ್ಥನೆಂದು ದೂಷಿಸಿ ಜೀವಿಸಲು ಅನರ್ಹನೆಂದು ತೀರ್ಮಾನಿಸಿ ಮರಣ ದಂಡನೆಯನ್ನು ವಿಧಿಸಿ ಶಿಲುಬೆಗೆ ಹಾಕಿದರು. ಆದರೆ ಆತನ ಶಿಷ್ಯರು ಆತನ ಬೋಧನೆಯ ಸತ್ಯಾಂಶವನ್ನು ಸಾರುತ್ತಾ ಅದಕ್ಕಾಗಿ ತಮ್ಮ ಜೀವಿತವನ್ನೇ ಮುಡುಪಾಗಿಟ್ಟು ಬಂದಂಥ ಸಂಕಷ್ಟಗಳನ್ನು ಎದುರಿಸಿ ಸತ್ಯಕ್ಕೋಸ್ಕರ ಮರಣಕ್ಕೆ ಗುರಿಯಾದರು. ಯೇಸು ಜೀವಿಸಿದ್ದ ಕಾಲದಲ್ಲಿ ಆತನ ಜೀವಿತ ಮತ್ತು ಆತನ ಉಪದೇಶ ಎರಡೂ ಮೆಚ್ಚಿಕೊಳ್ಳುವಂಥದಾಗಿತ್ತು. ಆದರೆ ಆತನ ಮರಣದ ಅನಂತರವೂ ಆತನನ್ನು ಕುರಿತು ಸಾಕ್ಷಿ ಹೇಳುವ ಅಗತ್ಯವೇನಿತ್ತು? ಅದರಲ್ಲೂ ಆತನ ಮರಣ ಅಷ್ಟು ಅವಮಾನಕರವಾಗಿರುವಾಗ? ಈ ಲೇಖಕರು ಯೇಸುವನ್ನು ತಮ್ಮ ಆದರ್ಶ ವ್ಯಕ್ತಿಯನ್ನಾಗಿಟ್ಟುಕೊಂಡು ಆತನ ವಿಷಯವಾಗಿ ಬರೆದಿರುವರು ಎಂದು ಹೇಳಿದರೆ ಅದೆಷ್ಟು ವಿಚಿತ್ರವಾಗಿರುವುದು. ಯಾಕೆಂದರೆ ಯೇಸು ದೇವರ ಮಗನಾಗಿದ್ದನು. ಆತನ ಜೀವಿತವೇ ಒಂದು ಅದ್ಭುತ ಮತ್ತು ಆತನು ತನ್ನ ಅದ್ಭುತ ಶಕ್ತಿಯಿಂದ ಕುಷ್ಠ ರೋಗಿಗಳನ್ನು ಗುಣಪಡಿಸಿದನು, ಹುಟ್ಟು ಕುರುಡರಿಗೆ ಕಣ್ಣು ಕಾಣಿಸುವಂತೆ ಕಿವುಡರಿಗೆ ಕಿವಿ ಕೇಳಿಸುವಂತೆ ಮಾಡಿದನು ಮಾತ್ರವಲ್ಲದೆ ಸತ್ತವರನ್ನು ಬದುಕಿಸಿದನು. ಇಂಥಾ ವ್ಯಕ್ತಿಯನ್ನು ಆತನ ವಿರೋಧಿಗಳು ಹಿಡಿದು ತಪ್ಪಿತಸ್ಥನೆಂದು ಆರೋಪಿಸಿ ಮರಣ ದಂಡನೆಗೆ ಗುರಿಮಾಡಿದ ಸಂಕಷ್ಟ ಕಾಲದಲ್ಲಿ ಆತನ ಶಿಷ್ಯರೂ ಎಲ್ಲಾ ಸ್ನೇಹಿತರು ಆತನನ್ನು ತೊರೆದು ಓಡಿ ಹೋದರೂ ಇವರೇ ಮುಂದೆ ಲೇಖಕರಾಗಿ ಆತನ ವಿಷಯಗಳನ್ನು ಬರೆಯುವಾಗ ಅದು ಅವರ ಕಲ್ಪಾನಾ ಕಥೆ ಎಂದು ಹೇಳಿದರೆ ಅದು ಎಷ್ಟು ವಿಚಿತ್ರವಾಗಿರುವುದು! ಚರಿತ್ರೆ ಸಹ ಇವರ ವರದಿಗಳು ಅಸತ್ಯ ಎಂದು ತಿಳಿಸಿಲ್ಲ. ಒಂದು ವೇಳೆ ಅವರಹೇಳಿಕೆಯು ಅಸತ್ಯವಾಗಿದ್ದರೆ ಅವರನ್ನು ಪ್ರಚೋದಿಸಿದ ಸಂಗತಿಗಳು ಯಾವುದಾಗಿರಬಹುದು? ಅಸತ್ಯವನ್ನು ಬರೆಯುವುದರಿಂದ ತಮಗೆ ಐಶ್ವರ್ಯ ಅಥವಾ ಕೀರ್ತಿ ಅಥವಾ ಅಧಿಕಾರ ಇಲ್ಲವೆ ಭೂಲೋಕದಲ್ಲಿ ಇತರ ಲಾಭ ದೊರೆಯುವುದೆಂದು ಅವರು ನಂಬಿದ್ದರೋ? ಎಂದಿಗೂ ಇಲ್ಲ. ಆತನ ಶಿಷ್ಯರಾಗಿ ಅವರು ಪಡಕೊಂಡದ್ದೇನು? ನಿಂದೆ ತಿರಸ್ಕಾರ ಬಡತನ. ಮುಂದೆ ಆತನ ಸತ್ಯ ಬೋಧನೆಯನ್ನು ಪ್ರಚಾರ ಮಾಡಿದವರಿಗೆ ಸಿಕ್ಕಿದ್ದೇನು? ಅಪಮಾನ, ಸೆರೆಮನೆವಾಸ, ಕೊರಡೆ ಪೆಟ್ಟು ಮತ್ತು ಮರಣದಂಡನೆ. ಸುಳ್ಳಿನ ಊಹಾ ಕಥೆಗೆ ಇಷ್ಟೆಲ್ಲವನ್ನು ಅನುಭವಿಸುವರೋ? ಇವರೆಲ್ಲರೂ ಸತ್ಯದ ಯಶಸ್ಸಿಗೆ ಮತ್ತು ನೀತಿಯ ಅಭಿವೃದ್ಧಿಗೆ ಹೋರಾಡುವವರಾಗಿದ್ದಾರೆ ಎಂದು ಬುದ್ಧಿವಂತಿಕೆಯಿಂದ ಕಂಡುಕೊಳ್ಳಬಹುದು. ನಿರೀಕ್ಷೆ ಮತ್ತು ಸತ್ಯದ ದೃಷ್ಟಿಯಿಂದ ನೋಡಿದರೆ ಇಂತಹ ಲೇಖಕರ ಸಾಕ್ಷಿಯು ಇತರ ಸಾಮಾನ್ಯ ಲೇಖಕರ ಸಾಕ್ಷಿಗಿಂತಹತ್ತು ಪಾಲು ಹೆಚ್ಚಿನ ಮಟ್ಟದಾಗಿದೆ. ಈ ಮನುಷ್ಯರು ಮತಭ್ರಾಂತಿಯುಳ್ಳವರಾಗಿರದೆ ಬುದ್ಧಿವಂತರೂ ಆಲೋಚನಾ ಶಕ್ತಿಯುಳ್ಳವರಾಗಿದ್ದು ನಂಬಿಕೆ ಮತ್ತು ನೀರಿಕ್ಷೆಯ ವಿಷಯವಾಗಿ ಸಾಕ್ಷಿ ಕೊಟ್ಟಿರುವರು.

ಇದೇ ಸಂಗತಿಗಳು ಹಳೇ ಒಡಂಬಡಿಕೆಯ ಲೇಖಕರಿಗೂ ಅನ್ವಯಿಸುತ್ತದೆ. ಅವರು ಕರ್ತವ್ಯ ನಿಷ್ಠಾವಂತ ಸೇವಕರಾಗಿದ್ದರು. ಈ ಗ್ರಂಥವು ಅವರ ಬಲಹೀನತೆ ಮತ್ತು ಕುಂದುಕೊರತೆಗಳನ್ನು ಮಾತ್ರವಲ್ಲದೆ ಅವರ ನಂಬಿಕೆ ಮತ್ತು ಸದ್ಗುಣಗಳನ್ನು ತಿಳಿಸುತ್ತದೆ. ಸತ್ಯವೇದವು ಒಂದು ತಯಾರಾದ ಚರಿತ್ರೆ. ಮತದ ವಿಷಯದಲ್ಲಿ ಜನರಿಗೆ ಭಕ್ತಿಯನ್ನು ಹುಟ್ಟಿಸುವುದಕ್ಕೆ ಅದನ್ನು ಬರೆಯಲಾಗಿದೆ ಎಂದು ಹೇಳುವವರಿಗೆ ಆಶ್ಚರ್ಯವನ್ನು ಉಂಟುಮಾಡುತ್ತದೆ.

ಸತ್ಯವೇದವು ಸತ್ಯವನ್ನು ಒತ್ತಿ ಹೇಳುತ್ತದೆ. ದೇವರಿಂದ ಪ್ರೇರಿತವಾದದ್ದನ್ನೇ ಇಲ್ಲಿ ಬರೆಯಲಾಗಿದೆಯೇ ಹೊರತು ಯಾರನ್ನಾಗಲಿ ಮೋಸಪಡಿಸುವುದಕ್ಕೆ ಇದನ್ನು ಬರೆಯಲಿಲ್ಲ. ದೇವರ ಯೋಜನೆಯನ್ನು ಜನರಿಗೆ ಪ್ರಕಟಿಸುವುದಕ್ಕಾಗಿ ಸತ್ಯವೇದವನ್ನು ಬರೆಯಲಾಗಿದೆ. ಇದರ ಲೇಖಕರು ನಿಜವಾಗಿ ದೇವರಿಂದ ಪ್ರೇರಿತರಾಗಿ ಬರೆದರೋ? ಇದು ಸತ್ಯಕ್ಕೇ ಸಾಕ್ಷಿ ಕೊಡುವುದಾಗಿದೆಯೋ? ಮತ್ತು ಇಲ್ಲಿ ತಿಳಿಸಿರುವ ಗುಣಲಕ್ಷಣಗಳು ದೇವರ ವ್ಯಕ್ತಿತ್ವಕ್ಕೆ ಹೋಲಿಕೆಯಾಗಿದೆಯೋ? ಎಂಬುದನ್ನು ಪರಿಶೀಲಿಸಿ ನೋಡಬೇಕಾಗಿದೆ.

ಹೊಸ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳು ಮತ್ತು ಹಳೇ ಒಡಂಬಡಿಕೆಯ ಅನೇಕ ಪುಸ್ತಕಗಳನ್ನು ಬರೆದಿರುವವರು ತಮಗೆ ತಿಳಿದಿರುವ ಚಾರಿತ್ರಿಕ ವಿಷಯಗಳನ್ನೇ ಬರೆದಿರುವರು. ಅಲ್ಲಿ ಬರೆದಿರುವ ಸಂಗತಿಗಳೆಲ್ಲಾ ಅದರ ಗ್ರಂಥಕರ್ತರಿಗೆ ಸಂಪೂರ್ಣ ಪರಿಚಯವಿದ್ದುದರಿಂದ ಸತ್ಯವನ್ನು ತಿಳಿಸುವುದಕ್ಕೆ ಯಾವ ವಿಶೇಷ ಸಹಾಯವಾಗಲಿ ಪ್ರಕಟನೆಯಾಗಲಿ ಬೇಕಾಗಿರಲಿಲ್ಲ. ಆದರೆ ದೇವರು ತನ್ನ ಉದ್ದೇಶವನ್ನು ಮಾನವರಿಗೆ ಪ್ರಕಟಿಸಲು ಆಶಿಸಿದ್ದರಿಂದ ದೇವರೇ ಅವರ

ಮೇಲ್ವಿಚಾರಕನಾಗಿ ಅವರ ಬರವಣಿಗೆಯನ್ನು ಪ್ರಚೋದಿಸಿದನು ಮತ್ತು ಆವಶ್ಯಕ ಸಂಗತಿಗಳನ್ನು ಪ್ರಕಟಿಸುವಂತೆ ಪ್ರಾಮಾಣಿಕರಾದ ಲೇಖಕರನ್ನು ಆರಿಸಿಕೊಂಡ ಸತ್ಯವೇದದ ಚಾರಿತ್ರಕ ವಿಭಾಗದಲ್ಲಿ ತಿಳಿಸಿರುವ ಗುಣಲಕ್ಷಣಗಳೆಲ್ಲವೂ ಅದರ ಲೇಖಕರನ್ನು ಅವಲಂಬಿಸಿದೆ. ಒಳ್ಳೆಯ ಮನುಷ್ಯರು ಸುಳ್ಳುಬೋಧನೆಗಳನ್ನು ತಿಳಿಸುವುದಿಲ್ಲ; ಸಿಹಿ ನೀರಿನ ಬುಗ್ಗೆಯಿಂದ ಕಹಿ ನೀರು ಬರುವುದಿಲ್ಲ. ಸತ್ಯವೇದದಲ್ಲಿ ಸಂಶಯಪಡುವವರಿಗೆ ಈ ಬರವಣಿಗೆಗಳು ಉತ್ತಮಸಾಕ್ಷಿಯಾಗಿವೆ. ಲೇಖಕರು ತಪ್ಪಾದದ್ದನ್ನು ಹೇಳಿರಬಹುದು ಎಂಬ ಅನುಮಾನವನ್ನು ತೊಡೆದು ಹಾಕಿದೆ.

ಸತ್ಯವೇದದ ಕೆಲವು ಭಾಗಗಳಾದ ಅರಸುಗಳು, ಪೂರ್ವಕಾಲ ವೃತ್ತಾಂತ ನ್ಯಾಯಸ್ಥಾಪಕರು ಮುಂತಾದವುಗಳು ಪ್ರಾಮುಖ್ಯ ಘಟನೆಗಳನ್ನು ಆ ಕಾಲದ ವ್ಯಕ್ತಿಗಳ ಚರಿತ್ರೆಯನ್ನು ತಿಳಿಸುವಂಥದ್ದಾಗಿದ್ದರೂ ಅದರಿಂದ ಸತ್ಯಕ್ಕೆ ಅಡ್ಡಿಯಾಗಿಲ್ಲ. ಈ ಕಾಲದ ಇಬ್ರಿಯ ಸುವಾರ್ತೆಗಳು ಪ್ರವಾದನೆಗಳನ್ನೂ ನಿಯಮಗಳನ್ನೂ, ಚರಿತ್ರೆಗಳನ್ನು, ವಂಶಾವಳಿಯನ್ನೂ ಒಳಗೊಂಡಿತ್ತು ಮತ್ತು ಅಬ್ರಹಾಮನ ಸಂತತಿಯಲ್ಲಿ ವಾಗ್ದತ್ತವಾದ ಮೆಸ್ಸಿಯನ ಬರೋಣವನ್ನು ಕುರಿತು ಮುಂತಿಳಿಸಲಾಗಿತ್ತು. ಇಪ್ಪತ್ತನೆಯ ಶತಮಾನದ ಚರಿತ್ರೆಯಲ್ಲಿ ಕಂಡುಬರದೆ ಇರುವ ಅನೇಕ ಸಂಗತಿಗಳು ಆ ಕಾಲದ ಚರಿತ್ರೆಯಲ್ಲಿರುವುದನ್ನು ನಾವು ಕಾಣುತ್ತೇವೆ. ಉದಾ. ಅಮ್ಮೋನಿಯರ ಮತ್ತು ಮೋವಾಬ್ಯರ ಮೂಲ ಅವರಿಗೂ ಅಬ್ರಹಾಮನಿಗೂ ಮತ್ತು ಇಸ್ರಾಯೇಲ್ಯರಿಗೂ ಇದ್ದ ಸಂಬಂಧವನ್ನು ತೋರಿಸುವುದಕ್ಕಾಗಿ ಅವರ ಮೂಲವನ್ನು ತಿಳಿಸಲಾಗಿದೆ. ಆದಿ 19:35–38 ಅದೇ ರೀತಿಯಲ್ಲಿ ಯೂದನ ಮಕ್ಕಳ ಚರಿತ್ರೆಯನ್ನು ಕೂಲಂಕುಷವಾಗಿ ತಿಳಿಸಲಾಗಿದೆ. ಯಾಕೆಂದರೆ ದಾವೀದನು ಆ ಸಂತತಿಗೆ ಸೇರಿದವನು. ಯೇಸುವಿನ ತಂದೆ ಯೋಸೇಫ ತಾಯಿ ಮರಿಯಳು ಅರಸನಾದ ದಾವೀದನ ವಂಶಾವಳಿಗೆ ಸೇರಿದವರು ಲೂಕ 3:23, 31, 33, 34; ಮತ್ತಾಯ 1:2–16 ಈ ವಂಶದಿಂದಲೇ ವಾಗ್ದತ್ತ ಮೆಸ್ಸಿಯನು ಬರಬೇಕಾಗಿದ್ದದರಿಂದ ಈ ವಂಶಾವಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ವಿವರವಾಗಿ ತಿಳಿಸಲಾಗಿದೆ. ಆದಿ 49:10 ಇತರ ಸಂತತಿಯ ವಿವರವನ್ನು ತಿಳಿಸಲಾಗಿಲ್ಲ. ಆದಿ 38 ಹೀಗೆ ಸಂಬಂಧವನ್ನು ಸೂಚಿಸುವುದಕ್ಕಾಗಿ ಚಾರಿತ್ರಿಕ ವರದಿಗಳನ್ನು ವಿವರವಾಗಿ ಬರೆಯಲಾಗಿದೆ. ಆದುದರಿಂದ ಸತ್ಯವೇದದಲ್ಲಿ ಅಪವಿತ್ರವಾದದ್ದು ಕಂಡುಬರುತ್ತದೆ ಎಂದು ಹೇಳಲಾಗುವುದಿಲ್ಲ. ಅರ್ಥ ಒಂದೇ ಆಗಿದ್ದರು ಅನೇಕ ಭಾಷೆಗಳಿಗೆ ಭಾಷಾಂತರಿಸುವಾಗ ಪದಗಳು ಬೇರೆಬೇರೆ ಯಾಗಿರುತ್ತವೆ. ಆದರೂ ಆ ಕಾಲದ ಭಾಷಾಂತರಕಾರರು ಯಾವದೊಂದು ವಿವರವನ್ನು ಬಿಟ್ಟುಬಿಡದೆ ಸೂಕ್ಷ್ಮವಾಗಿ ಬರೆದಿರುವರು.

**ಮೋಶೆಯ ಪುಸ್ತಕಗಳು ಮತ್ತು ಅದರಲ್ಲಿನ ನ್ಯಾಯ ವಿಧಿಗಳು**

ಸತ್ಯವೇದದ ಮೊದಲಿನ ಐದು ಪುಸ್ತಕಗಳು ಮೋಶೆಯ ಪುಸ್ತಕಗಳಾಗಿವೆ. ಪ್ರಾರಂಭದ ಸಂಗತಿಗಳು ಅವನಿಂದಲೇ ಬರೆಯಲ್ಪಟ್ಟು ನಂತರ ಅವನ ಮರಣ ಮತ್ತು ಇತರ ವಿಷಯಗಳನ್ನು ಅವನ ಕಾರ್ಯದರ್ಶಿಯು ಬರೆದಿರಬಹುದು. ಈ ಐದು ಪುಸ್ತಕಗಳು ಮೋಶೆಯಿಂದಲೇ ಬರೆಯಲ್ಪಟ್ಟದ್ದು ಎಂದು ಎಲ್ಲೂ ನೇರವಾಗಿ ತಿಳಿಸಿಲ್ಲ. ಅದರಿಂದಾಗಿ ಈ ಪುಸ್ತಕಗಳು ಬೇರೆಯವರಿಂದ ಬರೆಯಲ್ಪಟ್ಟಿರಬಹುದು ಎಂದು ತಪ್ಪು ಅರ್ಥಕಲ್ಪಿಸಲು ಸಾಧ್ಯವಿಲ್ಲ. ಇಸ್ರಾಯೇಲ್ಯರ ನಾಯಕನೂ ರಾಜಕಾರಣಿಯೂ ಆಗಿದ್ದ ಮೋಶೆಯೂ ನ್ಯಾಯ ವಿಧಿಗಳನ್ನು ಸ್ಥಿರ ಪಡಿಸುವುದಕ್ಕಾಗಿ ಈ ಗ್ರಂಥಗಳನ್ನು ಬರದನೆಂಬುದು ಖಚಿತವಾದ ಸಂಗತಿಯಾಗಿದೆ. ಧರ್ಮೋ 31:9–27.

ಇಬ್ರಿಯ ಜನಾಂಗವನ್ನು ಐಗುಪ್ತದೇಶದಿಂದ ಬಿಡಿಸಿ ಹೊರಗೆ ಕರೆತಂದವನು ಮೋಶೆಯೇ ಎಂದು ನಮಗೆ ತಿಳಿದಿದೆ. ಈ ಪುಸ್ತಕಗಳಲ್ಲಿರುವ ನ್ಯಾಯ ವಿಧಿಗನುಗುಣವಾಗಿ ಇಸ್ರಾಯೇಲ್ಯರು ಒಂದು ಜನಾಂಗವಾಗುವಂತೆ ಸಂಘಟಿಸಿ ಅವರಿಗೆ ಈ ಧರ್ಮಶಾಸ್ತ್ರವನ್ನು ಕೊಟ್ಟಂದಿನಿಂದ ಸುಮಾರು 3000 ವರುಷಗಳಿಂದ ಇಸ್ರಾಯೇಲ್ಯರು ಇದು ಮೋಶೆಯ ಕಾಣಿಕೆ ಬಹಳ ಪವಿತ್ರವಾದದ್ದು ಎಂದು ತಿಳಿದು ಅದರಲ್ಲಿನ ಒಂದು ಗುಡುಸು ಅಥವಾ ಒಂದು ಸೊನ್ನೆ ಅಳಿದು ಹೋಗದಂತೆ ಕಾಪಾಡಿಕೊಂಡು ಬಂದಿರುವರು ಇದು ಪುಸ್ತಕದ ಪವಿತ್ರತೆಯ ವಿಷಯವಾಗಿ ಭರವಸೆಯನ್ನು ಕೊಡುವುದಾಗಿದೆ.

ಮೋಶೆಯ ಪುಸ್ತಕಗಳು ಯುಗಯುಗಾಂತರಗಳವರೆಗೆ ಸತ್ಯವನ್ನು ಸಾರುವಂಥದ್ದಾಗಿದೆ. ಚೀನಿಯರ ಚರಿತ್ರೆಯಲ್ಲಿ ಸೃಷ್ಟಿ ಕಾರ್ಯವು ಈ ರೀತಿಯಲ್ಲಿ ತಿಳಿಸಲ್ಪಟ್ಟಿದೆ. ದೇವರು ಒಂದು ಹಿಡಿ ಮಣ್ಣನ್ನು ತೆಗೆದುಕೊಂಡು ದೋಣಿಯಲ್ಲಿ ಕುಳಿತು ನೀರಿನ ಮೇಲೆ ಹೋಗಿ ಈ ಮಣ್ಣನು ನೀರಿಗೆಸದನು; ಆ ಮಣ್ಣಿನ ಮುದ್ದೆಯಿಂದಲೇ ಈ ಲೋಕವುಂಟಾಯಿತು. ಇದೊಂದು ಅರ್ಥವಿಲ್ಲದ ಕಥೆ. ಬುದ್ಧಿಯುಳ್ಳ ಒಂದು ಚಿಕ್ಕ ಮಗುವೂ ಸಹ ಇದನ್ನು ನಂಬಿ ಮೋಸ ಹೋಗಲು ಸಾಧ್ಯವಿಲ್ಲ. ಆದರೆ ಸತ್ಯವೇದದಲ್ಲಿ ನಂಬಲರ್ಹವಾದ ರೀತಿಯಲ್ಲಿ ತಿಳಿಲಾಗಿದೆ. ದೇವರೆಂಬ ಜ್ಞಾನಿಯಾದ ಸೃಷ್ಟಿಕರ್ತನು ಆದಿಯಿಂದಲೇ ಇದ್ದನು. ಆತನು ಆದಿಯಿಂದ ತನ್ನ ಸೃಷ್ಟಿ ಕಾರ್ಯವನ್ನು ಪ್ರಾರಂಭಿಸಿ ಕ್ರಮವಾಗಿ ನಡೆಸಿಕೊಂಡು ಬಂದಿರುವನು. "ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟುಮಾಡಿದನು." ಆತನು ಆರು ದಿನಗಳಲ್ಲಿ ಮಾನವ ಜನಾಂಗದ ನಿವಾಸಕ್ಕಾಗಿ ಈ ಲೋಕವನ್ನು ಅದರಲ್ಲಿರುವುದೆಲ್ಲವನ್ನು ಸೃಷ್ಟಿಸಿದನು. ಈ

ಸಂಗತಿಗಳು ವಿಜ್ಞಾನದೊಂದಿಗೆ ಸರಿ ಹೊಂದುವಂಥದ್ದಾಗಿದೆ. ಆದುದರಿಂದ ಮೋಶೆಯೇ ದೈವಿಕ ಪ್ರೇರಣೆಯಿಂದ ಸತ್ಯವೇದದ ಮೊದಲಿನ ಐದು ಪುಸ್ತಕಗಳನ್ನು ಬರಿದಿರುವುದು ಎಂದು ಖಚಿತವಾಗಿ ತಿಳಿದು ಬರುತ್ತದೆ. ಅಲ್ಲಿ ತಿಳಿಸಿರುವಂಥ ಸಂಗತಿಗಳು ಮೂರು ಸಾವಿರ ವರುಷಗಳ ಅನಂತರ ಮಾನವನು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಆಧುನಿಕ ಉಪಕರಣಗಳ ಸಹಾಯದಿಂದ ಮಾಡಿದ ಸಂಶೋಧನೆಗಿಂತ ಮಿಗಿಲಾಗಿದೆ.

ಮೋಶೆಯ ಧರ್ಮಶಾಸ್ತ್ರದಲ್ಲಿ ಬರೆದಿರುವ ನ್ಯಾಯ ವಿಧಿಗಳನ್ನು ನೋಡಿದರೆ ಆಗಿನ ಕಾಲದಿಂದ ಈಗಿನ 20ನೇ ಶತಮಾನದವರೆಗೆ ಅಂತಹ ನಿಯಮಗಳು ಎಲ್ಲೂ ಕಂಡುಬಂದಿಲ್ಲ. ಅದು ಮಾತ್ರವಲ್ಲದೆ ಈ ಕಾಲದ ನ್ಯಾಯವಿಧಿಗಳು ಮೋಶೆಯ ಧರ್ಮಶಾಸ್ತ್ರದ ಆಧಾರದ ಮೇಲೆ ರಚಿಸಲ್ಪಟ್ಟಿದೆ ಮತ್ತು ಅವುಗಳು ದೈವಪ್ರೇರಿತವಾದವೆಂದು ಒಪ್ಪಿಕೊಂಡಿರುವರು.

ದಶಾಜ್ಞೆಗಳು ಎಲ್ಲಾ ನ್ಯಾಯ ವಿಧಿಗಳ ಸಾರಾಂಶವಾಗಿದೆ. ಅದು ಆರಾಧನಾ ವಿಧಿಗಳನ್ನು ನೀತಿಯ ನಿಯಮಗಳನ್ನೂ ತಿಳಿಸುವಂಥದಾಗಿದೆ. ಆ ಕಾಲದ ಜನಾಂಗಗಳಾದ ಗ್ರೀಕರು, ರೋಮನ್ನರ,ಬ ಬೆಬಿಲೋನಿಯನ್ನರ ಅವಶೇಷಗಳಲ್ಲಿ ಅದು ಕಂಡುಬಂದಿದೆ. ಆ ಕಾಲದವರಿಗೂ ಅದು ಅತ್ಯಂತ ಅದ್ಭುತವಾಗಿತ್ತು. ಕೆಲವರು ಮಾತ್ರ ಅದನ್ನು ಅರ್ಥ ಮಾಡಿಕೊಂಡಿದ್ದರು. ನಿಜ ಅದು ಕ್ರಿಸ್ತನ ವಿಷಯವಾಗಿ ತಿಳಿಸುವುದಿಲ್ಲ; ಅದು ಕ್ರೈಸ್ತರಿಗಲ್ಲ ಇಬ್ರಿಯರಿಗೆ ಕೊಡಲ್ಪಟ್ಟದ್ದು, ವಿಮೋಚನೆಯಲ್ಲಿ ನಂಬಿಕೆಯಿಡುವುದಕ್ಕೆ ಅವರಿಗೆ ಅವರ ಪಾಪಗಳ ಅರಿವನ್ನು ಹುಟ್ಟಿಸಿ ಅದರಿಂದ ವಿಮೋಚನೆಯ ಆವಶ್ಯಕತೆಯನ್ನು ತಿಳಿಸುವುದಕ್ಕಾಗಿ ಅವು ಕೊಡಲ್ಪಟ್ಟದ್ದು, ನಮ್ಮ ರಕ್ಷಕನಾದ ಕ್ರಿಸ್ತನು ಈ ದಶಾಜ್ಞೆಗಳನ್ನೆಲ್ಲಾ ಕ್ರೋಢೀಕರಿಸಿ ಒಂದೇ ವಾಕ್ಯದಲ್ಲಿ ಅದರ ನೀತಿಯನ್ನು ತಿಳಿಸಿರುವನು. "ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು" ಮತ್ತು "ನಿನ್ನ ನೆರೆಯವವನ್ನು ನಿನ್ನಂತೆಯೇ ಪ್ರೀತಿಸಬೇಕು" ಮಾರ್ಕ 12:30, 31.

ಮೋಶೆಯ ಕಾಲದಲ್ಲಿದ್ದ ಸರಕಾರವು ಪುರಾತನ ಮತ್ತು ಆಧುನಿಕ ಸರಕಾರದ ಲಕ್ಷಣಗಳಿಂದ ಭಿನ್ನವಾಗಿತ್ತು. ಜನರೆಲ್ಲರು ನೇರವಾಗಿ ತಮ್ಮನ್ನು ಸೃಷ್ಟಿಸಿದ ದೇವರಿಗೆಹೊಣೆಯಾಗಿದ್ದರು. ಮತ ಸಂಬಂಧ ಮತ್ತು ರಾಜ ಕಾರ್ಯಗಳೆಲ್ಲವೂ ದೇವರಿಂದ ನಡೆಸಲ್ಪಡುತ್ತಿತ್ತು. ಅವು ದೇವರ ಗುಣ ಲಕ್ಷಣಗಳಿಗೆ ಸರಿಹೊಂದುವಂಥವುಗಳಾಗಿದ್ದವು. ದೇವದರ್ಶನದ ಗುಡಾರದ ಮಧ್ಯ ಭಾಗದಲ್ಲಿ "ಅತಿಪರಿಶುದ್ಧ" ವೆಂಬ ಸ್ಥಳದಲ್ಲಿ ದೇವರಾದ ಯೆಹೋವನ ತೇಜಸ್ಸು ಪ್ರಕಾಶಿಸುತ್ತಿತ್ತು. ಅಲ್ಲಿಂದ ದೇವರು ಇಸ್ರಾಯೇಲ್ ಜನಾಂಗದವರಿಗೆ ಆಶ್ಚರ್ಯವಾದ ರೀತಿಯಲ್ಲಿ ಆಜ್ಞಾ ವಿಧಿಗಳನ್ನು ಕೊಡುತ್ತಿದ್ದನು. ದೇವದರ್ಶನ ಗುಡಾರದ ಮೇಲ್ವಿಚಾರಣೆಗೆ ಒಂದು ಪ್ರತ್ಯೇಕವಾದ ಯಾಜಕವರ್ಗದ ಗುಂಪು ನಿಯಮಿಸಲ್ಪಟ್ಟಿತ್ತು. ಇವರ ಮೂಲಕವಾಗಿಯೇ ಜನರು ಯೆಹೋವನೊಂದಿಗೆ ಮಾತನಾಡಬೇಕಾಗಿತ್ತು ಮತ್ತು ದೇವರು ಮಾತಾಡಿದ್ದನ್ನು ಅವರು ಜನರಿಗೆ ತಿಳಿಸುತ್ತಿದ್ದರು. ಅನೇಕರು ಈ ಪದ್ಧತಿಯನ್ನು ಒಪ್ಪುವುದಿಲ್ಲ. ಜನರು ದೇವರಿಗಿಂತ ಯಾಜಕರಿಗೆ ಹೆಚ್ಚಾಗಿ ಭಯ ಪಡುವವರಾಗಿದ್ದರು ಎಂಬುದು ಅವರ ವಾದವಾಗಿದೆ. ಆದರೆ ಅದು ಅರ್ಥವಿಲ್ಲದ್ದು ಯಾಕೆಂದರೆ ಆ ಕಾಲದ ಹಕ್ಕುಗಳಿಗೆ ಒಂದು ಮಿತಿಯಿದ್ದಿತು. ಯಾವ ಕೆಟ್ಟ ನಿಯಮಗಳನ್ನು ಜನರ ಮೇಲೆ ವಿಧಿಸುವ ಅವಕಾಶ ಅವರಿಗಿರಲಿಲ್ಲ. ಆದಲ್ಲದೆ ಈ ಕ್ರಮವನ್ನು ಅವರಿಗೆ ತಿಳಿಸಿಕೊಟ್ಟವನು ಯಾಜಕವರ್ಗದ ಸದಸ್ಯನಾದ ಮೋಶೆಯೇ.

ಮೋಶೆಯು ದೇವರ ಪ್ರತಿನಿಧಿಯಾಗಿ ಇಸ್ರಾಯೇಲ್ಯರನ್ನು ಐಗುಪ್ತದೇಶದಿಂದ ಬಿಡುಗಡೆಮಾಡಿ ಹೊರಕ್ಕೆ ಕರತಂದದ್ದರಿಂದ ಅವರೆಲ್ಲರನ್ನು ಆಳುವ ಅಧಿಕಾರ ಅವನ ಕೈಯಲ್ಲಿ ಕೇಂದ್ರೀಕೃತವಾಗಿತ್ತು. ಅವನು ಆ ಜನರಿಗಾಗಿ ಹಗಲಿರುಳೆನ್ನದೆ ದುಡಿಯುತ್ತಿದ್ದನು.

ಇಸ್ರಾಯೇಲ್ಯರ ರಾಜ್ಯವು ಒಂದು ವಿಧವಾದ ಪ್ರಜಾರಾಜ್ಯವಾಗಿತ್ತು. ಆದರೆ ಎಲ್ಲಾ ವಿಷಯಗಳಲ್ಲಿ ಸಂಪೂರ್ಣ ಪ್ರಜಾರಾಜ್ಯವಾಗಿರಲಿಲ್ಲ. ಅದೊಂದು ಧರ್ಮಪ್ರಭುತ್ವವಾಗಿತ್ತು. ಅಂದರೆ ದೈವಿಕ ಸರಕಾರವಾಗಿತ್ತು. ಯಾಕೆಂದರೆ ತಂದೆಯಾದ ದೇವರು ಮೋಶೆಯ ಮೂಲಕ ಜನರಿಗೆ ಆಜ್ಞಾವಿಧಿಗಳನ್ನು ಕೊಡುತ್ತಿದ್ದನು. ಧರ್ಮಶಾಸ್ತ್ರವು ದೇವರಿಂದ ಕೊಡಲ್ಪಟ್ಟದ್ದಾಗಿದ್ದರಿಂದ ಅದಕ್ಕೆ ಹೊಸದಾಗಿ ಸೇರಿಸಲು ಇಲ್ಲವೆ ಇದ್ದದ್ದನ್ನು ತೆಗೆಯುವ ಅವಕಾಶ ಅವರಿಗಿರಲಿಲ್ಲ. ಆದುದರಿಂದ ಇಸ್ರಾಯೇಲ್ಯರ ರಾಜ್ಯಭಾರಕ್ರಮವು ಬೇರೆಲ್ಲವುಗಳಿಗಿಂತ ಭಿನ್ನವಾಗಿತ್ತು ಮತ್ತು ವಿಶೇಷವಾಗಿತ್ತು. "ಆಗ ಯೆಹೋವನು ಮೋಶೆಗೆ ಹೇಳಿದ್ದೇನೆಂದರೆ ಇಸ್ರಾಯೇಲ್ಯರಲ್ಲಿ ಹಿರಿಯರೆಂದೂ ಅಧಿಪತಿಗಳೆಂದೂ ನೀನು ತಿಳಿದುಕೊಂಡಿರುವ ಎಪ್ಪತ್ತು ಮಂದಿಯನ್ನು ಕೂಡ ಕರೆಸಿ ದೇವದರ್ಶನದ ಗುಡಾರದ ಬಾಗಿಲಿಗೆ ಕರೆತಂದು ಅಲ್ಲೆ ನಿನ್ನೊಡನೆ ನಿಲ್ಲಿಸಿಕೊ. ನಾನು ಅಲ್ಲಿಗೆ ಇಳಿದು ಬಂದು ನಿನ್ನ ಸಂಗಡ ಮಾತಾಡುವೆನು ಅದಲ್ಲದೆ ನಾನು ನಿನಗೆ ಅನುಗ್ರಹಿಸಿರುವ ಆತ್ಮೀಯ ವರಗಳಲ್ಲಿ ಕೆಲವನ್ನು ಅವರಿಗೂ ಪಾಲುಕೊಡುವೆನು. ಆಗ ನೀನೊಬ್ಬನೇ ಈ ಜನರ ಭಾರವನ್ನು ವಹಿಸಬೇಕಾಗಿರುವುದಿಲ್ಲ. ನಿನ್ನ ಜೊತೆಯಲ್ಲಿ ಇವರೂ ವಹಿಸುವರು." ಅರಣ್ಯ 11:16,17 ಇದೇ ರೀತಿಯಲ್ಲಿ ಮಾಡಿ

ಮೋಶೆ ಹೇಳಿದ್ದೇನೆಂದರೆ "ನಾನು ನಿಮ್ಮಲ್ಲಿ ಪ್ರಸಿದ್ಧರಾದ ಬುದ್ಧಿವಂತರನ್ನು ಕರೆಸಿ ಒಂದೊಂದು ಕುಲದಲ್ಲಿ ಸಾವಿರ ಮಂದಿಯ ಮೇಲೆಯೂ ನೂರು ಮಂದಿಯ ಮೇಲೆಯೂ ಐವತ್ತು ಮಂದಿಯ ಮೇಲೆಯೂ ಹತ್ತು ಮಂದಿಯ ಮೇಲೆಯೂ ಅಧಿಕಾರಿಗಳನ್ನಾಗಿಯೂ ಉಪಾಧಿಕಾರಿಗಳನ್ನಾಗಿಯೂ ನೇಮಿಸಿದೆನು." ಧರ್ಮೋ 1:15, ವಿಮೋ 18: 13–26. ಇದರಿಂದ ನಮಗೆ ತಿಳಿದು ಬರುವುದೇನೆಂದರೆ ಮೋಶೆಯು ತನ್ನ ಅಧಿಕಾರವನ್ನು ಹೆಚ್ಚಿಸಿಕೊಳ್ಳದೆ ಯಾಜಕವರ್ಗದ ತನ್ನ ಬಂಧುಗಳಿಗೆ ಜನರನ್ನಾಳುವ ಅಧಿಕಾರವನ್ನು ಹಂಚಿಕೊಟ್ಟು ಜನರನ್ನು ದಾಸ್ಯಕ್ಕೆ ಒಳಪಡಿಸದೆ ಎಲ್ಲರಿಗೂ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟನು. ಈ ರೀತಿಯ ಆಡಳಿತ ಪದ್ಧತಿಯು ಎಲ್ಲೂ ಕಂಡುಬರುವುದಿಲ್ಲ; ಯಾರೇ ಆಗಲಿ ಅಧಿಕಾರಕ್ಕೆ ಬಂದ ಕೂಡಲೆ ಜನರ ಮೇಲೆ ತಮ್ಮ ದಬ್ಬಾಳಿಕೆಯನ್ನು ಪ್ರಾರಂಭಿಸುವರು. ಪ್ರಜಾರಾಜ್ಯದಲ್ಲೂ ಅಧಿಕಾರಿಗಳು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುವರೇ ಹೊರತು ಇತರರಿಗೆ ಪಾಲುಕೊಡುವುದಿಲ್ಲ. ಒಂದು ವೇಳೆ ಮೋಶೆಯು ಅಧಿಕಾರದ ಆಸೆಯಿಂದ ಕೂಡಿದವನಾಗಿದ್ದರೆ ಅಧಿಕಾರವೆಲ್ಲವು ಅವನ ಮತ್ತು ಅವನ ಕುಟುಂಬದವರ ಕೈಯಲ್ಲಿ ಕೇಂದ್ರೀಕೃತವಾಗಿರುತ್ತಿತ್ತು. ಆ ಕಾಲದಲ್ಲಿ ಧರ್ಮ ಪ್ರಭುತ್ವವಿದ್ದುದರಿಂದ ಇದು ಸಾಧ್ಯವಿತ್ತು. ಆದರೆ ಮೋಶೆ ಎಂದಿಗೂ ಹಾಗೆ ಮಾಡಲಿಲ್ಲ. ಇತರ ಅಧಿಕಾರಿಗಳು ಸಹ ದೇವರ ಆಜ್ಞೆಗಳಿಗನುಸಾರವಾಗಿ ನಡೆಯುತ್ತಿದ್ದುದರಿಂದ ಯಾವ ವಿಧವಾದ ಮೋಸವು ನಡೆಯುತ್ತಿರಲಿಲ್ಲ. ಆ ಅಧಿಕಾರಿಗಳಿಗೆ ಕಠಿಣವಾದ ವ್ಯಾಜ್ಯಗಳನ್ನು ಪರಿಹರಿಸಲು ಸಾಧ್ಯವಾಗದಿದ್ದರೆ ಅಂಥವುಗಳನ್ನು ಮೋಶೆಯ ಬಳಿಗೆ ತೆಗೆದುಕೊಂಡು ಹೋಗುತ್ತಿದ್ದರು. "ನೀವು ತೀರಸಲಿಕ್ಕಾಗದ ವ್ಯಾಜ್ಯಗಳನ್ನು ನನ್ನ ಬಳಿಗೆ ತರಬೇಕು; ನಾನೇ ಅವುಗಳನ್ನು ತೀರಿಸುವೆನು" ಧರ್ಮೋ 1:17 ಈ ದೈವಿಕ ನಿಯಮಗಳಿಗೆ ಅನುಸಾರವಾಗಿ ಅಧಿಕಾರಿಗಳು ಇಸ್ರಾಯೇಲ್ ಜನಾಂಗವನ್ನು ಆಳುತ್ತಿದ್ದರು. ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ನಡೆಸಲ್ಪಡುವ ಸರಕಾರವಲ್ಲದಿದ್ದರೂ ದೇವರಾಯ್ದುಕೊಂಡ ಪ್ರತಿನಿಧಿಗಳಿಂದ ಕೂಡಿದ ಸರಕಾರವಾಗಿತ್ತು. ಈ ರೀತಿಯ ಆಡಳಿತವೂ ಸುಮಾರು ನಾನೂರು ವರುಷಗಳ ಕಾಲ ನಡೆಯಿತು. ಅನಂತರ ಆಡಳಿತ ಪದ್ಧತಿಯು ಬದಲಾಯಿಸಿತು. ಜನರ ನಾಯಕನಾಗಿದ್ದ ಸಮುವೇಲನ ಬಳಿಗೆ ಹಿರಿಯರು ಬಂದು ದೇವರ ಅಪ್ಪಣೆಯಿಲ್ಲದೆಯೇ ತಮಗೊಬ್ಬ ಅರಸನನ್ನು ಕೊಡು ಎಂದು ಕೇಳಿದರು. ಇದಕ್ಕೆ ದುಃಖ ಪಟ್ಟು ಸಮುವೇಲನು ಯೆಹೋವನಿಗೆ ಪ್ರಾರ್ಥಿಸಲು "'ಆತನು ಅವನಿಗೆ ಜನರು ಹೇಳಿದಂತೆಯೇ ಮಾಡು; ಅವರು ನಿನ್ನನಲ್ಲ ನನ್ನನ್ನು ತಿರಸ್ಕರಿಸಿದ್ದಾರೆ. ನನ್ನ ಆಳಿಕೆ ಬೇಡವೆನ್ನುತ್ತಾರೆ.' ಎಂದು ಹೇಳಿದನು. 1 ಸಮು 8:6–22 ದೇವರ ಅಪ್ಪಣೆಯ ಮೇರೆಗೆ ಸಮುವೇಲನು ಅರಸರು ಮಾಡುವ ಅನ್ಯಾಯ ದರ್ಪವನ್ನು ತಿಳಿಸಿ ಅರಸನ ಅಧಿಕಾರ ಬಂದರೆ ಜನರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಅವರಿಗೆ ಆಳುಗಳಾಗಿರಬೇಕು ಎಂದು ತಿಳಿಸಿದಾಗ್ಯೂ ಜನರು ಒಪ್ಪದೆ ಇತರ ಜನಾಂಗದವರಂತೆ ತಮಗೂ ಒಬ್ಬ ಅರಸನು ಬೇಕೇ ಬೇಕೆಂದು ಹಟ ಹಿಡಿದರು.

ಇಸ್ರಾಯೇಲ್ಯರು ಒಂದು ಜನಾಂಗವಾಗಿದ್ದರೂ ಯಾಕೋಬನ ಮರಣದ ಅನಂತರ ಬೇರೆ ಬೇರೆ ಕುಲಗಳಾಗಿ ವಿಂಗಡಿಸಲ್ಪಟ್ಟರು. ಪ್ರತಿ ಕುಲದವರು ತಮ್ಮ ಕುಟುಂಬದ ಸದಸ್ಯರಿಂದಲೇ ಒಬ್ಬ ಮುಖ್ಯಸ್ಥರನ್ನು ಆರಿಸಿಕೊಳ್ಳುತ್ತಿದ್ದರು. ಅವರು ಐಗುಪ್ತದಲ್ಲಿ ಗುಲಾಮರಾಗಿದ್ದಾಗಲೂ ಈ ಪದ್ಧತಿಯು ರೂಢಿಯಲ್ಲಿದ್ದಿತು. ಅವರನ್ನು ನಾಯಕರು ಎಂದು ಕರೆಯುತ್ತಿದ್ದರು ನ್ಯಾಯಕಾರ್ಯಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಮೋಶೆಯು ಇವರಿಗೆ ವಿಧಿಸಿದ್ದನು. ಒಂದು ವೇಳೆ ಮೋಶೆಗೆ ಅಧಿಕಾರದಾಹವಿದ್ದಿದ್ದರೆ ಇವರಿಗೆ ಯಾವ ಜವಾಬ್ದಾರಿಯ ಕೆಲಸವನ್ನು ಕೊಡುತ್ತಿರಲಿಲ್ಲ. ಮೋಶೆಯು "ಆ ನ್ಯಾಯಾಧಿಪತಿಗಳಿಗೆ ಅಪ್ಪಣೆ ಮಾಡಿ ನೀವು ಸ್ವಕುಲದವರ ವ್ಯಾಜ್ಯಗಳನ್ನು ತೀರಿಸಬೇಕು. ಅವರು ಇಸ್ರಾಯೇಲ್ಯರೊಡನೆ ವ್ಯಾಜ್ಯವಾಡಿದರೂ ಅನ್ಯರೊಡನೆ ವ್ಯಾಜ್ಯವಾಡಿದರೂ ನೀತಿ, ನ್ಯಾಯದ ಪ್ರಕಾರವೇ ತೀರ್ಪು ಮಾಡಬೇಕು. ನ್ಯಾಯವಿಚಾರಿಸುವಾಗ ಮುಖದಾಕ್ಷಿಣ್ಯ ಮಾಡದೆ ಅಧಿಕರನ್ನೂ ಅಲ್ಪರನ್ನೂ ಸಮನಾಗಿ ತಿಳಿಯಬೇಕು. ನೀವು ದೇವರ ಹೆಸರಿನಲ್ಲಿ ನ್ಯಾಯ ತೀರಿಸುವವರಾದ ಕಾರಣ ಮನುಷ್ಯರ ಮುಖವನ್ನು ನೋಡಿ ಹದರಬೇಡಿರಿ. ನೀವು ತೀರಿಸಲಿಕ್ಕಾಗದ ವ್ಯಾಜ್ಯಗಳನ್ನು ನನ್ನ ಬಳಿಗೆ ತರಬೇಕು ನಾನೇ ಅವುಗಳನ್ನು ತೀರಿಸುವೆನು ಎಂದು ಹೇಳಿದನು" ಧರ್ಮೋ1:16,17 ಮೋಶೆಯ ಮರಣಾನಂತರ ಕಠಿಣ ವ್ಯಾಜ್ಯಗಳನ್ನು ಮಹಾಯಾಜಕರು ನೇರವಾಗಿ ದೇವರ ಬಳಿಗೆ ತೆಗೆದುಕೊಂಡು ಹೋಗುತ್ತಿದ್ದರು. ಉತ್ತರವು ಹೌದು ಅಥವಾ ಇಲ್ಲ ಎಂಬುದಾಗಿರುತ್ತಿತ್ತು. ಆದುದರಿಂದ ಈ ನಿಯಮಗಳು ಬರೆದುದ್ದಲ್ಲವೆಂದು ತಿಳಿದುಬರುತ್ತದೆ.

ನಾಗರಿಕತೆಯಲ್ಲಿ ಮುಂದುವರಿದಿರುವಂಥ ಇಪ್ಪತ್ತನೆಯ ಶತಮಾನದಲ್ಲೂ ಐಶ್ವರ್ಯವಂತರೂ ಮತ್ತು ಬಡವರ ನಡುವೆ ಸಮಾನತೆ ಎಂಬುದು ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಮೋಶೆಯ ಕಾಲದಲ್ಲಿ ಈ ರೀತಿಯ ಬೇಧಭಾವಕ್ಕೆ ಅವಕಾಶವಿರಲಿಲ್ಲ. ಆ ಕಾಲದಲ್ಲಿ ಜನರು ಅತಿ ಹೆಚ್ಚಿನ ಐಶ್ವರ್ಯ ಗಳಿಸುವುದಕ್ಕಾಗಲಿ ಅಥವಾ ಆಸ್ತಿಯನ್ನು ಕಳೆದುಕೊಂಡು ಬಡವನಾಗುವ ಸಂದರ್ಭವೇ ಇರಲಿಲ್ಲ. ಮೋಶೆಯ ಕಾನೂನಿನ ಪ್ರಕಾರ ಜೂಬಲಿ ಸಂವತ್ಸರದಲ್ಲಿಜನರು ತಾವು ಕಳೆದುಕೊಂಡಿದ್ದನ್ನೆಲ್ಲಾ ಪುನಃ ಪಡೆದುಕೊಳ್ಳುತ್ತಿದ್ದರು. ಯಾಜಕ 25:9, 13–23, 27–30 ಜನರೆಲ್ಲರೂ ಸಹೋದರ ಭಾವನೆಯಿಂದ ಒಬ್ಬರಿಗೊಬ್ಬರು ಸಹಾಯಮಾಡುತ್ತಿದ್ದರು. ಐಶ್ವರ್ಯವಂತನು ಬಡವರಿಗೆ ಸಾಲಕೊಟ್ಟರೆ ಕೊಟ್ಟವನು ಬಡ್ಡಿಯನ್ನಾಗಲೀ ಲಾಭವನ್ನಾಗಲೀ ತೆಗೆದುಕೊಳ್ಳುತ್ತಿರಲಿಲ್ಲ ಎಲ್ಲರಿಗೂ ಒಂದೇ ವಿಧವಾದ ಸ್ವಾಸ್ಥ್ಯವನ್ನು ಕೊಡಲಾಗಿತ್ತು ವಿಮೋ 22:25,

ಯಾಜಕ 25:36, ಅರಣ್ಯ 26: 52–56

ಯಾರು ಮೋಸ ಮಾಡದಂತೆ ಧರ್ಮಶಾಸ್ತ್ರದ ನಿಯಮವನ್ನು ಎಲ್ಲರಿಗೂ ತಿಳಿಯುವಂತೆ ಪ್ರಕಟಮಾಡಲಾಗಿತ್ತು. ಪರ್ಣಶಾಲೆಗಳ ಜಾತ್ರೆಯಲ್ಲಿ ಜನರೆಲ್ಲರೂ ದೇವರ ಸನ್ನಿಧಿಯಲ್ಲಿ ಕೂಡಿ ಬರುವಾಗ ಎಲ್ಲರಿಗೂ ಅರ್ಥವಾಗುವಂತೆ ಮತ್ತು ಕೇಳಿಸುವಂತೆ ಗಟ್ಟಿಯಾಗಿ ಓದಲಾಗುತ್ತಿತ್ತು. ದರ್ಮೋ 31:10–13 ಇಂತಹ ನಿಯಮಗಳು ಸ್ವಾರ್ಥಪರರಿಂದ ಬರಲು ಸಾಧ್ಯವೆ?

ಅನ್ಯದೇಶದವರೊಡನೆ ಮತ್ತು ಶತ್ರುಗಳೊಡನೆ ವರ್ತಿಸಬೇಕಾದ ನಿಯಮಗಳು ಮೋಶೆಯ ಧರ್ಮಶಾಸ್ತ್ರದಲ್ಲಿ ಕಂಡುಬರುತ್ತದೆ."

"ಸ್ವದೇಶದವನಿಗೂ ನಿಮ್ಮಲ್ಲಿ ವಾಸವಾಗಿರುವ ಪರದೇಶದವನಿಗೂ ಒಂದೇ ವಿಧಿಯಿರಬೇಕು ಯಾಕೆಂದರೆ ನಾನೇ ನಿಮ್ಮ ದೇವಾರಾದಯೆಹೋವನು" ವಿಮೋ 12: 49 ಯಾಜಕ 24:22.

"ನಿಮ್ಮ ದೇಶದಲ್ಲಿ ಇಳಿದುಕೊಂಡಿರುವ ಪರದೇಶದವರಿಗೆ ಅನ್ಯಾಯವೇನೂ ಮಾಡಬಾರದು. ಅವರು ನಿಮಗೆ ಸ್ವದೇಶದವರಂತೆಯೇ ಇರಬೇಕು; ಅವರನ್ನು ನಿಮ್ಮಂತೆಯೇ ಪ್ರೀತಿಸಬೇಕು. ಐಗುಪ್ತ ದೇಶದಲ್ಲಿದ್ದಾಗ ನೀವೂ ಅನ್ಯರಾಗಿದ್ದಿರಲ್ಲವೇ" ಯಾಜಕ 19:33–34.

"ನಿಮ್ಮ ವೈರಿಯ ಎತ್ತಾಗಲಿ ಕತ್ತೆಯಾಗಲಿ ತಪ್ಪಿಸಿಕೊಂಡು ಹೋಗಿರಲಾಗಿ ಅದು ನಿನಗೆ ಸಿಕ್ಕಿದರೆ ಅದನ್ನು ಅವನ ಬಳಿಗೆ ಹೊಡೆದುಕೊಡು ಹೋಗಿ ಒಪ್ಪಿಸಬೇಕು. ನಿನ್ನ ಹಗೆಯವನು ಕತ್ತೆ ಹೊರೆಯ ಕೆಳಗೆ ಬಿದ್ದಿರುವುದನ್ನು ಕಂಡರೆ ಅದನ್ನು ಎಬ್ಬಿಸುವುದಕ್ಕೆ ಮನಸ್ಸಿಲ್ಲದೆ ಹೋದಾಗ್ಯೂ ಅವನಿಗೂ ಸಹಾಯಮಾಡಿ ಎಬ್ಬಿಸಲೇ ಬೇಕು." ವಿಮೋ 23:4–5.

ಮೂಕ ಪ್ರಾಣಿಗಳಿಗೂ ದಯೆತೋರಿಸುತ್ತಿದ್ದರು. ಅವುಗಳನ್ನು ಹಿಂಸಿಸಬಾರದಾಗಿತ್ತು. ಕಣ ತುಳಿಯುವ ಎತ್ತಿನಬಾಯಿಯನ್ನು ಕಟ್ಟಬಾರದು. ಯಾಕೆಂದರೆ ಆಳು ತನ್ನ ಕೂಲಿಗೆ ಯೋಗ್ಯನಷ್ಟೆ. ಎತ್ತನ್ನೂ ಕತೆಯನ್ನೂ ಜೊತೆಮಾಡಿ ನೇಗಲಿಗೆ ಕಟ್ಟಬಾರದು ಯಾಕೆಂದರೆ ಅವೆರಡರ ಶಕ್ತಿಯು ಸಮವಲ್ಲ ಮತ್ತು ಎಲ್ಲರಿಗೂ ವಿಶ್ರಾಂತಿಯ ದಿನವು ಮೀಸಲಾಗಿತ್ತು ಧರ್ಮೋ 25:4; 22: 10 ವಿಮೋ 23:12.

ಯಾಜಕರ ಕೆಲಸವು ಲಾಭದಾಯಕ ಕೆಲಸವೆಂದು ಕೆಲವರ ಅಭಿಪ್ರಾಯವಾಗಿದೆ ಯಾಕೆಂದರೆ ಲೇವಿ ಕುಲದವರಿಗೆ ಎಲ್ಲಾ ಕುಲದವರು ದಶಾಂಶವನ್ನು ಕೊಡುತ್ತಿದ್ದರು. ದೇವರು ಒಂದು ಉದ್ದೇಶದಿಂದಲೇ ಈ ಪದ್ಧತಿಯನ್ನು ಗೊತ್ತುಮಾಡಿದ್ದನು. ಆದರೆ ಜನರು ಸ್ವಾರ್ಥಪರರಾಗುವರೆಂದು ಕೆಲವರು ತಪ್ಪಾದ ಅಭಿಪ್ರಾಯವುಳ್ಳವರಾಗಿರುವರು.

ಇಸ್ರಾಯೇಲ್ಯರು ಕಾನಾನ್ ದೇಶವನ್ನು ವಶಪಡಿಸಿಕೊಂಡಾಗ ಎಲ್ಲಾ ಕುಲದವರಿಗೆ ಭೂಮಿಯಲ್ಲಿ ಪಾಲು ದೊರೆತ ರೀತಿಯಲ್ಲಿ ಲೇವಿಯ ಕುಲದವರಿಗೂ ದೊರಕಬೇಕಾಗಿತ್ತು. ಆದರೆ ದೇವರ ಆಜ್ಞೆಯ ಪ್ರಕಾರ ಅವರಿಗೆ ಏನೂ ದೊರಕಲಿಲ್ಲ. ಅವರು ಧರ್ಮ ಕಾರ್ಯಗಳಲ್ಲಿ ನಿರತರಾಗಿರಬೇಕಾಗಿದ್ದರಿಂದ ವಾಸಕ್ಕಾಗಿ ಕೆಲವು ಹಳ್ಳಿಗಳು ದೊರತವೇ ಹೊರತು ಬೇರೇನೂ ದೊರಕಲಿಲ್ಲ. ಆದುದರಿಂದ ಅವರಿಗೆ ದಶಾಂಶವು ಕೊಡಲಾಗುತ್ತಿತ್ತು. ಇದು ಸಹ ಬಲವಂತದ ತೆರಿಗೆಯಾಗಿರಲಿಲ್ಲ ಕೊಡದಿದ್ದರೆ ಅವರಿಗೆ ಶಿಕ್ಷೆ ವಿಧಿಸುತ್ತಿರಲಿಲ್ಲ. ಜನರು ತಮ್ಮ ಸ್ವಇಚ್ಛೆಯಿಂದ ಕೊಡುತ್ತಿದ್ದರು. ಧರ್ಮೋ 12:19 ನೀವು ನಿಮ್ಮ ದೇಶದಲ್ಲಿ ಇರುವ ತನಕ ಲೇವಿಯರನ್ನು ಕೈಬಿಡಬಾರದು."

"ಲೇವಿಯರಿಗೆ ನಿಮ್ಮೊಡನೆ ಯಾವ ಸ್ವಾಸ್ತ್ಯವೂ ಇಲ್ಲವಾದುದರಿಂದ ನೀವು ಅವರನ್ನು ಕೈಬಿಡಬಾರದು." ಧರ್ಮೋ 14:27 ಇದರಿಂದ ಆ ಕಾಲದ ಯಾಜಕರು ಸ್ವಾರ್ಥ ಪರರಾಗಿರಲಿಲ್ಲವೆಂದು ತಿಳಿದು ಬರುತ್ತದೆ. ಇದಲ್ಲದೆ ಯಾಜಕರಿಗೆ ಯಾವ ವಿಶೇಷ ಸನ್ಮಾನಗಳು ಇರಲಿಲ್ಲ. ಸಮಾಜದ ಎಲ್ಲಾ ವರ್ಗದ ಜನರಲ್ಲಿ ಸಮಾನತೆ ಎಂಬಕಾನೂನು ಜಾರಿಯಲ್ಲಿತ್ತು. ಅದಲ್ಲದೆ ದಾಸ ದಾಸಿಯರಿಗೆ, ಪರದೇಶಸ್ಥರಿಗೆ ಮತ್ತು ಮುದುಕರಿಗೆ ವಿಶೇಷ ಶಾಸನಗಳಿದ್ದವು. ಉದಾ. ಪರದೇಶಸ್ಥರನ್ನಾಗಲಿ, ವಿಧವೆಯರನ್ನಾಗಲಿ, ದಿಕ್ಕಿಲ್ಲದ ಮಕ್ಕಳನ್ನಾಗಲಿ ಬಾಧಿಸಬಾರದು. ನೀವು ಇಂಥವರನ್ನು ಬಾಧಿಸಿದರೆ ಅವರು ನನಗೆ ಮೊರೆಯಿಡುವರು. ಆ ಮೊರೆಗೆ ನಾನು ಕಿವಿಗೊಡುವೆನು. ನಾನು ಕೋಪಿಸಿಕೊಂಡು ನಿಮ್ಮನ್ನು ಶತ್ರುಗಳ ಕೈಯಿಂದ ಸಂಹಾರ ಮಾಡಿಸುವೆನು." ನಿಮ್ಮ ಹೆಂಡತಿಯರು ವಿಧವೆಯರಾಗುವರು, ನಿಮ್ಮ ಮಕ್ಕಳು ದಿಕ್ಕಿಲ್ಲದವರಾಗುವರು. ವಿಮೋ22:21–24;23:9 ಯಾಜಕ 19:33,34. "ನೀವು ಸ್ವದೇಶದವರಲ್ಲಿಯಾಗಲಿ ನಿಮ್ಮಲ್ಲಿರುವ ಅನ್ಯದೇಶದವರಲ್ಲಿ ಯಾಗಲಿ ಗತಿಯಿಲ್ಲದ ಬಡಕೂಲಿಯವನಿಗೆ ಏನೂ ಅನ್ಯಾಯಮಾಡದೆ ದಿನದ ಕೂಲಿಯನ್ನು ಆ ದಿನದಲ್ಲೇ ಹೊತ್ತು ಮುಳುಗುವುದಕ್ಕೆ ಮುಂಚಿತವಾಗಿ ಅವನಿಗೆ ಕೊಡಬೇಕು. ಅವನಿಗೆ ಬೇರೆ ಗತಿಯಿಲ್ಲದ್ದರಿಂದ ಅದನ್ನೇ ಎದುರು ನೋಡುತ್ತಾನಲ್ಲಾ! ನೀವು ದೋಷಿಗಳಾಗಿ ಕಂಡುಬಂದೀರಿ" ಯಾಜಕ 19:13 ಧರ್ಮೋ 24:14,15 ವಿಮೋ 21:26,27 "ತಲೆನೆರೆತ ವೃದ್ಧರ ಮುಂದೆ ಎದ್ದು ನಿಂತು ಅವರನ್ನು ಸನ್ಮಾನಿಸಬೇಕು" ಯಾಜಕ 19:32 ಮತ್ತು 19:14 ಇವುಗಳು ಯಾವುವು ಲೇವಿಯರ ಅಥವಾ ಯಾಜಕರ ಅಥವಾ ದಶಾಂಶದ ವಿಶೇಷತೆಯನ್ನು ಸೂಚಿಸುವುದಿಲ್ಲ.

ಶುಚಿತ್ವವನ್ನು ಕುರಿತು ಕೆಲವು ವಿಶೇಷ ನಿಯಮಗಳಿದ್ದವು. ಇವೆಲ್ಲವುಗಳಿಂದ ನಮಗೆ ಕಂಡು ಬರುವುದೇನೆಂದರೆ ಸತ್ಯವೇದವು ಸಾಮಾನ್ಯ ಜನರ ಕೆಲಸವಲ್ಲ ಅದು ದೈವಪ್ರೇರಿತವಾದದ್ದು ಮತ್ತು ದೇವರ ಗುಣಲಕ್ಷಣಗಳನ್ನು ತಿಳಿಸುವಂತದು ಅದು ಆತನ ಜ್ಞಾನ, ನ್ಯಾಯ ಮತ್ತು ಪ್ರೀತಿಗೆ ಸಾಕ್ಷಿಯಾಗಿದೆ. ಅದಲ್ಲದೆ ನೀತಿವಂತನೂ ಧರ್ಮ ಬೋಧಕನೂ ಆದಮೋಶೆಯೇ ಎಲ್ಲವೂ ದೇವರ ಕಾಣಿಕೆ ಎಂದು ತಿಳಿಸಿರುವನು. ವಿಮೋ 24:12 ಧಮೋ 9:9–11 ವಿಮೋ 26:30 ಯಾಜಕ 1:1 ಮೋಶೆಯ ತರುವಾಯ ಬಂದ ನಾಯಕರು ಜನರ ಹಿತವನ್ನು ಕಡೆಗಾಣಿಸಿ ತಮ್ಮ ಸ್ವಂತ ಹಿತವನ್ನೇ ನೋಡಿಕೊಳ್ಳುವವರಾದರೂ ಸಹದೇವರ ಪವಿತ್ರ ನಿಯಮಗಳನ್ನು ಮಾತ್ರಬದಲಾಯಿಸಲಿಲ್ಲ. ಅವು ಇಂದಿಗೂ ಪವಿತ್ರವಾಗಿಯೇ ಉಳಿದಿವೆ.

**ಸತ್ಯವೇದದಲ್ಲಿನ ಪ್ರವಾದಿಗಳು**

ಸತ್ಯವೇದ ಪ್ರವಾದಿಗಳನ್ನೂ ಅವರ ಸಾಕ್ಷಿಗಳನ್ನೂ ನೋಡುವುದಾದರೆ ಕೆಲವರು ಮಾತ್ರ ಯಾಜಕವರ್ಗಕ್ಕೆ ಸೇರಿದವರಾಗಿದ್ದರು. ಅವರು ವಿಗ್ರಹಾರಾಧಕರಿಗೆ ಎಚ್ಚರಿಕೆಯ ಮಾತುಗಳನ್ನು ಪ್ರವಾದಿಸುತ್ತಿದ್ದರು. ಜನರ ಪಾಪಗಳಿಗಾಗಿ ದೇವರ ಗದರಿಕೆಯನ್ನು, ಮುಂದೆ ಬರುವ ಶಿಕ್ಷೆಯನ್ನು ಮತ್ತು ಆಗಾಗ್ಯೆ ದೇವರಿಂದ ದೊರಕುವ ಆಶೀರ್ವಾದವನ್ನು ಜನರಿಗೆ ತಿಳಿಸುತ್ತಿದ್ದರು. ಅವರ ಪಾಪದಿಂದ ಶುದ್ಧೀಕರಿಸಲ್ಪಟ್ಟು ಶುದ್ಧರಾಗಿ ದೇವರ ಕೃಪೆಯನ್ನು ಪಡೆಯುವವರಾಗಿದ್ದರು ಪ್ರವಾದಿಗಳ ಕೆಲಸ ಬಹಳ ಅಪಾಯಕಾರಿಯಾಗಿದ್ದಿತು. ಅವರಲ್ಲಿ ಅನೇಕರನ್ನು ಕೊಲ್ಲಿಸುತ್ತಲೂ ಹಿಂಸಿಸುತ್ತಲೂ ಇದ್ದರು. 1 ಅರಸು 18:4, 10, 17, 18; 19:10; ಯೆರೆ 38:6; ಇಬ್ರಿ 11:32–38 ಕೆಲವು ಸಂದರ್ಭಗಳಲ್ಲಿ ಈ ದೇವರ ಪ್ರವಾದಿಗಳ ಪ್ರವಾದನೆಯ ಸತ್ಯಾಂಶವನ್ನು ಅವರು ಸತ್ತು ಎಷ್ಟೋ ವರ್ಷಗಳು ಕಳೆದ ಅನಂತರ ಕಂಡುಕೊಂಡಿರುವರು. ಆದರೆ ಈ ಪ್ರವಾದಿಗಳು ಮಾಡಿರುವುದೆಲ್ಲವೂ ಯೆಹೋವನ ಪ್ರೇರೆಪಣೆಯಿಂದಲೇ. ದೇವರು ಇಸ್ರಾಯೆಲ್ಲರಿಗೆ ಕೊಟ್ಟ ಧರ್ಮಶಾಸ್ತ್ರಗಳಿಗೆ ಯಾವ ಯಾಜಕ ವರ್ಗದವರು ಮಧ್ಯಸ್ಥರಾಗಿರಲಿಲ್ಲ. ದೇವರು ಮೋಶೆಯ ಮುಖಾಂತರ ಅದನ್ನು ಜನರಿಗೆ ಕೊಟ್ಟನು. ವಿಮೋ 19:17–25; ಧರ್ಮೋ 5:1–5 ಮಾತ್ರವಲ್ಲದೆ ಯಾರಾದರು ಧರ್ಮವಿಧಿಗಳನ್ನು ಮೀರಿ ಪಾಪ ಮಾಡಿದರೆ ಅವರನ್ನು ಗದರಿಸಿ ಬುದ್ಧಿ ಹೇಳುತ್ತಿದ್ದರು. ಯಾಜ 19:17 ಹೀಗೆ ಎಲ್ಲರಿಗೂ ಕಲಿಸುವ ಮತ್ತು ಗದರಿಸುವ ಅಧಿಕಾರವಿತ್ತು. ಈ ಕಾಲದವರಂತೆ ಆ ಕಾಲದಲ್ಲಿಯೂ ಹೆಚ್ಚು ಜನರು ತಮ್ಮ ಸ್ವಂತ ವ್ಯವಹಾರದಲ್ಲಿ ಮಗ್ನರಾಗಿ ಸ್ವೇಚ್ಛಾಪರರು ಅಧರ್ಮಿಗಳಾಗಿದುದ್ದರಿಂದ ಕೇವಲ ಸ್ವಲ್ಪ ಮಂದಿ ಮಾತ್ರ ಜನರನ್ನು ಅವರ ಪಾಪಗಳಿಗಾಗಿ ಗದರಿಸಿ ದೇವರಮಾರ್ಗದಲ್ಲಿ ನಡೆಯುವಂತೆ ಉಪದೇಶಿಸುತ್ತಿದ್ದರು. ಹೀಗೆ ಜನರಿಗೆ ನೀತಿಮಾರ್ಗವನ್ನು ಬೋಧಿಸುತ್ತಿದ್ದವರನ್ನೇ ಪ್ರವಾದಿಗಳು ಎಂದು ಹಳೆ ಮತ್ತು ಹೊಸ ಒಡಂಬಡಿಕೆ ಗಳೆಡರಲ್ಲೂ ಕರೆಯಲಾಗಿದೆ. ಈ ಪ್ರವಾದಿಗಳು ಜನ ಸಾಮಾನ್ಯರನ್ನು ಎಚ್ಚರಿಸುವವರಾಗಿದ್ದರು. ವಿಗ್ರಹಾ ರಾಧಕರಲ್ಲಿಯೂ ಈ ರೀತಿ ಪ್ರವಾದಿಗಳಿದ್ದರು. ಉದಾ. ಬಾಳನ ಪ್ರವಾದಿಗಳು 1 ಪೂ. ವೃ. 14:1–6; 2 ಪೇತ್ರ 2:1, ಮತ್ತಾ 7:15; 14:5; ನೆಹ 6:7; 1 ಅರಸು 18: 40; ತೀತ 1:12.

ಹೀಗೆ ಪ್ರವಾದಿಸುವಿಕೆಯು ಮುಂದುವರೆದು ಮುಂದೆ ಅವರು ಒಂದು ವಿಶೇಷವರ್ಗದವರೆಂದು ಪರಿಗಣಿಸಲ್ಪಟ್ಟರು. ಅವರೇ ಪರಿಸಾಯರು. ಈ ಪರಿಸಾಯರು ದೇವರ ಆಜ್ಞೆಗ್ಗಳನ್ನು ಉಪದೇಶಿಸುವ ಬದಲು ಹಿಂದಿನ ಕಾಲದ ಸಂಪ್ರದಾಯಗಳನ್ನು ಬೋಧಿಸವವರಾಗಿ ಸತ್ಯಕ್ಕೆ ಬದಲು ಅಸತ್ಯವನ್ನು ಬೋಧಿಸಿ ಸುಳ್ಳು ಪ್ರವಾದಿಗಳಾದರು ಮತ್ತಾ 15: 2–9.

ಈ ಪ್ರವಾದಿಗಳಲ್ಲಿ ಕೆಲವರು ಯೆಹೋವನು ವಿಶೇಷವಾಗಿ ಆರಿಸಿಕೊಂಡವರಾಗಿದ್ದರು. ಅವರಲ್ಲಿ ಕೆಲವರು ಸಧ್ಯದ ಪರಿಸ್ಥಿತಿಯನ್ನು ಕುರಿತು ತಿಳಿಸುವವರಾಗಿದ್ದರು ಮತ್ತೆ ಕೆಲವರು ಮುಂದಾಗುವುದನ್ನು ತಿಳಿಸುವವರಾಗಿದ್ದರು. ಇಂಥವರು ಪವಿತ್ರಾತ್ಮ ಪ್ರೇರಿತರಾಗಿ ಬರೆದಿರುವುದೇ ಇಂದು ನಮ್ಮ ಗಮನಕ್ಕೆ ಬಂದಿದೆ.

**ದೇವರಿಂದ ನೇಮಿಸಲ್ಪಟ್ಟ ಪ್ರವಾದಿಗಳು**

ಈ ಪ್ರವಾದಿಗಳು ಸಾಮಾನ್ಯವರ್ಗದ ಜನರಾಗಿದ್ದರು. ಯಾಜಕ ವರ್ಗದವರಂತೆ ಇವರಿಗೆ ಯಾವ ದಶಮಭಾಗವು ದೊರಕುತ್ತಿರಲಿಲ್ಲ ಮಾತ್ರವಲ್ಲದೆ ನ್ಯಾಯಸ್ಥಾಪಕರ, ಅರಸುಗಳ ಮತ್ತು ಯಾಜಕ ವರ್ಗದವರ ಕೋಪಕ್ಕೆ ಪಾತ್ರರಾಗಬೇಕಾಗಿತ್ತು. ಸತ್ಯವೇದವನ್ನು ಬರೆದಿರುವ ಲೇಖಕರು ನೀತಿ ಮತ್ತು ಸತ್ಯತೆಗಳಿಂದ ಪ್ರೇರಿತರಾಗಿದ್ದರೆ ಅವರ ನಡುವೆ ಒಂದು ಸಂಬಂಧವಿರಲೇಬೇಕು. ಹಳೆ ಒಡಂಬಡಿಕೆಯ ಪ್ರವಾದಿಗಳಿಗೂ, ಮೋಶೆಗೂ ಮತ್ತು ಹೊಸ ಒಡಬಡಿಕೆಯ ಲೇಖಕರಿಗೂ ನಡುವೆ ಯಾವುದಾದರು ಸಂಬಂಧವಿದೆಯೋ ಎಂದು ಪರಿಶೀಲಿಸೋಣ. ಹಳೆ ಒಡಂಬಡಿಕೆಯ ಪುಸ್ತಕಗಳಿಗೂ ಹೊಸ ಒಡಂಬಡಿಕೆಯ ಪುಸ್ತಕಗಳಿಗೂ ನಡುವೆ 1500 ವರುಷಗಳ ಅಂತರವಿದ್ದರೂ ಇವೆರಡರಲ್ಲಿ ಕಂಡುಬರುವ ಹೋಲಿಕೆ ಮತ್ತು ಸತ್ಯಾಂಶದಿಂದ ಇವು ದೈವ ಪ್ರೇರಿತವಾದುದೆಂದು ತಿಳಿದು ಬರುತ್ತದೆ.

ಇಡೀ ಸತ್ಯವೇದದಲ್ಲಿ ಒಂದೇ ಯೋಜನೆ ಒಂದೇ ಬೋಧನೆ ಮತ್ತು ಒಂದೇ ಉದ್ದೇಶ ಕಂಡು ಬರುತ್ತದೆ. ಅದರ ಪ್ರಾರಂಭದ ಪುಟಗಳಲ್ಲಿ ಮಾನವನ ಸೃಷ್ಟಿ ಅವನು

ಪಾಪಕ್ಕೆ ಬಿದ್ದ ಸಂಗತಿಗಳು ತಿಳಿಸಲ್ಪಟ್ಟಿವೆ. ಅದರ ಅಂತ್ಯ ಪುಟಗಳಲ್ಲಿ ಮಾನವನು ಪಾಪದಿಂದ ಬಿಡುಗಡೆ ಹೊಂದಿದ ಸಂಗತಿಯನ್ನು ತಿಳಿಸಲಾಗಿದೆ. ಮಧ್ಯದ ಪುಟಗಳು ಈ ಉದ್ದೇಶ ಸಾಧನೆಗಾಗಿರುವ ದೇವರ ಯೋಜನೆಯನ್ನು ತಿಳಿಸುತ್ತದೆ. ಸತ್ಯವೇದದ ಮೊದಲಿನ ಮತ್ತು ಕಡೆಯ ಮೂರು ಅಧ್ಯಾಯಗಳಲ್ಲಿ ಕಂಡುಬರುವ ಹೋಲಿಕೆ ಮತ್ತು ವ್ಯತ್ಯಾಸಗಳು ಗಮನಾರ್ಹವಾಗಿವೆ. ಒಂದು ಸೃಷ್ಟಿ ಕಾರ್ಯವನ್ನು ತಿಳಿಸುತ್ತದೆ; ಮತ್ತೊಂದು ಪಾಪದ ಶಾಪದಿಂದ ವಿಮೋಚಿಸಲ್ಪಟ್ಟ ನೂತನ ಸೃಷ್ಟಿಯನ್ನು ತಿಳಿಸುತ್ತದೆ. ಒಂದು ಸೈತಾನನು ಜನರನ್ನು ವಂಚಿಸಿ ಲೋಕದೊಳಕ್ಕೆ ಪ್ರವೇಶಿದ್ದನ್ನು ತಿಳಿಸುತ್ತದೆ; ಮತ್ತೊಂದು ಸೈತಾನನ ಕೆಲಸಗಳು ಲಯಮಾಡಲ್ಪಟ್ಟು ಅವನ ನಾಶನವನ್ನು ತಿಳಿಸುತ್ತದೆ. ಒಂದು ಆದಾಮನು ಕಳೆದು ಕೊಂಡ ರಾಜ್ಯವನ್ನು ತಿಳಿಸುತ್ತದೆ. ಮತ್ತೊಂದು ಕ್ರಿಸ್ತನಿಂದ ಆ ರಾಜ್ಯವು ಪುನಃ ಸ್ಥಾಪಿತವಾದುದನ್ನು ತಿಳಿಸುತ್ತದೆ. ದೇವರ ಚಿತ್ತವು ಪರಲೋಕದಲ್ಲಿ ನೆರವೇರಿದಂತೆ ಭೂಲೋಕದಲ್ಲಿಯೂ ನೆರವೇರುವುದು. ಒಂದು ಪಾಪದ ಫಲವಾದ ಸಂಕಟ, ಅವಮಾನ ಮತ್ತು ಮರಣವನ್ನು ತಿಳಿಸುತ್ತದೆ ಮತ್ತೊಂದು ನೀತಿಯ ಫಲವಾದ ಮಹಿಮೆ, ಸನ್ಮಾನ ಮತ್ತು ಜೀವವನ್ನು ತಿಳಿಸುತ್ತದೆ.

ಸತ್ಯವೇದವು ಅನೇಕ ಲೇಖಕರಿಂದ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಸನ್ನಿವೇಶಗಳಲ್ಲಿ ಬರೆಯಲ್ಪಟ್ಟದಾದ್ದರೂ ಅದೊಂದು ಕೇವಲ ನೀತಿ ಪುಸ್ತಕವಲ್ಲ. ಪಾಪವು ಲೋಕದೊಳಗೆ ಪ್ರವೇಶಿಸಿದ್ದು ಅದರಿಂದ ಬಿಡುಗಡೆ ಹೊಂದಲು ದೇವ ಜನರು ಅನುಸರಿಸಬೇಕಾದ ದೈವಮಾರ್ಗವನ್ನು ತಿಳಿಸುತ್ತದೆ.

ಪ್ರಾರಂಭದಲ್ಲಿಯೇ ಮಾನವನು ಪರಿಶೋಧಿತನಾಗಿ ಬಿದ್ದು ಹೋದುದರ ಫಲವಾಗಿ ಸಂಕಟ, ರೋಗ ಮತ್ತು ಮರಣ ಇವುಗಳ ಪ್ರವೇಶವಾಯಿತು. ಆದರೂ ದೇವರು ಅವನನ್ನು ತಿರಸ್ಕರಿಸದೆ ಅವನ ಬಿಡುಗಡೆಗಾಗಿ ಸ್ತ್ರೀಯಲ್ಲಿ ಹುಟ್ಟಿದ ಒಬ್ಬ ವಿಮೋಚಕನನ್ನು ನೇಮಿಸಿದನು ಆದಿ 3 : 15 ದೇವರು ಆದಾಮನಿಗೂ ಹವ್ವಳಿಗೂ ತೊಡಿಸಿದ ಚರ್ಮದ ಅಂಗಿಗಳಿಂದಲೂ, ಹೇಬೆಲನ ಯಜ್ಞವನ್ನೂ ಸ್ವೀಕರಿಸಿದ್ದರಲ್ಲಿಯೂ ಇಸಾಕನು ಯಜ್ಞ ಪೀಠದ ಮೇಲಿದ್ದಾಗಲೂ ಮತ್ತು ಇತರ ಎಲ್ಲಾ ಯಜ್ಞಗಳನ್ನು ಸ್ವೀಕಸಿದ್ದರಿಂದ ತಿಳಿದು ಬರುವದೇನೆಂದರೆ ಲೋಕದ ಪಾಪ ವಿಮೋಚನೆಗಾಗಿ ರಕ್ಷಕನು ಕುರಿ ಮರಿಯ ಹಾಗೆ ವಧ್ಯಸ್ಥಾನಕ್ಕೆ ಹೋಗುವದು ಅವಶ್ಯ ಎಂದು ದರ್ಶನಗಳ ಮೂಲಕ ಜನರು ನೋಡಿದರು 1 ಪೇತ್ರ 1 : 12 ಅವರ ಹೇಳಿಕೆಯಿಂದಲೇ ಇದು ತಿಳಿದುಬರುತ್ತದೆ. 'ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು' ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು.' ಯೆಶಾ 53 : 3–6 ಈ ವಿಮೋಚಕನು ಎಲ್ಲಿ ಹುಟ್ಟುತ್ತಾನೆಂದು ಮೀಕ 5 : 2ರಲ್ಲಿ ತಿಳಿಸಲಾಗಿದೆ ಮತ್ತು ಆತನು ಸಾಯುವದು ತನಗೋಸ್ಕರವಲ್ಲ ಎಂಬುದನ್ನು ದಾನಿ 9 : 26ರಲ್ಲಿ ತಿಳಿಸಲಾಗಿದೆ. ಆತನಲ್ಲಿದ್ದ ಅನೇಕ ಗುಣಗಳನ್ನು ಈ ಪ್ರವಾದಿಗಳು ತಿಳಿಸಿರುವರು. 'ನೀತಿವಂತನು' 'ವಂಚಿತನಾಗಲಿಲ್ಲ' 'ಹಿಂಸೆಗೊಳಗಾಗಲಿಲ್ಲ' ಯೆಶಾಯ 53 : 8, 9, 11 ಆತನು ಮೂವತ್ತು ಬೆಳ್ಳಿಯ ಹಣಕ್ಕೆ ಮಾರಲ್ಪಟ್ಟನು ಜೆಕರ್ಯ 11 : 12 ತನ್ನ ಪ್ರಾಣವನ್ನು ಧಾರೆಯೆರೆದು ಮರಣ ಹೊಂದಿ ದ್ರೋಹಿಗಳೊಂದಿಗೆ ತನ್ನನ್ನು ಎಣಿಸಿಕೊಂಡನು ಯೆಶಾಯ 53 : 12 ಆತನ ಎಲುಬುಗಳಲ್ಲಿ ಒಂದಾದರು ಮುರಿದು ಹೋಗುವುದಿಲ್ಲ ಕೀರ್ತ 34 : 20 ; ಯೊಹಾನ 19 : 36 ಆತನು ಸತ್ತು ಹೂಣಲ್ಪಟ್ಟರು ಆತನನ್ನು ಪಾತಾಳದಲ್ಲಿ ಬಿಡುವುದಿಲ್ಲ ಮತ್ತು ಆತನ ಶರೀರವು ಕೊಳೆಯುವ ಅವಸ್ಥೆಯನ್ನು ಅನುಭವಿಸುವುದಿಲ್ಲ ಕೀರ್ತ 16 : 10; ಅ.ಕೃ 2 : 31 ಈ ಎಲ್ಲಾ ಪ್ರವಾದನಾ ವಾಕ್ಯಗಳು ನಜರೇತಿನ ಯೇಸುವನ್ನೇ ಕುರಿತು ಬರೆಯಲಾಗಿದೆ ಎಂದು ಹೊಸ ಒಡಂಬಡಿಕೆಯ ಲೇಖಕರು ನ್ಯಾಯಬದ್ಧವಾಗಿ ತೀರ್ಮಾನಿಸಿರುವರು ಮತ್ತು ಲೋಕದ ಪಾಪ ನಿವಾರಣೆಗಾಗಿ ಅಂತಹ ಒಂದು ಈಡು ಬಲಿಯು ಅವಶ್ಯಕವಾಗಿತ್ತು ಯೆಶಾಯ 1 : 18 ಹೋರಾಡಿ ಸತ್ತ ಮಕ್ಕಳು ಆತನ ರಾಜ್ಯದಲ್ಲಿ ಯಾಜಕರಾಗುವರು. ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯಲ್ಲಿ ಆಶೀರ್ವಾದಕ್ಕೆ ಪಾತ್ರರಾಗುವರು. ಸೈತಾನನು ಬಂಧಿಸಲ್ಪಟ್ಟು ಆದಾಮನಿಂದ ಉಂಟಾದ ಮರಣ ಸಂಕಟಗಳೆಲ್ಲವು ಅಳಿಸಲ್ಪಡುವದು ಮತ್ತು ಸರ್ವಜನಾಂಗದವರು ಆಶೀರ್ವಾದ ಹೊಂದಿ ಪರಲೋಕ ರಾಜ್ಯವಾದ ಹೊಸ ಯೆರುಸಲೇಮಿನಲ್ಲಿ ಕ್ರಿಸ್ತನ ಬೆಳಕಿನಲ್ಲಿ ನಡೆಯುವರು.

ಸತ್ಯವೇದದ ಪ್ರಾರಂಭದಿಂದ ಕಡೆಯವರೆಗೆ ಸತ್ತವರಿಗೆ ಪುನರುತ್ಥಾನವಾಗುವದು ಎಂಬ ಒಂದೇ ಸಿದ್ಧಾಂತವನ್ನು ಎತ್ತಿ ಹಿಡಿದಿರುವರು. ಎಲ್ಲಾ ಲೇಖಕರು ವಿಮೋಚಕನಲ್ಲಿ ತಮಗಿರುವ ನಂಬಿಕೆಯನ್ನೇ ತಿಳಿಸಿರುವರು. 'ಉದಯಕಾಲದಲ್ಲಿ' ಕ್ರಿಸ್ತನು ಬರುವಾಗ ದುಷ್ಟರ ಆಳ್ವಿಕೆಯು ಅಳಿದುಹೋಗುವುದು. 'ಉದಯಕಾಲದಲ್ಲಿ ಯಥಾರ್ಥರು ಅವರ ಮೇಲೆ ದೊರೆತನ ನಡೆಸುವರು' ಕೀರ್ತ 49 : 14. ಪುನರುತ್ಥಾನದ ವಿಷಯದಲ್ಲಿ ಎಲ್ಲಾ ಪ್ರವಾದಿಗಳು ಹೊಸ ಒಡಂಬಡಿಕೆಯ ಲೇಖಕರು ಭರವಸೆ ಇಟ್ಟಿದ್ದರು. ಅದನ್ನು ಕುರಿತು ಪೌಲನು ಹೀಗೆ ಬರೆದಿರುವನು. 'ಇದಲ್ಲದೆ ಸತ್ತವರು ಎದ್ದು ಬರುವುದಿಲ್ಲವೆಂಬುದು ನಿಜವಾಗಿದ್ದ ಪಕ್ಷದಲ್ಲಿ ದೇವರು ಕ್ರಿಸ್ತನನ್ನು ಎಬ್ಬಿಸಲೇ ಇಲ್ಲ... ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆ ಹೋದವರು ನಾಶವಾದರು. ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ... ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು' 1 ಕೊರಿ 15 : 13–22.

ಹೇಗೆ ಒಂದು ಗಡಿಯಾರವು ಚಲಿಸಲು ಅನೇಕ ಸಣ್ಣ ಚಕ್ರಗಳು ಅವಶ್ಯಕವೋ ಹಾಗೆಯೇ ಸತ್ಯವೇದವು ಅನೇಕ ಭಾಗಗಳಿಂದ ಕೂಡಿದ್ದು ಅನೇಕ ಲೇಖಕರಿಂದ ಬರೆಯಲ್ಪಟ್ಟ ಒಂದು ಸಂಪೂರ್ಣ ಗ್ರಂಥವಾಗಿದೆ. ಯಾವ ಭಾಗವೂ ಅನವಶ್ಯಕವಲ್ಲ. ಪ್ರತಿಂಯೊಂದೂ ಪ್ರಯೋಜನಕಾರಿಯೂ ಅಗತ್ಯವೂ ಆಗಿದೆ. ಆದರೆ ಈಗಿನ ಕಾಲದ ಮಹಾಜ್ಞಾನಿಗಳು ಸತ್ಯವೇದದ ಕೆಲವು ಘಟನೆಗಳನ್ನು ಕಲ್ಪನಾ ಕಥೆಗಳೆಂದು ಹೇಳಿದ್ದಾರೆ. ಉದಾ : ಯೋನನು ಮೀನಿನ ಹೊಟ್ಟೆಯೊಳಗೆ ಇದ್ದದ್ದು. ನೋಹನ ನಾವೆ, ಸರ್ಪವು ಹವ್ವಳನನ್ನು ವಂಚಿಸಿದ್ದು, ಯೆಹೋಶುವನ ಆಜ್ಞೆಯಂತೆ ಸೂರ್ಯನು ಚಲಿಸದೆ ನಿಂತದ್ದು, ಬಿಳಾಮನ ಕತ್ತೆಯು ಮಾತನಾಡಿದ್ದು ಇತ್ಯಾದಿ. ಟೀಕಾಕಾರರು ಒಂದು ವಿಷಯವನ್ನು ಮರೆತಂತಿದೆ. ಸತ್ಯವೇದದ ಘಟನೆಗಳು ಒಂದಕ್ಕೊಂದು ಹೆಣೆಯಲ್ಪಟ್ಟು ಐಕ್ಯವಾಗಿರುವದು ಒಂದನ್ನು ತೆಗೆದು ಬಿಡುವುದಾದರೆ ಇಡೀ ಸತ್ಯವೇದವನ್ನೇ ನಾಶಮಾಡಿದಂತಾಗುತ್ತದೆ. ಮೇಲೆ ಹೇಳಿದ ಘಟನೆಗಳು ಸುಳ್ಳಾಗಿದ್ದರೆ ಪುನಃ ಅದೇ ಸೂಚಕ ಕಾರ್ಯಗಳನ್ನು ಹೇಳುವವರು ಸುಳ್ಳುಗಾರರಾಗುತ್ತಾರೆ ಮತ್ತು ಇವರ ಮಾತುಗಳು ದೈವಪ್ರೇರಿತವಾದವೆಂದು ಒಪ್ಪಿಕೊಳ್ಳಲು ನಮಗೆ ಕಷ್ಟವಾಗುತ್ತದೆ. ಈ ಘಟನೆಗಳನ್ನು ತಳ್ಳಿಹಾಕುವುದಾದರೆ ಕೇವಲ ಲೇಖಕರ ಮಾತನ್ನಲ್ಲ ಕರ್ತನಾದ ಯೇಸುವಿನ ಸಾಕ್ಷಿಯನ್ನೇ ತಿರಸ್ಕರಿಸಿದಂತಾಗುತ್ತದೆ. ಮನುಷ್ಯರು ಪಾಪದಲ್ಲಿ ಬಿದ್ದದ್ದನ್ನು ರೋಮಾ 5 : 17ರಲ್ಲಿ ಪೌಲನು ತಿಳಿಸಿರುವನು. ಸರ್ಪವು ಸ್ತ್ರೀಯನ್ನು ವಂಚಿಸಿದ್ದು 2 ಕೊರಿ 11 : 3 ; 1 ತಿಮೋ 2 : 14ರಲ್ಲಿ ಕಂಡು ಬರುತ್ತದೆ. ಇದನ್ನೇ ನಮ್ಮ ಕರ್ತನು ಪ್ರಕ 12 ; 9 ; 20 : 2ರಲ್ಲಿ ತಿಳಿಸಿರುವನು. ಯೆಹೋಶುವನ ಕಾಲದಲ್ಲಿ ಸೂರ್ಯನು ಚಲಿಸದೆ ನಿಂತದ್ದು ಮುಂದೆ ಕರ್ತನ ದಿನದಲ್ಲಿ ಕಂಡುಬರುವ ಶಕ್ತಿಯನ್ನು ಸೂಚಿಸುತ್ತದೆ. ಇದನ್ನು ಮೂರು ಪ್ರವಾದಿಗಳು ಸಮರ್ಥಿಸಿರುವರು ಯೆಶಾ 28 : 21 ಹಬಕೂ 2 : 1–3, 13, 14 ಮತ್ತು 3 : 2–11 ; ಜೆಕರ್ಯ 14 : 1, 6, 7 ಮಾತನಾಡುವ ಕತ್ತೆಯ ವಿಷಯವನ್ನು ಯೂದನು ಮತ್ತು ಪೇತ್ರನು ಸಮರ್ಥಿಸಿರುವರು. ಯೂದ 1 : 11 2 ಪೇತ್ರ 2 : 16 ಯೋನನು ಮತ್ತು ನೋಹನನ ಘಟನೆಗಳನ್ನು ಬೋಧಕನಾದ ಯೇಸುವೇ ಸ್ಪಷ್ಟಪಡಿಸಿರುವನು. ಮತ್ತಾ 12 : 40 ; 24 : 38, 39 ; ಲೂಕ 17 : 26 2 ಪೇತ್ರ 3 : 20 ಸಹ ನೋಡಿರಿ. ಆದರೂ ಯೇಸುವಿನಿಂದ ಮಾಡಲ್ಪಟ್ಟ ಅದ್ಭುತ ಕಾರ್ಯಗಳಿಗಿಂತ ಇವು ಹೆಚ್ಚಲ್ಲ. ನೀರನ್ನು ದ್ರಾಕ್ಷಾರಸಕ್ಕೆ ಬದಲಾಯಿಸಿದ್ದು, ರೋಗಿಗಳನ್ನು ಗುಣಪಡಿಸಿದ್ದು ಮತ್ತು ಸತ್ತವರನ್ನು ಎಬ್ಬಿಸಿದ್ದು.

ನಮ್ಮ ಪ್ರತೀ ದಿನದ ಜೀವಿತದಲ್ಲಿ ಅನೇಕ ಅದ್ಭುತ ಕಾರ್ಯಗಳು ನಡೆಯುತ್ತಿರುತ್ತವೆ. ಆದರೆ ಅವುಗಳಿಗೆ ನಾವು ಗಮನ ಕೊಡುವುದಿಲ್ಲ. ಉದಾ : ಗಿಡ ಮರಗಳ ಬೆಳವಣಿಗೆ. ಬೀಜ ಬಿತ್ತುವುದು ನಮ್ಮ ಕೆಲಸ ಆದರೆ ಅದು ಹೇಗೆ ಬೆಳೆದು ಗಿಡವಾಗಿ ಬಣ್ಣ ಬಣ್ಣದ ಹಣ್ಣು, ಕಾಯಿಗಳನ್ನು ಬಿಡುತ್ತದೆ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಇದೊಂದು ಅದ್ಭುತವೇ ಸರಿ! ಆದರೆ ಅದು ನಮಗೆ ಸರ್ವಸಾಮಾನ್ಯವಾಗಿರುವುದರಿಂದ ಅದಕ್ಕೆ ಹೆಚ್ಚಿನ ಮಹತ್ವವನ್ನು ನಾವು ಕೊಟ್ಟಿಲ್ಲ. ಆದರೆ ಈ ಅದ್ಭುತದ ಹಿಂದೆ ಸರ್ವಶಕ್ತನಾದ ದೇವರ ಕೈವಾಡವಿದೆ ಎಂಬುದನ್ನು ಶೃತಪಡಿಸಲು ಸತ್ಯವೇದದಲ್ಲಿ ಕೆಲವು ಸೂಚಕಕಾರ್ಯಗಳನ್ನು ತಿಳಿಸಲಾಗಿದೆ. ಈ ಅದ್ಭುತ ಸೃಷ್ಠಿಕರ್ತನು ಎಲ್ಲಾ ಸಂಕಷ್ಟಗಳನ್ನು ಜಯಿಸಿ ಪಾಪನಿವಾರಣೆ ಮಾಡಿ ನಿತ್ಯ ನೀತಿ ಸಮಾಧಾನವನ್ನು ಸ್ಥಾಪಿಸುವನು.

ಬುದ್ಧಿವಂತಿಕೆಯ ಪರಿಶೀಲನೆಯಿಂದ ನಾವು ಕಂಡುಕೊಂಡಿರುವದೇನೆಂದರೆ ಸರ್ವಶಕ್ತನಾದ ದೇವರೊಬ್ಬನಿರುವನು. ಆತನಲ್ಲಿ ಜ್ಞಾನ, ನ್ಯಾಯ, ಪ್ರೀತಿ ಮತ್ತು ಶಕ್ತಿಯೆಲ್ಲವೂ ಹೊಂದಿಕೊಂಡಿರುವದು, ಸತ್ಯವೇದವು ಆತನ ಉದ್ದೇಶವನ್ನು ಪ್ರಕಟಿಸುತ್ತದೆ ಮತ್ತು ಯೇಸುವಿನ ಯಜ್ಞಾರ್ಪಣೆಯನ್ನು ವಿವರವಾಗಿ ತಿಳಿಸುತ್ತದೆ. ಸತ್ಯವೇದವು ಸಾಮಾನ್ಯ ಗ್ರಂಥವಲ್ಲ ಅದು ದೇವರಿಂದ ಪ್ರಚೋದಿತವಾದ ಗ್ರಂಥ ದೇವರ ಯೋಜನೆಯ ಅಗಲ, ಉದ್ದ, ಎತ್ತರ ಮತ್ತು ಆಳ ಈಗ ನಮಗೆ ಮಂಕಾಗಿ ಕಾಣಿಸುತ್ತಿದ್ದರೂ ಮುಂದೆ ಬರುವ ಕ್ರಿಸ್ತನ ರಾಜ್ಯದ ಬೆಳಕಿನಲ್ಲಿ ಸ್ಪಷ್ಟವಾಗಿ ಕಾಣಿಸುವದು.

## Truth Most Precious

Great truths are dearly bought. The common truth,
Such as men give and take from day to day,
Comes in the common walk of easy life,
Blown by the careless wind across our way.

Great truths are dearly won; not found by chance,
Nor wafted on the breath of summer dream;
But grasped in the great struggle of the soul,
Hard buffeting with adverse wind and stream.

Sometimes, ‘mid conflict, turmoil, fear and grief,
When the strong hand of God, put forth in might,
Ploughs up the subsoil of the stagnant heart,
It brings some buried truth-seeds to the light.

Not in the general mart, ‘mid corn and wine;
Not in the merchandise of gold and gems;
Not in the world’s gay hall of midnight mirth,
Nor ‘mid the blaze of regal diadems;

Not in the general clash of human creeds,
Nor in the merchandise ‘twixt church and world,
Is truth’s fair treasure found, ‘mongst tares and weeds;
Nor her fair banner in their midst unfurled.

Truth springs like harvest from the well-ploughed fields,
Rewarding patient toil, and faith and zeal.
To those thus seeking her, she ever yields
Her richest treasures for their lasting weal.

# ಅಧ್ಯಾಯ-4

## ಕಾಲ ಮತ್ತು ಯುಗಗಳು ದೈವೀಕ ಯೋಜನೆಯ ಅಭಿವೃದ್ಧಿಯಲ್ಲಿ ಗುರುತಿಸಲಾಗಿರವ ವ್ಯವಸ್ಥೆಗಳು.

**ದೇವರ ಯೋಜನೆ ಖಚಿತ ಮತ್ತು ಕ್ರಮಬದ್ಧವಾಗಿದೆ-ಪ್ರಪಂಚ ಇತಿಹಾಸದ ಮೂರು ಮಹಾ ಯುಗಗಳು-ಅವುಗಳ ಭಿನ್ನವಾದ ವಿಶೇಷ ಗುಣಲಕ್ಷಣಗಳು-"ಭೂಮಿಯಾದರೋ ಶಾಶ್ವತವಾಗಿ ನಿಲ್ಲುವುದು"-ಮುಂದೆ ಬರುವ ಪ್ರಪಂಚ ಹೊಸ ಆಕಾಶ ಮತ್ತು ಭೂಮಿ-ಈ ಮೂರು ಮಹಾ ಕಾಲಗಳ ಉಪವಿಭಾಗಗಳು-ಹೀಗೆ ದೇವರ ಯೋಜನೆಯ ಮುಖ್ಯವಾದ ಲಕ್ಷಣವನ್ನು ಕಾಣುವಂತೆ ಮಾಡಲಾಗಿದೆ-ಕ್ರಮ ಗುರುತಿಸಲಾಗಿದೆ ಹೊಂದಾಣಿಗೆ ವ್ಯಕ್ತಪಡಿಸಲಾಗಿದೆ-ಸತ್ಯವಾಕ್ಯವನ್ನು ಸರಿಯಾಗಿ ವಿಭಾಗಿಸುವುದು.**

ಪ್ರಸಿದ್ಧ ಶಿಲ್ಪಿಯ ಕೆಲಸವು ಪರಿಪೂರ್ಣವಾಗುವುದಕ್ಕೆ ಮೊದಲೇ ಕೆಲವು ಬುದ್ಧಿಹೀನರು ಅವನ ಜ್ಞಾನ ಮತ್ತು ನಿಪುಣತೆಯನ್ನು ಕುರಿತು ಹೇಗೆ ಅಲ್ಲಗಳೆಯುತ್ತಾರೋ ಹಾಗೆಯೇ ಕೆಲವರು ತಮ್ಮ ಅಜ್ಞಾನದಿಂದ ದೇವರ ಕಾರ್ಯವು ಇನ್ನೂ ಪರಿಪೂರ್ಣವಾಗದೆಯಿರುವಾಗಲೇ ಅದಕ್ಕೆ ತಪ್ಪಾದ ಅಭಿಪ್ರಾಯವನ್ನು ಕಲ್ಪಿಸುವವರಾಗಿರುತ್ತಾರೆ. ಆದರೆ ಕಾಲಕ್ರಮದಲ್ಲಿ ಈ ಪಾಪದಿಂದಲೇ ಮಾನವನು ಶಿಸ್ತನ್ನು ಕಲಿತು ತನ್ನ ಒಳ್ಳೇತನದಿಂದ ಕೆಟ್ಟದ್ದನ್ನು ಜಯಿಸುವನು. ಪಾಪವು ಸಂಪೂರ್ಣವಾಗಿ ಜಯಿಸಲ್ಪಟ್ಟ ಅನಂತರ ದೇವರ ಕೆಲಸವು ಪರಿಪೂರ್ಣವಾದಾಗ ಆತನ ಜ್ಞಾನ ಮತ್ತು ಶಕ್ತಿಯನ್ನು ಲೋಕವೆಲ್ಲಾ ಒಪ್ಪಿಕೊಳ್ಳುವದು ಮತ್ತು ಆತನ ಯೋಜನೆಗಳು ಆತನ ಗುಣಕ್ಕೆ ಅನುಗುಣವಾಗಿರುವುದು ಕಂಡು ಬರುತ್ತದೆ.

ದೇವರ ಯೋಜನೆಗಳೆಲ್ಲಾ ಸ್ಥಿರವಾದದ್ದು ಮತ್ತು ಆತನ ಕಾರ್ಯಗಳೆಲ್ಲಾ ಸಂಪೂರ್ಣವಾಗಿ ನೆರವೇರುವುದು ಎಂದು ಹೇಳುವಾಗ ಆತನ ಮಕ್ಕಳಾದ ನಾವು ಆತನ ಯೋಜನೆಗಳಾವುವು ಎಂಬುದನ್ನು ಕಂಡು ಕೊಳ್ಳಬೇಕು ಮತ್ತು ಅವುಗಳು ನಮಗೆ ಅನ್ವಯಿಸುತ್ತದೋ ಎಂದು ಗಮನವಿಟ್ಟು ಲಕ್ಷಿಸಬೇಕು. ಯೆಹೋವನು ತನ್ನ ಉದ್ದೇಶವನ್ನು ಯಾವ ರೀತಿಯಲ್ಲಿ ದೃಢಪಡಿಸಿರುವನು ಎಂಬುದನ್ನು ಗಮನಿಸಿರಿ. 'ಸೇನಾಧೀಶ್ವರನಾದ ಯೆಹೋವನು ಆಣೆಯಿಟ್ಟು ಹೇಳುವದೇನೆಂದರೆ ನಾನು ಸಂಕಲ್ಪಿಸಿದ್ದೇ ನೆರವೇರುವದು, ಉದ್ದೇಶಿಸಿದ್ದೇ ನಿಲ್ಲುವದು, ಖಂಡಿತ' 'ಸೇನಾಧೀಶ್ವರನಾದ ಯೆಹೋವನು ಉದ್ದೇಶ ಮಾಡಿದ್ದಾನೆ, ಅದನ್ನು ಯಾರು ವ್ಯರ್ಥಪಡಿಸುವರು?' 'ನಾನೇ ದೇವರು, ಇನ್ನು ಯಾರು ಇಲ್ಲ; ನಾನೇ ಪರಮದೇವರು, ನನಗೆ ಸರಿಸಮಾನರಿಲ್ಲ.... ನನ್ನ ಸಂಕಲ್ಪವು ನಿಲ್ಲುವದು, ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು... ನಾನು ನುಡಿದಿದ್ದೇನೆ, ಈಡೇರಿಸುವೆನು, ಆಲೋಚಿಸಿದ್ದೇನೆ, ಸಾಧಿಸುವೆನು'. ಯೆಶಾ 14 : 24-27; 46 : 9-11 ದೇವರ ಕಾರ್ಯಗಳೆಲ್ಲಾ ಎಷ್ಟೇ ರಹಸ್ಯವಾಗಿ ಕಂಡು ಬಂದರು ಆತನಲ್ಲಿ ನಂಬಿಕೆಯಿಟ್ಟಿರುವವರೆಲ್ಲರೂ ಆತನ ಯೋಜನೆಗಳೆಲ್ಲ ಕಾಲಾನುಕ್ರಮದಲ್ಲಿ ಪರಿಪೂರ್ಣವಾಗುವದು ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಅಜ್ಞಾನವೆಂಬ ಅಂಧಕಾರದಲ್ಲಿ ನಡೆಯುತ್ತಿರುವ ಮಾನವ ಜನಾಂಗವು ದೇವರ ಗುಣಾತಿಶಯಗಳನ್ನು ಕಂಡುಕೊಳ್ಳುವ ಮೊದಲು ಆತನ ಯೋಜನೆಯ ಕಾರ್ಯ ಸಾಧನೆಯನ್ನು ನಿರೀಕ್ಷಿಸಬೇಕು. ಆತನ ಸತ್ಯಮಕ್ಕಳು ನಂಬಿಕೆ ಎಂಬ ಬೆಳಕಿನಿಂದ ಈಗಿನ ಮತ್ತು ಮುಂದೆ ಸಂಭವಿಸುವ ಸಂಗತಿಗಳನ್ನು ಅರಿತುಕೊಳ್ಳಬಹುದು. ಆದುದರಿಂದ ದೇವರ ವಾಗ್ದತ್ತ, ಮಕ್ಕಳು ಆತನ ಉದ್ದೇಶ ಮತ್ತು ಯೋಜನೆಯನ್ನು ತಿಳಿಯುವುದಕ್ಕಾಗಿ ಆತನ ವಾಕ್ಯದ ಮರೆಹೋಗಬೇಕಾಗಿದೆ. ಮಾನವನನ್ನು ಕುರಿತಾದ ದೇವರ ಯೋಜನೆಯು ಮೂರು ಮಹಾಯುಗಗಳಾಗಿ ಹಂಚಿಕೆಯಾಗಿದೆ. ಅದು ಮಾನವನ ಸೃಷ್ಟಿಯಿಂದ ಪ್ರಾರಂಭವಾಗಿ ಅಂತ್ಯವಿಲ್ಲದ ಭವಿಷತ್‌ವರೆಗೂ ಹಬ್ಬಿದೆ. ಪೇತ್ರ ಮತ್ತು ಪೌಲರು ಇದನ್ನು 'ಮೂರು ಪ್ರಪಂಚಗಳು' ಎಂದು ಸಂಬೋಧಿಸಿರುವರು. ಅದನ್ನು ಕೆಳಗೆ ಚಿತ್ರಿಸಲಾಗಿದೆ.

ಈ ಮೂರು ಮಹಾಯುಗಗಳು ದೈವ ಇಚ್ಛೆಯನ್ನು ಪ್ರಕಟಿಸುವಂಥವಾಗಿದೆ. ಮೊದಲನೆಯ ಯುಗವು ಮಾನವನ ಸೃಷ್ಟಿಯಿಂದ ಜಲಪ್ರಳಯದವರೆಗೆ. ಜಲಪ್ರಳಯಕ್ಕೆ ಮೊದಲು ಲೋಕವು ದೇವದೂತರ ಆಳ್ವಿಕೆಯಲ್ಲಿತ್ತು. ಇದನ್ನೇ ಪೇತ್ರನು ' ಆ ಕಾಲದಲ್ಲಿದ್ದ ಲೋಕ' ಎಂದು ಕರೆದಿರುವನು. 2 ಪೇತ್ರ 3 : 6.

ಪ್ರಪಂಚ ಎಂದು ಕರೆಯಲ್ಪಟ್ಟಿರುವ ಮಹಾಯುಗಗಳು.




ಎರಡನೇ ಯುಗವು ಜಲಪ್ರಳಯದಿಂದ ದೇವರ ರಾಜ್ಯಸ್ಥಾಪನೆ ಯಾಗುವವರೆಗೆ. ಈ ಲೋಕವು

ಇಹಲೋಕಾಧಿಪತಿಯಾದ ಸೈತಾನನ ಆಳ್ವಿಕೆಗೆ ಒಳಪಟ್ಟಿದೆ ಮತ್ತು ಇದನ್ನು 'ಕೆಟ್ಟದಾಗಿರುವ ಈಗಿನ ಪ್ರಪಂಚ' ಎಂದು ಕರೆಯಲಾಗಿದೆ. ಗಲಾತ್ಯ 1 : 4 ; 2 ಪೇತ್ರ 3 : 7

ಮೂರನೆ ಯುಗವು ಅಂತ್ಯವಿಲ್ಲದ ಲೋಕ. 'ಯೆಶಾ 45 : 17 ಅದು ದೇವರ ಆಳ್ವಿಕೆಗೆ ಒಳಪಟ್ಟಿರುವ ದೇವರ ರಾಜ್ಯವಾಗಿದೆ'. ಮುಂದಣ ಸಾಮ್ರಾಜ್ಯ ಅವುಗಳಲ್ಲಿ ನೀತಿಯು ವಾಸವಾಗಿರುವದು' ಇಬ್ರಿ 2 : 5 ; 2 ಪೇತ್ರ 3 :13.

ಈ ಮೂರು ಯುಗಗಳಲ್ಲಿ ದೇವದೂತರ ಆಳ್ವಿಕೆಗೆ ಒಳಪಟ್ಟಿದ್ದ ಮೊದಲನೆ ಯುಗವು ನಾಶವಾಗಿ ಹೋಯಿತು. ಸೈತಾನನ ಆಳ್ವಿಕೆಗೆ ಒಳಪಟ್ಟಿರುವ ಎರಡನೇ ಯುಗವು ದುಷ್ಟತನದಿಂದ ತುಂಬಿರುವ ಈಗಿನ ಪ್ರಪಂಚ. ಮುಂದೆ ಬರುವ ಯುಗವು ನೀತಿವಂತರ ಯುಗ ವಾಗಿರುತ್ತದೆ. ಅಲ್ಲಿ ಭೂಲೋಕದ ಎಲ್ಲಾ ಸಂತತಿಯುವರು ಆಶೀರ್ವಾದವನ್ನು ಹೊಂದುವರು.

ಕಡೇ ಯುಗಗಳನ್ನು ಕುರಿತು ವಿಶೇಷ ಸಂಗತಿಗಳನ್ನು ತಿಳಿಸಲಾಗಿದೆ ಮತ್ತು ಅವುಗಳನ್ನು ಕುರಿತಾದ ಹೇಳಿಕೆಯು ಒಂದಕ್ಕೊಂದು ವಿರೋಧವಾಗಿದೆ. ಎರಡನೇ ಕಾಲವನ್ನು ಈಗಿನ ಕೆಟ್ಟಲೋಕ ಎಂದು ಕರೆಯಲಾಗಿದೆ. ಯಾಕೆಂದರೆ ಈ ಲೋಕದಲ್ಲಿ ಒಳ್ಳೆಯದೊಂದು ಇಲ್ಲ. ಕೆಟ್ಟತನವೇ ಮೇಲ್ಮೈಯಾಗಿದೆ. ಈಗ ಅಹಂಕಾರಿಗಳನ್ನು ಧನ್ಯರೆಂದು ಕೊಂಡಾಡಬೇಕಾಗಿ ಬಂತು; ಹೌದು ದುಷ್ಕರ್ಮಿಗಳು ಏಳಿಗೆಗೆ ಬಂದಿದ್ದಾರೆ. ದೇವರನ್ನು ಪರೀಕ್ಷಿಸಿದರೂ ಸುರಕ್ಷಿತರಾಗಿದ್ದಾರೆ. 'ಮಲಾಕಿ 3 : 15 ಮೂರನೇ ಯುಗವು ಮುಂದೆ ಬರುವಂಥ ಸಾಮ್ರಾಜ್ಯ ಅವುಗಳಲ್ಲಿ ನೀತಿಯು ವಾಸವಾಗಿರುವದು. ಅಲ್ಲಿ ದುಷ್ಟತನವು ದಬ್ಬಾಳಿಕೆ ನಡೆಸಲು ಸಾಧ್ಯವಿಲ್ಲ. ಸಾವಿರವರುಷದಲ್ಲಿ ಪಾಪವು ಕ್ರಮೇಣವಾಗಿ ನಾಶವಾಡಲ್ಪಡುತ್ತದೆ. ಇನ್ನು ಪಾಪಕ್ಕೆ ದೊರತನವಿರುವುದಿಲ್ಲ. ಆದರೆ ಅಲ್ಲಿ 'ನೀತಿವಂತರು ವೃದ್ಧಿಯಾಗುವರು' ಕೀರ್ತ 72 : 7 'ಒಪ್ಪಿ ವಿಧೇಯರಾದರೆ ದೇಶದ ಮೇಲನ್ನು ಅನುಭವಿಸುಸುವಿರಿ' ಯೆಶಾ 1 : 19 ಮತ್ತು 'ಕೆಡುಕರು ತೆಗೆದು ಹಾಕಲ್ಪಡುವರು' ಕೀರ್ತ 37 : 9

ಆದುದರಿಂದ ಮುಂದಿನ ಯುಗವು ಈಗಿನದಕ್ಕಿಂತ ಸಂಪೂರ್ಣವಾಗಿ ಬೇರೆಯಾಗಿರುತ್ತದೆ. ಈ ಎರಡು ಯುಗಗಳಿಗೆ ಏಕೆ ವ್ಯತ್ಯಾಸವಿರಬೇಕು ಎಂದು ನಮ್ಮ ಕರ್ತನ ಮಾತು ತೋರಿಸುತ್ತದೆ. ಯಾಕೆಂದರೆ ಮುಂದೆ ಬರುವ ಯುಗದಲ್ಲಿ ಕ್ರಿಸ್ತನು ರಾಜನಾಗಿರುವುದರಿಂದ ಅಲ್ಲಿ ನೀತಿ ಮತ್ತು ಸತ್ಯವು ಅಭಿವೃದ್ಧಿ ಹೊಂದುವದು. ಈಗಿನ ಯುಗಕ್ಕೆ ಸೈತಾನನು ಅಧಿಪತಿಯಾಗಿರುವುದರಿಂದ ಪಾಪ ಮತ್ತು ದುಷ್ಟತನವು ಕಂಡು ಬರುತ್ತದೆ. ಯೇಸು ಸೈತಾನನ ವಿಷಯದಲ್ಲಿ 'ಅವನಿಗೆ ಸಂಬಂಧಪಟ್ಟದು ಯಾವದೊಂದು ನನ್ನಲ್ಲಿಲ್ಲ' ಎಂದು ಹೇಳಿರುವನು. ಯೋಹಾ 14 : 30 ; 2 ಕೊರಿ 12 : 7 ಆದುದರಿಂದ ಆತನ ಹಿಂಬಾಲಕರಲ್ಲಿ ಯಾವ ಆಸಕ್ತಿಯೂ ಇಲ್ಲ. ಆದರೆ ಯೇಸುವಿನ ಹಿಂಬಾಲಕರಿಗೆ ಸೈತಾನನು ಅನೇಕ ತೊಂದರೆಗಳನ್ನು ಉಂಟುಮಾಡುತ್ತಿರುವನು. ನೀತಿವಂತರು ಹಿಂಸೆಗಳನ್ನು ಅನುಭವಿಸುವರು. ದುಷ್ಟನು ಹಸುರಾಗಿ ಬೆಳೆದ ಮರದಂತೆ ವಿಸ್ತರಿಸಿಕೊಳ್ಳುವನು 2 ತಿಮೋ 3 : 12, ಕೀರ್ತ 37 : 35

'ನನ್ನ ರಾಜ್ಯವು ಈ ಲೋಕದ್ದಲ್ಲ' ಎಂದು ಯೇಸು ಹೇಳಿರುವನು. ಆತನ ರಾಜ್ಯವು ಬರುವತನಕ ಕ್ರಿಸ್ತನು ಈ ಲೋಕದಲ್ಲಿ ತನ್ನ ಆಡಳಿತವನ್ನು ನಡೆಸುವುದಿಲ್ಲ. ಇದರಿಂದಲೇ ಯೇಸು ನಮಗೆ 'ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಭೂಲೋಕದಲ್ಲಿ ನೆರವೇರಲಿ' ಎಂದು ಪ್ರಾರ್ಥಿಸಲು ಕಲಿಸಿದನು. ಸೈತಾನನು ಈ 'ಅಂಧಕಾರದ ಲೋಕಾಧಿಪತಿಯಾಗಿರುವನು', ಕಾರ್ಗತ್ತಲು ಲೋಕವನ್ನು ಆವರಿಸಿಕೊಂಡಿದೆ. ಸೈತಾನನು ಅವಿಧೇಯ ಮಕ್ಕಳ ಹೃದಯವನ್ನು ಆಕ್ರಮಿಸಿಕೊಂಡು ತನ್ನ ಕಾರ್ಯ ಸಾಧಿಸುತ್ತಾ ಅವರನ್ನಾಳುತ್ತಿರುವನು. ಎಫೆಸ 2: 2, 6 : 12.

ಅಂಧಕಾರದಲ್ಲಿ ನರಳುತ್ತಿರುವ ಮಾನವನ ರಕ್ಷಣೆಗಾಗಿ ಒಂದು ಪ್ರಾಮುಖ್ಯವಾದ ದೇವರ ಯೋಜನೆ ಇರಲೇ ಬೇಕು. ಆದರೆ ಕಾಲವು ಇನ್ನೂ ಪರಿಪೂರ್ಣವಾಗದೇ ಇರುವುದರಿಂದ ಆ ಯೋಜನೆಯು ಇನ್ನೂ ಜಾರಿಗೆ ಬಂದಿಲ್ಲ. ಸೈತಾನನ ದುಷ್ಟಕಾರ್ಯಗಳನ್ನು ಲಯಮಾಡಿ ಕ್ರಿಸ್ತನ ನೀತಿ ರಾಜ್ಯದ ಸ್ಥಾಪನೆಯೇ ಈ ಬದಲಾವಣೆಯ ಮುಖ್ಯ ಗುರಿ. ಈಗ ಸೈತಾನನ ಅಧೀನದಲ್ಲಿರುವ ಈ ಲೋಕದ ರಾಜ್ಯಗಳೆಲ್ಲವೂ ಕರ್ತನ ಮತ್ತು ಆತನ ಅಭಿಷಕ್ತನ ರಾಜ್ಯವಾಗಿ ಮಾರ್ಪಾಡಾಗುವದು. ಪ್ರಕ 11 : 15 ಈ ಮಾರ್ಪಾಡು ಮಹಾ ಸಂಕಟದಿಂದ ಸಂಭವಿಸುವದು. ಇದನ್ನು ಕುರಿತು ಯೇಸು ಹೀಗೆ ಹೇಳಿರುವನು 'ಒಬ್ಬನು ಮೊದಲು ಬಲಿಷ್ಠನನ್ನು ಕಟ್ಟಿ ಹಾಕದೆ ಆ ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲಿದುಕೊಳ್ಳುವದಕ್ಕಾಗುವುದಿಲ್ಲ ; ಕಟ್ಟಿ ಹಾಕಿದ ಮೇಲೆ ಅವನ ಮನೆಯನ್ನು ಸುಲಿದುಕೊಂಡಾನು. ಮಾರ್ಕ 3 : 22–27 ಆದುದರಿಂದ ದೇವರ ರಾಜ್ಯದ ನೀತಿ ಮತ್ತು ಸಮಾಧಾನ ಸ್ಥಾಪನೆಯಾಗುವ ಮೊದಲು ಬಲಿಷ್ಠನಾದ ಸೈತಾನನ್ನು ಕಟ್ಟಿ ಸೆರೆಗೆ ಹಾಕಬೇಕು ಹೀಗೆ ಸೈತಾನನ್ನು ಬಂಧಿಸುವುದೇ ಹೊಸ ಯುಗದ ಮೊದಲನೆಯ ಕೆಲಸ ಪ್ರಕ 20 : 2

ಇಲ್ಲಿ ಒಂದು ವಿಷಯುವನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಎಲ್ಲಾ ಯುಗಗಳ ಹಂಚಿಕೆಗೆ

ಈ ಭೂಮಿಯೇ ಆಧಾರ. ವರ್ಷಗಳು ಕಳೆದು ಯುಗಗಳ ಬದಲಾವಣೆಯಾಗುತ್ತಿದ್ದರೂ ಭೂಮಿಯು ಸದಾ ಕಾಲ ಇರುವುದು. ಭೂಮಿಯಾದರೋ ಶಾಶ್ವತವಾಗಿ ನಿಲ್ಲುವುದು' ಪ್ರಸಂಗಿ 1 : 4 ಇದನ್ನೇ ಪೇತ್ರನು ನೂತನಾಕಾಶಮಂಡಲ ಮತ್ತು ನೂತನ ಭೂಮಂಡಲ ಎಂದು ಸಂಬೋಧಿಸಿರುವನು. ಆಕಾಶವೆಂದರೆ ಆತ್ಮೀಯ ಆಡಳಿತವನ್ನೂ ಭೂಲೋಕವೆಂದರೆ ಮಾನವರ ಆಡಳಿತವನ್ನೂ ಸೂಚಿಸುತ್ತದೆ. ಆದುದರಿಂದ ಮೊದಲನೆ ಲೋಕವು ತನ್ನ ಕೆಲಸವನ್ನು ನಡೆಸಿ ಜಲಪ್ರಳಯದಿಂದ ನಾಶವಾಯಿತು. ಅಂದರೆ ಭೂಮಿಯ ಮೇಲಿದ್ದ ಮಾನವ ಮತ್ತು ಅವನ ಕೆಲಸಗಳು ಲಯ ಮಾಡಲ್ಪಟ್ಟವೇ ಹೊರತು ಆಕಾಶ ಮತ್ತು ಭೂಮಿ ಹಾಗೆ ಉಳಿದು ಕೊಂಡಿತ್ತು. ಅದೇ ರೀತಿ ಈ ಸೈತಾನನ ರಾಜ್ಯವು ಅಂದರೆ ಈಗಿನ ಸರಕಾರ ಮತ್ತು ಸಮಾಜ ಮಹಾ ಘೋಷದೊಡನೆ ಬೆಂಕಿಯಿಂದ ನಾಶವಾಗುವದು. ಜನಾಂಗವು ಉಂಟಾದಂದಿನಿಂದ ಸಂಭವಿಸದಂಥ ಸಂಕಟವು ಸಂಭವಿಸುವದು. ಬಂಧಿತನಾದ ಸೈತಾನನು ಪುನಃ ತನ್ನ ರಾಜ್ಯವನ್ನು ಸ್ಥಾಪಿಸಲು ಹೆಣಗಾಡುವನು. ಈಗಿನ ವಾಯುಮಂಡಲದಲ್ಲಿರುವ ದುಷ್ಟಶಕ್ತಿಗಳು ನಾಶವಾಗಿ ಕ್ರಿಸ್ತನೂ ಆತನ ಸಭೆಯೂ ಆತ್ಮೀಯ ರೀತಿಯಲ್ಲಿ ಆಳ್ವಿಕೆ ಮಾಡುತ್ತಾರೆ. ಇದೇ ನೂತನ ಆಕಾಶ ಮಂಡಲ. ಈಗಿನ ಭೂಮಿಯ ಮೇಲೆ ಸೈತಾನನ ಅಧೀನದಲ್ಲಿರುವ ಮಾನವ ಸಮಾಜವು ಬೆಂಕಿಯಿಂದ ಉರಿದು ನಾಶವಾಗುವದು. 'ಕರ್ತನ ದಿನವು ಒಲೆಯಂತೆ ಉರಿಯುತ್ತಿದೆ' ಮಲಾಕಿ 4 : 1 ಆಗ ನೂತನ ಭೂಮಂಡಲವು ಸ್ಥಾಪಿತವಾಗುವದು. ಕ್ರಿಸ್ತನಿಗೆ ಸರಿ ಹೊಂದುವ ಸಮಾಜವು ಸ್ಥಾಪಿತವಾಗುವದು. ನೀತಿ ಸಮಾಧಾನ ಮತ್ತು ಪ್ರೀತಿ ಮನುಷ್ಯರಲ್ಲಿ ವಾಸಿಸುವದು. ದೇವರ ರಾಜ್ಯದಲ್ಲಿ ಎಲ್ಲರಿಗೂ ಸಮಾನವಾದ ನ್ಯಾಯವಿರುವುದು.

ಪೌಲನಿಗೆ ಮುಂದಿನ ಲೋಕದ ಸ್ಥಿತಿಗತಿಯನ್ನು ನೋಡಲು ಅವಕಾಶ ದೊರಕಿತು. ಕ್ರಿಸ್ತನ ಆತ್ಮೀಕ ರಾಜ್ಯದಲ್ಲಿರುವ ಸಂಗತಿಗಳನ್ನು ಅವನು ನೋಡಿದನು. ಆದರೆ ಅದನ್ನು ಬಯಲು ಪಡಿಸುವ ಶಕ್ತಿ ಅವನಲ್ಲಿರಲಿಲ್ಲ 2 ಕೊರಿ 12 : 2–4. ಮುಂದೆ ಯೋಹಾನನಿಗೂ ಸಹ ಇದೇ ದರ್ಶನವಾಯಿತು. ಕಾಲವು ಸಮೀಪವಾದಾಗ ತಾನು ನೋಡಿದ್ದನ್ನು ಅರ್ಥವಾಗುವ ಹಾಗೆ ಪ್ರಕಟಿಸುವ ಅಪ್ಪಣೆ ಅವನಿಗೆ ದೊರೆಯಿತು. ಪತ್ಮೋಸ್ ದ್ವೀಪದಲ್ಲಿ ಕರ್ತನು ಯೋಹಾನನಿಗೆ ಕೊಟ್ಟ ದರ್ಶನದಲ್ಲಿ ಅವನು ಈಗಿನ ಕೆಟ್ಟ ಲೋಕವು ನಾಶವಾಗಿ ಸೈತಾನನು ಬಂಧಿತನಾಗಿ ಕ್ರಿಸ್ತನ ಯುಗವು ಪ್ರಾರಂಭವಾಗಿ ನೂತನಾಕಾಶಮಂಡಲ ಮತ್ತು ನೂತನ ಭೂಮಂಡಲವು ಉಂಟಾಗಿ ಕ್ರಿಸ್ತನು ಆಡಳಿತ ನಡೆಸುವುದನ್ನು ಕಂಡನು. ಪ್ರಕಟ 21 : 1

**ಯುಗಗಳು ಅಥವಾ ವಿಭಾಗಗಳು**




ಮಹಾಯುಗಗಳು ಯಾವ ರೀತಿಯಲ್ಲಿ ವಿಂಗಡವಾಗಿದ್ದವು ಎಂಬುದನ್ನು ಕೆಳಗೆ ವಿವರಿಸಲಾಗಿದೆ.

ಮೊದಲನೆ ಯುಗವು ವಿವಿಧ ಭಾಗಗಳಾಗಿ ವಿಂಗಡವಾಗಿರಲಿಲ್ಲ. ಆ ಕಾಲದಲ್ಲಿ ದೇವರು ಮಾನವರೊಂದಿಗೆ ವ್ಯವಹರಿಸುತ್ತಿದ್ದ ಕ್ರಮದಲ್ಲಿ ಯಾವ ಬದಲಾವಣೆಯೂ ಉಂಟಾಗಲಿಲ್ಲ ಆದಾಮನು ಪಾಪಕ್ಕೆ ಬಿದ್ದಂದಿನಿಂದ ಪ್ರಳಯದವರೆಗೆ. ಮನುಷ್ಯರು ಅನುಸರಿಸಲು ಧರ್ಮಶಾಸ್ತ್ರಗಳನ್ನು ದೇವರು ಸಹಜವಾಗಿ ಕೊಟ್ಟನು. ಆದರೆ ಮಾನವನು ಪಾಪ ಮಾಡಿದ ಅನಂತರ ಅವನನ್ನು ತನ್ನ ಸ್ವಯಿಚ್ಛೆಗೆ ಬಿಟ್ಟು ಬಿಟ್ಟನು. ಇದರಿಂದ ಮಾನವನ ಪಾಪ ಹೆಚ್ಚಾಗಿ ಅವನು ನಾಶದ ದಾರಿಯನ್ನು ಹಿಡಿದನು. ಪಾಪವು ಹೆಚ್ಚಿದಂತೆಲ್ಲಾ ದೇವರು ಮಾನವನನ್ನು ಎಚ್ಚರಿಸಿದನು. ಇದರಿಂದ ಅವನಿಗೆ ತನ್ನ ಪಾಪದ ಅರಿವು ಉಂಟಾಗಿ ದೇವರ ಕಡೆಗೆ ತಿರುಗಿಕೊಳ್ಳುವ ಅವಕಾಶಕೊಟ್ಟನು. ಆದರೆ ಮಾನವನು ಆ ಅವಕಾಶವನ್ನು ಕಳೆದುಕೊಂಡಿದ್ದರಿಂದ ಆ ಯುಗವು ಪ್ರಳಯದಿಂದ ನಾಶವಾಯಿತು. ನಂಬಿಗಸ್ತನಾದ ನೋಹನು ಮತ್ತು ಅವನ ಕುಟುಂಬದವರನ್ನು ಬಿಟ್ಟು ಉಳಿದವರೆಲ್ಲಾ ನಾಶವಾದರು. ಇದರಿಂದ ಮೊದಲನೆ ಯುಗವು ಪಾಪದ ಭಯಂಕರವಾದ ಫಲಗಳನ್ನು ಮಾನವನು ತಿಳಿದುಕೊಳ್ಳುವುದಕ್ಕೆ ಸಹಾಯಮಾಡಿದ್ದಲ್ಲದೆ ದುಃಖ ಸಂಕಟಗಳಿಂದ ಕಳೆದುಕೊಂಡದ್ದನ್ನು ಪುನಃ ಪಡೆಯಬೇಕಾದರೆ ದೇವರ ಮರೆಹೋಗಬೇಕು ಎಂಬುದನ್ನು ಕಂಡುಕೊಂಡನು.

ಈಗಿನ ಎರಡನೇ ಲೋಕವು ಮೂರು ಭಾಗಗಳಾಗಿ ವಿಂಗಡವಾಗಿದೆ. ಒಂದೊಂದು ಭಾಗವು ಕೆಟ್ಟದಾದ ಪ್ರತಿಯೊಂದನ್ನೂ ತೆಗೆದುಹಾಕಿ ಮೇಲಕ್ಕೇರುವ ಮೆಟ್ಟಲುಗಳಾಗಿವೆ. ಒಂದೊಂದು ಭಾಗವು ಮುಗಿದ ಹಾಗೆಲ್ಲ ದೇವರ ಯೋಜನೆಯು ಪರಿಪೂರ್ಣವಾಗುವ ಕಾಲವು ಹತ್ತಿರವಾಗುತ್ತಿದೆ ಎಂದು ಕಂಡುಕೊಳ್ಳಬಹುದು.

ಮುಂದೆ ಬರುವಂಥ ಮೂರನೇ ಯುಗವು ಕ್ರಿಸ್ತನ ಎರಡನೇ ಬರೋಣದ ಕಾಲವಾಗಿದೆ. ಅದು ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ಕಾಲ ಅಂದರೆ ಸಮಸ್ತವನ್ನು ಸರಿಪಡಿಸುವ ಕಾಲ. ಆದಾದನಂತರ ಮುಂದೆ ಬರುವ ಯುಗಗಳ ಕಾಲವಾಗಿದೆ.

ಈಗಿರುವ ಲೋಕದ ಮೊದಲನೆಯ ಭಾಗವನ್ನು ಪಿತೃಗಳ ಕಾಲ ಎಂದು ಕರೆಯುತ್ತೇವೆ. ಆ ಕಾಲದಲ್ಲಿ ದೇವರು ಕೆಲವು ವ್ಯಕ್ತಿಗಳೊಂದಿಗೆ ಮಾತ್ರ ತನ್ನ ವ್ಯವಹಾರವನ್ನು ಇಟ್ಟು ಕೊಂಡಿದ್ದನು. ಇತರ ಜನಾಂಗದವರು ತಿರಸ್ಕೃತರಾಗಿದ್ದರು. ಪಿತೃಗಳಾದ ನೋಹ, ಅಬ್ರಹಾಮ್, ಇಸಾಕ ಮತ್ತು ಯಾಕೋಬ ಇವರು ದೇವರ ಕೃಪೆಗೆ ಪಾತ್ರರಾಗಿದ್ದು ಆತನ ವಿಶೇಷ ವಾಗ್ದಾನ ಮತ್ತು ಆಶೀರ್ವಾದವನ್ನು ಹೊಂದ್ದಿದವರಾಗಿದ್ದರು. ಯಾಕೋಬನ ಮರಣಾನಂತರ ದೇವರು ಮನುಷ್ಯರೊಂದಿಗೆ ಇಟ್ಟು ಕೊಂಡಿದ್ದ ವ್ಯವಹಾರವು ನಿಂತು ಹೋಯಿತು. ಯಾಕೋಬನ ಮರಣಾ ನಂತರ ಅವನ ಸಂತತಿಯವರನ್ನು 'ಇಸ್ರಾಯೇಲ್ಯರ ಹನ್ನೆರಡು ಕುಲಗಳು' ಎಂದು ಕರೆಯಲಾಯಿತು. ಇವರು ದೇವರಿಂದ ಆರಿಸಲ್ಪಟ್ಟ ವಿಶೇಷ ಜನರು. ಇವರು ಯಜ್ಞ ಹೋಮಗಳಿಂದ ಪವಿತ್ರ ಜನರಾಗಿದ್ದು ದೇವರ ಕೃಪೆಗೆ ಪಾತ್ರರಾಗಿದ್ದರು.

ದೇವರ ಯೋಜನೆಯ ಪ್ರಕಾರ ನೇಮಿತವಾಗಿದ್ದ ಎರಡನೇ ಕಾಲವು ಇಲ್ಲಿಂದ ಪ್ರಾರಂಭವಾಗಿ ಕ್ರಿಸ್ತನ ಮರಣದಲ್ಲಿ ಮುಕ್ತಾಯವಾಗುತ್ತದೆ. ಇದನ್ನೇ ನಾವು ಯೆಹೂದ್ಯರ ಕಾಲ ಎಂದು ಕರೆಯುತ್ತೇವೆ. ಈ ಯುಗದಲ್ಲಿ ದೇವರು ಇಸ್ರಾಯೇಲ್ ಜನಾಂಗದವರನ್ನು ವಿಶೇಷವಾಗಿ ಆಶೀರ್ವದಿಸಿದನು. ದೇವರು ತನ್ನ ಜನರಿಗೆ ಧರ್ಮ ಶಾಸ್ತ್ರವನ್ನು ಕೊಟ್ಟನು. ಅವರೊಂದಿಗೆ ವಿಶೇಷವಾದ ಒಡಂಬಡಿಕೆಯನ್ನು ಮಾಡಿಕೊಂಡನು. ದೇವದರ್ಶನದ ಗುಡಾರವನ್ನು ಕೊಟ್ಟನು. ಅದರ ಅತಿ ಪರಿಶುದ್ಧ ಸ್ಥಳವು ಯೆಹೋವನ ಪ್ರಭೆಯಿಂದ ತುಂಬಿತ್ತು. ಯೆಹೋವನು ಅಲ್ಲಿದ್ದು ಕೊಂಡು ಅವರ ನಾಯಕನೂ ರಾಜನೂ ಆಗಿದ್ದನು. ಇಸ್ರಾಯೇಲ್ ಜನಾಂಗದವರು ದೇವರ ಮಾರ್ಗವನ್ನು ಬಿಟ್ಟು ನಡೆದದ್ದರಿಂದ ಅವರನ್ನು ಎಚ್ಚರಿಸಲು ಮೊದಲು ಪ್ರವಾದಿಗಳನ್ನೂ ಕಡೆಯಲ್ಲಿ ತನ್ನ ಒಬ್ಬನೇ ಮಗನನ್ನೂ ಕಳುಹಿಸಿದನು. ಯೇಸು ಇತರ ಜನಾಂಗದವರ ಬಳಿಗೆ ಹೋಗದೆ ಇಸ್ರಾಯೇಲ್ ಜನಾಂಗದವರ ಮಧ್ಯದಲ್ಲಿದ್ದು ಕೊಂಡು ಬೋಧಿಸುತ್ತಾ ಅದ್ಭುತ ಕಾರ್ಯಗಳನ್ನು ಮಾಡುತ್ತಿದ್ದದ್ದು ಮಾತ್ರವಲ್ಲದೆ ತನ್ನ ಶಿಷ್ಯರನ್ನು ಸಹ ಅನ್ಯ ಜನಾಂಗದವರ ಬಳಿಗೆ ಹೋಗ ಗೊಡಿಸಲಿಲ್ಲ. ಯೇಸು ತನ್ನ ಶಿಷ್ಯರಿಗೆ ಕೊಟ್ಟ ಅಪ್ಪಣೆಯೆಂದರೆ 'ಅನ್ಯ ಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದ ಬಳಿಗೆ ಹೋಗಿರಿ' ಮತ್ತಾ 10 : 5–6 ಆತನು ಪುನಃ ಹೇಳಿದ್ದೇನೆಂದರೆ 'ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲ್ಯರ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ.' ಮತ್ತಾ 15:24 ಆದರೆ ಯಾವಾಗ ಯೆಹೂದ್ಯರು ಯೇಸುವನ್ನು ತಿರಸ್ಕರಿಸಿ ಶಿಲುಬೆಗೆ ಹಾಕಿದರೋ ಆಗಲೇ ಅವರಿಗಿದ್ದ ವಾಗ್ದಾನವು ತಪ್ಪಿ ಹೋಯಿತು. ಯೇಸು ಶಿಲುಬೆಯ ಮರಣ ಹೊಂದುವ ಐದು ದಿನಕ್ಕೆ ಮೊದಲು 'ನೋಡಿರಿ, ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ' ಎಂದು ಹೇಳಿ ಅವರ ಕೈ ಬಿಟ್ಟನು. ಮತ್ತಾ 23 : 38.

ಯೇಸುವಿನ ಮರಣಾನಂತರ ಒಂದು ಹೊಸ ಯುಗವು ಪ್ರಾರಂಭವಾಯಿತು ಕ್ರೈಸ್ತ ಯುಗ ಅಥವಾ ಸುವಾರ್ತಾಕಾಲ. ಈ ಕಾಲದಲ್ಲಿ ಯೆಹೂದ್ಯರಿಗಲ್ಲದೆ ಅನ್ಯ ಜನಾಂಗದವರಿಗೂ ಸುವಾರ್ತೆಸಾರಬೇಕೆಂಬ ಅಪ್ಪಣೆಯಾಯಿತು. ಯಾಕೆಂದರೆ ಯೇಸು ಕ್ರಿಸ್ತನು ದೇವರ ಕೃಪೆಯಿಂದ ಎಲ್ಲರಿಗಾಗಿ ಮರಣವನ್ನನುಭವಿಸಿದನು. ಈ ಸುವಾರ್ತಾ ಯುಗದಲ್ಲಿ ಯಾರ್‍ಯಾರು ಯೇಸುಕ್ರಿಸ್ತನನ್ನು ತಮ್ಮ ರಕ್ಷಕನೆಂದು ಅಂಗೀಕರಿಸಿ ಆತನ ಹೆಜ್ಜೆಜಾಡಿನಲ್ಲಿ ನಡೆಯುತ್ತಾರೋ ಅಂಥವರಿಗೆ ಮಾತ್ರ ವಿಶೇಷ ವಾಗ್ದಾನಗಳ ಕೃಪೆಯನ್ನು ಕೊಡಲಾಗಿದೆ. ಸುಮಾರು ಹತ್ತೊಂಬತ್ತು ಶತಮಾನಗಳಿಂದ ಸುವಾರ್ತೆಯನ್ನು ಲೋಕದ ಅನೇಕ ಭಾಗಗಳಲ್ಲಿ ಹರಡಲಾಗಿದೆ. ಪ್ರತಿ ರಾಷ್ಟ್ರದಲ್ಲೂ ಸುವಾರ್ತಾ ಸೇವೆಯು ನಡೆದಿದೆ. ಇದು ಜನಾಂಗಗಳನ್ನು ಮತಾಂತರ ಮಾಡುವ ಕಾರ್ಯವಲ್ಲ. ಯೇಸು ಮುಂತಿಳಿಸಿದಂತೆ ಲೋಕದ ಸರ್ವಜನಾಂಗದವರಿಂದ ಒಂದು ಚಿಕ್ಕ ಹಿಂಡನ್ನು ಆರಿಸಿಕೊಳ್ಳಲಾಗಿದೆ. ಲೂಕ 12 : 32 ಈ ಯುಗವು ಕಳೆದು ಮುಂದೆ ಬರುವಂಥ ಯುಗದಲ್ಲಿ ದೇವರು ತನ್ನ ರಾಜ್ಯದಲ್ಲಿ ಈ ಚಿಕ್ಕ ಹಿಂಡಿಗೆ ಆಡಳಿತ ನಡೆಸುವ ಅಧಿಕಾರವನ್ನು ಕೊಡುವನು. ಮೂರನೇ ಯುಗದ ಪ್ರಾರಂಭದಿಂದ ಈಗಿನ ಕೆಟ್ಟ ಲೋಕವು ಅಳಿದು ಹೋಗುತ್ತದೆ. ದೇವರ ಯೋಜನೆಗಳೆಲ್ಲಾ ಒಂದೇ ಗುರಿಯಿಂದ ಸ್ಥಾಪಿತವಾಗಿದೆ. ಅದು ಎಂದಿಗೂ ಸ್ವಲ್ಪವಾದರೂ ಬದಲಾವಣೆ ಹೊಂದದೆ ದೇವರು ನೇಮಿಸಿರುವ ಕಾಲಕಾಲಕ್ಕೆ ತಕ್ಕಂತೆ ನಡೆದುಕೊಂಡು ಹೋಗುತ್ತಾ ಇದೆ. ಸೈತಾನನ ಯುಗದ ಸಮಾಪ್ತಿಯೇ ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯ ಪ್ರಾರಂಭ. ಈ ಯುಗದಲ್ಲಿ ಸೈತಾನನ್ನು ಬಂಧಿಸಿ ಅವನ ಪ್ರಾಬಲ್ಯವನ್ನು ಮುರಿಯಲಾಗುತ್ತದೆ. ಮುಂದೆ ಬರುವ ಯುಗದಲ್ಲಿ ನೀತಿಯು ವಾಸಿಸುವದು (Millennial) 'ಮಿಲೆನಿಯಮ್' ಅಂದರೆ ಸಾವಿರ ವರ್ಷ ಇದನ್ನೇ ಪ್ರಕ 20 : 4 ರಲ್ಲಿ ತಿಳಿಸಲಾಗಿದೆ. ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯು ಮುಂದೆ ಬರುವ ಯುಗದ ಮೊದಲನೆ ಕಾಲವಾಗಿದೆ. ದೇವರು ಮಾನವರ ಕಣ್ಣೀರನ್ನೆಲ್ಲಾ ಒರೆಸಿ, ಆದಾಮನು ಕಳೆದುಕೊಂಡ ಸಮಸ್ತವನ್ನೂ ಸರಿಪಡಿಸುವ ಕಾಲವಾಗಿದೆ. ಅ.ಕೃ 3 : 19–21 ಇದು ಆಶೀರ್ವಾದವನ್ನು ಹೊಂದುವ ಕಾಲವಾಗಿದೆ. ಅಲ್ಲಿ ಸಾವು, ನೋವು, ಆಳುವಿಕೆ, ದುಃಖ

ಇವುಗಳೊಂದೂ ಇರುವುದಿಲ್ಲ. ಹಿಂದಿನವುಗಳೆಲ್ಲವು ಅಳಿಸಿ ಹೋಗುತ್ತದೆ. ಪ್ರಕ 21 : 4 ಮುಂದಿನ ಯುಗಗಳ ವಿಷಯವಾಗಿ ದೇವರು ಪ್ರಕಟಿಸದೇ ಇರುವುದರಿಂದ ಇಷ್ಟಕ್ಕೇ ನಿಲ್ಲಿಸಬೇಕಾಗಿದೆ.

ನಾವು ಈಗ ದೇವರ ಯೋಜನೆಯ ಒಂದು ರೂಪವನ್ನು ಅಥವಾ ಮೇಲ್ಮೈಯನ್ನು ನೋಡಿದ್ದೇವೆ. ಇದನ್ನು ಇನ್ನೂ ಆಳವಾಗಿ ಅಭ್ಯಸಿಸಿದರೆ ಅವುಗಳಲ್ಲಿನ ಹೊಂದಾಣಿಕೆ, ಕ್ರಮ ಮತ್ತು ಸೌಂದರ್ಯಗಳನ್ನು ಕಂಡುಕೊಳ್ಳಬಹುದು. ದೇವರ ಯೋಜನೆಯ ಪ್ರಕಾರ ಪ್ರತಿಯೊಂದು ಯುಗವೂ ಪರಿಪೂರ್ಣವಾಗಿ ಸಮಾಪ್ತಿಯಾಗಿದೆ. ಯೋಜನೆಯು ಮುಂದುವರಿಯುವಂಥಾದ್ದು. ಮುಂದುವರೆದಂತೆಲ್ಲಾ ಕಾಲಕಾಲಕ್ಕೆ ದೇವರ ಕೆಲಸವನ್ನು ಪ್ರಚುರ ಪಡಿಸುತ್ತಿದೆ 'ಕ್ರಿಸ್ತನಲ್ಲಿಯೇ ಸಮಸ್ತವು ಒಂದಾಗುವದು 'ಎಫೆಸ 1 : 11 ಎಲ್ಲಾ ಯುಗಗಳಿಗೆ ದೇವರು ಕಾಲವನ್ನು ನಿಷ್ಕರ್ಷೆ ಮಾಡಿರುವನು. ಎಲ್ಲವು ನಿಯಮಿತ ಕಾಲಕ್ಕೆ ಅನುಗುಣವಾಗಿ ನಡೆಯುತ್ತಿವೆ. ಯಾವುದೇ ಆಗಲಿ ಕಡಿಮೆ ಅಥವಾ ಹೆಚ್ಚಿನ ಕಾಲ ತೆಗೆದುಕೊಳ್ಳುವಂತಿಲ್ಲ. ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ದೇವರ ಅಧೀನದಲ್ಲಿದ್ದು ಕೊಂಡು ಆತನ ಚಿತ್ತದಂತೆ ಕಾರ್ಯಸಾಧಿಸುತ್ತಾ ಇದೆ.

ಹೇಗೆ ಒಂದು ಚಿಕ್ಕ ಮಗುವಿಗೆ ಒಂದು ದೊಡ್ಡ ಯಂತ್ರದ ಭಾಗಗಳು ಅರ್ಥವಾಗುವದಿಲ್ಲವೋ ಹಾಗೆಯೇ ತಿಳಿವಳಿಕೆಯಿಲ್ಲದ ಮನುಷ್ಯನಿಗೆ ದೇವರ ಯೋಜನೆಯು ಅರ್ಥವಾಗುವುದಿಲ್ಲ. ಅದು ಅವನಲ್ಲಿ ಗಲಿಬಿಲಿಯನ್ನುಂಟು ಮಾಡುತ್ತದೆ. ದೇವರ ಜ್ಞಾನವು ಹೆಚ್ಚಿದಂತೆಲ್ಲಾ ಆತನ ಕಾರ್ಯಸಾಧನೆಯ ಫಲಿತಾಂಶವನ್ನು ತಿಳಿದುಕೊಳ್ಳುವದು ಮಾತ್ರವಲ್ಲದೆ ಆತನ ಆಶೀರ್ವಾದದ ಫಲವನ್ನು ಅನುಭವಿಸುವನು. ದೇವರ ಯೋಜನೆಯ ಯುಗಗಳನ್ನು ಪ್ರತ್ಯೇಕವಾಗಿ ನೋಡಿದರೆ ಅರ್ಥವಾಗುವುದಿಲ್ಲ. ಎಲ್ಲವನ್ನು ಒಟ್ಟುಗೂಡಿಸಿ ದೇವರ ವಾಕ್ಯದ ಬೆಳಕಿನಲ್ಲಿ ಪರಿಶೀಲಿಸುವುದಾದರೆ ಅದರ ಒಳ ಅರ್ಥವು ಕಂಡುಬರುತ್ತದೆ. ಒಂದು ಯುಗದ ಹೇಳಿಕೆಯನ್ನು ಮತ್ತೊಂದು ಯುಗಕ್ಕೆ ಹೋಲಿಸಲು ಸಾಧ್ಯವಿಲ್ಲ. ಅದು ತಪ್ಪಾಗಿ ಕಂಡು ಬರುತ್ತದೆ. ಉದಾ : ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವುದು, ಯೊಹೋವನ ಜ್ಞಾನವನ್ನು ಪಡೆಯಿರಿ ಎಂದು ನೆರೆಹೊರೆಯವರಿಗೆ ಹೇಳಬೇಕಾಗಿರುವುದಿಲ್ಲ. ಯೆಶಾ 11 : 9 ;ಯೆರೆ 31 : 34 ಈ ಹೇಳಿಕೆಗಳು ಈಗಿನ ಕಾಲಕ್ಕೆ ಅನ್ವಯಿಸುವುದಿಲ್ಲ. ಕರ್ತನು ಪುನಃ ಬಂದು ತನ್ನ ರಾಜ್ಯವನ್ನು ಸ್ಥಾಪಿಸುವವರೆಗೂ ಈ ಹೇಳಿಕೆಗಳು ಅಸತ್ಯವಾಗಿಯೇ ಇರುವದು. ಯಾಕೆಂದರೆ ಈ ಕಾಲದ ಅಂತ್ಯದವರೆಗೆ ಮೋಸ ಅನ್ಯಾಯಗಳು ನಡೆಯುತ್ತಲೇ ಇರುತ್ತವೆ. 'ಕಡೇ ದಿವಸಗಳಲ್ಲಿ ದುಷ್ಟರೂ ವಂಚಕರೂ ಇತರರನ್ನು ಮೋಸ ಮಾಡುತ್ತಾ ತಾವೇ ಮೋಸ ಹೋಗುತ್ತಾ ಹೆಚ್ಚಾದ ಕೆಟ್ಟತನಕ್ಕೆ ಹೋಗುವರು' 2 ತಿಮೋ 3 : 1, 1 ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ಸಮಯದಲ್ಲಿ ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವದು ಯೆಶಾ 11 : 9

ಅನೇಕರು ಈಗಾಗಲೇ ದೇವರ ರಾಜ್ಯವು ಸ್ಥಾಪಿತವಾಗಿದೆ. ಆತನು ಭೂಮಿಯ ಮೇಲಿರುವ ಜನಾಂಗಗಳನ್ನು ಆಳುತ್ತಿರುವನು ಎಂಬ ತಪ್ಪು ಅಭಿಪ್ರಾಯವನ್ನು ಹೊಂದಿರುವರು. ಇದು ಸತ್ಯಕ್ಕೆ ವಿರೋಧವಾಗಿದೆ. ಯಾಕೆಂದರೆ ಈಗಿನ ರಾಜ್ಯಗಳಲ್ಲಿ ದ್ವೇಷ, ಅನ್ಯಾಯ, ವಂಚನೆಗಳಿಂದ ತುಂಬಿದೆ. ಸೈತಾನನು ನಾಶಮಾಡಿ ಅವನ ಅಧೀನದಲ್ಲಿರುವ ರಾಜ್ಯಗಳನ್ನೆಲ್ಲಾ ತನ್ನ ವಶಕ್ಕೆ ತೆಗೆದುಕೊಂಡು ಆಳ್ವಿಕೆ ನಡೆಸುವ ಕಾಲದಲ್ಲಿ ದೇವರ ಜ್ಞಾನವು ಲೋಕದಲ್ಲಿ ಕಂಡು ಬರುವದು. ಹೀಗೆ ದೇವರು ಒಂದು ಕ್ರಮದಲ್ಲಿ ತನ್ನ ಯೋಜನಾ ಕಾರ್ಯವನ್ನು ಮುಂದುವರಿಸುತ್ತಿರುವನು.

## He Will Make It Plain

"God moves in a mysterious way,
His wonders to perform:
He plants his footsteps in the sea,
And rides upon the storm.
"Deep in unfathomable mines
Of never-failing skill,

He treasures up his bright designs,
And works his sovereign will.
"Ye fearful saints, fresh courage take;
The clouds ye so much dread
Are big with mercy, and shall break
In blessings on your head.
"Judge not the Lord by feeble sense,
But trust him for his grace.
Behind a frowning providence
He hides a smiling face.
"His purposes will ripen fast,
Unfolding every hour.
The bud may have a bitter taste,
But sweet will be the flower.
"Blind unbelief is sure to err,
And scan his work in vain.
God is his own interpreter,
And he will make it plain."

---

"I know not the way that's before me,
The joys or the griefs it may bring;
What clouds are o'erhanging the future,
What flowers by the wayside may spring.
But there's One who will journey beside me,
Nor in weal nor in woe will forsake;
And this is my solace and comfort,
'He knoweth the way that I take.'"

# ಅಧ್ಯಾಯ–5

# ಆ ಮರ್ಮವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು; ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ – ಕೊಲೊ–1:26

**ಮೊದಲನೆ ವಾಗ್ದಾನದ ಮೊಬ್ಬಾದ ಬೆಳಕು–ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನ–ನಿರೀಕ್ಷೆ ಮುಂದೂಡಲ್ಪಟ್ಟಿದೆ–ಪಂಚಶತ್ತಮದದಿನ ರಹಸ್ಯ ಬಿಡಿಸಿಕೊಳ್ಳುವುದಕ್ಕೆ ಪ್ರಾರಂಭಿಸಿತು–ಆ ಮರ್ಮವು ಏನು? ಯಾಕೇ ಇಷ್ಟು ದೀರ್ಘ ಕಾಲ ಮರೆಯಾಗಿಡಲ್ಪಟ್ಟಿತು?–ಇನ್ನೂ ಲೋಕಕ್ಕೆ ಮರ್ಮವಾಗಿಯೇ ಇದೆ–ಕ್ಲುಪ್ತ ಕಾಲದಲ್ಲಿ ಎಲ್ಲರಿಗೂ ತಿಳಿಯಪಡಿಸಲಾಗುವುದು–ಯಾವಾಗ ಮರ್ಮವು ಪೂರ್ಣವಾಗುತ್ತದೆ.**

ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿದ್ದದ್ದು ಈಗ ದೇವಜನರಿಗೆ ತಿಳಿಸಲ್ಪಟ್ಟಿದೆ. ಕೊಲೆಸ್ಸ 1 : 26

ಮಾನವನು ಕೆಟ್ಟತನದ ಪ್ರಭಾವಕ್ಕೆ ಒಳಗಾಗಿ ಸಂಕಷ್ಟಗಳನ್ನು ಅನುಭವಿಸಿ ಅದರ ಪರಿಣಾಮವನ್ನು ತಿಳಿಯದೆ ಕಷ್ಟಪಡುತ್ತಿರುವ ಸಮಯದಲ್ಲಿಯೇ ದೇವರು ಒಬ್ಬ ವಿಮೋಚಕನ ಮೂಲಕ ಮಾನವ ಜನಾಂಗವನ್ನು ಆಶೀರ್ವದಿಸುವ ತನ್ನ ಉದ್ದೇಶವನ್ನು ಪ್ರಕಟಪಡಿಸಿರುವನು. ಆದರೆ ಆ ವಿಮೋಚಕನು ಯಾರು ಎಂಬುದು ಸುಮಾರು 4 ಸಾವಿರ ವರ್ಷಗಳಿಂದ ಗೂಢಾರ್ಥವಾಗಿದ್ದು ಕ್ರಿಸ್ತನ ಪುನರುತ್ಥಾನದ ಅನಂತರ ಸುವಾರ್ತಾಯುಗದ ಪ್ರಾರಂಭದಲ್ಲಿ ಪ್ರಕಟವಾಗುತ್ತಾ ಬಂದಿದೆ.

ಏದೆನ್ ತೋಟದಲ್ಲಿ ನಮ್ಮ ಆದಿ ತಂದೆತಾಯಿಗಳು ದೇವರ ನಿಯಮವನ್ನು ಮೀರಿ ಪಾಪಮಾಡಿದಾಗ ಅವರಿಗಿದ್ದ ಒಂದೇ ಒಂದು ಆಶಾಕಿರಣವೆಂದರೆ ಸ್ತ್ರೀಯ ಸಂತಾನವು ಸರ್ಪದ ತಲೆಯನ್ನು ಜಜ್ಜುವುದು ಎಂಬ ಹೇಳಿಕೆ. ಸುಮಾರು 2 ಸಾವಿರ ವರ್ಷಗಳು ಕಳೆದರೂ ಈ ವಾಗ್ದಾನವು ನೆರವೇರುವ ಸೂಚನೆಯು ಕಂಡುಬರಲಿಲ್ಲ.

ಎರಡು ಸಾವಿರ ವರ್ಷಗಳ ಅನಂತರ ದೇವರು ಅಬ್ರಹಾಮನನ್ನು ಪ್ರತ್ಯೇಕಿಸಿ ನಿನ್ನ ಸಂತತಿಯ ಮೂಲಕ ಲೋಕದ ಸರ್ವಜನಾಂಗಗಳಿಗೆ ಆಶೀರ್ವಾದ ಉಂಟಾಗುವುದು ಎಂದು ವಾಗ್ದಾನ ಮಾಡಿದನು. ಇದರಿಂದ ದೇವರು ತನ್ನ ಹಿಂದಿನ ವಾಗ್ದಾನದ ಹೇಳಿಕೆಯನ್ನೇ ಸಮರ್ಥಿಸುತ್ತಿರುವನು ಎಂಬುದು ತಿಳಿದುಬರುತ್ತದೆ. ಕಾಲ ಕಳೆಯುತ್ತಾ ಬಂತು ಅಬ್ರಹಾಮನು ಸಾರಳು ವಯಸ್ಸಾದವರಾಗುತ್ತ ಬಂದರು. ವಾಗ್ದತ್ತ ದೇಶವಾದ ಕಾನಾನ್ ಅವರ ವಶದಲ್ಲಿರಲಿಲ್ಲ ಮತ್ತು ಅವರಿಗೆ ಸಂತತಿಯಿರಲಿಲ್ಲ. ದೇವರ ವಾಗ್ದಾನವನ್ನು ಅಬ್ರಹಾಮನು ನೆರವೇರಿಸಲು ಸಹಾಯ ಮಾಡುವುದಕ್ಕಿರುವಾಗ ಇಸ್ಮಾಯೇಲನ ಜನನವಾಯಿತು ಆದರೆ ದೇವರಿಗೆ ಅಬ್ರಹಾಮನ ಸಹಾಯಬೇಕಿರಲಿಲ್ಲ. ತಕ್ಕ ಸಮಯದಲ್ಲಿ ವಾಗ್ದಾನದ ಮಗನಾದ ಇಸಾಕನ ಜನನವಾಯಿತು. ಇವನೇ ಜನಾಂಗವನ್ನು ಅಶೀರ್ವದಿಸುವನೋ ಎಂದು ಯೋಚಿಸುತ್ತಿರುವಾಗಲೇ ಅವನಲ್ಲ ಎಂಬುದು ಕಂಡುಬಂತು. ವರ್ಷಗಳು ಉರುಳಿದವು. ಇಸಾಕನು ಅವನ ಮಗನಾದ ಯಾಕೋಬನು ಸತ್ತನು ಹೀಗೆ ದೇವರ ವಾಗ್ದಾನವನ್ನೇ ಜನರು ಮರೆಯುವಂತಾಯಿತು. ಆದರೆ ಕೆಲವರು ಮಾತ್ರ ಅದರಲ್ಲಿ ಸ್ಥಿರವಾದ ನಂಬಿಕೆಯನ್ನಿಟ್ಟುಕೊಂಡಿದ್ದರು ಯಾಕೆಂದರೆ ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಇಸಾಕ, ಯಾಕೋಬ ಮತ್ತು ಇಸ್ರಾಯೇಲ್ಯರಿಗೆ ಅದು ಶಾಶ್ವತವಾದ ಒಡಂಬಡಿಕೆಯಾಗಿರುವುದೆಂದು ಮಾತು ಕೊಟ್ಟಿರುವನು 1 ಪೂರ್ವ 16 : 16, 17

ಯಾಕೋಬನ ಮರಣಾನಂತರ ಅವನ ಮಕ್ಕಳು ಇಸ್ರಾಯೇಲ್ಯರ ಹನ್ನೆರಡು ಕುಲಗಳೆಂದು ಕರೆಯಲ್ಪಟ್ಟು ಅವರು ದೇವರಾದುಕೊಂಡ ಜನಾಂಗವಾದರು. ಆದಿ 49 : 28 ಧರ್ಮೋ 26 : 5 ಇವರು ಬಲಿಷ್ಠರಾಗಿದ್ದರಿಂದ ವಾಗ್ದತ್ತ ದೇಶವನ್ನು ವಶಪಡಿಸಿಕೊಂಡು ಲೋಕವನ್ನೇ ಆಳುವರು ಎಂದು ಎದುರುನೋಡುತ್ತಿರುವಾಗಲೇ ಐಗುಪ್ತದಲ್ಲಿ ಇಸ್ರಾಯೇಲ್ಯರು ಗುಲಾಮರಾಗಬೇಕಾಯಿತು. ಹೀಗೆ ದೇವರ ವಾಗ್ದಾನವು ರಹಸ್ಯವಾಗೇ ಉಳಿಯಿತು. ಹೀಗಿರುವಲ್ಲಿ ಮೋಶೆ ವಿಮೋಚಕನಾಗಿ ಕಾಣಿಸಿಕೊಂಡನು. ದೇವರು ಅವನ ಮೂಲಕವಾಗಿ ಮಹತ್ಕಾರ್ಯಗಳನ್ನು ನಡೆಸಿ ಇಸ್ರಾಯೇಲ್ಯರನ್ನು ಸೆರೆಯಿಂದ ಬಿಡಿಸಿದನು. ಆದರೆ ಕಾನಾನ್ ಸೇರುವ ಮೊದಲೇ ಮೋಶೆ ಸತ್ತು ಹೋದನು. ಸಾಯುವ ಮೊದಲು ದೇವರ ಬಾಯಾಗಿ 'ಯೆಹೋವನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು ನಿಮಗೆ ಏರ್ಪಡಿಸುವನು' ಧರ್ಮೋ 18 : 15, ಅಕ್ಕ 3 : 22 ಎಂದು ನುಡಿದಿರುವನು. ಇದು ದೇವರ ವಾಗ್ದಾನವನ್ನು ಮತ್ತಷ್ಟು ದೃಢಪಡಿಸಿದ್ದಲ್ಲದೆ ನಮ್ಮಲ್ಲಿಯೇ ಒಬ್ಬನು ಈ ವಾಗ್ದಾನವನ್ನು ನೆರವೇರಿಸುವನು ಎಂಬುದು ಕಂಡು ಬಂದಿತು. ಅನಂತರ ಯೆಹೋಶುವನು ಅವರ

ನಾಯಕನಾದನು. ಅನೇಕರನ್ನು ಜಯಿಸಿ ಅವನ ನಾಯಕತ್ವದಲ್ಲಿ ವಾಗ್ದತ್ತ ದೇಶವನ್ನು ಪ್ರವೇಶಿಸಿದರು. ಈಗಲಾದರೂ ವಾಗ್ದಾನವು ನೆರವೇರಬಹುದೇನೋ ಎಂದು ಅಭಿಪ್ರಾಯ ಪಡುವವರಾದರು. ಆದರೆ ಯೆಹೋಶುವನು ಸತ್ತನು. ದಾವೀದನು ಮತ್ತು ಸೊಲೊಮೋನನು ಅರಸರಾಗಿ ಬರುವವರೆಗೆ ಅವರು ಮುಂದುವರೆಯಲೇ ಇಲ್ಲ. ಅವರ ಕಾಲದಲ್ಲಿ ಮುಂದುವರೆದು ಮಹಿಮೆಯ ತುಟ್ಟತುದಿಯನ್ನು ಮುಟ್ಟಿದರು. ಆದರೆ ಶೀಘ್ರವೇ ತಮ್ಮ ಅಧಿಕಾರ ಕಳೆದುಕೊಂಡು ಇತರ ಜನಾಂಗದವರಿಗೆ ಅಡಿಯಾಳುಗಳಾಗಬೇಕಾಯಿತು. ಕೆಲವರು ಮಾತ್ರ ತಮ್ಮ ನಂಬಿಕೆಯಲ್ಲೇ ದೃಢವಾಗಿ ಮುಂದುವರೆದರು.

ಯೇಸುವಿನ ಜನನದ ಕಾಲದಲ್ಲಿ ಇಸ್ರಾಯೇಲ್ಯರ ಮೂಲಕ ಲೋಕವನ್ನಾಳುವ ಅರಸನನ್ನು ಅಥವಾ ಮೆಸ್ಸೀಯನನ್ನು ಎಲ್ಲರು ಎದುರು ನೊಡುವವರಾಗಿದ್ದರು. ಆದರೆ ಪ್ರವಾದನೆಯಲ್ಲಿ ತಿಳಿಸಿರುವ ಮಾನ, ಸನ್ಮಾನ, ಶಕ್ತಿಯ ಅರಸನನ್ನು ಎದುರು ನೋಡುವವರಾದರೇ ಹೊರತು ಆತನು ಬಾಧೆಯನ್ನು ಅನುಭವಿಸಿ ಸಾಯಬೇಕು ಎಂಬುದಕ್ಕೆ ಗಮನಕೊಡಲಿಲ್ಲ. ಐಗುಪ್ತವನ್ನು ಬಿಡುವ ಮೊದಲು ಇಸ್ರಾಯೇಲ್ಯರು ಆಚರಿಸಿದ ಪಸ್ಕ ಅದಕ್ಕೆ ಗುರುತಾಗಿರುವುದು. ಇಬ್ರಿಯ 9 : 11–20, 10 : 8–18 ಮಾತ್ರವಲ್ಲದೆ ಪ್ರವಾದಿಗಳ ಹೇಳಿಕೆಗೂ ಅಷ್ಟು ಗಮನಕೊಡಲಿಲ್ಲ. ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನು ಅವುಗಳ ತರುವಾಯ ಉಂಟಾಗುವ ಪ್ರಭಾವ 1 ಪೇತ್ರ 1 : 11 ಆದುದರಿಂದ ಯೇಸು ಬಂದು ಬಲಿಯಾಗಿ ಅರ್ಪಿತವಾದಾಗ ಅದನ್ನು ಗ್ರಹಿಸಲು ಅವರಿಗೆ ಸಾಧ್ಯವಾಗಲಿಲ್ಲ. ಲೂಕ 19 : 44 ಅವನ ಶಿಷ್ಯರು ಸಹ ತಳಮಳಗೊಂಡು 'ಇಸ್ರಾಯೇಲ್ ಜನರನ್ನು ಬಿಡಿಸ ತಕ್ಕವನು ಆತನೇ ಎಂದು ನೀರಿಕ್ಷಿಸಿಕೊಂಡಿದ್ದೆವು.' ಲೂಕ 24 : 21 ಎಂದು ಹೇಳುವವರಾದರು. ಆತನ ಮರಣ ಹೊಸ ಒಡಂಬಡಿಕೆ ಎಂದು ತಿಳಿಯಲಾರದೆ ಹೋದರು. ಆತನು ಪುನರುತ್ಥಾನವಾದ ಮೇಲೆ ಅವರಲ್ಲಿ ಪುನಃ ಆಶಾಕಿರಣವುಂಟಾಗಿ ಸ್ವಾಮೀ ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸಿ ಕೊಡುವಿಯೊ' ಎಂದು ಕೇಳಿದರು. ಆದರೆ ಕರ್ತನು 'ತಂದೆಯು ಸ್ವಂತ ಅಧಿಕಾರದಲ್ಲಿಟ್ಟು ಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳಿದುಕೊಳ್ಳುವುದು ನಿಮ್ಮ ಕೆಲಸವಲ್ಲ' ಎಂದು ಉತ್ತರಿಸಿದನು. ಅಕೃ 1 : 6, 7 ಕ್ರಿಸ್ತನು ಪರಲೋಕಕ್ಕೆ ಏರಿ ಹೋದಾಗ ಪುನಃ ಶಿಷ್ಯರಲ್ಲಿ ವಿಸ್ಮಯ ಉಂಟಾಯಿತು. ಯಾಕೆಂದರೆ ದೇವರ ರಾಜ್ಯವನ್ನು ಕುರಿತಾದ ಆತನ ಹೇಳಿಕೆಯೆಲ್ಲವು ಸಾಮ್ಯರೂಪವಾಗಿದ್ದು ಅದರ ಅರ್ಥವನ್ನು ಗ್ರಹಿಸಲಾರದವರಾಗಿದ್ದರು. ಆತನು ಅವರಿಗೆ ಹೇಳಿದ್ದು 'ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು.... ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆ ಸಹಾಯಕನು ಅಂದರೆ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು' ಯೋಹಾನ 16 : 12, 13, 14 : 26 ಹೀಗೆ ಪಂಚಾಶತ್ತಮ ಹಬ್ಬದಲ್ಲಿ ಅವರ ಮೇಲೆ ಪವಿತ್ರಾತ್ಮ ಬರುವವರೆಗೆ ಅವರಿಗೆ ಆತನ ಹೇಳಿಕೆಯು ಸ್ವಲ್ಪವೂ ಅರ್ಥವಾಗಿರಲಿಲ್ಲ. ಆದರೂ ಅವರು ಸತ್ಯವನ್ನು ಸ್ವಲ್ಪ ಸ್ವಲ್ಪವಾಗಿ ಅರ್ಥಮಾಡಿಕೊಂಡು ಪವಿತ್ರಾತ್ಮ ಪ್ರೇರಿತರಾಗಿ ನುಡಿಯುತ್ತಿದ್ದರೇ ಹೊರತು ಅವರು ಹೇಳುತ್ತಿದ್ದ ಮಾತುಗಳು ಅವರ ಜ್ಞಾನಕ್ಕೆ ಮೀರಿದವುಗಳಾಗಿತ್ತು. ಉದಾ ಅ.ಕೃ 15:14–16ರಲ್ಲಿ ಯಾಕೋಬನ ಪ್ರಸ್ತಾಪನೆ.

ಪೌಲನ ಮೂಲಕ ಅನ್ಯಜನಾಂಗದವರಿಗೆ ಸುವಾರ್ತೆಯು ಸಾರಲ್ಪಟ್ಟಿತು. ಇದೇ ಕಾಲದಲ್ಲಿ ಇಸ್ರಾಯೇಲ್ಯರು ಮತ್ತು ಅನ್ಯಜನಾಂಗದವರು ಒಂದೇ ಕೃಪೆಯನ್ನು ಹೊಂದುವರು ಸುವಾರ್ತಾಯುಗವು ಮುಗಿದ ಮೇಲೆ ಇಸ್ರಾಯೇಲ್ಯರಿಗಾದ ವಾಗ್ದಾನವು ನೆರವೇರುವುದು ಎಂದು ಯಾಕೋಬನು ತಿಳಿದಿದ್ದನು. ಹೀಗೆ ಅನೇಕ ಕಾಲ ರಹಸ್ಯವಾಗಿದ್ದಿತ್ತು. ಕೆಲವರು ಅಂದರೆ ದೇವರ ವಿಶೇಷ ಸ್ನೇಹಿತರು ಅರ್ಥಮಾಡಿಕೊಂಡು ಗ್ರಹಿಸುವವರಾದರು. ತಲತಲಾಂತರಗಳಿಂದ ಮರೆಯಾಗಿದ್ದ ದೇವರ ವಾಕ್ಯವು ದೇವರ ಜನರಿಗೆ ಪ್ರಕಟಿಸಲಾಗಿದೆ ಎಂದು ಪೌಲನು ತಿಳಿಸಿರುವನು. ಕೊಲೆಸ್ಸ 1:27. ಪ್ರಭಾವದ ನೀರಿಕ್ಷೆಯಾದ ಕ್ರಿಸ್ತನು ನಿನ್ನಲಿರುವನು. ತಲತಲಾಂತರಗಳಿಂದಲೂ, ಈಗಲೂ ದೇವ ಜನರನ್ನು ಬಿಟ್ಟರೆ ರಹಸ್ಯವಾಗಿಯೇ ಇರುವುದು. ಯೇಸು ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟ ಮೇಲೆ ಕ್ರಿಸ್ತನಾದನು. ಕ್ರಿಸ್ತನು (Christ) ಅಂದರೆ ಅಭಿಷೇಕಿಸಲ್ಪಟ್ಟವನು.

ಅ.ಕೃ.10:38 ಆದುದರಿಂದ ಅಪೋಸ್ತಲನಾದ ಯೋಹಾನನು ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವುದು ಎಂದು ತಿಳಿಸಿರುವನು. 1 ಯೋಹಾನ 2:27 ಆದುದರಿಂದ ಸುವಾರ್ತಾ ಯುಗದ ದೇವಜನರು ರಾಜವಂಶದ ಯಾಜಕರಾಗಿರುವರು. ತಮ್ಮ ನಾಯಕನಾದ ಕ್ರಿಸ್ತನ ಮೂಲಕ ಯೆಹೋವನಿಗೆ ಅಭಿಷಕ್ತರಾಗುವರು. ಒಂದು ಶರೀರಕ್ಕೆ ಹೇಗೆ ಅನೇಕ ಅಂಗಗಳಿವೆಯೋ ಹಾಗೆಯೇ ಕ್ರಿಸ್ತನಲ್ಲಿ ಅನೇಕ ಅಭಿಷಕ್ತರು ಸೇರಿರುವರು. ಸಭೆಯೆಂಬ ಶರೀರಕ್ಕೆ ಕ್ರಿಸ್ತನು ತಲೆಯಾಗಿರುವನು. ಸಭೆ ಅಥವಾ ಮದಲಗಿತ್ತಿಯೇ ವಾಗ್ದಾನದ ಸಂತತಿಯಾಗಿರುವುದು. 'ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ' ಗಲಾತ್ಯ 3:29.

ಸಮಸ್ತವನ್ನು ಕ್ರಿಸ್ತನ ಪಾದಗಳ ಕೆಳಗೆ ಹಾಕಿ, ಆತನನ್ನು ಎಲ್ಲದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಆತನು ಸಮಸ್ತಕ್ಕೂ ಆಧಾರಭೂತನು ಎಂಬ ಹೇಳಿಕೆಯಿಂದ ಅಪೋಸ್ತಲರು ಸಭೆಯ ಸ್ಥಾನವನ್ನು ದೃಢಪಡಿಸಿರುವರು. ಸಭೆಗೂ ತನಗೂ ಇರುವ ಸಂಬಂಧವನ್ನು ತಿಳಿಸುವಾಗ ಯೇಸು 'ನಾನೇ ದ್ರಾಕ್ಷಿ ಬಳ್ಳಿ ನೀವು ಕೊಂಬೆಗಳು' ಎಂದು ತಿಳಿಸಿರುವನು. ಯೋಹಾನ 15:5 ಪಿರ್ಮಿಡ್ ಚಿತ್ರದಿಂದ ಸಭೆಗೂ ಕ್ರಿಸ್ತನಿಗೂ ಇರುವ ಐಕ್ಯತೆಯು ಸ್ಪಷ್ಟವಾಗಿ ತಿಳಿದು ಬರುವುದು. ಮೇಲಿನ ಕಲ್ಲು ಒಂದು ಪಿರಮಿಡ್ ಕೆಳಗಿನ ಕಲ್ಲು ಪರಿಪೂರ್ಣತೆಯುನ್ನು ಪಡೆಯುಬೇಕಾದರೆ ಮೇಲಿನದರೊಂದಿಗೆ ಸೇರಲೇಬೇಕು



ಯೇಸು ಮುಖ್ಯವಾದ ಮೂಲೆಗಲ್ಲಾಗಿರುವನು. ನಾವೆಲ್ಲರು ಜೀವಕಲ್ಲುಗಳಾಗಿ ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟಲ್ಪಡುತ್ತಾ ಇದ್ದೇವೆ. 1 ಪೇತ್ರ 2:4–6 ಅತಿ ಶೀಘ್ರದಲ್ಲಿಯೇ ತಲೆಯಾದ ಕ್ರಿಸ್ತನೊಂದಿಗೆ ಶರೀರವಾದ ಸಭೆಯು ಐಕ್ಯವಾಗುವುದು. ಆದುದರಿಂದ ಅನೇಕ ಕಷ್ಟಗಳನ್ನನುಭವಿಸಿ ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆಯುತ್ತಾ ಕಟ್ಟುವವನ ಆಜ್ಞೆಯನ್ನು ಪಾಲಿಸಿ ತಾಳ್ಮೆಯಿಂದ ದೀನರಾಗಿ ಒಬ್ಬರಿಗೊಬ್ಬರು ಸೇವೆ ಮಾಡುವವರಾದರೆ ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು. 1 ಪೇತ್ರ 5:5,6, ಪಿಲಿ 2:8–9

ಇದು ನಿಜವಾಗಿಯೂ ಅದ್ಭುತ ಸಮಾಚಾರವಾಗಿದೆ. ನಮ್ಮ ಶ್ರೇಷ್ಠಕರೆಯನ್ನು ಪರಿಪಾಲಿಸಲು ದೇವರ ವಾಕ್ಯದ ಬಳಿಗೆ ಬಂದಾಗ ಆ ಕೃಪೆಯನ್ನು ಪ್ರವಾದಿಗಳು ಮುಂದಾಗಿ ತಿಳಿಸಿರುವುದು ಎಂದು ಕಂಡುಬರುತ್ತದೆ. 1 ಪೇತ್ರ 1:10. ಸಾಮ್ಯರೂಪದಲ್ಲಿ ಗೂಡಾರ್ಥವಾಗಿರುವ ಸಂಗತಿಗಳೇ ಈಗ ಪ್ರಕಾಶವಾಗಿ ಕಂಡು ಬರುತ್ತಿದೆ. ದೇವರ ಕರೆಗೆ ಓಗೊಟ್ಟು ಓಡಿ ಮುಂದೆ ಸಿಕ್ಕುವ ಜಯಮಾಲೆಯನ್ನು ಪಡೆಯಬೇಕಾದ ಮಾರ್ಗ ಇಕ್ಕಾಟ್ಟಾದ ಮಾರ್ಗ. ಆದರೆ ದೇವರ ವಾಕ್ಯದ ಜ್ಞಾನವು ಆ ಮಾರ್ಗವನ್ನು ಪ್ರಕಾಶಗೊಳಿಸುತ್ತದೆ. ಅನೇಕರನ್ನು ಒಳಗೊಂಡ ಒಬ್ಬ ವಿಮೋಚಕನನ್ನು ದೇವರು ಎಬ್ಬಿಸುತ್ತಾನೆ ಎಂಬ ಸಂಗತಿಯನ್ನು ಹಿಂದೆ ಯಾರೂ ಯೋಚಿಸಿರಲಿಲ್ಲ. ನಿಜವಾಗಿಯೂ ಇದೊಂದು ರಹಸ್ಯವಾಗಿತ್ತು. ಈ ಸುವಾರ್ತಾಯುಗದಲ್ಲಿ ಆತನ ಅಭಿಷಕ್ತ ಮಕ್ಕಳಿಗೆ ಇದೊಂದು ಶ್ರೇಷ್ಠ ಕರೆಯಾಗಿದೆ. ಶಿಷ್ಯರು ಸಾಮಾನ್ಯ ಮನುಷ್ಯರಾಗಿದ್ದದ್ದರಿಂದ ಅವರಿಗೆ ತಿಳಿಸಲು ಯೇಸು ಪ್ರಯತ್ನಿಸಲಿಲ್ಲ ಆದರೆ ಪಂಚಾಶತ್ತಮ ಹಬ್ಬದ ದಿನ ಅವರೆಲ್ಲರೂ ಪವಿತ್ರಾತ್ಮವರದಿಂದ ಅಭಿಷಕ್ತರಾದಾಗ ಎಲ್ಲವನ್ನು ಅವರಿಗೆ ತಿಳಿಸಲಾಯಿತು. ನೂತನ ಸೃಷ್ಟಿಯಾದವರಿಗಲ್ಲದೆ ಬೇರೆ ಯಾರಿಗೂ ಈ ಶ್ರೇಷ್ಠ ಕರೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಪೌಲನು ತಿಳಿಸಿರುವನು. 1 ಕೊರಿ 2:6–14 ಓದಿರಿ.

ಪೌಲನು ಗಲಾತ್ಯದವರಿಗೆ ಬರೆದಿರುವ ಪತ್ರಿಕೆಯಲ್ಲಿ ಈ ರಹಸ್ಯವನ್ನು ಸಂಪೂರ್ಣವಾಗಿ ತಿಳಿಸಿ, ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯು ಹೇಗೆ ನೆರವೇರುತ್ತದೆ ಎಂದು ಸ್ಪಷ್ಟ ಪಡಿಸಿರುವನು. ಇಸ್ರಾಯೇಲ್ಯರಿಗೆ ಕೊಡಲ್ಪಟ್ಟ ಧರ್ಮಶಾಸ್ತ್ರ ದೇವರ ಒಡಂಬಡಿಕೆಯನ್ನು ರದ್ದು ಮಾಡುವುದಿಲ್ಲ. ಗಲಾ 3:15–18 ಅಬ್ರಹಾಮನ ಸಂತತಿಯು ಲೋಕದ ಸರ್ವಜನಾಂಗವನ್ನು ಆಶೀರ್ವದಿಸುವುದು. ಆತನು ಕ್ರಿಸ್ತನೇ ಕ್ರಿಸ್ತನು ಎಂದರೆ ಪವಿತ್ರಾತ್ಮನಿಂದ ಅಭಿಷಕ್ತನಾದವನು. ವ 27,29 ಹಾಗೆ ಮುಂದುವರೆದು ಅಬ್ರಹಾಮನು ಯೆಹೋವನ ಗುರುತಾಗಿರುವನು, ಸಾರಳು ವಾಗ್ದಾನ ಅಥವಾ ಒಡಂಬಡಿಕೆಯ ಗುರುತಾಗಿರುವಳು. ಇಸಾಕನು ಕ್ರಿಸ್ತನ ಗುರಾತಾಗಿರುವನು. (ಶಿರಸ್ಸು + ದೇಹ) ಎಂದು ತಿಳಿಸಿರುವನು. ವ. 28 ಹೀಗೆ ಸುವಾರ್ತಾಯುಗದಲ್ಲಿ ಕ್ರಿಸ್ತನ ದೇಹ (ಸಭೆ) ಅಭಿವೃದ್ಧಿಯಾಗುವವರೆಗೆ ದೇವರ ಯೋಜನೆಯು ರಹಸ್ಯವಾಗಿಯೇ ಉಳಿಯಿತು.

ರಹಸ್ಯವಾಗಿರಬೇಕಾದ್ದರಿಂದ ರಹಸ್ಯವಾಗಿ ಉಳಿಯಿತು. ಒಂದು ವೇಳೆ ಅದು ಪ್ರಕಟವಾಗಿದ್ದರೆ ಮಾನವನು ಅದನ್ನು ಕೆಡಿಸಿಬಿಡುತ್ತಿದ್ದನು ಮತ್ತು ಯೆಹೂದ್ಯರು ಕ್ರಿಸ್ತನನ್ನು ಶಿಲುಬೆಗೆ ಹಾಕುತ್ತಲೇ ಇರಲಿಲ್ಲ 1 ಕೊರಿ 2:8 ಅದು ಮಾನವನ ವಿಮೋಚನೆಗೆ ಕ್ರಿಸ್ತನು ಸಾಯುವುದನ್ನು ಮಾತ್ರವಲ್ಲದೆ ಆತನ ಹಿಂಬಾಲಕರು ಅನುಭವಿಸಬೇಕಾದ ಶ್ರಮ ಮತ್ತು ಸಂಕಷ್ಟಗಳನ್ನು ತಡೆದುಬಿಡುತ್ತಿತ್ತು. ಲೋಕವು ನಮ್ಮನ್ನು ತಿಳಿದುಕೊಳ್ಳಲಿಲ್ಲ. ಅದು ಆತನನ್ನು ತಿಳಿದುಕೊಳ್ಳುವುದಿಲ್ಲ. 1 ಯೋಹಾನ 3:1 ಕ್ರಿಸ್ತನು ಮಾತ್ರವಲ್ಲದೆ ಕ್ರಿಸ್ತನ ಹಿಂಬಾಲಕರಾಗಿರುವ ಚಿಕ್ಕ ಹಿಂಡು ರಹಸ್ಯವಾಗಿದೆ. ಶ್ರೇಷ್ಠ ವ್ಯಕ್ತಿಯಾದ ಯೇಸು ರಾಜಕಾರಣಿಯೋ, ಪ್ರಸಿದ್ಧ ಧರ್ಮಬೋಧಕನೋ ಆಗಿದ್ದರೆ ಶ್ರೇಷ್ಠ ವ್ಯಕ್ತಿ ಎನ್ನಿಸಿಕೊಂಡು ಸನ್ಮಾನಪಡೆಯುತ್ತಿದ್ದನು. ಆದರೆ ಆತನು ಸಾಮಾನ್ಯ ಜನರ ನಡುವೆ ಸಾಮಾನ್ಯನಂತಿದ್ದು ಲೋಕಕ್ಕೆ ಆಶ್ಚರ್ಯವುಂಟುಮಾಡುವವನಾಗಿದ್ದಾನೆ. ಅನೇಕರು ಆತನು ಸಮಯವನ್ನು ವ್ಯರ್ಥವಾಗಿ ಕಳೆದನು ಎಂದು ಹೇಳುವರು. ಆದರೆ ಯಾರು ಆತನನ್ನೂ ಆತನ ಬೋಧನೆಯನ್ನೂ ಅರ್ಥಮಾಡಿಕೊಳ್ಳಲಿಲ್ಲ. ಹಾಗೆಯೇ ಅಪೋಸ್ತಲರನ್ನೂ

ಇತರ ಶಿಷ್ಯರನ್ನೂ ಜನರು ಅರ್ಥಮಾಡಿಕೊಳ್ಳದೇ ಹೋದರು. ಅವರು ತಮ್ಮ ಪ್ರಾಮುಖ್ಯವಾದ ಉದ್ಯೋಗವನ್ನು ಬಿಟ್ಟು ಶಿಲುಬೆಗೆ ಹಾಕಿದ ಯೇಸುವಿನ ಮೂಲಕ ಪಾಪದ ಕ್ಷಮೆಯಾಗುವುದು ಎಂದು ಬೋಧಿಸುತಿದ್ದ ಜನರ ದೃಷ್ಟಿಯಲ್ಲಿ ಹುಚ್ಚುತನವಾಗಿತ್ತು. ಪೌಲನು ಕ್ರಿಸ್ತನಿಗಾಗಿ ದುಡಿಯುವುದಕ್ಕಾಗಿ ತನ್ನ ಸರ್ವಸ್ವವನ್ನು ತ್ಯಾಗ ಮಾಡಿದನು.

ಆದರೆ ದೇವರ ಯೋಜನೆಯು ರಹಸ್ಯವಾಗಿಯೇ ಉಳಿಯುವುದಿಲ್ಲ. ಕ್ರಿಸ್ತನ ರಾಜ್ಯದ ಉದಯವಾಗುವಾಗ ಎಲ್ಲವೂ ಪ್ರಕಟವಾಗುವುದು. ಯೆಹೋವನ ಜ್ಞಾನವು ಭೂಮಿಯನ್ನೆಲ್ಲಾ ತುಂಬಿಕೊಳ್ಳುವುದು. ನೀತಿ ಸೂರ್ಯನೆಂಬ ಕ್ರಿಸ್ತನು ಉದಯಿಸಿ ಅಜ್ಞಾನವೆಂಬ ಕತ್ತಲೆಯನ್ನು ಹೊಡೆದೋಡಿಸುವನು. ಇಲ್ಲಿ ಕ್ರಿಸ್ತನ ಜೊತೆಯಲ್ಲಿ ಸಭೆಯೂ ಸೇರಿರುವುದು. ಕ್ರಿಸ್ತನ ಶ್ರಮೆಯಲ್ಲಿ ಪಾಲುಗಾರರಾದವರು ಆತನ ಮಹಿಮೆಯಲ್ಲೂ ಪಾಲುಗಾರರಾಗುವರು. ರೋಮಾ 8:17; 2 ತಿಮೋ 2:11;12; ಕೊಲೆಸ್ಸ 3:4; ಮತ್ತಾಯ 13:43.

ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಿಗೆ ಮಾತ್ರ ಇವುಗಳು ಅರ್ಥವಾಗುತ್ತದೆ. ಈ ಕಾಲದಲ್ಲಿ ತನ್ನ ಸೇವಕರ ಮೇಲೆ ಸುರಿಸಿದಂತೆ ಮುಂದೆ ಎಲ್ಲರ ಮೇಲೆ ತನ್ನ ಆತ್ಮವನ್ನು ಸುರಿಸುವಾಗ ಈಗ ಚಿಕ್ಕ ಹಿಂಡು ಅರ್ಥಮಾಡಿಕೊಂಡಂತೆ ಆಗ ಎಲ್ಲರೂ ಅರ್ಥಮಾಡಿಕೊಂಡು ಸಭೆಯು ಮಹಿಮೆಯನ್ನು ಕಂಡು ಹರ್ಷಿಸುವರು ಮತ್ತು ಯಜ್ಞದ ಕುರಿಯಾದಾತನ ವಿವಾಹಕಾಲವು ಬಂತು; ಆತನಿಗೆ ವಿವಾಹವಾಗುವ ಕನ್ಯೆಯು ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ; ಸಂತೋಷಪಡೋಣ, ಹರ್ಷಗೊಳ್ಳೋಣ, ಆತನನ್ನು ಘನಪಡಿಸೋಣ ಪ್ರಕ 19:7 ಎಂದು ಹಾಡುವರು. ಆಗ ಲೋಕದ ಸರ್ವ ಜನಾಂಗಗಳು ಸಭೆಯು ಅಭಿಷಕ್ತನೊಂದಿಗೆ ಸೇರಿ ಮಹಿಮೆ ಪಡುವುದನ್ನು ಕಂಡು ಅನಂದಿಸುವರು. ಆಗ ಯಾರಲ್ಲಿಯೂ ಅಸೂಯೆ ಇರುವುದಿಲ್ಲ. ಆಗ ದೇವರ ಯೋಜನೆಯ ರಹಸ್ಯವು ಎಲ್ಲರಿಗೂ ಬಯಲಾಗುವುದು. ದೇವರ ಆತ್ಮವು ಕ್ರಿಸ್ತನಲ್ಲಿತ್ತು. ಕ್ರಿಸ್ತನ ಆತ್ಮವು ಸಭೆಯಲ್ಲಿತ್ತು ಎಂದು ಎಲ್ಲರೂ ತಿಳಿಯುವರು. ಆ ಲೋಕದಲ್ಲಿ ಕ್ರಿಸ್ತನಿಗಾಗಿ ಶ್ರಮೆಪಟ್ಟವರನ್ನು ಹುಚ್ಚರು ಎಂದು ಕರೆಯುವುದಿಲ್ಲ. ಅದಕ್ಕೆ ಬದಲು ಅವರು ಜನರಿಗೆ ಕಾಣದಂಥ ಐಶ್ವರ್ಯ, ಸನ್ಮಾನ ಕಿರೀಟವನ್ನು ಹೊಂದುವರು.

ಏಳನೆಯ ತುತೂರಿಯು ಊದಿದ ಕೂಡಲೇ ದೇವರ ರಹಸ್ಯಗಳೆಲ್ಲಾ ಪೂರ್ಣವಾಗುವುದು. ಪ್ರಕ 10:7. ಆಗ ಕ್ರಿಸ್ತನ ದೇಹವೆಂಬ ಸಭೆಯು ಪೂರ್ಣವಾಗಿರುವುದು. ಸಭೆಯ ಸಂಖ್ಯೆಯು ಪರಿಪೂರ್ಣವಾಗುವುದೇ ರಹಸ್ಯದ ಉದ್ದೇಶ. ದೇವರ ರಾಜ್ಯದಲ್ಲಿ ಎಲ್ಲರೂ ಜ್ಞಾನವಂತರಾಗಿರುವರು. ಆಗ ಯಾವುದನ್ನೂ ರಹಸ್ಯವಾಗಿ ಇಡುವುದರ ಅವಶ್ಯಕತೆಯಿರುವುದಿಲ್ಲ. ಸುಮಾರು ಆರುಸಾವಿರ ವರುಷಗಳಿಂದ ಮರೆಮಾಡಿ ಈಗ ಅದನ್ನು ಪ್ರಕಟಿಸುವ ರೀತಿಯು ಮೆಚ್ಚ ತಕ್ಕದ್ದೇ. ರಹಸ್ಯದ ತೆರೆಯು ತೆಗೆಯಲ್ಪಟ್ಟು ಆಶೀರ್ವಾದದ ಮಳೆ ಸುರಿದರೆ ಯಾರಿಗೆ ತಾನೇ ಸಂತೋಷವಾಗುವುದಿಲ್ಲ. ಈ ರಹಸ್ಯದ ತಿಳಿವಳಿಕೆಗೆ ಇಂದು ಜಗತ್ತೇ ಪ್ರಸವವೇದನೆಯಿಂದ ನರಳುವ ಸ್ಥಿತಿಯಲ್ಲಿದೆಯಾದರೂ ಮುಂದೆ ರಹಸ್ಯವು ಪೂರ್ಣ ಬಯಲಾದಾಗ ವಾಗ್ದಾನದ ಸಂತತಿಯ ಮೂಲಕ ಆಶೀರ್ವಾದವನ್ನು ಪಡೆಯುವುದು. ರೋಮಾ 8:19,21,22.

## A Lord's Day Offering

"I offer Thee:
Every heart's throb, they are Thine;
Every human tie of mine;
Every joy and every pain;
Every act of mind or brain—
My blessed God!
Every hope and every fear;
Every smile and every tear;
Every song and hymn,
'Laudamus Te.'

"Take them all, my blessed Lord,
Bind them with thy secret cord;
Glorify thyself in me,
Adored One!
Multiply them by thy Word;
Strengthen, bless, increase, my Lord
Of perfect love!
Thou First and Last!"

# ಅಧ್ಯಾಯ-6

## ನಮ್ಮ ಕರ್ತನ ಬರುವಿಕೆ-ಅದರ ಉದ್ದೇಶ, ಸಮಸ್ತವನ್ನು ಸರಿಪಡಿಸುವಿಕೆ.

**ನಮ್ಮ ಕರ್ತನ ಎರಡನೆ ಬರುವಿಕೆ ವೈಯಕ್ತಿಕವಾದದ್ದು ಮತ್ತು ಸಾವಿರವರ್ಷಕ್ಕೂ ಪೂರ್ವವಾದದ್ದು-ಮೊದಲನೆ ಬರುವಿಕೆಯೊಂದಿಗೆ ಅದರ ಸಂಬಂಧ-ಸಭೆಯ ಆರಿಸುವಿಕೆ ಮತ್ತು ಲೋಕದ ಪರಿವರ್ತನೆ-ಆಯ್ಕೆ ಮತ್ತು ಉಚಿತ ಕೃಪೆ-ಸುನೀರೀಕ್ಷೆಯುಟಾದ ಸೆರೆಯವರು-ಸಮಸ್ತವನ್ನು ಸರಿಪಡಿಸುವುದನ್ನು ಕುರಿತು ಪ್ರವಾದನಾ ಸಾಕ್ಷಿ-ನಮ್ಮ ಕರ್ತನ ಬರುವಿಕೆಯು ಸ್ಪಷ್ಟವಾಗಿ ಸಭ ಮತ್ತು ಲೋಕದ ನಿರೀಕ್ಷೆಯಾಗಿದೆ.**

'ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನನ್ನು ಕಳುಹಿಸಿ ಕೊಡುವನು. ಸಮಸ್ತವನ್ನು ಸರಿಮಾಡುವ ಕಾಲವು ಬರುವತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಯಿಂದ ಹೇಳಿಸಿದ್ದಾನೆ' ಅಕೃ 3:20,21.

ಇದರಿಂದ ಕ್ರಿಸ್ತನು ಪುನಃ ಬಂದೇ ಬರುವನು ಎಂದು ಸ್ಪಷ್ಟವಾಗಿ ತಿಳಿದುಬರುವುದು. ಮಾತ್ರವಲ್ಲದೆ 'ನಾನು ಯುಗದ ಸಮಾಪ್ತಿಯವರೆಗೆ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ' ಮತ್ತಾ 28:20 ಎಂದು ಕ್ರಿಸ್ತನೇ ನುಡಿದಿರುವನು. ಆದುದರಿಂದ ಆತನು ಆತ್ಮಿಕವಾಗಿಯೂ, ತನ್ನ ವಾಕ್ಯದ ಮೂಲಕವಾಗಿಯೂ ತನ್ನ ಸಭೆಯೊಂದಿಗೆ ಇದ್ದು ಅವರಿಗೆ ಮಾರ್ಗದರ್ಶಕನಾಗಿದ್ದು ಬಾಧೆ ಸಂಕಷ್ಟಗಳಲ್ಲಿ ಸಭೆಯನ್ನು ಸಂತೈಸುವವನಾಗಿರುವನು. ಸಭೆಗೆ ಆತನ ಪ್ರೀತಿ, ಸಂರಕ್ಷಣೆಯ ಬಗ್ಗೆ ಅರಿವಿದ್ದರೂ ಆತನ ನೇರ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇರುವುದು. ನಾನು ಈಗ ಹೋದರೆ ತಿರುಗಿ ಬರುವೆನು ಎಂಬ ಕ್ರಿಸ್ತನ ಮಾತುಗಳು ಆತನ ಎರಡನೇ ಬರೋಣವನ್ನು ಸೂಚಿಸುವಂಥದಾಗಿದೆ. ಇದನ್ನು ಕೆಲವರು ಪಂಚಾಶತ್ತಮ ಹಬ್ಬದ ದಿನ ಪವಿತ್ರಾತ್ಮ ಬಂದದ್ದನ್ನು ಸೂಚಿಸುವುದೆಂದು ಮತ್ತೆ ಕೆಲವರು ಯೆರುಸಲೇಮಿನ ನಾಶನವನ್ನು ಸೂಚಿಸುವುದೆಂದು ಹೇಳುವವರಾಗಿರುವರು. ಪಂಚಾಶತ್ತಮ ಹಬ್ಬವಾಗಿ 60 ವರ್ಷಗಳ ಅನಂತರ ಮತ್ತು ಯೆರುಸಲೇಮ್ ನಾಶವಾಗಿ 26 ವರ್ಷಗಳ ಅನಂತರ ಸತ್ಯವೇದದ ಕಡೇ ಪುಸ್ತಕವಾದ ಪ್ರಕಟನೆ ಪುಸ್ತಕವು ಬರೆಯಲ್ಪಟ್ಟಿತ್ತು. ಅದರಲ್ಲಿ 'ಇಗೋ ಬೇಗ ಬರುತ್ತೇನೆ' ಪ್ರಕ 22;12,20 ಎಂದು ಬರೆಯಲಾಗಿದೆ.

ಪ್ರಪಂಚದ ಪಾಪಿಗಳೆಲ್ಲರೂ ಸಂಪೂರ್ಣವಾಗಿ ಪರಿವರ್ತನೆ ಯಾದ ಮೇಲೆ ಆತನು ಬರುವನು ಎಂದು ಕೆಲವರು ಹೇಳುವವರಾಗಿದ್ದಾರೆ. ಆದರೆ ಸತ್ಯವೇದದ ಪ್ರಕಾರ ಕ್ರಿಸ್ತನು ಬರುವ ಕಾಲದಲ್ಲಿ ಲೋಕವು ಬದಲಾಗಿರುವುದಿಲ್ಲ. ಅದಕ್ಕೆ ಬದಲು 'ಕಡೇ ದಿನದಲ್ಲಿ ಕಠಿಣ ಕಾಲಗಳು ಬರುತ್ತವೆ' ಜನರು ಆ ದಿನದಲ್ಲಿ ದೇವರಿಗಿಂತ ಹೆಚ್ಚಾಗಿ ಲೋಕ ಭೋಗಗಳನ್ನು ಪ್ರೀತಿಸುವವರಾಗಿರುತ್ತಾರೆ. 2 ತಿಮೋ 3:1-4 ದುಷ್ಟರೂ ವಂಚಕರೂ ಇತರರನ್ನು ಮೋಸ ಮಾಡುತ್ತಾ ತಾವೇ ಮೋಸ ಹೋಗುವವರು ಎಂದು ತಿಳಿಸಲಾಗಿದೆ. ಆದರೆ ಕರ್ತನು ಚಿಕ್ಕ ಹಿಂಡಿಗೆ ಎಚ್ಚರವಾಗಿರಿ ಆ ದಿವಸವು ಉರುಲಿನಂತೆ ಪಕ್ಕನೆ ನಿಮ್ಮ ಮೇಲೆ ಬರುವುದು' ಲೂಕ 21:34, 35 ಎಂದು ಎಚ್ಚರಿಕೆ ಕೊಟ್ಟಿರುವನು. ಭೂಮಿಯ ಎಲ್ಲಾ ಕುಲದವರು ಆತನನ್ನು ನೋಡಿ ಎದೆಬಡಿದುಕೊಳ್ಳುವರು ಪ್ರಕ 1:7 ಆತನ ಬರುವಿಕೆಯನ್ನು ಸ್ಪಷ್ಟಪಡಿಸುತ್ತದೆ.

ಕೆಲವರು ಕ್ರಿಸ್ತನ ಬರುವಿಕೆಯನ್ನು ಆಸಕ್ತಿಯಿಂದ ನೀರಿಕ್ಷಿಸುವವರಾಗಿರುವರು. ಆತನ ಆಳ್ವಿಕೆಯ ಕಾಲದಲ್ಲಿ ಸಭೆ ಲೋಕವನ್ನು ಮಾರ್ಪಡಿಸಿ ಸೈತಾನನನ್ನು ಬಂಧಿಸಿ ಭೂಲೋಕದಲ್ಲಿ ಯೆಹೋವನ ಜ್ಞಾನವು ತುಂಬುವಂತೆ ಮಾಡಿ ಯುದ್ಧಾಭ್ಯಾಸವು ನಿಂತರೆ ಅಲ್ಲಿಗೆ ಸಭೆಯ ಕೆಲಸ ಮುಗಿಯುವುದು. ಅನಂತರ ಕ್ರಿಸ್ತನು ಬಂದು ನೀತಿವಂತರನ್ನು ಆಶೀರ್ವದಿಸಿ ದುಷ್ಟರನ್ನು ಶಿಕ್ಷಿಸುವನು ಎಂದು ಕೆಲವರು ನಂಬುವವರಾಗಿರುವರು. ಆದರೆ ದೇವರ ವಾಕ್ಯವನ್ನು ದೇವರ ಯೋಜನೆಯನ್ನು ಒಂದುಗೂಡಿಸಿದರೆ ಮೇಲಿನ ಹೇಳಿಕೆ ವಿರೋಧವಾಗಿ ಕಂಡುಬರುವುದು. ಯಾಕೆಂದರೆ ಕ್ರಿಸ್ತನ ಆಳ್ವಿಕೆಯ ಕಾಲದಲ್ಲೇ ಲೋಕದ ಪರಿವರ್ತನೆಯ ಕಾರ್ಯವು ನಡೆಯಬೇಕು. ಈಗ ಸಭೆಯ ಪರೀಕ್ಷಾ ಕಾಲವಾಗಿರುವುದು. ಯಾರು ಜಯ ಹೊಂದುತ್ತಾರೋ 'ಅವರನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು' ಪ್ರಕ 3:21 ಅವರು ಸಾವಿರ ವರ್ಷದ ಕಾಲದಲ್ಲಿ ಕ್ರಿಸ್ತನೊಡನೆ ಜೀವಿಸಿ ಆಳುವರು ಪ್ರಕ 20:4

ಕೆಲವರು ಎರಡು ವಚನಗಳ ಆಧಾರದ ಮೇಲೆ ಸಾವಿರ ವರ್ಷಗಳ ಆಳ್ವಿಕೆಗೆ ಮುಂಚೆ ಕ್ರಿಸ್ತನು ಬರುವುದಿಲ್ಲ ಎಂದು ಸಾರುವವರಾಗಿರುವರು. ಅದರಲ್ಲಿ ಒಂದನೆಯದು ಮತ್ತಾ 24:14 'ಪರಲೋಕ ರಾಜ್ಯದ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವುದು'. ಇಲ್ಲಿ ಒಂದು ಅಂಶವನ್ನು ಗಮನಿಸಬೇಕಾಗಿದೆ ಸಾಕ್ಷಿಗಾಗಿ ಸಾರಲಾಗುವುದೇ ಹೊರತು ಮಾರ್ಪಡಿಸುವುದಕ್ಕಲ್ಲ. 1861ರಲ್ಲಿ ಸತ್ಯವೇದ ಸಂಘದವರು ಎಲ್ಲಾ ಭಾಷೆಗಳಲ್ಲಿ ಸತ್ಯವೇದವನ್ನು ಪ್ರಕಟಮಾಡಿದಾಗಲೇ ಸಾಕ್ಷಿಗಾಗಿ ಲೋಕದ ಎಲ್ಲಾ ಕಡೆಗಳಲ್ಲಿ ಸಾಕ್ಷಿಗಾಗಿ

ಸಾರಲ್ಪಟ್ಟಿತು. ಆದರೂ ಲಕ್ಷಗಟ್ಟಲೇ ಜನರು ಸತ್ಯವೇದವನ್ನು ಹೊಂದಿಲ್ಲ. ಈಗ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿದೆ. ಹೀಗೆ ಸಾರಲ್ಪಡುವಾಗಲೇ ಕ್ರಿಸ್ತನ್ನೊಂದಿಗೆ ಆಳುವುದಕ್ಕಾಗಿ ಸರ್ವಲೋಕದಿಂದ ಚಿಕ್ಕ ಹಿಂಡನ್ನು ಆರಿಸಲಾಗುವುದು ಎಂದು ಪೌಲನು ತಿಳಿಸಿರುವನು ಅಕೃ 15:14

ಎರಡನೇ ವಚನವೆಂದರೆ 'ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗಿ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು. ಕೀರ್ತ 110:1 ಕೆಲವರು ಈ ವಚನವನ್ನು ತಪ್ಪಾಗಿ ಅರ್ಥಮಾಡಿಕೊಂಡು ಕ್ರಿಸ್ತನು ನಿಜವಾಗಿಯೂ ಒಂದು ಸಿಂಹಾಸನವನ್ನು ಹಾಕಿಕೊಂಡು ಬಲಗಡೆ ಕುಳಿತಿರುವನು ಎಂದು ಭಾವಿಸಿರುವರು. ಆದರೆ ಸಿಂಹಾಸನ ಎನ್ನುವುದು ಸರ್ವಾಧಿಕಾರವನ್ನು ಸೂಚಿಸುತ್ತದೆ. 'ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠ ಹೆಸರನ್ನು ದಯಪಾಲಿಸಿದ್ದಾನೆ' ತಂದೆಯನ್ನು ಬಿಟ್ಟರೆ ಆತನಿಗೆ ಸರ್ವಾಧಿಕಾರವನ್ನು ಕೊಡಲಾಗಿದೆ. ಕ್ರಿಸ್ತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಸರ್ವಾಧಿಪತ್ಯವನ್ನು ಆತನಿಗೆ ಒಪ್ಪಿಸಿದ್ದಾಗ 'ಫಿಲಿಪ್ಪ 3:21 ಬಲಗಡೆ ಎನ್ನುವುದು ಪರಾಕ್ರಮ ಮತ್ತು ಪ್ರಭುತ್ವವನ್ನು ಸೂಚಿಸುತ್ತದೆ. ಯೋಸೇಫನು ಫರೋಹನನಿಗೆ ಬಲಗೈಯಾಗಿದ್ದನು. 'ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಅಸೀನವಾಗಿರುವುದನ್ನು ಆಕಾಶದ ಮೇಘಗಳ ಮೇಲೆ ಕುಳಿತು ಬರುವನು' ಮತ್ತಾ 26:64 ಬರುವಾಗಲೂ ಬಲಗಡೆಯಲ್ಲಿರುವನು ಸಾವಿರ ವರ್ಷಗಳ ಕಾಲದಲ್ಲಿ ಮತ್ತು ಮುಂದೆಯೂ ಆತನು ಬಲಗಡೆಯಲ್ಲಿ ಅಸೀನನಾಗಿರುವನು.

ದೇವರ ಯೋಜನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದರೆ ಕ್ರಿಸ್ತನ ಮೊದಲನೇ ಆಗಮನ ಮತ್ತು ಎರಡನೇ ಆಗಮನ ಎರಡು ಭಾಗವಾಗಿ ವಿಭಾಗಿಸಲ್ಪಟ್ಟು ಒಂದೇ ಯೋಜನೆಗೆ ಸಂಬಂಧಿಸಿದ್ದಾಗಿದೆ. ಮೊದಲನೆ ಬರುವಿಕೆಯು ಪಾಪಿಗಳನ್ನು ಪಾಪದಿಂದ ಬಿಡಿಸಿ ರಕ್ಷಿಸುವುದಕ್ಕೆ ಎರಡನೇ ಬರೋಣವು ಲೋಕದ ಸರ್ವಜನಾಂಗವನ್ನು ಆಶೀರ್ವದಿಸಿ ನೀತಿರಾಜ್ಯವನ್ನು ಸ್ಥಾಪಿಸಲು. ಈಗ ಇಹ ಲೋಕಾಧಿಪತಿಯಾದ ಸೈತಾನನು ಈ ಲೋಕವನ್ನು ಆಳುತ್ತಿರುವನು. ಸಭೆಯೆಂಬ ಕನ್ಯೆಯೂ ಪರಿಪೂರ್ಣಶುದ್ಧವಾದ ಕೂಡಲೇ ಲೋಕದ ಸರ್ವಜನಾಂಗವನ್ನು ಆಶೀರ್ವದಿಸುವ ಕಾರ್ಯವು ಪ್ರಾರಂಭವಾಗುತ್ತದೆ.

ಅಪೋಸ್ತಲರು ನಿರೀಕ್ಷಿಸಿದಂತೆ ರಕ್ಷಕನು ವಿಮೋಚನೆಯ ಬೆಲೆಯನ್ನು ಕೊಟ್ಟ ಕೂಡಲೇ ಆತನ ರಾಜ್ಯ ಮತ್ತು ಆಶೀರ್ವಾದದ ಕಾಲವು ಪ್ರಾರಂಭವಾಗಿ ಆತನ ಮೊದಲನೇ ಬರೋಣವು ಮುಕ್ತಾಯವಾಗಬೇಕಾಗಿತ್ತು. ಅ.ಕೃ.1:6 ಆದರೆ ದೇವರು ಸತ್ಯಸಭೆಗೆ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿದ್ದರಿಂದ ಇಬ್ರಿ 11:40 ಸಭೆಯು ಕ್ರಿಸ್ತನಿಗೋಸ್ಕರ ಹತ್ತೊಂಬತ್ತು ಶತಮಾನಗಳಿಂದ ಅನೇಕ ಕಷ್ಟಗಳನ್ನು ಅನುಭವಿಸುತ್ತಿರುವುದು.

ಕ್ರಿಸ್ತನ ಮೊದಲನೆ ಬರುವಿಕೆ ಮತ್ತು ಆತನ ಎರಡನೇ ಬರುವಿಕೆ ಇವೆರಡರ ಮಧ್ಯದ ಕಾಲವೇ ಸತ್ಯಸಭೆಯನ್ನು ಆರಿಸುವ ಕಾಲವಾಗಿರುವುದು. ಈಗಿಲ್ಲದಿದ್ದರೆ ಕ್ರಿಸ್ತನ ಪುನರುತ್ಥಾನವಾದ ಕೂಡಲೇ ಸಾವಿರ ವರ್ಷಗಳ ಆಳ್ವಿಕೆಯು ಪ್ರಾರಂಭವಾಗಬಹುದಿತ್ತು. ಎರಡು ಸಾರಿ ಬರುವುದರ ಬದಲು ಒಂದೇ ಸಾರಿ ಬರಬಹುದಾಗಿತ್ತು. ಆದರೆ ದೇವರ ಯೋಜನೆಯ ಪ್ರಕಾರ ಆರುಸಾವಿರ ವರ್ಷಗಳು ಲೋಕವು ಸೈತಾನನ ವಶದಲ್ಲಿದ್ದು ಏಳನೇ ಸಾವಿರ ವರ್ಷದಲ್ಲಿ ಸಮಸ್ತವನ್ನು ಸರಿಪಡಿಸುವ ಕಾರ್ಯವು ನಡೆಯಬೇಕಾಗಿರುವುದು. ದೇವರು ಚಿಕ್ಕ ಹಿಂಡನ್ನು ಆರಿಸಲು ತೆಗೆದುಕೊಂಡಿರುವ ಕಾಲವು ದೀರ್ಘವಾಗಿ ಕಂಡರು. ತಕ್ಕ ಕಾಲದಲ್ಲಿ ಆತನ ಚಿತ್ತದಂತೆ ಎಲ್ಲವೂ ನೆರವೇರುವುದು.

ಸತ್ಯವೇದದ ಪ್ರಕಾರ ಕ್ರಿಸ್ತನು ಸಮಸ್ತವನ್ನು ಸರಿಮಾಡಲು ಬರುವ ತನಕ ಪರಲೋಕವೇ ಆತನ ಸ್ಥಾನವಾಗಿರಬೇಕು. ಅಕೃ 3:21 ಸರಿಪಡಿಸುವಿಕೆಯೇ ಆತನ ಎರಡನೇ ಬರೋಣದ ಉದ್ದೇಶವೆಂದು ಸತ್ಯವೇದವು ಶ್ರುತಪಡಿಸುತ್ತದೆ. ಆದುದರಿಂದ ಆತನ ಪ್ರತ್ಯಕ್ಷತೆಯ ಕಾಲದಲ್ಲಿ ಜನಾಂಗಗಳು ಕೋಪಿಸಿಕೊಂಡವು. ಪ್ರಕ 11:18 ಇದರಿಂದ ಲೋಕದ ಪರಿವರ್ತನೆಯು ಈ ಕಾಲದಲ್ಲಿ ಸಾಧ್ಯವಿಲ್ಲ ಎಂದು ತಿಳಿದುಬರುತ್ತದೆ. ಇದು ಕೆಲವರಿಗೆ ವಿಚಿತ್ರವಾಗಿ ಕಂಡುಬರಬಹುದು. ದೇವರು ಕೇವಲ ಒಂದು ಸಭೆಯನ್ನು ಮಾತ್ರ ಆರಿಸುತ್ತಿರುವನು ಎಂದು ಭಾವಿಸುವರು, ಆದರೆ ಸಭೆಯ ಮೂಲಕವೇ ಸರಿಪಡಿಸುವ ಕಾರ್ಯವು ನಡೆಯುವುದು. ಈ ಸಂತತಿಯು ಮೂಲಕವೇ ಸರ್ವಜನಾಂಗಗಳು ಆಶೀರ್ವಾದಕ್ಕೆ ಪಾತ್ರರಾಗುವರು.

ಈ ಆರು ಸಾವಿರ ವರ್ಷಗಳಿಂದಲೂ ದೇವರು ಲೋಕವನ್ನು ಸರಿಪಡಿಸಲು ಪ್ರಯತ್ನಿಸಿರುವನು. ಪ್ರತಿ ಸಾರಿಯೂ ವಿಫಲನಾಗುತ್ತಿರುವನು ಎಂದು ಕೆಲವರು ಹೇಳುವರು. ಆದರೆ ದೇವರ ಬಾಯಿಂದ ಹೊರಟ ಮಾತು ಆತನ ಇಷ್ಟಾರ್ಥವನ್ನು ಕೈಗೂಡಿಸಿದ ಹೊರತು ವ್ಯರ್ಥವಾಗಿ ಹಿಂತಿರುಗುವುದಿಲ್ಲ. ಯೆಶಾ 55:11 ಎಂಬ ಮಾತುಗಳನ್ನು ಅವರು ಮರೆತಂತಿದೆ. ಆದುದರಿಂದ ಲೋಕವು ಪೂರ್ತಿಯಾಗಿ ಮಾರ್ಪಾಡಾಗದೇ ಇರುವುದು, ಲೋಕದಲ್ಲಿ ಯೆಹೋವನ ಜ್ಞಾನವು ತುಂಬಿಕೊಳ್ಳದೇ ಇರುವುದರಿಂದ ಆತನ ಕಾರ್ಯವೂ ಇನ್ನೂ ಮುಗಿದಿಲ್ಲ.

ಇದು ಎರಡು ಪದಗಳನ್ನು ನಮ್ಮ ನೆನಪಿಗೆ ತರುತ್ತದೆ – ಆರಿಸುವಿಕೆ ಮತ್ತು ಉಚಿತ ಕೃಪೆ. ಸತ್ಯವೇದದ ಸಹಾಯದಿಂದ ಪರಿಶೀಲಿಸಿದರೆ ಎರಡರಲ್ಲೂ ಹೊಂದಾಣಿಕೆ

ಕಡಿಮೆ. ಆರಿಸಿಕೊಳ್ಳುವ ಕಾಲವು, ಸುವಾರ್ತಾಯುಗಕ್ಕೆ ಸಂಬಂಧಿಸಿದ್ದು. ಉಚಿತ ಕೃಪೆಯು ಮುಂದಿನ ಯುಗಕ್ಕೆ ಸಂಬಂಧಿಸಿದ್ದು. ಆರಿಸುವಿಕೆಯು ಶೀಘ್ರವಾಗಿ ನಡೆಯತಕ್ಕದ್ದಲ್ಲ. ದೇವರ ಉದ್ದೇಶಕ್ಕೆ ಅನುಗುಣವಾಗಿದೆ. ಪ್ರಾರಂಭದಲ್ಲಿ ದೇವರ ಕೃಪೆ ಉಚಿತವಾಗಿತ್ತು. ಆದರೆ ಮಾನವನು ಪಾಪದಲ್ಲಿ ಬಿದ್ದಂದಿನಿಂದ ಈ ಯುಗದಲ್ಲಿ ಅದು ಕೆಲವರಿಗೆ ಮಾತ್ರ ಮೀಸಲಾಗಿರುವುದು. ಮುಂದಿನ ಯುಗದಲ್ಲಿ ಉಚಿತವಾಗಿ ಎಲ್ಲರಿಗೂ ಹಂಚಲಾಗುವುದು ಪ್ರಕ 22:17.

ಅಬ್ರಹಾಮನ ಸಂತತಿಯಿಂದ ಲೋಕದ ಸರ್ವಜನಾಂಗಗಳು ಆಶೀರ್ವಾದ ಹೊಂದುವರು. ಗಲಾತ್ಯ 3:29 ಇಸ್ರಾಯೇಲ್ಯರನ್ನು ಐಗುಪ್ತದಿಂದ ಬಿಡುಗಡೆ ಮಾಡಿದ್ದು, ಯಜ್ಞಾರ್ಪಣೆಯಿಂದ ದೋಷ ಪರಿಹಾರ ಇವೆಲ್ಲವೂ ದೇವರ ಯೋಜನೆಯ ಛಾಯೆಗಳು, ದೇವರು ತನ್ನ ಜನರೊಂದಿಗೆ ಮಾತಾಡಿ 'ಭೂಮಿಯ ಸಕಲ ಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಆರಿಸಿಕೊಂಡಿದ್ದೇನೆ. 'ಆಮೋಸ 3:2 ಎಂದು ನುಡಿದಿರುವನು. ಕ್ರಿಸ್ತನು ಬರುವವರೆಗೆ ಇಸ್ರಾಯೇಲ್ಯರು ದೇವರಾದುಕೊಂಡ ಜನಾಂಗದವರಾಗಿದ್ದರು ಆತನು ಬಂದ ಮೇಲೂ ತನ್ನ ಶಿಷ್ಯರು ಅನ್ಯರ ಬಳಿಗೆ ಹೋಗಲು ಬಿಡಲಿಲ್ಲ 'ಅನ್ಯ ಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ' ಎಂದು ಶಿಷ್ಯರಿಗೆ ಅಪ್ಪಣೆ ಕೊಡಲು ಶಿಷ್ಯರು ಅದು ಯಾಕೆ ಎಂದು ಪ್ರಶ್ನಿಸಲು 'ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲ್ ಮನೆತನದವರ ಬಳಿಗೆ ಕಳುಹಿಸಲ್ಪಟ್ಟಿರುವೆನು ಅಂದನು' ಮತ್ತಾ 10:5, 6; 15:24 ಹೀಗೆ ಕೇವಲ ಇಸ್ರಾಯೇಲ್ಯರ ನಡುವೆ ತನ್ನ ಮೊದಲನೆ ಕಾರ್ಯವನ್ನು ಪೂರ್ಣ ಮಾಡಿದನು. ಆದರೆ ತಕ್ಕ ಕಾಲದಲ್ಲಿ ಆತನ ಉಚಿತಾರ್ಥ ವರವು ಎಲ್ಲರಿಗೂ ದೊರೆಯುವುದು. ಯಾಕೆಂದರೆ ಕ್ರಿಸ್ತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು' ಇಬ್ರಿ 2:9 ಈ ಸುವಾರ್ತಾ ಯುಗದಲ್ಲೂ ದೇವರ ವಾಕ್ಯಲಾಭವನ್ನು ಕೆಲವರು ಮಾತ್ರ ಪಡೆಯುತ್ತಿರುವರು. ಲಕ್ಷಾಂತರ ಜನರು ಸುವಾರ್ತೆಯನ್ನಾಗಲಿ ದೇವರ ಕರೆಯನ್ನಾಗಲಿ ಲಕ್ಷಿಸದೆ ಅಜ್ಞಾನದಲ್ಲಿರುವರು. ಈ ಯುಗದಲ್ಲಿ ಕ್ರಿಸ್ತನ ದೇಹವಾದ ಸಭೆಯೂ ಪೂರ್ತಿಯಾದ ಕೂಡಲೇ ಈ ಲೋಕದ ರಕ್ಷಣಾ ಕಾರ್ಯವು ಪ್ರಾರಂಭವಾಗುವುದು. ಇವರನ್ನು ಮಹಿಮೆ ಪಡಿಸುವವರೆಗೂ ಸೈತಾನನ ತಲೆಯನ್ನು ಜಜ್ಜುವುದಕ್ಕಾಗುವುದಿಲ್ಲ. "ಶೀಘ್ರವಾಗಿ ಶಾಂತಿದಾಯಕನಾದ ದೇವರು ಸೈತಾನನ್ನು ನಿಮ್ಮ ಕಾಲುಗಳು ಕೆಳಗೆ ಹಾಕಿ ತುಳಿದು ಬಿಡುವನು." ರೋಮಾ 16:20; ಆದಿ 3:15 ಈ ಸಭೆಯೆಂಬ ಕನ್ಯೆಯು ತನ್ನನ್ನು ಶುದ್ಧಮಾಡಿಕೊಳ್ಳುತ್ತಾ ಇರುವಳು ಪ್ರಕ 19:7 ಮದಲಿಂಗನು ಬಂದಕೂಡಲೇ ಸಿದ್ಧವಾಗಿರುವವರೆಲ್ಲರೂ ವಿವಾಹಕ್ಕೆ ಹೋಗುವರು. ಎರಡನೇ ಆದಾಮನು ಎರಡನೇ ಹವ್ವಳು ಒಂದಾಗುವರು. ಅಂದರೆ ಕ್ರಿಸ್ತನೂ ಸಭೆಯೂ ಒಂದಾಗಿ ಸಮಸ್ತವನ್ನು ಸರಿಪಡಿಸುವ ಕಾರ್ಯವನ್ನು ಪ್ರಾರಂಭಿಸುವರು. ಮುಂದಿನ ಯುಗದಲ್ಲಿ ನೂತನಾಕಾಶ ನೂತನ ಭೂಮಂಡಲದಲ್ಲಿ ಸಭೆಯೂ ಕನ್ಯೆಯಾಗಿರದೇ "ಆತ್ಮನೂ ಮದಲಗಿತ್ತಿಯೂ ಒಂದಾಗಿ ಬಾಯಾರಿದವರೂ ಬರಲಿ, ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" ಪ್ರಕ 22:17 ಎನ್ನುವರು. ಈ ಸುವಾರ್ತಾಯುಗ ಸಭೆಯ ಆರಿಸುವಿಕೆ ಮುಂದಿನ ಮಹಾ ಕಾರ್ಯಕ್ಕೆ ಸಿದ್ಧತೆಯಾಗಿದೆ. ವಾಗ್ದಾನವು ನೆರವೇರುವವರೆಗೆ ಜಗತ್ತೆಲ್ಲಾ ನರಳುತ್ತಾ ಪ್ರಸವವೇದನೆ ಪಡುತ್ತಿರುವುದು ಮತ್ತು ಆತನ ಪ್ರತ್ಯಕ್ಷತೆಯನ್ನು ಬಹು ಲವಲವಿಕೆಯಿಂದ ಎದುರುನೋಡುತ್ತಿರುವುದು. ರೋಮಾ 8:22:19 ಮುಂದಿನ ಯುಗದಲ್ಲಿ ಬದುಕಿರುವವರು ಮಾತ್ರವಲ್ಲ ಸತ್ತವರು ಎದ್ದು ದೇವರ ಆಶೀರ್ವಾದವನ್ನು ಹೊಂದುವರು. ಯಾಕೆಂದರೆ ಕ್ರಿಸ್ತನು ತನ್ನ ಪರಿಶುದ್ಧ ರಕ್ತದಿಂದ ಲೋಕಕ್ಕೆ ಕ್ರಯ ಕೊಟ್ಟಿರುವನು.

ಆದಾಮನ ಸೃಷ್ಟಿಯಿಂದ ಇಂದಿನವರೆಗೆ ಈ ಲೋಕದಲ್ಲಿ ಎಷ್ಟೋ ಕೋಟಿಜನಗಳು ಬದುಕಿ ಬಾಳಿ ಸತ್ತಿರುವರು. ಇವರಲ್ಲಿ ಕೊಂಚ ಮಂದಿ ಮಾತ್ರದೇವಜನರಾಗಿದ್ದು ಉಳಿದವರು ಯೇಸುವಿನ ಹೆಸರನ್ನು ಅರಿಯದೆ ಸತ್ತಿರುವರು. ಇವರ ಗತಿ ಏನಾಯಿತು? ದೇವರಿಗೆ ಇವರ ಸ್ಥಿತಿಮೊದಲೇ ತಿಳಿದಿತ್ತಲ್ಲಾ ಇವರಿಗೆ ಯಾವ ಸಹಾಯವನ್ನು ಮಾಡಲಿಲ್ಲವೇ? ಅಥವಾ ಇವರು ನಿರಂತರ ನರಕ ಯಾತನೆಗೆ ಗುರಿಯಾಗಿರುವರೇ? ಅಥವಾ ದೇವರ ಯೋಜನೆಯಲ್ಲಿ ರಕ್ಷಣೆ ಹೊಂದುವ ಹೆಸರನ್ನು ಕೇಳಲು ಅವಕಾಶವಿದೆಯೋ? ಎಂಬ ಪ್ರಶ್ನೆಗಳಿಗೆ ವಿವಿಧ ಪಂಗಡದವರು ವಿವಿಧ ರೀತಿಯಲ್ಲಿಉತ್ತರಿಸಿರುವರು. ಅದನ್ನು ಸ್ವಲ್ಪ ತಿಳಿಯೋಣ.

ನಾಸ್ತಿಕರ ಉತ್ತರ : ಮರಣವೆಂಬುದು ನಿರಂತರ. ಮುಂದೆ ಅವರಿಗೆ ಜೀವಿಸುವ ಅವಕಾಶ ಎಂದಿಗೂ ಇರುವುದಿಲ್ಲ.

ಕಾಲ್ವಿನೀಯರ ಉತ್ತರ : ದೇವರು ಅವರನ್ನು ರಕ್ಷಿಸಲು ಆರಿಸಿಕೊಳ್ಳಲಿಲ್ಲ ಅವರು ನಿರಂತರ ನರಕಯಾತನೆಯನ್ನು ಅನುಭವಿಸುವರು. ಇವರಿಗೆ ಯಾವ ನಿರೀಕ್ಷೆಯೂ ಇಲ್ಲ.

ಅರ್ಮಿನಿಯರಉತ್ತರ : ಅವರ ಅಜ್ಞಾನಕ್ಕೋಸ್ಕರ ದೇವರು ಅನೇಕರನ್ನು ಕ್ಷಮಿಸುತ್ತಾನೆ. ಯೇಸುವಿನ ಹೆಸರನ್ನು ಕೇಳದಿದ್ದರೂ ನಂಬಿಕೆಯಿಂದ ಸಭೆಯಲ್ಲಿ ಪಾಲನ್ನು ಪಡೆಯುವರು.

ಹೆಚ್ಚುಮಂದಿ ಕ್ರೈಸ್ತರು ಕಡೇ ಉತ್ತರವನ್ನು ಒಪ್ಪುವವರಾಗಿರುವರು. ಆದರೆ ಸತ್ಯವೇದವು ಮೇಲಿನ ಉತ್ತರವನ್ನೆಲ್ಲಾ ವಿರೋಧಿಸುವುದಾಗಿದೆ. ಅಜ್ಞಾನವು ರಕ್ಷಣೆಗೆ ಮಾರ್ಗ ಎಂದು ಅದು ಎಂದಿಗೂ ಬೋಧಿಸುವುದಿಲ್ಲ. ರಕ್ಷಕನಾದ ಕ್ರಿಸ್ತನಲ್ಲಿ ನಂಬಿಕೆಯಿಟ್ಟರೆ ರಕ್ಷಣೆ ಸಾಧ್ಯ ಎಂದು ತಿಳಿಸಿದೆ. "ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ" ಎಫೆಸ 2:8. ನಂಬಿಕೆಯಿಂದ ನೀತಿವಂತರಾಗುವುದು ಸತ್ಯವೇದದ ಮೂಲ ತತ್ವವಾಗಿದೆ. ಕ್ರಿಸ್ತನಲ್ಲದೆ "ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ" ಅ.ಕೃ 4:12. ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೂ ರಕ್ಷಣೆಯಾಗುವುದು ರೋಮಾ 10:13.

ನಂಬುವುದಕ್ಕೆ ಮೊದಲು ಸುವಾರ್ತೆಯನ್ನು ತಿಳಿದಿರಬೇಕು ಎಂದು ಪೌಲನು ವಾದಿಸುವವನಾಗಿದ್ದಾನೆ. "ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವುದು ಹೇಗೆ" ಆತನ ಸುದ್ದಿಯನ್ನು ಕೇಳದಿರುವಲ್ಲಿ ಆತನನ್ನು ನಂಬುವುದು ಹೇಗೆ ರೋಮಾ 10:14.

ಅಜ್ಞಾನವು ಮನುಷ್ಯನನ್ನು ರಕ್ಷಿಸುವುದು ಎಂದು ಪೌಲನು ಹೇಳಿರುವನು ಎಂದು ಕೆಲವರು ಹೇಳುತ್ತಾರೆ. "ಧರ್ಮಶಾಸ್ತ್ರವಿಲ್ಲದ ಅನ್ಯ ಜನರು ತಾವೇ ತಮಗೆ ಧರ್ಮಪ್ರಮಾಣವಾಗಿದ್ದಾರೆ" ರೋಮಾ 2:14 ಕೆಲವರು ಈ ವಚನವನ್ನು ತಪ್ಪಾಗಿ ತಿಳಿದುಕೊಂಡಿರುವರು. ಅವರಿಗೆ ತಕ್ಕ ಫಲದೊರೆಯುತ್ತದಷ್ಟೆ ಯಾಕೆಂದರೆ ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವುದು ರೋಮಾ 3:19 ಆದರೆ ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ ರೋಮಾ 3:20 ಇದು ಯೆಹೂದ್ಯರ ಬಲಹೀನತೆಯನ್ನು ತೋರಿಸಿತು ಮತ್ತು ಧರ್ಮಶಾಸ್ತ್ರವು ಯೆಹೂದ್ಯರನ್ನು ಖಂಡಿಸಿತು. ಅನ್ಯ ಜನರು ತಮ್ಮ ವರ್ತನೆಯಿಂದಲೇ ಖಂಡನೆ ಹೊಂದಿದರು. ಹೀಗೆ ಎಲ್ಲರೂ ದೇವರ ಮುಂದೆ ಅಪರಾಧಿಗಳಾಗಿರುವರು.

ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಗೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದ್ದರೆ ಅವನು ಅಪರಾಧಿಯಾಗುತ್ತಾನೆ ಯಾಕೋ 2:10 ಎಂಬ ಹೇಳಿಕೆಯನ್ನು ಜ್ಞಾಪಿಸಿಕೊಳ್ಳಿರಿ. ನೀತಿವಂತನು ಇಲ್ಲ ಒಬ್ಬನಾದರೂ ಇಲ್ಲ ರೋಮಾ 3:10 ಆದುದರಿಂದ ಅಜ್ಞಾನದಿಂದ ನಂಬಿಕೆ ಮತ್ತು ವಿಧೇಯತ್ವವೆಂಬ ಬಹುಮಾನವನ್ನು ಪಡೆಯಲು ಸಾಧ್ಯವಿಲ್ಲ ಎಂದು ಸತ್ಯವೇದವು ತಿಳಿಸುತ್ತದೆ. ಚಿಕ್ಕ ಮಕ್ಕಳು ವಿಗ್ರಹಾರಾಧಕರು ಇತರರು ನಿತ್ಯವಾಗಿ ನಾಶವಾಗುವರು ಎಂದು ನಂಬಲು ಇಷ್ಟಪಡುವುದಿಲ್ಲ. ಹೌದು ಎಂದಿಗೂ ಯಾರು ನಾಶವಾಗುವುದಿಲ್ಲ. ದೇವರು ಪ್ರತಿಯೊಬ್ಬನಿಗೂ ಒಂದು ಮಾರ್ಗವನ್ನು ಏರ್ಪಡಿಸಿರುವನು. ಇದರಿಂದ ರಕ್ಷಣೆಗೆ ಅನೇಕ ಮಾರ್ಗಗಳಿವೆ ಎಂದು ತಿಳಿಯಬಾರದು. ಮಾನವರಿಗೆ ಇರುವ ಒಂದೇ ಮಾರ್ಗವೆಂದರೆ ಲೋಕದ ಪಾಪ ನಿವಾರಣೆ ಮಾಡಿದ ಕ್ರಿಸ್ತನ ಪರಿಶುದ್ಧರಕ್ತದಲ್ಲಿ ನಂಬಿಕೆಯಿಡುವುದು. 1 ಪ್ರೇತ್ರ 1:19 ಯೋಹಾನ 1:29 ಇದು ಲೋಕದ ಸರ್ವಜನಾಂಗಗಳಿಗೆ ಸಂತೋಷವನ್ನುಂಟುಮಾಡುವ ಶುಭ ಸಮಾಚಾರವಾಗಿದೆ. ಈಗ ಸತ್ತಿರುವ ಸರ್ವಜನಾಂಗಗಳ ಜನರ ಗತಿಯೇನಾಯಿತು? ಎಂದು ಪ್ರಶ್ನಿಸಿದರೆ, ಅವರು ಖಂಡಿತವಾಗಿಯೂ ನಿರಂತರ ನರಕಯಾತನೆಯನ್ನು ಅನುಭವಿಸುತ್ತಿಲ್ಲ ಯಾಕೆಂದರೆ ಕ್ರಿಸ್ತನು ಬರುವವರೆಗೆ ಸಭೆಗೆ ಯಾವ ಪ್ರತಿಫಲವಿಲ್ಲ. ಅವನು ಬರುವಾಗ ಒಬ್ಬೊಬ್ಬನಿಗೆ ಅವನ ನಡತೆಯ ಪ್ರಕಾರ ತಕ್ಕ ಫಲವನ್ನು ಕೊಡುವನು ಮತ್ತಾ 16:27. ಸದ್ಯಕ್ಕೆ ಯಾವ ಸ್ಥಿತಿಯಲ್ಲಿದ್ದರು ಅದು ತಕ್ಕ ಪ್ರತಿಫಲವಲ್ಲ ಯಾಕೆಂದರೆ ದುರ್ಮಾಗಿಗಳನ್ನು ನ್ಯಾಯ ತೀರ್ಪಿನ ದಿನ ತನಕ ಶಿಕ್ಷಾನುಭವದಲ್ಲಿ ಇಡಲು ಕರ್ತನು ಬಲ್ಲನು" 2 ಪ್ರೇತ2:9.

"ದೇವರು ಪ್ರೀತಿ ಸ್ವರೂಪಿ" "ದೇವರು ಲೋಕದ ಮೇಲೆ ಎಷ್ಟೋ ಪ್ರೀತೀಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಕೊಟ್ಟನು." 1 ಯೋಹಾನ 4:8 ಯೋಹಾನ 3:16 ಈ ವಾಕ್ಯಗಳ ಅರ್ಥವೇನು? ನಂಬುವವರಿಗೂ ನಂಬದೇ ಇರುವವರಿಗೂ ರಕ್ಷಣಾ ಮಾರ್ಗವನ್ನು ಕಲ್ಪಿಸಿದ ಹಾಗಾಯಿತು. ಪುನಃ ನಿಜವಾದ ಬೆಳಕು ಲೋಕಕ್ಕೆ ಬರುವುದಾಗಿತ್ತು, ಆ ಬೆಳಕೇ ಪ್ರತಿ ಮನುಷ್ಯನಿಗೆ ಬೆಳಕು ಕೊಡುವಂಥಾದ್ದು ಯೋಹಾನ 1:9 ಎಂದು ಓದುತ್ತೇವೆ. ಆದರೆ ಸರಿಯಾಗಿ ನೋಡಿದರೆ ಯಾರು ಜ್ಞಾನವಂತರಾಗಿಲ್ಲ. ಕ್ರೈಸ್ತರೇ ಆ ಬೆಳಕನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ.

"ಕ್ರಿಸ್ತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು" ಇಬ್ರಿಯ 2:9 ಆದುದರಿಂದ ಆತನು ಕೆಲವರಿಗೆ ಮಾತ್ರ ಸತ್ತಿದ್ದರೆ ದೇವರ ಯೋಜನೆ ಸುಳ್ಳಾಗುತ್ತಿತ್ತು. ಜನರಿಗೆಲ್ಲಾ ಮಹಾ ಸಂತೋಷವನ್ನುಂಟು ಮಾಡುವ ಶುಭ ಸಮಾಚಾರವನ್ನು ನಿಮಗೆ ತಿಳಿಸುತ್ತೇನೆ ಲೂಕ 2:10 ಇದು ಕೇವಲ ಕೊಂಚ ಮಂದಿಗಲ್ಲ ಲೋಕದ ಸರ್ವಜನಾಂಗಕ್ಕೆ ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. "ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ ಮನುಷ್ಯನಾಗಿರುವ ಯೇಸು ಕ್ರಿಸ್ತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು" 1 ತಿಮೋ 2:5, 6 ಎಲ್ಲರಿಗಾಗಿ ಸತ್ತನು. ಹಾಗಾದರೆ ಎಲ್ಲರೂ ಸತ್ಯದ ಜ್ಞಾನವನ್ನು ಏಕೆ

ಪಡೆಯಬಾರದು? ಎಲ್ಲರು ಏಕೆ ನಂಬಲಾರರು; ಮೂಲ ವಾಕ್ಯವಿಲ್ಲದೆ ಈ ಹೇಳಿಕೆಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ದೇವರ ವಾಕ್ಯವನ್ನು ಹುಡುಕಿದರೆ "ದೇವರು ಪ್ರೀತಿ ಸ್ವರೂಪನು" ಎಂಬುದೇ ಮೂಲ ವಾಕ್ಯವಾಗಿದೆ. ತಕ್ಕ ಸಮಯದಲ್ಲಿ ವಿಮೋಚನಾರ್ಥವಾಗಿ ಒಪ್ಪಿಸಲ್ಪಟ್ಟನು. ದೇವರಿಗೆ ಎಲ್ಲಕ್ಕೂ ತಕ್ಕ ಸಮಯವಿದೆ. ನಾವು ಹುಟ್ಟುವುದಕ್ಕೆ ಮುಂಚೆಯೆ ಕ್ರಿಸ್ತನು ಜನಿಸಿ ವಿಮೋಚನಾರ್ಥವಾಗಿ ಮರಣ ಅನುಭವಿಸಿದ್ದರೂ ತಕ್ಕ ಕಾಲದಲ್ಲಿಯೇ ಅದು ನೆರವೇರಬೇಕು. ತಕ್ಕ ಕಾಲದಲ್ಲಿ ಅದು ಎಲ್ಲರಿಗೂ ಸಾರಲ್ಪಡುತ್ತದೆ. ಆಗ ಎಲ್ಲರೂ ನಂಬಿ ಧನ್ಯರಾಗುವ ಅವಕಾಶವನ್ನು ಕಲ್ಪಿಸಲಾಗಿದೆ.

ಮರಣವು ಎಲ್ಲವನ್ನು ಕೊನೆಗಾಣಿಸುತ್ತದೆ ಎಂದು ಸತ್ಯವೇದವು ತಿಳಿಸುವುದಿಲ್ಲ. ಹಾಗಿದ್ದ ಪಕ್ಷದಲ್ಲಿ ಅದು ನಮ್ಮ ನಿರೀಕ್ಷೆಯನ್ನೆಲ್ಲಾ ಕೊನೆಗಾಣಿಸುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಗಮನಿಸಬೇಕಾದ ಒಂದು ವಾಕ್ಯವೆಂದರೆ "ಮರವು ತೆಂಕಣಕ್ಕಾಗಲಿ ಬಡಗಣಕ್ಕಾಗಲಿ ಬಿದ್ದರೆ ಬಿದ್ದಹಾಗೆಯೇ ಇರುವುದು ಪ್ರಸಂಗಿ 11:3 ಅಂದರೆ ಮನುಷ್ಯನು ಸತ್ತು ಸಮಾಧಿ ಸೇರಿದ ಮೇಲೆ ಎಬ್ಬಿಸಲ್ಪಡುವವರೆಗೆ ಯಾವ ಬದಲಾವಣೆಯು ಇರುವುದಿಲ್ಲ. ಇದೇ ಸತ್ಯವೇದದ ಮೂಲತತ್ವವಾದುದರಿಂದ" ಎಲ್ಲಾ ಮನುಷ್ಯರು ರಕ್ಷಣೆ ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ದೇವರ ಚಿತ್ತವಾಗಿದೆ" 1 ತಿಮೋ 2:4 ಯಾಕೆಂದರೆ "ಪಾತಾಳದಲ್ಲಿ ಯಾವ ಕೆಲಸವೂ, ಯುಕ್ತಿಯೂ, ತಿಳಿವಳಿಕೆಯೂ ಜ್ಞಾನವೂ ಇರುವುದಿಲ್ಲ" ಪ್ರಸಂಗಿ 9:10 ಆದುದರಿಂದ ನಂಬಿ ಜ್ಞಾನಪಡೆದು ರಕ್ಷಣೆ ಪಡೆಯಬೇಕಾದರೆ ಸತ್ತವರು ಎಬ್ಬಿಸಲ್ಪಡಲೇಬೇಕು. ಹೇಗೆ ಆದಾಮನಿಂದ ಎಲ್ಲರೂ ಸಾಯುವವರಾದರೋ ಹಾಗೆಯೇ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ ಪ್ರತಿಯೊಬ್ಬನು ತನ್ನ ತರಗತಿಯಲ್ಲಿರುವನು. ಅಂದರೆ ಸುವಾರ್ತಾಯುಗದಲ್ಲಿ ಶರೀರವಾದ ಸಭೆ ಮುಂದೆ ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯಲ್ಲಿ ಲೋಕದ ಸರ್ವ ಜನಾಂಗದವರು ಜೀವಿತರಾಗಿ ಜ್ಞಾನ ಪಡೆಯುವರು. 1 ಕೊರಿ 15:22 ಆದಾಮನಿಂದ ಕಳೆದುಕೊಂಡಿದ್ದನ್ನು ಕ್ರಿಸ್ತನಿಂದ ಪಡೆಯುವರು. ಹೀಗೆ ಸರ್ವ ಲೋಕಕ್ಕೆ ರಕ್ಷಣೆಯಾಗುವುದು. ಇಡೀ ಲೋಕವೇ ಮರೆತಿರುವ ಒಂದು ಹೇಳಿಕೆಯನ್ನು ಇಲ್ಲಿ ನಾವು ಗಮನಿಸಬೇಕಾಗಿದೆ" ವಿಶೇಷವಾಗಿ ನಂಬುವವರಿಗೆ ರಕ್ಷಕನಾಗಿರುವ ಜೀವವುಳ್ಳ ದೇವರ ಮೇಲೆ ನಾವು ನಿರೀಕ್ಷೆಯನ್ನಿಟ್ಟುಕೊಂಡಿದ್ದೇವೆ. 1 ತಿಮೋ 4:10 ದೇವರು ಎಲ್ಲರನ್ನು ರಕ್ಷಿಸುವವನಾಗಿದ್ದಾನೆ. ಶುಭ ಸಮಾಚಾರದ ರಕ್ಷಕನು ಎಲ್ಲರಿಗಾಗಿರುವನು ಲೂಕ2:10, 11 ಆತನು ತನ್ನ ಜನರನ್ನು ಪಾಪಗಳಿಂದ ಬಿಡಿಸಿ ಕಾಯುವನು. ಮತ್ತಾ 1:21 ಆದರೆ ಮಗನಿಗೆ ಒಳಗಾಗದವನ ಮೇಲೆ ದೇವರ ಕೋಪವು ನೆಲೆಯಾಗಿರುವುದು. ಯೋಹಾನ 3:36.

ನಿಜವಾದ ಸತ್ಯದ ಬೆಳಕು ಎಲ್ಲರಿಗೆ ರಕ್ಷಣೆ ಕೊಡುವಂಥದ್ದಾಗಿದೆ. ರಕ್ಷಣೆ ಹೊಂದಿದವರೂ ಬೆಳಕನ್ನು ಎದುರು ನೋಡುವವರಾಗಿದ್ದಾರೆ ರೋಮಾ 8:24 ಯಾರು ದೇವರ ರಾಜ್ಯದಲ್ಲಿ ಸತ್ಯವನ್ನು ನಿತ್ಯ ಜೀವವನ್ನು ತಿರಸ್ಕಾರ ಮಾಡುತ್ತಾರೋ ಅಂಥವರು ಎರಡನೇ ಮರಣದಲ್ಲಿ ನಾಶವಾಗುವರು. ಇಬ್ರಿ 10:38,39: ಪ್ರಕ 21:8;ಅ.ಕೃ 3:23. ಇದೇ ಎರಡನೇ ಮರಣ. ಹೀಗೆ ತಕ್ಕ ಕಾಲದಲ್ಲಿ ಎಲ್ಲವೂ ಸರಿಮಾಡಲ್ಪಡುವುದು. ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿ ವಂತರಾಗುವರು. ರೋಮಾ 5:18,19. ಇದೇ ಪೌಲನ ವಾದ.

ಈ ಸಮಸ್ತವನ್ನು ಸರಿಪಡಿಸುವ ಕಾರ್ಯವನ್ನು ದೇವರು ತನ್ನ ಪ್ರವಾದಿಗಳ ಬಾಯಿಂದ ನುಡಿಸಿರುವನು ಎಂದು ಪೇತ್ರನು ತಿಳಿಸಿರುವನು ಅ.ಕೃ. 3:19,21 ಯೆಹೆಜ್ಕೇಲನ ಗ್ರಂಥದಲ್ಲಿರುವ ಯೆಹೆ 37:11–14 ಎಲುಬುಗಳ ಸಾಮ್ಯವು ಇದಕ್ಕೆ ಉತ್ತಮವಾದ ನಿದರ್ಶನವಾಗಿದೆ. ಇದಕ್ಕೆ ಪೌಲನ ಮಾತುಗಳು ತಕ್ಕದಾಗಿದೆ. ಇಸ್ರಾಯೇಲ್ಯರಲ್ಲಿ ಒಂದು ಪಾಲು ಜನರಿಗೆ ಉಂಟಾದ ಮೊಂಡತನವು ಯಾವಾಗಲೂ ಇರದೆ ಅನ್ಯ ಜನಗಳು ದೇವರ ರಾಜ್ಯದಲ್ಲಿ ಸೇರುವತನಕ ಮಾತ್ರ ಇರುವುದು. ರೋಮಾ 11:25, 26 ಅನ್ಯ ಜನರೊಳಗಿಂದ ಸತ್ಯ ಸಭೆಯನ್ನು ಆರಿಸಿಕೊಳ್ಳುವವರೆಗೂ ಇಸ್ರಾಯೇಲ್ಯರನ್ನು ಅಲಕ್ಷಿಸಿದ್ದರೂ ಪೂರ್ಣವಾದ ಮೇಲೆ ಸೇರಿಸಿಕೊಳ್ಳುವನು. ಈ ವಿಷಯವನ್ನು ಕುರಿತು ದೇವರು ಯೆರಮಿಯ 24:5–7;31:28; 32: 40–42; 33:6–16ರಲ್ಲಿ ತಿಳಿಸಿರುವನು. ಹಾಗೆಯೇ ಮುಂದುವರೆದು "ತಂದೆಗಳು ಹುಳಿ ದ್ರಾಕ್ಷಿಯನ್ನು ತಿಂದರು, ಮಕ್ಕಳ ಹಲ್ಲುಗಳು ಚಳಿತು ಹೋಗಿವೆ ಎಲ್ಲರೂ ತಮ್ಮ ದೋಷದಿಂದ ಸಾಯುವರು" ಯೆರೆ 31:29, 30 ಎಂದು ಕರ್ತನು ತಿಳಿಸಿರುವನು. ಸದ್ಯದ ಸ್ಥಿತಿ ಹೀಗಿಲ್ಲ, ಎಲ್ಲರೂ ಆದಾಮನ ದೋಷದಿಂದ ಸಾಯುವರು. ಮುಂದೆ ಸಮಸ್ತವನ್ನು ಸರಿಪಡಿಸುವ ಕಾಲದಲ್ಲಿ ತನ್ನ ತನ್ನ ದೋಷದಿಂದ ಸಾಯುವನು.

ಈ ಎಲ್ಲಾ ವಾಗ್ದಾನಗಳು ಇಸ್ರಾಯೇಲ್ಯರಿಗೆ ಮಾಡಿದಂತೆ ಕಂಡುಬಂದರೂ ವಾಸ್ತವವಾಗಿ ಅದು ಇಡೀ ಪ್ರಪಂಚಕ್ಕೆ ಅನ್ವಯಿಸುತ್ತದೆ. ಇಸ್ರಾಯೇಲ್ ಜನಾಂಗವು ಚಿಕ್ಕ ಹಿಂಡನ್ನು ಸೂಚಿಸುತ್ತದೆ. ಅವರು ಮಾಡುತ್ತಿದ್ದ ದೋಷ ಪರಿಹಾರಕ ಯಜ್ಞಗಳುಮುಂದಿನ ಯಜ್ಞಕ್ಕೆ ಛಾಯೆಯಾಗಿದೆ. ದೇವರು ಎಲ್ಲಾ ಜನಾಂಗದವರನ್ನು ಸರಿಮಾಡುವ ವಾಗ್ದಾನ ಮಾಡಿದ್ದಾನೆ. ಸೋದೋಮ್ ದೇಶದಿಂದ ದೇವರ ಕೃಪೆಯು ತಿಳಿದುಬರುತ್ತದೆ. ಸೋದೊಮ್ಯರು ಮಾತ್ರವಲ್ಲ

ಯೆಹೂದ್ಯರು, ಸುವಾರ್ತೆಯನ್ನು ಕೇಳುವ ನಾವು ಸಹ ಪಾಪಿಗಳಾಗಿದ್ದೇವೆ. "ದೇವರ ಮುಂದೆ ನೀತಿವಂತನು ಒಬ್ಬನಾದರೂ ಇಲ್ಲ." ಬೆಂಕಿಯಿಂದ ಸೋದೊಮ್ ನಾಶವಾಗಿದ್ದರೂ ಅವರು ಯೆಹೂದ್ಯರಷ್ಟು ದುಷ್ಟರಾಗಿರಲಿಲ್ಲ. ಆದಿ 19:24; ಲೂಕ 17:29 ಆದುದರಿಂದಲೇ ಕಪೆರ್ನೌಮಿನವರನ್ನು ಕುರಿತು "ನಿನ್ನಲ್ಲಿ ನಡೆದಿದ್ದ ಮಹತ್ಕಾರ್ಯಗಳು ಸೊದೋಮಿನಲ್ಲಿ ನಡೆದಿದ್ದರೆ ಅದು ಇಂದಿನವರೆಗೂ ಉಳಿಯುತ್ತಿತ್ತು" ಮತ್ತಾ 11:23 ಎಂದು ಕರ್ತನು ನುಡಿದಿರುವನು.

"ನ್ಯಾಯವಿಚಾರಣೆಯ ದಿನದಲ್ಲಿ ಸೋದೋಮ್ ಸೀಮೆಯ ಗತಿ ಮೇಲಾಗಿರುವುದು." ಹೊಸ ಒಡಂಬಡಿಕೆಯ ಪ್ರಕಾರ ಕಪೆರ್ನೌಮ್ ಮತ್ತು ಇಸ್ರಾಯೇಲ್ಯರು ಆಶೀರ್ವಾದ ಹೊಂದುವಾಗ ಸೊದೋಮ್ ಏಕೆ ಕಡೆಗಣಿಸಲ್ಪಡಬೇಕು? ಖಂಡಿತವಾಗಿ ಅವರಿಗೂ ಆಶೀರ್ವಾದ ಉಂಟು.

ಯೆಹೆಜ್ಕೆಲ 16:48–63ರಲ್ಲಿರುವ ಪ್ರವಾದನೆಯನ್ನು ಗಮನಿಸಿದರೆ ದೇವರು ಇಸ್ರಾಯೇಲ್ಯರನ್ನು ನೆರೆದೇಶಗಳಾದ ಸಮಾರ್ಯ ಮತ್ತು ಸೋದೋಮ್‌ನೊಂದಿಗೆ ಹೋಲಿಸಿರುವನು. ತಕ್ಕ ಸಮಯದಲ್ಲಿ ಸೊದೋಮಿನವರು ರಕ್ಷಣೆಪಡೆಯುವ ಅವಕಾಶವನ್ನು ದೇವರು ಒದಗಿಸಿರುವನು.

ಹಾಗೆ ಮುಂದುವರೆದರೆ ದೇವರು ಅಮಾಲೇಕ್ಯರನ್ನು ನಾಶಮಾಡಲು ಇಸ್ರಾಯೇಲ್ಯರಿಗೆ ಅಪ್ಪಣೆಕೊಡುತ್ತಾನೆ. "ಹೋಗಿ ಅವರನ್ನು ಸೋಲಿಸಿ ಅವರಿಗಿರುವುದನ್ನೆಲ್ಲಾ ಸಂಪೂರ್ಣವಾಗಿ ಹಾಳು ಮಾಡು" 1 ಸಮು 15:3. ಇದು ದೇವರ ಪ್ರೀತಿಗೆ ವಿರೋಧವಾಗಿರುವುದು. ಆದರೆ ದೇವರ ಯೋಜನೆಯಲ್ಲಿ ತಕ್ಕ ಕಾಲದಲ್ಲಿ ಕೆಟ್ಟತನವನ್ನು ನಾಶಮಾಡುವನು ಎಂಬುದಕ್ಕೆ ಉದಾಹರಣೆಯಾಗಿದೆ. ಯೆಹೆಜ್ಕೆಲ 16: 48–54ನ್ನು ಗಮನಿಸಿದರೆ ಆಕೆಯ ಕುಮಾರ್ತೆಯರ ದುರವಸ್ಥೆಯನ್ನು ತಪ್ಪಿಸುವೆನು. ಇಲ್ಲಿ ದುರವಸ್ಥೆ ಎಂದರೆ ಮರಣ. ಮರಣವೆಂಬ ಬಂಧನದಲ್ಲಿ ಎಲ್ಲರೂ ಹಿಡಿಯಲ್ಪಟ್ಟಿದ್ದಾರೆ ಕ್ರಿಸ್ತನು ಬಂದು ಸಮಾಧಿಯ ಬಾಗಿಲನ್ನು ತೆಗೆದು ಬಂಧನದಲ್ಲಿರುವವರನ್ನು ಬಿಡುಗಡೆ ಮಾಡುವನು. ಯೆಶಾಯ 61:1; ಜೆಕರ್ಯ 9:11.

ಕೆಲವರು ಕ್ರಿಸ್ತನನ್ನು ನಂಬಿ ಆತನ ಮೂಲಕ ದೇವರ ಕೃಪೆಯನ್ನು ಬಯಸುವರು ಆದರೆ ಹೊಸ ಒಡಂಬಡಿಕೆಯ ಮೂಲಕ ಎಲ್ಲರೂ ದೈವ ಕೃಪೆಗೆ ಪಾತ್ರರಾಗುವರು ಯಾಕೆಂದರೆ ಕ್ರಿ.ಸ್ತನು ಎಲ್ಲರಿಗಾಗಿ ಮರಣವನ್ನು ಅನುಭವಿಸಿದನು "ಹೀಗಿದ್ದರೂ ನಿನ್ನ ಯೌವನ ಕಾಲದಲ್ಲಿ ನಿನ್ನೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಜ್ಞಾಪಕಕ್ಕೆ ತಂದುಕೊಂಡು ನಿನ್ನ ಸಂಗಡ ತಪ್ಪದೆ ಒಡಂಬಡಿಕೆಯನ್ನು ಮಾಡಿಕೊಂಡು ದೃಢಪಡಿಸುವೆನು... ನಾನೇ ಯೆಹೋವನು ಎಂದು ನಿನಗೆ ಗೊತ್ತಾಗುವುದು. ಇದು ಕರ್ತನಾದ ಯೆಹೋವನ ನುಡಿ" ದೇವರ ಈ ವಾಗ್ದಾನದಲ್ಲಿ ಎಲ್ಲರೂ ನಂಬಿಕೆಯಿಟ್ಟು ಸಂತೋಷಿಸುವವರಾಗಿರುವರು.

ಪೌಲನು ಈ ವಿಷಯವಾಗಿ "ಇಸ್ರಾಯೇಲ್ ಜನವೆಲ್ಲಾ ರಕ್ಷಣೆ ಹೊಂದುವುದು ಬಿಡಿಸುವವನು ಚೀಯೋನಿನೊಳಗಿಂದ ಹೊರಟು ಬಂದು ಯಾಕೋಬನಲ್ಲಿರುವ ಭಕ್ತಿ ಹೀನತೆಯನ್ನು ನಿವಾರಣೆ ಮಾಡುವನು. ನಾನು ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯು ನಾನು ಅವರ ಪಾಪಗಳನ್ನು ಪರಿಹರಿಸುವಾಗ ನೆರವೇರುವುದು..." ದೇವರು ವರಗಳನ್ನು ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪಪಡುವವನಲ್ಲ" ರೋಮಾ 11:26–29 ಎಂದು ಬರೆದಿರುವನು. ದೇವರು ತನ್ನ ಕೃಪೆಯನ್ನು ಎಲ್ಲರಿಗೂ ತೋರಿಸುವಾಗ ಯೆಹೂದ್ಯರು ಸೊದೋಮಿನವರು ಮತ್ತು ಸಮಾರ್ಯದವರು ನಾಚಿಕೆಪಡಬಹುದು. ಆದರೆ ದೇವರು ಸರ್ವಜನಾಂಗವನ್ನು ಪ್ರೀತಿಸಿದ್ದನು. ಆತನ ಮಕ್ಕಳು ಕಂಡು ಆಶ್ಚರ್ಯಭರಿತರಾಗಿ ತಮ್ಮ ಯೋಜನೆಗಳಿಗಿಂತ ದೇವರ ಯೋಜನೆಯೇ ಮಹತ್ವವೆಂದು ತಿಳಿಯುತ್ತಾರೆ.

ದೇವರ ಯೋಜನೆಯ ಪ್ರಕಾರ ನೋಡಿದರೆ ಸತ್ಯವೇದದ ಸತ್ಯಗಳು ಅತಿಶಯವಾಗಿಯೂ ಸುಂದರವಾಗಿಯೂ ಇರುವುದು. ಆಲೋಚನೆಯ ಪ್ರಕಾರ ಪಾಪನಿವಾರಣಾ ಕಾರ್ಯವು ಮುಂದೆ ನಡೆಯುವುದರಿಂದ ಕ್ರಿಸ್ತನ ಪುನರಾಗಮವನ್ನು ನಿರೀಕ್ಷಿಸೋಣ. ಈ ಸೈತಾನನ ರಾಜ್ಯದಲ್ಲಿ ದುಷ್ಟತನ, ಪಾಪ ಮತ್ತು ಮರಣ ಮಾನವರನ್ನು ಆಳುತ್ತಿದೆ. ಮುಂದೆಕ್ರಿಸ್ತನ ರಾಜ್ಯದಲ್ಲಿ ಮರಣದ ಬದಲು ನೀತಿ, ನ್ಯಾಯ ನಿತ್ಯಜೀವ ಮಾನವರಿಗೆ ದೊರಕುವುದು ಕ್ರಿಸ್ತನಿಗಾಗಿ ಶ್ರಮಪಡುವವರು ಆತನೊಂದಿಗೆ ಆಳುವರು. ಕ್ರಿಸ್ತನ ಪುನರಾಗಮನವನ್ನೂ ಎಲ್ಲರೂ ತವಕದಿಂದ ಎದುರು ನೋಡುವವರಾಗಿರುವರು. ಅದು ಜನರಿಗೆಲ್ಲಾ ಮಹಾ ಸಂತೋಷವನ್ನುಂಟು ಮಾಡುವ ಶುಭಸಮಾಚಾರವಾಗಿದೆ.

# ಅಧ್ಯಾಯ-7

## ಕೆಟ್ಟತನಕ್ಕೆ ಅನುಮತಿ ಮತ್ತು ದೇವರ ಯೋಜನೆಯೊಂದಿಗೆ ಅದರ ಸಂಬಂಧ

**ಯಾಕೆ ಕೆಟ್ಟದು ಅನುಮತಿಸಲ್ಪಟ್ಟಿತು-ತತ್ವಗಳಾಗಿ ಸರಿ ಮತ್ತು ತಪ್ಪು-ನೀತಿ ಪ್ರಜ್ಞೆ-ದೇವರು ಕೆಟ್ಟದ್ದನ್ನು ಅನುಮತಿಸಿದರು ಮತ್ತು ಅದನ್ನು ಒಳಿತಾಗುವಂತೆ ಮಾರ್ಪಡಿಸುವನ್ನು-ದೇವರು ಪಾಪಕ್ಕೆ ಕಾರಣನಲ್ಲ-ಆದಾಮನ ವಿಚಾರಣೆ ಕೇವಲ ನಾಟಕವಲ್ಲ-ಆತನ ಶೋಧನೆ ತೀವ್ರವಾಗಿತ್ತು-ಆತನು ಸ್ವ ಇಚ್ಛೆಯಿಂದ ಪಾಪಮಾಡಿದನು-ಪಾಪದ ದಂಡನೆಯು ಅನ್ಯಾಯವಾಗಿಲ್ಲ ಅಥವ ಬಹಳ ಕಠಿಣವೂ ಅಲ್ಲ-ಆದಾಮನಲ್ಲಿ ಎಲ್ಲರನ್ನು ಅಪರಾಧಿಗಳೆಂದು ನಿರ್ಣಯಿಸುವಲ್ಲಿ ಜ್ಞಾನ, ಪ್ರೀತಿ ಮತ್ತು ನೀತಿಯನ್ನು ತೋರ್ಪಡಿಸಲಾಗಿದೆ-ದೇವರ ಕಾನೂನು ಸಾರ್ವತ್ರಿಕವಾದದ್ದು.**

ಕೆಟ್ಟತನದ ಫಲ ದುಃಖ ಮತ್ತು ಅಸಂತೋಷ. ಪಾಪ ಮಾಡಿದ್ದರಿಂದ ಕೆಟ್ಟತನ ಪ್ರಾರಂಭವಾಯಿತು. ಆದುದರಿಂದ ಪಾಪವನ್ನು ನಿರ್ಮೂಲಗೊಳಿಸಿದರೆ ಆಗ ಕೆಟ್ಟತನವೂ ನಾಶವಾಗುತ್ತದೆ.

ಎಷ್ಟೊ ಸಮಯಗಳಲ್ಲಿ ನಮ್ಮ ಮನಸ್ಸಿನಲ್ಲಿ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. ದೇವರು ಕೆಟ್ಟತನದ ಆಡಳಿತಕ್ಕೆ ಅವಕಾಶ ಕೊಟ್ಟದೇಕೆ? ನಮ್ಮ ಆದಿ ತಂದೆ ತಾಯಿಗಳನ್ನು ನೀತಿವಂತರಾಗಿ ಸೃಷ್ಟಿಸಿದಾಗ್ಯೂ ಅವರು ಸೈತಾನನಿಂದ ವಂಚಿತರಾಗಲು ಅವಕಾಶ ಕೊಟ್ಟದೇಕೆ? ಒಳ್ಳೆಯದರ ಮಧ್ಯದಲ್ಲಿ ಆ ಜ್ಞಾನ ವೃಕ್ಷವನ್ನು ಬೆಳೆಯ ಮಾಡಿದ್ದೇಕೆ? ಎಲ್ಲಕ್ಕಿಂತ ಹೆಚ್ಚಾಗಿ ಮಾನವನು ಕೆಟ್ಟು ಹೋಗುವುದನ್ನು ದೇವರು ಏಕೆ ತಡೆಯಲಿಲ್ಲ? ದೇವರ ಯೋಜನೆಯ ಅರಿವಿಲ್ಲದ ಮಾನವರಲ್ಲಿ ಇಂತಹ ಪ್ರಶ್ನೆಗಳು ಉದ್ಭವಿಸುವುದು ಸ್ವಾಭಾವಿಕ. ದೇವರು ಪಾಪವನ್ನು ತಡೆಯಬಹುದಾಗಿತ್ತು. ಆದರೆ ಯಾವುದೋ ಒಳ್ಳೆಯದಕ್ಕಾಗಿಯೇ ಪಾಪವನ್ನು ಬೆಳೆಯಲು ಬಿಟ್ಟಿರುವನು. ದೇವರು ಸೈತಾನನನ್ನು ತಡೆಹಿಡಿದಿದ್ದರೆ ತನ್ನ ಉದ್ದೇಶವನ್ನು ತಾನೇ ತಡೆ ಹಿಡಿದಂತಾಗುತ್ತಿತ್ತು. ದೇವದೂತರೂ ಮತ್ತು ಮಾನವರು ಪಾಪದ ಫಲವೇನು ಎಂದು ತಿಳಿಯಲು ಬಿಟ್ಟಿರುವನು. ದೇವರಿಗೂ ಅಸಾಧ್ಯವಾದದ್ದಿದೆ ಅದು "ದೇವರು ಸುಳ್ಳಾಡುವವನಲ್ಲ" ಇಬ್ರಿಯ 6:18 ಮತ್ತು "ತನ್ನ ಸ್ವಭಾವಕ್ಕೆ ವಿರುದ್ಧವಾಗಿ ಏನು ಮಾಡಲಾರನು" 2 ತಿಮೋ 2:13.

ಸಮಸ್ತವೂ ಆತನ ಚಿತ್ತದಂತೆ ಸೃಷ್ಟಿಯಾಯಿತು. ಪ್ರಕ 4:11 ಎಂದು ಸತ್ಯವೇದವು ತಿಳಿಸುತ್ತದೆ. ತನ್ನ ಸೃಷ್ಟಿಕಾರ್ಯದಲ್ಲಿ ಪಾಪಕ್ಕೆ ಅವಕಾಶಕೊಟ್ಟಿರುವುದರಿಂದ ಆತನು ಪಾಪಿಷ್ಟರ ಗುಂಪಿಗೆ ಸೇರಿದವನು ಎಂದು ತಿಳಿಯಬಾರದು ಯಾಕೆಂದರೆ "ಆತನು ದುಷ್ಟತ್ವದಲ್ಲಿ ಸಂತೋಷಿಸುವ ದೇವರಲ್ಲ" ಕೀರ್ತ 5:4. ಆತನು ಕೆಟ್ಟತನವನ್ನು ವಿರೋಧಿಸುವನಾದರು, ಆತನು ತನ್ನ ಸೃಷ್ಟಿಗಳು ಪಾಠ ಕಲಿಯುವುದಕ್ಕಾಗಿ ಮತ್ತು ದೇವರ ಜ್ಞಾನವನ್ನು ತಿಳಿಯುವುದಕ್ಕಾಗಿ ದೇವರು ಪಾಪಕ್ಕೆ ಅವಕಾಶಕೊಟ್ಟಿರುವನು. ಪ್ರತೀ ಸತ್ಯಕ್ಕೂ ಒಂದು ವ್ಯತಿರಿಕ್ತವಾದ ತತ್ವವಿದೆ ಸತ್ಯ ಅಸತ್ಯ ಪ್ರೀತಿ ದ್ವೇಷ, ನ್ಯಾಯ ಅನ್ಯಾಯ. ಇವು ಕಾರ್ಯರೂಪದಲ್ಲಿರುವಾಗ ಮಾತ್ರವೇ ಯಾವುದು ಸರಿ ಯಾವುದು ತಪ್ಪು ಎಂದು ಕಂಡುಬರುವುದು. ಯಾವುದರಿಂದ ಸಂತೋಷವುಂಟಾಗುತ್ತದೋ ಅದು ಒಳ್ಳೆಯದು, ಯಾವುದರಿಂದ ದುಃಖವುಂಟಾಗುತ್ತದೋ ಅದು ಕೆಟ್ಟದ್ದು ಎಂಬ ಅರಿವಾಗುವುದು. ಈ ರೀತಿ ಒಳ್ಳೆಯದರ ಕೆಟ್ಟದರ ಭೇದವನ್ನರಿಯುವುದೇ ತಿಳಿವಳಿಕೆ ಈ ತಿಳಿವಳಿಕೆಯಿಂದಲೇ ನಾವು ದೇವರನ್ನು ಒಳ್ಳೆಯವನೆಂದು ಕರೆಯುತ್ತೇವೆ. ಈ ತಿಳಿವಳಿಕೆಯಿಂದಲೇ ಆದಾಮನು ಕೆಟ್ಟದರ ಪರಿಣಾಮವನ್ನು ಅರಿಯುವ ಮೊದಲೇ ಒಳ್ಳೆಯದನ್ನು ಕೆಟ್ಟದನ್ನು ಗುರುತಿಸುವವನಾದನು. ನಾಯಿಗೂ ಸ್ವಲ್ಪ ತಿಳಿವಳಿಕೆ ಇದೆ. ಆದರೆ ಅದು ಬಹಳ ಕಡಿಮೆ ಮಟ್ಟದ್ದು. ತನ್ನ ಯಜಮಾನನಿಂದ ಮೆಚ್ಚಿಕೆ ಪಡೆಯುವುದನ್ನು ಬಲ್ಲದು ಆದರೇ ಅದೇ ನಾಯಿ ಯಾರನ್ನಾದರೂ ಕೊಂದರೆ ಅದನ್ನು ಪಾಪಿ ಎಂದು ಕರೆಯಲಾಗುವುದಿಲ್ಲ. ಯಾಕೆಂದರೆ ಅದಕ್ಕೆ ಒಳ್ಳೆಯದರ ಮತ್ತು ಕೆಟ್ಟದರ ಅರಿವಿಲ್ಲ.

ದೇವರು ಮಾನವನನ್ನು ಯಾವ ಬೇಧವನ್ನು ಅರಿಯದೆ ಒಳ್ಳೆಯದನ್ನು ಮಾತ್ರ ಗ್ರಹಿಸುವಂತೆ ಮಾಡಿದ್ದರೆ ಆಗ ಅವನು ದೇವರ ಪ್ರತಿ ರೂಪವಾಗದೆ ಕೇವಲ ಬದುಕುವ ಪ್ರಾಣಿಯಾಗುತ್ತಿದ್ದನು. ಇಲ್ಲದೆ ಮಾನವನನ್ನು ಸೈತಾನನ ವಂಚನೆಯಿಂದ ರಕ್ಷಿಸಿಬಿಟ್ಟಿದ್ದರೆ ಅವನ ಜ್ಞಾನವು ಒಳ್ಳೆಯದಕ್ಕೆ ಮಾತ್ರ ಸೀಮಿತವಾಗಿರುತ್ತಿತ್ತು. ಆಗ ಒಳ್ಳೆಯದನ್ನು ಅರಿಯುವ ಮಹತ್ವವು ಅವನಲ್ಲಿರುತ್ತಿರಲಿಲ್ಲ.

ದೇವರು ಆದಿ ತಂದೆತಾಯಿಗಳನ್ನು ಸೃಷ್ಟಿಸಿ ಏದೇನ್ ಉದ್ಯಾನದಲ್ಲಿ ಒಳ್ಳೆಯ ವಾತಾವರಣದಲ್ಲಿ ಬಿಟ್ಟು ಅನಂತರ ಅವರ ಅವಿಧೇಯತ್ವಕ್ಕೆ ಶಿಕ್ಷೆಯಾಗಿ ಕೆಟ್ಟದರ ಅರಿವುಂಟಾಗುವಂತೆ ಮಾಡಿ ಅದಕ್ಕಾಗಿ ದೇವರ ಅನ್ಯೋನ್ಯತೆಯನ್ನು ಕಳೆದುಕೊಂಡು ಏದೇನ್ ತೋಟದಿಂದ ಹೊರಗೆ ಹಾಕಲ್ಪಟ್ಟರು. ಆಗ ಅವರಿಗೆ ರೋಗ ಸಂಕಟ ಮತ್ತು ಮರಣಗಳ ಪರಿಚಯವಾಯಿತು. ಹೀಗೆ ಪಾಪದಿಂದ ಬುದ್ಧಿಕಲಿಯಲೆಂದು ದೇವರು ಮಾನವನನ್ನು ತ್ಯಜಿಸಿದನು. ಹೀಗೆ ಮಾನವನು ಒಳ್ಳೆಯದು ಮತ್ತು ಕೆಟ್ಟದನ್ನು ಅನುಭವಿಸಿ

ಅವನ ಜ್ಞಾನ ಹೆಚ್ಚುವುದು ಅದರಿಂದಲೇ ದೇವರು " ಈ ಮನುಷ್ಯನು ಒಳ್ಳೇದರ ಕೆಟ್ಟದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ" ಆದಿ 3:22 ಎಂದು ಹೇಳಿದ್ದು. ಮುಂದೆ ಕ್ರಿಸ್ತನ ರಾಜ್ಯದಲ್ಲಿ ಒಳ್ಳೆಯದರ ಅರಿವಾಗುವುದು. ಈ ರೀತಿ ಭೇದಗಳನ್ನರಿತಿದ್ದ ಆದಾಮನು ದೇವರ ಪ್ರತಿರೂಪವಾಗಿದ್ದನು. ಸ್ವತಃ ಎರಡನ್ನು ಅರಿಯುವವನಾಗಿದ್ದನು. ಆದರೆ ಈಗ ಕೆಟ್ಟತನವು ಹೆಚ್ಚಾಗಿರುವುದರಿಂದ ಆ ಪ್ರತಿರೂಪವನ್ನು ನಾವು ಕಳೆದುಕೊಂಡಿದ್ದೇವೆ. ಈ ಆರು ಸಾವಿರ ವರ್ಷಗಳಿಂದ ಮಾನವನು ಸಂಪೂರ್ಣ ಪಾಪಕ್ಕೆ ಒಳಗಾಗಿದ್ದಾನೆ. ಇದು ಒಳ್ಳೆಯ ಗುಣವನ್ನು ಪಾಪವು ಮರೆಮಾಡಿ ಕೆಟ್ಟದನ್ನೇ ಆಶಿಸುವಂತೆ ಮಾಡುತ್ತಿದೆ. ಯಾಕೆಂದರೆ ಪಾಪದ ಕೆಲಸ ಸುಲಭವಾಗಿ ಕಂಡುಬರುತ್ತದೆ. ಹೀಗೆ ಕೆಟ್ಟದ್ದರಿಂದ ಬುದ್ಧಿ ಕಲಿತಮೇಲೆ ಮುಂದೆ ಈಕೆಟ್ಟತನದಿಂದಲೇ ಒಳ್ಳೇ ಬುದ್ಧಿ ಕಲಿಯಲು ಸಹಾಯವಾಗುತ್ತದೆ. ಆದಾಮನು ಪಾಪಮಾಡದೇ ಹೋಗಿದ್ದರೆ ಒಳ್ಳೆಯದನ್ನು ಮೆಚ್ಚಲು ಸಾಧ್ಯವಾಗುತ್ತಿರಲಿಲ್ಲ. ಅವನು ಮಾಡಿದ ಯಾವ ಕಾರ್ಯದಲ್ಲೂ ಸದ್ಗುಣ ಕಂಡುಬರುತ್ತಿರಲಿಲ್ಲ. ದೇವರು ತನ್ನನ್ನು ಆರಾಧಿಸುವವರು ಸತ್ಯದಿಂದಲೂ ಆತ್ಮದಿಂದಲೂ ಆರಾಧಿಸಬೇಕು ಎಂದು ಇಚ್ಛಿಸುತ್ತಾನೆ. ಮಾನವನನ್ನು ಭೂಲೋಕದ ಅಧಿಪತಿಯನ್ನಾಗಿ ಮಾಡಿ ಒಳ್ಳೆಯದರ ಮತ್ತು ಕೆಟ್ಟದರ ಪರಿಣಾಮಗಳನ್ನು ತಿಳಿಯಲು ಅವಕಾಶ ಕೊಟ್ಟನು. ಸಧ್ಯಕ್ಕೆ ಒಳ್ಳೆಯತನ ಮತ್ತು ಕೆಟ್ಟತನ ಎಂಬ ಎರಡು ತತ್ವಗಳು ಒಟ್ಟಿಗೇ ಇರಲೇಬೇಕು. ಎರಡರಲ್ಲಿ ಮಾನವನು ಯಾವುದನ್ನು ಬೇಕಾದರೂ ಇಷ್ಟಪಡಬಹುದು ಆದರೆ ಮುಂದೆ ದೇವರ ಯೋಜನೆಯು ಪರಿಪೂರ್ಣವಾದ ಮೇಲೆ ಕೆಟ್ಟತನವು ಅಳಿದು ಹೋಗುವುದು ಮತ್ತು ಅದರ ಹಿಂಬಾಲಕರು ಇಲ್ಲವಾಗಿ ಹೋಗುತ್ತಾರೆ. 1 ಕೋರಿ 15:25–26 ಇಬ್ರಿಯ 2:14. ನೀತಿವಂತರೂ ಸದಾ ಜೀವಿಸುವರು.

ಇಷ್ಟೆಲ್ಲಾ ವಿಷಯಗಳನ್ನು ತಿಳಿಯುವಾಗ ನಮಗೆ ಒಂದು ಪ್ರಶ್ನೆ ಉದ್ಭವಿಸುವುದು ಸಹಜ. ಅನುಭವದಿಂದಲ್ಲದೇ ಬೇರೆ ಯಾವ ರೀತಿಯಲ್ಲಾದರು ಮನುಷ್ಯನು ಕೆಟ್ಟತನವನ್ನು ಅರಿತುಕೊಳ್ಳಲು ಸಾಧ್ಯವಿರಲಿಲ್ಲವೆ? ವಿಷಯಗಳನ್ನು ಗ್ರಹಿಸಲು ನಾಲ್ಕು ಮಾರ್ಗಗಳಿವೆ. ಆ ಒಂದು ಅಂಥ ಜ್ಞಾನದಿಂದ ಅಥವಾ ನಿರೀಕ್ಷಣೆಯಿಂದ ಸಹಜವಾಗಿ ಎರಡನೆಯದು ಅನುಭವದಿಂದ ಮೂರನೆಯದು ನೋಡುವುದರಿಂದ ಕಡೇದಾಗಿ ಸತ್ಯದ ಮೂಲದಿಂದ ದೊರೆತ ಸಮಾಚಾರದಿಂದ ಮೊದಲನೆಯ ರೀತಿ ಮಾನವನ ಗ್ರಹಿಕೆಗೆ ಮೀರಿದ್ದು. ಅದು ದೇವರಾದ ಯೆಹೋವನಿಗೆ ಮಾತ್ರ ಸಾಧ್ಯ. ಆತನೇ ಜ್ಞಾನದ ಬುಗ್ಗೆಯಾಗಿರುವನು. ಎರಡನೆಯದರಿಂದ ಮಾನವನು ಜ್ಞಾನ ಪಡೆಯಬಹುದು ಆದರೆ ಕೆಟ್ಟತನ ಮತ್ತು ಅದರ ಫಲಿತಾಂಶ ಎರಡು ಅವನ ಮುಂದೆ ಪ್ರದರ್ಶಿತವಾಗಲೇಬೇಕು. ಪ್ರದರ್ಶಿಸುವವರು ಯಾರು? ಮಾನವನೇ ಆ ಕಾರ್ಯ ಮಾಡಿ ಇತರರಿಗೆ ಪ್ರದರ್ಶಿಸಬೇಕು. ಹೀಗೆ ಆ ಕಾರ್ಯ ಮಾಡುವಾಗಲೇ ಅವನು ಅನುಭವವನ್ನು ಪಡೆಯುತ್ತಾನೆ ಮತ್ತು ದೇವದೂತರಿಗೂ ಮಾದರಿಯಾಗಿರುವನು.

ಆದಾಮನಿಗೆ ಪಾಪದ ವಿಷಯ ತಿಳಿದಿತ್ತು. ಆದರೆ ಸ್ವತಃ ಅದನ್ನು ಪ್ರಯತ್ನಿಸಿರಲಿಲ್ಲ. ದೇವರು ನಮ್ಮ ಸೃಷ್ಟಿಕರ್ತನೂ ಮಾರ್ಗದರ್ಶಕನೂ ಎಂದು ಅವರಿಬ್ಬರಿಗೂ ತಿಳಿದಿತ್ತು. ಮಾತ್ರವಲ್ಲದೆ "ಒಳ್ಳೆಯದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು ತಿಂದ ದಿನ ಸತ್ತೇ ಹೋಗುವಿ ಎಂದು ಆಜ್ಞಾಪಿಸಿದ್ದನು" ಆದ್ದರಿಂದ ಅವರಿಗೆ ಪಾಪದ ಅರಿವಿತ್ತೇ ಹೊರತು ಅದರ ಅನುಭವವಿರಲಿಲ್ಲ. ದೇವರು ತಮ್ಮನ್ನು ಕಾಪಾಡುವ ರೀತಿಯನ್ನು ಅಷ್ಟಾಗಿ ಮೆಚ್ಚಲಿಲ್ಲ ಹೀಗಾಗಿ ಶೋದಕನ ಶೋಧನೆಗೆ ಒಳಗಾಗಿ ಪಾಠ ಕಲಿಯಲು ಅವಕಾಶ ಕೊಟ್ಟನು. ಆದಿ ತಂದೆತಾಯಿ ಒಳಗಾದ ಶೋಧನೆಯು ಕೆಲವರು ಅಲ್ಪವಾಗಿ ತಿಳಿದಿರುವರು. ಒಂದು ಸಣ್ಣ ತಪ್ಪಿಗೆ ಎಂಥಾ ಒಂದು ದೊಡ್ಡ ಶಿಕ್ಷೆ ಎಂದು ಗೊಣಗುವುದುಂಟು. ಸತ್ಯವೇದವು ಈ ಸಂಗತಿಯನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಮೊದಲು ಶೋಧನೆಗೆ ಒಳಗಾದವಳು ಸ್ತ್ರೀ. ದೇವರು ತನ್ನ ವ್ಯವಹಾರವನ್ನೆಲ್ಲಾ ಆದಾಮನೊಂದಿಗೆ ಮಾತ್ರ ಇಟ್ಟುಕೊಂಡಿದ್ದನು. ಆ ಮರದ ವಿಷಯವಾಗಿ ಆದಾಮನೇ ಸ್ತ್ರೀಗೆ ತಿಳಿಸಿದ್ದನು. ಆದ್ದರಿಂದ ಸುಲಭವಾಗಿ ಸೈತಾನನಿಂದ ವಂಚಿತಳಾಗಿ ಮುಂದೆ ಬರುವ ಶಿಕ್ಷೆ ತಿಳಿಯದೆ ಹಣ್ಣನ್ನು ತಿಂದು ಅಪರಾಧಿಯಾದಳು. ಪೌಲನು ಹೇಳುವ ಪ್ರಕಾರ ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು. ಆದಾಮನಾದರೋ ವಂಚಿತನಾಗಲಿಲ್ಲ 1 ತಿಮೋ 2:14 ವಿಷಯ ತಿಳಿದಿದ್ದು ಅಪರಾಧ ಮಾಡಿದನು. ಪಾಪದಿಂದ ಮರಣ ಬರುವುದೆಂದು ತಿಳಿದಿದ್ದರೂ ಆದಾಮನು ಪಾಪಮಾಡಿ ಮರಣಕ್ಕೆ ಒಳಗಾದನು. ಮಾತ್ರವಲ್ಲದೆ ಸೃಷ್ಟಿ ಕರ್ತನಲ್ಲಿದ್ದ ಪ್ರೀತಿಯ ಗುಣವು ಅವನಲ್ಲಿತ್ತು ಮತ್ತು ಮಾನವೋತ್ತಮನಾಗಿ ಸ್ತ್ರೀಯಾದ ಹವ್ವಳನ್ನು ಪ್ರೀತಿಸುವನಾಗಿದ್ದನು. ಹವ್ವಳು ಹಣ್ಣು ತಿಂದು ಮರಣ ದಂಡನೆಗೆ ಒಳಗಾದಳು. ಹವ್ವಳಿಲ್ಲದ ಬಾಳು ನಿಷ್ಪ್ರಯೋಜಕ ಇದನ್ನು ಅರಿತಿದ್ದ ಆದಾಮನು ತಾನೂ ಹಣ್ಣು ತಿಂದು ಅವಳ ಅವಿಧೇಯತ್ವದಲ್ಲಿ ಭಾಗಿಯಾದನು. ಇದರಿಂದ ಇಬ್ಬರೂ ಅಪರಾಧಿಗಳಾದರು. ಪೌಲನು ಹೇಳುವಂತೆ ಅವರಿಬ್ಬರು ಒಂದೇ ಶರೀರದವರಾಗಿದ್ದರು ಆದಾಮನು ದಂಡನೆಗೆ ಒಳಗಾಗುವಂತೆ ತನ್ನ ನಡತೆಯಿಂದಲೇ ಪಾಲು ಕೊಟ್ಟಳು. ರೋಮಾ 5:14;1 ತಿಮೋ2:14 ರೋಮಾ 5:12;17–19 ಆದುದರಿಂದ ದೇವರು ಆದಾಮನು ಪಾಪದ ವಿಷಯ ಹೆಚ್ಚಾಗಿ ತಿಳಿಯಲೆಂದು ಅದನ್ನು ಆರಿಸಿಕೊಳ್ಳಲು

ಬಿಟ್ಟನು. ಆದರೆ ಪಾಪವು ಅವನ ನೀತಿಯನ್ನು ಸಂಪೂರ್ಣವಾಗಿ ಕೆಡಿಸಿ ಕೆಟ್ಟದನ್ನೇ ಹೆಚ್ಚು ಪರಿಚಯಮಾಡಿ ಮುಂದೆ ಅವನು ಒಳ್ಳೆಯದಕ್ಕಿಂತ ಕೆಟ್ಟದ್ದನ್ನೇ ಹೆಚ್ಚೆಚ್ಚಾಗಿ ಆಶಿಸುವಂತೆ ಮಾಡಿತು. ಹೀಗೆ ಆದಾಮನು ಕೆಟ್ಟದರ ಫಲಿತಾಂಶವನ್ನು ತಿಳಿದು ಮುಂದೆ ಒಳ್ಳೆಯದನ್ನು ಆರಿಸಿಕೊಳ್ಳುವನು ಮತ್ತು ತನ್ನನ್ನು ಸೃಷ್ಟಿಸಿದ ದೇವರು ಎಲ್ಲಾ ಸದ್ಗುಣಗಳಿಗೂ ಒಳ್ಳೆಯದಕ್ಕೂ ಮೂಲಕಾರಣನು ಎಂದು ಕಂಡುಕೊಳ್ಳುವನು.

ದೇವರು ಪಾಪಕ್ಕೆ ಅವಕಾಶ ಕೊಟ್ಟಿದ್ದರೂ ಅದರ ನಿವಾರಣೆಗೆ ಮೊದಲೇ ಸಂಕಲ್ಪವನ್ನು ಏರ್ಪಡಿಸಿದ್ದನು. ಪಾಪದಿಂದ ರೋಗ ಸಂಕಷ್ಟಗಳನ್ನು ಅನುಭವಿಸಿ ಮುಂದೆ ನೀತಿವಂತನಾಗುತ್ತಾನೆ. ಇದನ್ನೇ ದೇವರು ಕಲಿಸುತ್ತಿರುವುದು.

ದೇವರೇ ಪಾಪಕ್ಕೆ ಅವಕಾಶ ಕೊಟ್ಟಿದ್ದರಿಂದ ಆತನೇ ಪಾಪದ ಕರ್ತೃ ಎಂದು ಅನೇಕರು ವಾದಿಸುವವರಾಗಿದ್ದಾರೆ. ಆದರೆ ಅದು ಅರ್ಥವಿಲ್ಲದ್ದು. ಇಂಥವರು ಪಾಪ ನಿವಾರಣೆಗಾಗಿ ಕ್ರಿಸ್ತನನ್ನು ಹುಡುಕದೆ ಬೇರೆ ಮೂಲಗಳನ್ನು ಹುಡುಕುವವರಾಗಿರುವರು. ಎಲ್ಲಾ ಪಾಪ ಕಾರ್ಯಗಳಿಗೆ ದೇವರೇ ಜವಾಬ್ದಾರಿ. ಮನುಷ್ಯನು ದೇವರ ಕೈಗೊಂಬೆ. ಪಾಪದ ನಿವಾರಣೆಗೆ ಯಜ್ಞದ ಆವಶ್ಯಕತೆಯಿರಲಿಲ್ಲ ಬರೀ ನ್ಯಾಯ ಒಂದೇ ಸಾಕಾಗಿತ್ತು. ದೇವರು ಮಾನವನನ್ನು ಹೇಗೆ ಪಾಪ ಮಾಡಲಿಕ್ಕೆ ಬಿಟ್ಟನೋ ಹಾಗೆಯೇ ಅದರ ಫಲವಾದ ಮರಣದಿಂದಲೂ ಬಿಡುಗಡೆ ಮಾಡುವನು ಎಂದು ಪ್ರಾಪಂಚಿಕ ವಾದವನ್ನು ಸ್ಥಾಪಿಸುತ್ತಾರೆ. ಇದರ ವಾದದ ಪ್ರಕಾರ ಮಾನವನು ಒಂದು ಯಂತ್ರದಂತೆ ಅವನಿಗೆ ಒಳ್ಳೆಯ ಮತ್ತು ಕೆಟ್ಟದನ್ನು ಆರಿಸಿಕೊಳ್ಳುವ ಸ್ವಭಾವವೇ ಇರುವುದಿಲ್ಲ. ಹೀಗಾದರೆ ಅವನು ಬುದ್ಧಿಜೀವಿಯಾಗಿ ಪ್ರಪಂಚದ ಅಧಿಪತಿಯಾಗುವುದರ ಬದಲು ಕ್ರಿಮಿಕೀಟಗಳಿಗೂ ಕಡೆಯಾಗುವನು.

ನಿಜ, ದೇವರಿಗೆ ಮಾನವನನ್ನು ಒಳ್ಳೆಯದಕ್ಕಾಗಲಿ ಕೆಟ್ಟದಕ್ಕಾಗಲಿ ತಳ್ಳುವ ಅಧಿಕಾರವಿದೆ ಆದರೆ ಆತನಿಗೆ ಅಂಥ ಉದ್ದೇಶವಿಲ್ಲ ಎಂದು ದೇವರ ವಾಕ್ಯ ಸಾರುತ್ತದೆ. ತನ್ನ ಸ್ವಭಾವಕ್ಕೆ ವಿರುದ್ಧವಾಗದಂತೆ ಸದಾ ಮಾನವನನ್ನು ಪಾಪಕ್ಕೆ ತಳ್ಳಲು ಸಾಧ್ಯವಿಲ್ಲ, ತನ್ನನ್ನು ಆರಾಧಿಸುವವರು ಆತ್ಮದಿಂದ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಎಂದು ದೇವರು ಇಚ್ಛೆಸುತ್ತಾನೆ. ಆದುದರಿಂದ ಮಾನವನಿಗೆ ಸ್ವತಂತ್ರವನ್ನು ಕೊಟ್ಟು ತನಗೆ ಇಷ್ಟ ಬಂದದನ್ನು ಆರಿಸಿಕೊಳ್ಳಲು ಬಿಟ್ಟಿರುವನು. ಮಾನವನು ದೈವಾಶೀರ್ವಾದದ ಬದಲು ಮರಣದ ದಾರಿಯನ್ನೇ ಹಿಡಿದಿರುವನು. ಇದರಿಂದ ಮನುಷ್ಯನೇ ಮಾಡಿ, ಅನುಭವಿಸಿ ಅದರ ಫಲವನ್ನು ತಿಳಿದುಕೊಳ್ಳುವನು. ಆದರೆ ಅದೇ ಪಾಪದಲ್ಲಿಯೇ ಮಾನವನು ಮುಂದುವರಿಯದಂತೆ ಅದಕ್ಕಾಗಿ ಒಂದು ವಿಮೋಚನೆಯನ್ನು ಗೊತ್ತುಮಾಡಿದನು. ಈ ಪ್ರಕಾರ ಮಾನವನನ್ನು ಪಾಪದಿಂದ ರಕ್ಷಿಸಲು ಯೇಸುಕ್ರಿಸ್ತನನ್ನು ವಿಮೋಚಕನನ್ನಾಗಿ ಕಳುಹಿಸಿಕೊಟ್ಟನು. 1 ತಿಮೋ 2:3–6 ಇದರಿಂದ ಸರ್ವಜನಾಂಗದವರು ರಕ್ಷಣೆ ಹೊಂದಿ ದೇವರ ಬಳಿಗೆ ಬರಬೇಕೆಂಬುದೇ ಆತನ ಚಿತ್ತ. ದೇವರು ವಿಧಿಸಿದ ಶಿಕ್ಷೆ ದಂಡನೆಯ ಶಿಕ್ಷೆಯಲ್ಲ ಪಾಪದ ಫಲವನ್ನು ಅನುಭವಿಸಿ ಪಾಠ ಕಲಿಯಲು ಕೊಟ್ಟ ಶಿಕ್ಷೆಯಾಗಿದೆ. ಪಾಪ ಮಾಡಿದ ಮಾನವರಿಗೆ ಅಮರತ್ವವಿದ್ದಿದ್ದರೆ ಅದರ ಪರಿಣಾಮ ಬಹಳ ಭಯಂಕರವಾಗುತ್ತಿತ್ತು. ಮಾತ್ರವಲ್ಲದೆ ಆದಾಮನನ್ನು ಆಶೀರ್ವದಿಸಿದಾಗಲೇ ಅವನಿಗೆ ಎಚ್ಚರಿಕೆಯನ್ನು ಕೊಡಲಾಗಿತ್ತು. ಆದರೆ ಅವನು ಅವಿಧೇಯತ್ವಕ್ಕೆ ಒಳಗಾಗಿದ್ದರಿಂದ "ಪಾಪದ ಸಂಬಳ ಮರಣವಾಯಿತು" ರೋಮಾ 6:23. ನಿತ್ಯಯಾತನೆಯ ವಿಷಯವಾಗಿ ಹಳೇ ಒಡಂಬಡಿಕೆಯಲ್ಲಿ ಎಲ್ಲೂ ಕಂಡುಬರುವುದಿಲ್ಲ ಆದರೆ ಹೊಸ ಒಡಂಬಡಿಕೆಯ ಕಾಲದಲ್ಲಿ ಅಪಾರ್ಥಗಳನ್ನು ಕಲ್ಪಿಸಿ ನಿತ್ಯಯಾತನೆ, ನರಕ ಎಂಬ ಪದಗಳು ಕಂಡುಬರುತ್ತವೆ. ದೇವರ ರಾಜ್ಯದ ಗುಟ್ಟನ್ನು ತಿಳಿಯುವುದು ಕಷ್ಟ. ಅದು ಸಾಮ್ಯರೂಪವಾಗಿದೆ. ಲೂಕ 8:10 ಆದುದರಿಂದ ಪಾಪ ಮಾಡುವ ಪ್ರಾಣಿಯೇ ಸಾಯುವನು. ಯೆಹೆ 18:4 ಆದಾಮನು ಪಾಪಕ್ಕೆ ಒಳಗಾದನು ಇದರಿಂದ ಸರ್ವಜನಾಂಗಗಳು ಇಂದು ಪಾಪದಿಂದ ಬಂಧಿತವಾಗಿದೆ ಆದರೆ ಮುಂದೆ ಸಮಸ್ತವನ್ನು ಸರಿಮಾಡುವ ಕಾಲದಲ್ಲಿ ಇದಕ್ಕೊಂದು ನಿವಾರಣೆವುಂಟು. ರೋಮಾ 5: 12,18,19 ಹೀಗೆ ಪಾಪವನ್ನರಿಯದ ಕ್ರಿಸ್ತನು ಆದಾಮನ ಪಾಪದಿಂದ ಬಿಡುಗಡೆ ಮಾಡಿ ನಮ್ಮನ್ನು ತನ್ನ ಪರಿಶುದ್ಧರಕ್ತದಲ್ಲಿ ಕೊಂಡುಕೊಂಡನು. ಆದಾಮನ ಸಂತತಿಯನ್ನು ತನ್ನ ಸಂತತಿಯಾಗಿ ಮಾಡಿಕೊಳ್ಳುವುದು ಕ್ರಿಸ್ತನ ಉದ್ದೇಶವಾಗಿದೆ. ಕ್ರಿಸ್ತನಲ್ಲಿ ನಂಬಿಕೆ ವಿಧೇಯತ್ವಗಳಿಂದ ದೇವರ ಕುಟುಂಬಕ್ಕೇ ಸೇರಿ ನಿತ್ಯ ಜೀವಪಡೆಯಬಹುದು. "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುತ್ತಾರೆ" 1 ಕೊರಿ 15:22.

ಆದಾಮನಿಂದ ಹೊಂದಿದ ಅವನತಿಗೆ ಕ್ರಿಸ್ತನ ಮೂಲಕ ಅನುಗ್ರಹ ಏರ್ಪಡಿಸಿರುವನು. ಕ್ಲುಪ್ತಕಾಲದಲ್ಲಿ ಆದಾಮನು ಪಾಪಮಾಡುವ ಮೊದಲು ಹೇಗಿದ್ದನೋ ಹಾಗೆಯೇ ನಾವು ಆಗುತ್ತೇವೆ. ಈಗ ಆತನಲ್ಲಿ ಅಂದರೆ ಕ್ರಿಸ್ತನಲ್ಲಿ ನಂಬಿಕೆಯಿಡದವರೂ ವಿಗ್ರಹಾರಾಧಕರೂ ಮುಂದೆ ದೇವರ ರಾಜ್ಯದಲ್ಲಿ ದೈವಜ್ಞಾನವನ್ನು ಹೊಂದಿ ಕ್ರಿಸ್ತನನ್ನು ಅರಿಯುವರು. ಸಮಾಧಿಯಲ್ಲಿರುವವರೆಲ್ಲರೂ ಎದ್ದು ಬಂದು ಕ್ರಿಸ್ತನನ್ನು ಆತನಿಗೆ ದೊರಕುವ ಮಹಿಮೆಯನ್ನು ತಿಳಿದುಕೊಳ್ಳುವರು. ಮಾನವನು ದೇವರ ಪರೀಕ್ಷೆಗೆ ಒಳಗಾಗುವನು. ನಂಬಿಕೆಯಿಂದ ನಿತ್ಯಜೀವಕ್ಕೂ

ಅವಿಧೇಯತ್ವದಿಂದ ನಿತ್ಯಮರಣಕ್ಕೂ ಒಳಗಾಗುವರು. ಒಳ್ಳೆಯ ವಾತಾವರಣದಲ್ಲಿ ಪ್ರತಿಯೊಬ್ಬನೂ ಉನ್ನತನಾಗಲು ಅವಕಾಶವೀಯುಲಾಗುವುದು. ಇದು ಏದೆನ್ ವನದಲ್ಲಾದಂಥ ನ್ಯಾಯ ತೀರ್ಪಲ್ಲ. ಪ್ರತಿಯೊಬ್ಬನು ತನ್ನ ಭವಿಷ್ಯಕ್ಕೆ ತಾನೇ ಹೊಣೆಯಾಗಿರುವನು. ಇದು ಮಾನವನು ನಿತ್ಯ ಜೀವನವನ್ನು ಪಡೆಯಲು ದೇವರು ಕಲ್ಪಿಸಿರುವ ಎರಡನೇ ಅವಕಾಶ. ಆದಾಮನಿಗೂ ಎರಡನೇ ಅವಕಾಶ. ಪ್ರತಿಯೊಬ್ಬನನ್ನುಪರೀಕ್ಷೆ ಮಾಡಲಾಗುವುದು.

ಆದಾಮನಿಂದ ಎಲ್ಲರೂ ಮರಣದಂಡನೆಯನ್ನು ಅನುಭವಿಸಿದರು ಆದರೆ ಮುಂದಣ ಯುಗದಲ್ಲಿ ಹೊಸ ಒಡಂಬಡಿಕೆಯ ವಾಗ್ದಾನದ ಪ್ರಕಾರ ಎಲ್ಲರೂ ನಿತ್ಯಜೀವ ಹೊಂದುವ ಅವಕಾಶ ಕೊಡಲಾಗುವುದು. ಇದನ್ನೇ ದೇವದೂತರು ''ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರ" ಎಂದು ಹಾಡಿದ್ದು. ಇದನ್ನೇ ಪೌಲನು ದೇವರ ಕೃಪೆಯೆಂದು ಕರೆದು ಯೇಸುವು ಎಲ್ಲರ ವಿಮೋಚನಾರ್ಥವಾಗಿ ಒಪ್ಪಿಸಿಕೊಟ್ಟನು. ಇದೇ ತಕ್ಕ ಸಮಯದಲ್ಲಿ ಹೇಳಬೇಕಾದ ಸಾಕ್ಷಿ ಎಂದು ರೋಮಾ 5:17–19; 1 ತಿಮೋ2:4–6 ರಲ್ಲಿ ತಿಳಿಸಿರುವನು. ಮುಂದೆ ದೇವರ ರಾಜ್ಯದಲ್ಲಿ ಕ್ರಿಸ್ತನು ಸ್ಥಾಪಿಸಿದ ಹೊಸ ಒಡಂಬಡಿಕೆಯ ಪ್ರಕಾರ ಯಾರುಬೇಕಾದರು ನಿತ್ಯಜೀವವನ್ನು ಪಡೆಯಬಹುದು. ಈ ಸುವಾರ್ತಾಯುಗವು ರಾಜವಂಶದ ಯಾಜಕರು ಅಂದರೆ ಸಭೆಯನ್ನು ಆರಿಸುವ ಕಾಲವಾಗಿದೆ. ಯಾಕೆಂದರೆ ಅವರ ಮೂಲಕವೇ ಲೋಕದ ಸರ್ವಜನಾಂಗದವರು ಜ್ಞಾನವನ್ನು ಆಶೀರ್ವಾದವನ್ನು ಪಡೆಯುವರು.

ದೇವರ ಈ ಕ್ರಮದಿಂದ ಯಾವ ಪ್ರಯೋಜನವಿದೆ? ಪ್ರತಿಯೊಬ್ಬನಿಗೂ ನಿತ್ಯ ಜೀವಕ್ಕೆ ಈಗಲೇ ಏಕೆ ಆವಕಾಶಕೊಡಬಾರದು? ನಿತ್ಯ ಜೀವ ಪಡೆಯಲು ಕ್ರಿಸ್ತನ ಯಜ್ಞಾರ್ಪಣೆ ಹೊಸ ಒಡಂಬಡಿಕೆಯ ಅಗತ್ಯವೇನು? ದೇವರ ರಾಜ್ಯದಲ್ಲಿ ಸಿಕ್ಕುವ ನಿತ್ಯ ಜೀವಕ್ಕೆ ವಿಧೇಯರಾದವರು ಹಿಂಸೆಯನ್ನು ಏಕೆ ಅನುಭವಿಸಬೇಕು? ಮುಂತಾದ ಪ್ರಶ್ನೆಗಳು ನಮ್ಮಲ್ಲಿ ಉದ್ಭವಿಸಬಹುದು. ಇದಕ್ಕೆ ಆದಾಮನನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಅವನು ದೇವರ ಸಹವಾಸದಲಿದ್ದು ವಿಧೇಯನಾಗಿರಲು ಸಾಧ್ಯವಾಗಲಿಲ್ಲ ಇನ್ನೂ ಉಳಿದ ಮಾನವರ ಗತಿಯೇನು? ದೇವರ ಸಹವಾಸದಲ್ಲಿ ಅನುಭವವಿಲ್ಲದ ಯಾರೂ ಆತನ ಧರ್ಮಶಾಸ್ತ್ರವನ್ನು ಮೆಚ್ಚಲಾರರು. ಯಾಕೆಂದರೆ ಕ್ರಿಸ್ತನು ತನ್ನ ತಂದೆಯ ಜ್ಞಾನದ ಮೂಲಕ ಆತನಿಗೆ ವಿಧೇಯನಾಗಿ ಕಾರ್ಯಗಳನ್ನು ಮಾಡಿದನು. ಯೆಶಾಯ 53:11. ಕಾಲುಭಾಗ ಅಥವಾ ಅರ್ಧಭಾಗದ ಜನರು ನಿತ್ಯ ಜೀವಕ್ಕೂ ಉಳಿದ ಅರ್ಧ ಮರಣವನ್ನು ಅನುಭವಿಸುತ್ತಾರೆ ಮುಂದೆ ಏನು? ಮೊದಲನೆ ಭಾಗದ ಜನರಿಗೆ ದೇವರು ಬಹಿಷ್ಕರಿಸುವ ವಸ್ತುಗಳ ಮೇಲೆ ಬಯಕೆ ಉಂಟಾದರೂ ಮುಂದೆ ಬರುವದಂಡನೆಯನ್ನು ನೆನೆದು ಅದನ್ನು ಅನುಭವಿಸಲು ಹಿಂಜರಿಯುತ್ತಾರೆ. ಇದರಿಂದ ಅವರಲ್ಲಿ ಪೂರ್ಣ ಪ್ರೀತಿ ಎಂಬುದಿರುವುದಿಲ್ಲ ಮತ್ತು ಆತನ ಯೋಜನೆಗಳನ್ನು ಮೆಚ್ಚುವುದಿಲ್ಲ. ಉಳಿದ ಅರ್ಧ ಜನರು ಮರಣಕ್ಕೆ ಹೋದ ಮೇಲೆ ಯಾವ ನಿರೀಕ್ಷೆಯೂ ಇರುವುದಿಲ್ಲ. ಅವರಿಗೆ ದೇವರನ್ನು ಅರಿಯುವ ಭಾಗ್ಯವೇ ಇರುವುದಿಲ್ಲ. ಒಂದು ವೇಳೆ ಅವರಿಗೂ ಒಂದು ಅವಕಾಶ ಕಲ್ಪಿಸಿದರೆ ಅವರೂ ಉತ್ತಮರಾಗುವ ನಿರೀಕ್ಷೆ ಉಂಟಾಗುವುದಲ್ಲವೇ? ಕೆಟ್ಟತನದ ಹಿಂಸೆಯನ್ನು ಅನುಭವಿಸಿ ದೇವರಿಗೆ ವಿಧೇಯರಾಗಿ ಆತನ ಕಡೆಗೆ ತಿರುಗಿಕೊಳ್ಳುತ್ತಾರೆ. ಇದೇ ದೇವರ ಯೋಜನೆ. ಪಾಪಕ್ಕೆ ಒಂದು ಎಲ್ಲೆಯನ್ನು ಏರ್ಪಡಿಸಿ ತನ್ನ ರಾಜ್ಯದಲ್ಲಿ ಪಾಪವನ್ನು ತೆಗೆದು ಹಾಕಿ ಜನರು ನೀತಿವಂತರಾಗಿಯೂ ವಿಧೇಯರಾಗಿಯೂ ಜೀವಿಸುವ ಅವಕಾಶವನ್ನು ಕಲ್ಪಿಸಿರುವನು. ಆಗ ಪ್ರತಿಯೊಬ್ಬನಿಗೂ ಜೀವಿಸುವ ಅವಕಾಶ ಕೊಟ್ಟಂತಾಗುವುದು. ಹೀಗೆ ದೇವರ ಯೋಜನೆಯಲ್ಲಿ ಕೆಟ್ಟತನದಿಂದ ಬುದ್ಧಿಯನ್ನು ಕಲಿತು ದೇವರಕಾರ್ಯಗಳನ್ನು ಮೆಚ್ಚುವನು. ಕ್ರಿಸ್ತನ ವಿಮೋಚನೆಯನ್ನೂ ಮೆಚ್ಚುವನು. ಹೀಗೆ ಕ್ರಿಸ್ತನ ವಿಮೋಚನೆಯಿಂದ ಪಾಪದ ಬಿಡುಗಡೆ, ಆಶೀರ್ವಾದ ಎರಡನ್ನೂ ಪಡೆಯುವರು.

ಇದು ಮಾನವರಿಗೆ ಮಾತ್ರವಲ್ಲ. ದೇವದೂತರಿಗೂ ಒಂದು ಪಾಠವಾಗಿದೆ. ಯಾಕೆಂದರೆ ಕ್ರಿಸ್ತನು ಸಕಲ ರಾಜತ್ವ, ಪ್ರಭುತ್ವ ಸಕಲ ಲೋಕದವರ ಮೇಲೆಲ್ಲಾ ಹೆಸರುಗೊಂಡಿರುವನು. ಎಫೆಸ1:20,21 ದೇವರ ಯೋಜನೆಯಿಂದ ದೇವರಿಗೆ ವ್ಯತಿರಿಕ್ತವಾದ ಕಾರ್ಯಗಳು ಯಾವುವು ಎಂದು ತಿಳಿಯಲು ಸಾಧ್ಯವಾಯಿತು. ಆತನ ಯೋಜನೆಗಳೆಲ್ಲಾ ಪೂರ್ಣವಾದ ಮೇಲೆ ಆತನ ಜ್ಞಾನ, ನ್ಯಾಯ ಮತ್ತು ಪ್ರೀತಿಯನ್ನು ಕಂಡುಕೊಳ್ಳಬಹುದು. ಆತನ ನ್ಯಾಯದ ಪ್ರಕಾರ ಕ್ರಿಸ್ತನೊಬ್ಬನೇ ಮಾನವರನ್ನು ಪಾಪದಿಂದ ಬಿಡಿಸಿ ಜೀವಕೊಡುವ ಅಧಿಕಾರಹೊಂದಿರುವನು ಎಂದು ಕಂಡುಕೊಳ್ಳಬಹುದು. ದೇವರ ಪ್ರಭಾವದಿಂದ ಒಳ್ಳೆಯದರ ಕೆಟ್ಟದರ ಭೇದ ಮತ್ತು ಪರಿಣಾಮವನ್ನು ಕಲಿತುಕೊಳ್ಳಬಹುದು. ದೇವರು ಲೋಕದಲ್ಲಿ ಪಾಪವನ್ನು ಬಿಡದೇ ಹೋಗಿದ್ದರೆ ಕೆಟ್ಟದ್ದರ ಪರಿಣಾಮಗಳನ್ನು ತಿಳಿಯಲು ಆಗುತ್ತಿರಲಿಲ್ಲ. ಪಾಪವಿಲ್ಲದಿದ್ದರೆ, ಯೇಸು ವಿಮೋಚಕನಾಗುತ್ತಿರಲಿಲ್ಲ ಮತ್ತು ದೇಹವೆಂಬ ಸಭೆಯೂ ದೈವ ಸ್ವಾಭಾವದಲ್ಲಿ ಪಾಲುಹೊಂದಲು ಆಗುತ್ತಿರಲಿಲ್ಲ.

ಆದುದರಿಂದಲೇ ದೇವರ ನಿಯಮದ ಪ್ರಕಾರ ವಿಧೇಯತೆ ಫಲ ನಿತ್ಯಜೀವ ಅವಿಧೇಯತೆಯ ಫಲ ಮರಣ ಎಂಬ ದೈವ ನಿಯಮವು ಮಾನವರಲ್ಲಿ ಕಂಡುಬರುತ್ತಿದೆ. ಸಮಸ್ತವು ಪ್ರೀತಿಯೆಂಬ ವಾಕ್ಯದಲ್ಲಿ ಅಡಕವಾಗಿದೆ "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ

ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಶಕ್ತಿಯಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಮತ್ತು ನಿನ್ನ ನೆರಯವನನ್ನು ನಿನ್ನಂತೆಯ ಪ್ರೀತಿಸಬೇಕು" ಲೂಕ 10:27 ಕಡೆಗೆ ದೇವರ ಯೋಜನೆಯು ಮುಗಿಯುವ ವೇಳೆಗೆ ದೈವೀಕ ಮಹಿಮೆಯ ಗುಣವನ್ನು ಎಲ್ಲರೂ ಪಡೆಯುವರು. ಸ್ವಲ್ಪ ಕಾಲ ಪಾಪವನ್ನು ಬಿಟ್ಟಿರುವುದು ದೇವರ ಯೋಜನೆಯ ಒಂದು ಭಾಗ. ಇದನ್ನೇ ಸಮಸ್ತವನ್ನು ಸರಿಮಾಡುವ ಕಾರ್ಯ ಎಂದು ದೇವರು ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿರುವುದನ್ನು ದೇವರ ವಾಕ್ಯದಲ್ಲಿ ಕಂಡುಬರುತ್ತದೆ.

## The Day is at Hand

"Poor, fainting pilgrim, still hold on thy way—the dawn is near!
True, thou art weary now; but yon bright ray becomes more clear.
    Bear up a little longer; wait for rest;
    Yield not to slumber, though with toil oppressed.

"The night of life is mournful, but look on—the dawn is near!
Soon will earth's shadowed scenes and forms be gone; yield not to fear!
    The mountain's summit will, ere long, be gained,
    And the bright world of joy and peace attained.

"'Joyful through hope' thy motto still must be—the dawn is near!
What glories will that dawn unfold to thee! be of good cheer!
    Gird up thy loins; bind sandals on thy feet:
    The way is dark and long; the end is sweet."

# ಅಧ್ಯಾಯ-8

# ನ್ಯಾಯ ತೀರ್ಪಿನ ದಿನ

**ನ್ಯಾಯತೀರ್ವಿಕೆ ದಿನದ ಬಗ್ಗೆ ಸಾಮಾನ್ಯ ಅಭಿಪ್ರಾಯ-ಅದು ಸತ್ಯವೇದಕ್ಕನುಸಾರವಾಗಿದೆಯೇ? ನ್ಯಾಯತೀರ್ಪು ಮತ್ತು ದಿನ ಎಂಬ ಪದಗಳ ಅರ್ಥ ತಿಳಿಸಲಾಗಿದೆ-ಸತ್ಯವೇದದಲ್ಲಿ ಸೂಚಿಸಲಾಗಿರುವ ಅನೇಕ ನ್ಯಾಯತೀರ್ಪಿನ ದಿನಗಳು-ಮೊದಲನೆ ನ್ಯಾಯತೀರ್ಪಿನ ದಿನ ಮತ್ತು ಅದರ ಫಲಿತಾಂಶಗಳು-ಮತ್ತೊಂದು ನೇಮಿಸಲಾಗಿದೆ-ನ್ಯಾಯಾಧೀಶ-ಮುಂಬರುವ ನ್ಯಾಯತೀರ್ಪಿನ ಗುಣಲಕ್ಷಣಗಳು-ಮೊದಲ ಮತ್ತು ಎರಡನೇ ನ್ಯಾಯತೀರ್ಪುಗಳ ಹೊಂದಾಣಿಕೆ ಮತ್ತು ವ್ಯತ್ಯಾಸಗಳು-ಪ್ರಪಂಚ ಪ್ರಸ್ತುತ ಹೊಣೆಗಾರಿಕೆ-ಎರಡು ಮಧ್ಯದಲ್ಲಿರುವ ನ್ಯಾಯತೀರ್ಪುಗಳು ಮತ್ತು ಅದರ ಉದ್ದೇಶಗಳು-ಮುಂಬರುವ ನ್ಯಾಯತೀರ್ಪಿನ ಬಗ್ಗೆ ಬಹಳ ಭಿನ್ನವಾದ ಅಭಿಪ್ರಾಯಗಳು-ಪ್ರವಾದಿಗಳು ಮತ್ತು ಅಪೋಸ್ತಲರು ಅದನ್ನು ಹೇಗೆ ಕಂಡರು?**

"**ಯಾ**ಕೆಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯ ವಿಚಾರಣೆ ಮಾಡುವುದಕ್ಕೆ ಒಂದು ದಿನವನ್ನು ಗೊತ್ತುಮಾಡಿದ್ದಾನೆ" "ಆತನು ನೀತಿವಂತನಾದ ಯೇಸು ಕ್ರಿಸ್ತನು." "ಇದಲ್ಲದೆ ತಂದೆಯು ಯಾರಿಗೂ ತೀರ್ಪು ಮಾಡುವುದಿಲ್ಲ. ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ." ಅ.ಕೃ. 17:31;1 ಯೋಹಾನ 2:1; ಯೋಹಾನ 5:22.

ನ್ಯಾಯವಿಚಾರಣೆಯ ದಿನದ ವಿಷಯವಾಗಿ ಜನರಲ್ಲಿ ಭಿನ್ನಾಭಿಪ್ರಾಯಗಳಿವೆ. ಅನೇಕರು ಅದನ್ನು ತಪ್ಪಾಗಿ ಗ್ರಹಿಸಿರುವರು. ಬಿಳಿ ಸಿಂಹಾಸನದ ಮೇಲೆ ಆಸೀನನಾಗಿರುವ ಕ್ರಿಸ್ತನು ಭೂಲೋಕಕ್ಕೆ ಬರುತ್ತಾನೆ. ಆಗ ಮಹಾ ಭೂಕಂಪಗಳಾಗಿ ಬಂಡೆಗಳೊಡೆದು ಸಮಾಧಿಗಳೆಲ್ಲಾ ತೆರೆಯಲ್ಪಟ್ಟು ಪಾಪಿಷ್ಟರೆಲ್ಲಾ ಎದ್ದು ಬರುವರು; ವಿಚಾರಣೆ ನಡೆದು ನಿಂದನಾ ತಿರಸ್ಕಾರಗಳಿಗೆ ಗುರಿಯಾಗಿ ಪುನಃ ನಿತ್ಯ ನಾಶನಕ್ಕೆ ಹಿಂದಿರುಗುವರು. ನೀತಿವಂತರೆಲ್ಲಾ ಪರಲೋಕದಿಂದ ಬಂದು ಭಕ್ತಿ ಹೀನರಿಗಾಗುವ ದುರವಸ್ಥೆಯನ್ನು ಕಂಡು ತಮ್ಮ ಕೃತ್ಯಕ್ಕೆ ನ್ಯಾಯ ಪಡೆದು ಪುನಃ ಹಿಂದಿರುಗಿ ಹೋಗುತ್ತಾರೆ ಎಂದು ಕೆಲವರ ನಂಬಿಕೆ. ಸದ್ಯಕ್ಕೆ ಪ್ರಚಾರದಲ್ಲಿರುವಸಿದ್ಧಾಂತದಪ್ರಕಾರ ಮರಣದ ಸಮಯದಲ್ಲೇ ಪ್ರತಿಯೊಬ್ಬನು ತನ್ನ ಪ್ರತಿಫಲವನ್ನು ಪಡೆಯುವನು ಮುಂದೆ ಪುನಃ ಇದೇ ರೀತಿಯ ನ್ಯಾಯ ತೀರ್ವಿಕೆಯು ನಡೆಯುವುದು. ಇಂತಹ ಒಂದು ಮಹಾ ಕಾರ್ಯವು ಕೇವಲ 24 ಗಂಟೆಗಳಲ್ಲಿ ನಡೆದುಹೋಗುವುದು ಎಂದು ಕೆಲವರ ವಾದವಾಗಿದೆ. ಆದರೆ ಇಂತಹ ಸಿದ್ಧಾಂತಗಳು ಅರ್ಥರಹಿತವಾಗಿದ್ದು ದೇವರ ವಾಕ್ಯಕ್ಕೆ ಸರಿಹೊಂದುವುದಿಲ್ಲ. ಕ್ರಿಸ್ತನು ಹೇಳಿರುವ ಆಡು ಕುರಿಗಳ ಸಾಮ್ಯದ ಮತ್ತಾ 25:31-46 ಗೂಢಾರ್ಥವನ್ನು ಗ್ರಹಿಸದೆ ಪ್ರಾಪಂಚಿಕ ಜ್ಞಾನದಿಂದ ತಮ್ಮದೇ ಆದ ಒಂದು ಸಿದ್ಧಾಂತವನ್ನು ಸ್ಥಾಪಿಸಿಕೊಂಡಿರುವರು. ಸಾಮ್ಯಗಳು ನೇರವಾದ ಹೇಳಿಕೆಯಲ್ಲ ಸತ್ಯವನ್ನೊಳಗೊಂಡಿರುವ ಉದಾಹರಣೆಯಾಗಿದೆ. ಜನರು ಅದಕ್ಕೆ ನೇರವಾದ ಅರ್ಥಕಲ್ಪಿಸುವುದಾದರೆ ಅದು ಆಡು ಕುರಿಗಳಿಗೆ ಅನ್ವಯಿಸಬೇಕೇ ಹೊರತು ಮಾನವರಿಗಲ್ಲ. ಆದುದರಿಂದ ಸತ್ಯವೇದದಲ್ಲಿ ಸಾಮ್ಯಕ್ಕೂ ಸತ್ಯಕ್ಕೂ ಅನ್ವಯಿಸುವ ನ್ಯಾಯ ವಿಚಾರಣೆಯನ್ನು ತಿಳಿಯುವುದು ಅವಶ್ಯ.

ನ್ಯಾಯವಿಚಾರಣೆಯೆಂದರೆ ತೀರ್ಪುಕೊಡುವುದು. ಆಂಗ್ಲ ಮತ್ತು ಗ್ರೀಕ್ ಎರಡೂ ಭಾಷೆಯಲ್ಲೂ ಒಂದೇ ಅರ್ಥವನ್ನು ಕೊಡುತ್ತದೆ. ದಿನ ಎಂಬುದು ಈಗ ಬಳಕೆಯಲ್ಲಿರುವ 12 ಅಥವಾ 24 ಗಂಟೆಗಳನ್ನು ಸೂಚಿಸುತ್ತದೆ. ಉದಾ. ನೋಹನನ ಕಾಲ ಲೂಥರನ ಕಾಲ.ಸತ್ಯವೇದದಲ್ಲಿ ಈ ಸೃಷ್ಟಿಕಾರ್ಯದ ಕಾಲವನ್ನು ದಿನ ಎಂದು ತಿಳಿಸಲಾಗಿದೆ. ''ಯೆಹೋವ ದೇವರು ಭೂಮ್ಯಾಕಾಶಗಳನ್ನುಂಟು ಮಾಡಿದ ದಿನ" ಆದಿ 2:4.

"ಅರಣ್ಯದಲ್ಲಿ ನಮ್ಮನ್ನು ಪರೀಕ್ಷಿಸಿ ಶೋಧಿಸಿದ ಕಾಲ 40 ವರ್ಷಗಳು" ಇಬ್ರಿಯ 3:8,9. "ರಕ್ಷಣೆಯ ದಿನದಲ್ಲಿ" 2 ಕೊರಿ 6:2 ಯೆಹೂದ್ಯರ ಕಾಲದ ಕೊನೆಯಲ್ಲಾದಂತೆ ಸುವಾರ್ತಾ ಯುಗದ ಕೊನೆಯಲ್ಲೂ "ಮುಯ್ಯಿ ತೀರಿಸುವ ದಿನ" "ಕೋಪದ ದಿನ" ಕಷ್ಟದ ದಿನಗಳು ಇರುವುವು. ಅನಂತರ "ಕ್ರಿಸ್ತನ ಕಾಲ" ಬರುವುದು "ನ್ಯಾಯತೀರಿಸುವ ದಿನ ಅಂದರೆ ಸಾವಿರ ವರ್ಷದ ಕಾಲದಲ್ಲಿ ನೀತಿಗನುಸಾರವಾಗಿ ಲೋಕಕ್ಕೆ ನ್ಯಾಯತೀರಿಸುವನು. ಒಬ್ಬ ಪುರುಷನ ಕೈಯಿಂದ ನ್ಯಾಯವಿಚಾರಣೆಗೆ ಒಂದು ದಿನವನ್ನು ಗೊತ್ತುಮಾಡಿದ್ದಾನೆ. ಅ.ಕೃ.17:31;1 ತಿಮೋ 6:15 ಆದುದರಿಂದ ದಿನ ಎನ್ನುವುದು ಕಾಲವನ್ನು ಸೂಚಿಸುತ್ತದೆ."

ಸತ್ಯವೇದದ ಜ್ಞಾನದಿಂದ ದಿನ ಎಂಬುದನ್ನು ಪರಿಶೀಲಿಸಿ ಆ ದಿನದಲ್ಲಿ ನಡೆಯಬೇಕಾದ ಮಹತ್ಕಾರ್ಯಗಳನ್ನು ಅರಿತರೆ ಆಗ ದಿನದ ಮಹತ್ತು ತಿಳಿದು ಬರುವುದು.ಸರ್ವಲೋಕದ ನ್ಯಾಯತೀರ್ವಿಕೆಯ ದಿನದ ಜೊತೆಗೆ ಆರಿಸಲ್ಪಟ್ಟ ಸತ್ಯಸಭೆಯ ಪರಿಕ್ಷಾ ಕಾಲವನ್ನೂ ಸತ್ಯ ವೇದದಲ್ಲಿ ತಿಳಿಸಲಾಗಿದೆ.

ಮೊದಲನೆ ನ್ಯಾಯವಿಚಾರಣೆಯು ಏದೇನ್ ತೋಟದಲ್ಲಿ ಆದಾಮನಿಂದ ಪ್ರಾರಂಭವಾಯಿತು. ಅವನು

ವಿಚಾರಣಗೆ ಗುರಿಯಾಗಿ ತಪ್ಪಿಸ್ಥನು, ಅವಿಧೇಯನು ಎಂದು ತೀರ್ಮಾನಿಸಿ ಜೀವಿಸಲು ಅರ್ಹನಲ್ಲ ಎಂದು "ತಿಂದ ದಿನ ಸತ್ತೇ ಹೋಗುವಿ" ಆದಿ 2:17 ಮರಣ ಶಿಕ್ಷೆಯನ್ನು ವಿಧಿಸಲಾಯಿತು. ಹೀಗೆ "ಆದಾಮನಿಂದ ಎಲ್ಲರೂ ಸಾಯುವವರಾದರು" ಮೊದಲನೇ ನ್ಯಾಯ ವಿಚಾರಣೆಯ ತೀರ್ಪು ಲೋಕದಲ್ಲಿ ಕಂಡುಬಂದಿದೆ. ಶಿಕ್ಷಿಸಿದ ದೇವರು ಪ್ರೀತಿಮಯನು ಸಹ. ಆದುದರಿಂದ ಮಾನವರನ್ನು ಈ ಮರಣ ಶಿಕ್ಷೆಯಿಂದ ವಿಮೋಚಿಸಲು ಯೇಸು ಪ್ರಾಣಕೊಡವುದು ಅವಶ್ಯವಾಯಿತು. ಸತ್ತವರು ಸ್ವಲ್ಪಕಾಲ ನಿದ್ರೆಯಲ್ಲಿರುವವರಂತೆ ಇದ್ದು ಕ್ರಿಸ್ತನ ರಾಜ್ಯೋದಯದ ಬೆಳಕಿನಲ್ಲಿ ಪುನರುತ್ಥಾನ ಹೊಂದುವರು. ಕ್ರಿಸ್ತನು ನಮ್ಮನ್ನು ಮರಣವೆಂಬ ಬಂಧನದಿಂದ ಬಿಡುಗಡೆ ಮಾಡಿದನು. ಆದರೆ ಲೋಕವು ಇದನ್ನರಿಯುವುದು ಪುನರುತ್ಥಾನದ ದಿನದಲ್ಲೇ. ಕ್ರಿಸ್ತನನ್ನು ನಂಬಿ ದೈವಜ್ಞಾನವನ್ನು ಪಡೆದರೆ ಕೆಟ್ಟತನದಿಂದ ಪಾರಾಗಬಹುದು. ಯಾರ್ಯಾರು ಕ್ರಿಸ್ತನ ಮರಣದಿಂದ ಬಿಡುಗಡೆ ಹೊಂದಲು ಪ್ರಯತ್ನಿಸಿ ದೇವರಿಗೆ ವಿಧೇಯರಾಗುತ್ತಾರೋ ಅಂಥವರನ್ನು ದೇವರ ಮಕ್ಕಳೆಂದು ಪರಿಗಣಿಸಲಾಗುವುದು. ಇವರೆಲ್ಲರು ಪರಲೋಕದ ಆಶೀರ್ವಾದಕ್ಕೆ ಕರೆಯಲ್ಪಟ್ಟವರು. ಅವರಿಗಾಗಿ ದೇವರು ವಿವಿಧ ತರಗತಿಗಳನ್ನು ಏರ್ಪಡಿಸಿರುವನು. ಅವರಿಗೆ ಈಗ ನ್ಯಾಯ ವಿಚಾರಣೆಯಾಗುತ್ತಿದೆ. ನಿತ್ಯಜೀವಕ್ಕೆ ಅರ್ಹರೋ ಅಥವಾ ಅನರ್ಹರೋ ಎಂದು ಪರೀಕ್ಷಿಸಲಾಗುತ್ತಿದೆ.

ನ್ಯಾಯ ವಿಚಾರಣೆಗೆ ದೇವರು ಒಂದು ದಿನವನ್ನು ಗೊತ್ತುಮಾಡಿದ್ದಾನೆ. ಇದು ಹೇಗೆ? ದೇವರು ತನ್ನ ಮನಸ್ಸು ಬದಲಾಯಿಸಿರುವನೆ? ಮೊದಲನೆ ಮನುಷ್ಯನಿಗೆ ಕೊಟ್ಟ ಶಿಕ್ಷೆ ನ್ಯಾಯಸಮರ್ಪಕವಲ್ಲ ಪ್ರತಿಯೊಬ್ಬನಿಗೂ ಪ್ರತ್ಯೇಕ ವಿಚಾರಣೆ ನಡೆಸಲು ತೀರ್ಮಾನಿಸಿರುವನೆ? ಎಂದಿಗೂ ಇಲ್ಲ ಆತನ ತೀರ್ಮಾನ ನ್ಯಾಯ ಸಮ್ಮತವಾದದ್ದೇ ಮುಂದೆಯೂ ಅದು ನ್ಯಾಯವಾಗಿಯೇ ಇರುವುದು.ಆದರೆ ತಾನು ವಿಧಿಸಿದ ಶಿಕ್ಷೆಗೆ ಒಂದು ವಿಮೋಚನೆಯನ್ನು ಗೊತ್ತುಮಾಡಿರುವನು; ಯಾಕೆಂದರೆ ಮಾನವನು ಪಾಪದ ಪರಿಣಾಮದಿಂದ ಅನುಭವ ಪಡೆದ ಮೇಲೆ ಒಳ್ಳೆಯ ವಾತಾವರಣದಲ್ಲಿ ಬರಮಾಡಲು ಪ್ರತಿಯೊಬ್ಬನಿಗೂ ಅವನವನ ನಡತೆಯ ಪ್ರಕಾರ ವಿಚಾರಿಸಲು ಮತ್ತೊಂದು ನ್ಯಾಯ ವಿಚಾರಣೆಯ ದಿನವನ್ನು ಗೊತ್ತುಮಾಡಿರುವನು; ಅಷ್ಟೇ ಹೊರತು ತನ್ನ ಮೂಲ ಉದ್ದೇಶದಲ್ಲಿ ಯಾವದೊಂದು ಬದಲಾವಣೆಯನ್ನು ಮಾಡಿಲ್ಲ. ದೇವರು ತನ್ನ ಮನಸ್ಸು ಬದಲಾಯಿಸುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿರುವನು. ತಾನು ವಿಧಿಸಿದ ಶಿಕ್ಷೆಯನ್ನು ಕ್ರಿಸ್ತನಲ್ಲಿ ಸಂಪೂರ್ಣವಾಗಿ ನೆರವೇರಿಸುವನು. ಯೇಸುಕ್ರಿಸ್ತನು ದೇವರ ಕೃಪೆಯಿಂದ ಎಲ್ಲರಿಗಾಗಿ ಮರಣವನ್ನು ಅನುಭವಿಸಿದನು. ಸಭೆಗೆ ಆತನ ಯಜ್ಞದ ಮೂಲಕ ಲೋಕದವರಿಗೆ ಹೊಸ ಒಡಂಬಡಿಕೆಯ ಮೂಲಕ ಜೀವದಾನ ಮಾಡುವನು. ಕೀರ್ತ 50:5; ರೋಮಾ 12:1 ರೋಮಾ 14:9; ಇಬ್ರಿಯ 10:16 ಯೆರೆ 31:31.

ದೇವರು ಕ್ರಿಸ್ತನಿಗೆ ನ್ಯಾಯ ವಿಚಾರಿಸುವ ಅಧಿಕಾರ ಕೊಟ್ಟಿದ್ದಾನೆ. ಯಾಕೆಂದರೆ ನಮ್ಮ ವಿಮೋಚನೆಗಾಗಿ ಮರಣದ ಪರಿಯಂತರ ದೇವರಿಗೆ ವಿಧೇಯನಾದನು. ಆದುದರಿಂದ ಕ್ರಿಸ್ತನನ್ನು ಉನ್ನತ ಪದವಿಗೇರಿಸಿ ಎಲ್ಲಾದರ ಮೇಲೆ ಅಧಿಕಾರಿಯನ್ನಾಗಿ ಮಾಡಿದನು. ಅ.ಕೃ. 5:31ಈತನೇ ನ್ಯಾಯಾಧಿಪತಿಯಾಗಿ ಬರುವನು. ತಂದೆಯು ಯಾರಿಗೂ ತೀರ್ಪುಮಾಡುವವನಲ್ಲ, ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ. ಯೋಹಾನ 5:22. ಇದು ಹೆದರುವ ಘಟನೆಯಲ್ಲ ಮಹಾ ಸಂತೋಷದಿಂದ ಎದರು ನೋಡುವ ದಿನವಾಗಿದೆ. ನಮ್ಮನ್ನು ರಕ್ಷಿಸಿದ ಯೇಸು ಕರುಣಾಮಯನು ಉದಾರ ಮನಸ್ಸಿನಿಂದ ನ್ಯಾಯವಿಚಾರಣೆ ಮಾಡುವನು. ವಿಧೇಯರಾದವರೆಲ್ಲಾ ಏದೇನು ಉದ್ಯಾನವನದ ಸೌಲಭ್ಯವನ್ನು ಅನುಭವಿಸುವರು.

ಹಿಂದಿನ ಕಾಲದಲ್ಲಿ ನ್ಯಾಯಾಧಿಪತಿಗಳು ಅನ್ಯಾಯವಾದವರನ್ನು ರಕ್ಷಿಸುತ್ತಿದ್ದರು. ಇಸ್ರಾಯೇಲ್ಯರು ಯೆಹೋವನ ದೃಷ್ಟಿಯಲ್ಲಿ ಅಪರಾಧ ಮಾಡುತ್ತಿದ್ದುದರಿಂದ ಶತ್ರುಗಳ ಕೈಗೆ ವಶವಾಗುತ್ತಿದ್ದರು. ಅವರನ್ನು ರಕ್ಷಿಸಲು ದೇವರು ಒಬ್ಬೊಬ್ಬ ನ್ಯಾಯಧಿಪತಿಯನ್ನು ಕಳುಹಿಸುತ್ತಿದ್ದನು. ಆದುದರಿಂದ "ಇಸ್ರಾಯೇಲ್ಯರು ಯೆಹೋವನಿಗ ಮೊರೆಯಿಟ್ಟಾಗ ಆತನು ಅವರನ್ನು ಬಿಡಿಸುವುದಕ್ಕೋಸ್ಕರ ರಕ್ಷಕನನ್ನು ಎಬ್ಬಿಸಿದನು... ಒತ್ನಿಯೇಲನೇ ಆ ರಕ್ಷಕನು. ಯೆಹೋವನ ಆತ್ಮವು ಅವನ ಮೇಲೆ ಬಂದದರಿಂದ ಅವನು ಇಸ್ರಾಯೇಲ್ಯರ ನ್ಯಾಯ ಸ್ಥಾಪನೆಗೋಸ್ಕರ ಯುದ್ಧಕ್ಕೆ ಹೊರಟು... ಅವರನ್ನು ಸಂಪೂರ್ಣವಾಗಿ ಸೋಲಿಸಿದ ದೇಶದಲ್ಲಿ ನಲ್ವತ್ತು ವರುಷಗಳು ಸಮಾಧಾನವಿತ್ತು. ನ್ಯಾಯ 3:9–11 ಎಂದು ಓದುತ್ತೇವೆ. ಹೀಗೆ ಬಹಳ ಹಿಂದಿನ ಕಾಲದಿಂದಲೂ ಸೈತಾನನ ತುಳಿತದಲ್ಲಿದೆ. ನಮ್ಮ ಪಾಪಗಳಿಗೆ ಕ್ರಯಕೊಟ್ಟವನನ್ನೇ ನ್ಯಾಯಾಧಿಪತಿಯಾಗಿ ಅಧಿಕಾರಕ್ಕೆ ಬಂದು ತಾನು ಪ್ರೀತಿಸಿ ವಿಮೋಚಿಸಿದವರ ನ್ಯಾಯ ತೀರಿಸುತ್ತಾನೆ. ಈ ಹೇಳಿಕೆಗೆ ಎಲ್ಲಾ ಪ್ರವಾದನೆಗಳು ಸರಿಹೊಂದುತ್ತವೆ. "ಆತನು ಲೋಕಕ್ಕೆ ನೀತಿಗನುಸಾರವಾಗಿಯೂ ಜನಾಂಗಗಳಿಗೆ ಯಥಾರ್ಥವಾಗಿಯೂ ತೀರ್ಪು ಕೊಡುವನು" ಕೀರ್ತ98:9.

ಮುಂದೆ ನಡೆಯುವ ನ್ಯಾಯತೀರ್ಕೆಯು ಮೊದಲಿನದರ ಹಾಗೆಯೇ ಇದೆ. ವಿಧೇಯತೆಯೆಂಬ ಶಾಸನಕ್ಕೆ ಜೀವವೆಂಬ ಬಹುಮಾನ ಅವಿಧೇಯತೆಯೆಂಬ ಶಾಸನಕ್ಕೆ ಮರಣವೆಂಬ ಶಿಕ್ಷೆಯನ್ನು ಕೊಡಲಾಗುವುದು. ಮೊದಲನೆಯ ಶಿಕ್ಷೆಯಿಂದ ಪಾಠ ಕಲಿತಿರುವುದರಿಂದ ಎರಡನೆಯ ತೀರ್ಪು ಹಿತಕರವಾಗಿರುತ್ತದೆ. ಪ್ರತಿಯೊಬ್ಬನು ತನ್ನ ಭವಿಷ್ಯಕ್ಕೆ ತಾನೇ ಹೊಣೆಯಾಗಿರುವನು. ಆಗ ಯಾರು ಆದಾಮನ ಅವಿಧೇಯತ್ವದಿಂದ ಸಾಯುವುದಿಲ್ಲ. "ತಂದೆಗಳು ಹುಳಿ ದ್ರಾಕ್ಷಿಯನ್ನು ತಿಂದರು. ಮಕ್ಕಳ ಹಲ್ಲುಗಳು ಜಳಿತು ಹೋಗುವವು" ಎಂದು ಆಗ ಯಾರು ಹೇಳುವುದಿಲ್ಲ. ಆಗ ಹುಳಿದ್ರಾಕ್ಷಿಯನ್ನು ತಿನ್ನುವವನ ಹಲ್ಲುಗಳೇ ಜಳಿತು ಹೋಗುವವು "ಪಾಪ ಮಾಡುವ

ಪ್ರಾಣಿಯೇ ಸಾಯುವನು" ಯೆರೆ 31:29, 30; ಯೆಹೆಜ್ಜೆ 18:4 ಹೀಗೆ ಅವನವನ ನಡತೆಯ ಪ್ರಕಾರ ನ್ಯಾಯ ಪಡೆಯುವನು. ಇರುವುದರ ಪ್ರಕಾರ ತೀರ್ಪಾಗುವುದೇ ಹೊರತು ಇಲ್ಲದ್ದಕ್ಕಲ್ಲ. 2 ಕೊರಿ 8:12 ಕ್ರಿಸ್ತನ ರಾಜ್ಯದಲ್ಲಿ ಪರಿಪೂರ್ಣತೆಯನ್ನು ಪಡೆಯುವವರಿಗೆ ಶಿಕ್ಷಣ ಕೊಡಲಾಗುವುದು. ಪರಿಪೂರ್ಣತೆಯಿಂದಲೇ ದೇವರ ಅನ್ಯೋನ್ಯತೆಯನ್ನು ಪಡೆಯಲು ಸಾಧ್ಯ. ಯಾಕೆಂದರೆ ಆದಾಮನು ಅವಿಧೇಯತೆ ಎಂಬ ಒಂದು ಚಿಕ್ಕ ತಪ್ಪಿನಿಂದ ಪರಿಪೂರ್ಣತೆಯನ್ನು ಕಳೆದುಕೊಂಡನು. ದೇವರು ಮಾನವರನ್ನು ಪರಿಪೂರ್ಣವಾಗಿ ಸೃಷ್ಟಿಸಿದ್ದರಿಂದ ಪ್ರತಿಯೊಬ್ಬನೂ ಪರಿಪೂರ್ಣವಾಗಿರಬೇಕೆಂದು ಕೇಳುವ ಹಕ್ಕು ದೇವರಿಗಿರುವುದು. ಇಲ್ಲದೆ ಹೋದಲ್ಲಿ ನಿತ್ಯಜೀವ ಪಡೆಯಲು ಸಾಧ್ಯವಿಲ್ಲ. ಆ ಕಾಲದಲ್ಲೂ ಸ್ವಚಿತ್ತದಿಂದ ಪಾಪಮಾಡುವವನು ಎರಡನೇ ಮರಣಕ್ಕೆ ಗುರಿಯಾಗುವನು. ತಮ್ಮನ್ನು ತಾವು ತಿದ್ದಿಕೊಳ್ಳಲು ನೂರು ವರ್ಷ ಅವಕಾಶ ಕೊಡಲಾಗುವುದು. ಆ ನೂರು ವರ್ಷದಲ್ಲೂ ಅವನು ಮಾರ್ಪಡದೇ ಹೋದರೆ ಅಂಥವರನ್ನು ಎರಡನೇ ಮರಣದಲ್ಲಿ ನಾಶಮಾಡಲಾಗುತ್ತದೆ. ಅಂಥವರನ್ನು ಕುರಿತು "ಯುವಕನು ನೂರು ವರ್ಷದೊಳಗೆ ಸಾಯನು; ಪಾಪಿಷ್ಟನಿಗೂ ನೂರು ವರ್ಷದೊಳಗೆ ಶಾಪತಗಲದು" ಯೆಶಾ 65:20 ಎಂದು ಹೇಳಲಾಗಿದೆ.

ಮುಂದೆ ಲೋಕದ ಸರ್ವಜನಾಂಗಗಳಿಗೆ ನಡೆಯುವ ನ್ಯಾಯ ವಿಚಾರಣೆಯನ್ನು ಕುರಿಗಳ ಮತ್ತು ಆಡುಗಳ ಸಾಮ್ಯದಲ್ಲಿ ತೋರಿಸಲಾಗಿದೆ. ಮತ್ತಾ 25:31–46:ಪ್ರಕ 20:15;21:8;1 ಕೋರಿ15:25 ವಿಧೇಯರು ಅವಿಧೇಯರು ಈ ಎರಡು ವರ್ಗದವರನ್ನು ಸಂಪೂರ್ಣವಾಗಿ ಪ್ರತ್ಯೇಕಿಸಲಾಗುವುದು. ಯಾರು ದೇವರ ವಾಕ್ಯದಲ್ಲಿ ನೆಲೆಗೊಂಡಿದ್ದು ವಿಧೇಯರಾಗಿರುತ್ತಾರೋ ಅವರಿಗೆ ನಿತ್ಯಜೀವ, ಯಾರು ದೇವರ ವಾಕ್ಯಕ್ಕೆ ಅವಿಧೇಯರಾಗುತ್ತಾರೋ ಅಂಥವರಿಗೆ ನಿತ್ಯ ಮರಣ. ಇದೇ ಪ್ರತಿಫಲ ಹೀಗೆ ಮರಣಹೊಂದಿದವರಿಗೆ ಬಿಡುಗಡೆ ಎನ್ನುವುದೇ ಇಲ್ಲ. ಅದು ಅವರ ಸ್ವಂತ ಆಯ್ಕೆಯಾಗಿದೆ.

ದೇವರು ಒಳ್ಳೆಯದನ್ನು ಕೆಟ್ಟದನ್ನು ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸಿ ನ್ಯಾಯ ವಿಚಾರಣೆಗೆ ಪ್ರತಿಯೊಬ್ಬರನ್ನು ಗುರಿಪಡಿಸುವನು. "ಯೆಹೋವನ ದೃಷ್ಟಿಯು ಎಲ್ಲೆಲ್ಲಿಯೂ ಇರುವುದು. ಆತನು ಒಳ್ಳೆಯವರನ್ನು ಕೆಟ್ಟವರನ್ನು ನೋಡುತ್ತಲಿರುವನು." ಜ್ಞಾನೋಕ್ತಿ 15:3 "ಒಳ್ಳೆದಾಗಲಿ ಕೆಟ್ಟದ್ದಾಗಲಿ ಸಕಲ ರಹಸ್ಯಸಂಗತಿಗಳನ್ನು ವಿಮರ್ಶಿಸುವ ನ್ಯಾಯ ವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿಮಾಡುವನು" ಪ್ರಸಂಗಿ 12:14 ಈಗಿನ ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳಿಗೆ ಈಗಾಗಲಿ ಅಥವಾ ಮುಂದೆ ಆಗಲಿ ನ್ಯಾಯ ದೊರೆಯುವುದು. "ಕೆಲವರ ಪಾಪಕೃತ್ಯಗಳು ಪ್ರಸಿದ್ಧವಾಗಿದ್ದು ಅವರು ಇಂಥವರೆಂದು ಮೊದಲೇ ತಿಳಿಯಪಡಿಸುತ್ತದೆ. ಬೇರೆ ಕೆಲವರ ಪಾಪಕೃತ್ಯಗಳು ಮರೆಯಾಗಿದ್ದು ತರುವಾಯ ತಿಳಿದುಬರುತ್ತದೆ." 1 ತಿಮೋ 5:24 ಮೊದಲನೇ ನ್ಯಾಯತಿರ್ಮಾನಕ್ಕೂ ಎರಡನೇ ನ್ಯಾಯತೀರ್ಮಾನಕ್ಕೂ ನಡುವೆ 6000 ವರ್ಷಗಳ ಅಂತರವಿದೆ. ಈ ದೀರ್ಘ ಅವಧಿಯಲ್ಲಿ ದೇವರು ಎರಡು ವಿಶೇಷ ತರಗತಿಗಳನ್ನು ಆರಿಸಿಕೊಂಡು ಮುಂದೆ ನಡೆಯುವ ಮಹಾಕಾರ್ಯದಲ್ಲಿ ದೇವರ ಸಂಗಡ ಭಾಗಿಗಳಾಗಲು ಶಿಕ್ಷಣ ಮತ್ತು ಶಿಸ್ತನ್ನು ಕಲಿಸುತ್ತಿರುವನು. ಇವರನ್ನು ಪೌಲನು ದೇವರ ಮಕ್ಕಳು ಮತ್ತು ದೇವರ ಸೇವಕರು ಎಂದು ಕರೆದಿರುವನು. ಇಬ್ರಿಯ 3:5,6 ಮೊದಲಿನವರು ಕ್ರೈಸ್ತರ ಸುವಾರ್ತಾ ಯುಗದಲ್ಲಿ ಕಷ್ಟ ಸಂಕಟಗಳನ್ನು ಅನುಭವಿಸಿ ಜಯಶಾಲಿಗಳಾದವರು, ಎರಡನೆಯವರು ಕ್ರಿಸ್ತನ ರಾಜ್ಯದಲ್ಲಿ ಮೊದಲು ನಂಬಿಗಸ್ತರಾಗಿ ನೀತಿ ಹೊಂದಿದವರು. ಇವರು ದೇವರ ನ್ಯಾಯ ವಿಚಾರಣೆಯ ಕೆಲಸದಲ್ಲಿ ಕೈ ಹಾಕುವುದಿಲ್ಲ. ಆಕಾಲದಲ್ಲಿ ತಮಗೆ ಸಿಕ್ಕುವ ಪ್ರತಿ ಫಲವನ್ನು ಹೊಂದಿ ಜಯಶಾಲಿಗಳಾಗುವರು. ಲೋಕವನ್ನು ಆಶೀರ್ವದಿಸುವ ಕೆಲಸದಲ್ಲಿ ಭಾಗಿಗಳಾಗುವರು.

"ದೇವ ಜನರು ಲೋಕಕ್ಕೆ ತೀರ್ಪು ಮಾಡುವರೆಂದು ನಿಮಗೆ ತಿಳಿಯದೋ?" 1 ಕೋರಿ 6:2 ಇವರೂ ಸಹ ಆದಾಮನ ಶಿಕ್ಷೆಗೆ ಒಳಗಾದವರೇ ಕ್ರಿಸ್ತನ ಮರಣದಲ್ಲಿ ನಂಬಿಕೆಯಿಟ್ಟು ನೀತಿವಂತರಾದವರು. ದೇವಜನರ ನ್ಯಾಯವಿಚಾರಣೆಯು ಲೋಕದ ನ್ಯಾಯ ವಿಚಾರಣೆಗಿಂತ ಕಠಿಣವಾದದ್ದು. ಯಾಕೆಂದರೆ ಸೈತಾನನ ಎಲ್ಲಾ ಕುತಂತ್ರಗಳಿಂದ ಪಾರಾಗಬೇಕು. ದೇವರು ಇವರನ್ನು ಕಠಿಣವಾಗಿ ಪರೀಕ್ಷಿಸಿದರೂ ಮುಂದೆ ಸತ್ಯಮಕ್ಕಳಿಗೆ ವಿಶೇಷಫಲ ಸಿಕ್ಕುವುದು. ಮುಂದೆಯಾದರೋ ಪ್ರಪಂಚವನ್ನು ಮೋಸಗೊಳಿಸದಂತೆ ಸೈತಾನನನ್ನು ಬಂಧಿಸಲಾಗುವುದು ಪ್ರಕ 20:3.

ಈಗಿನ ಲೋಕ ಮತ್ತು ಸಭೆ ಎರಡು ಸೈತಾನನ ಮೋಸಕ್ಕೆ ಒಳಗಾಗಿದೆ. ಲೋಕವು ನ್ಯಾಯವಿಚಾರಣೆಯ ದಿನವನ್ನು ಸಂತೋಷದಿಂದ ಎದುರು ನೋಡುವ ಬದಲು ಭಯದಿಂದ ಹೆದರಿ ನಡುಗುತ್ತಿದೆ. ಅದರ ಒಳ್ಳೆಯತನವನ್ನು ಸೈತಾನನು ಮುಚ್ಚಿಟ್ಟಿರುವನು. ಅದು ಲೋಕಕ್ಕೆ ಅಧೈರ್ಯದ ಸುದ್ಧಿಯಾಗಿದೆ. ತಮ್ಮ ಮನಸ್ಸಿನಿಂದ ಹೊರಗೆ ಹಾಕಲು ಪ್ರಯತ್ನಿಸುತ್ತಾರೆ. ಕ್ರಿಸ್ತನ ರಾಜ್ಯದಲ್ಲಿ ಸಿಕ್ಕುವ ಆಶೀರ್ವಾದದ ವಿಚಾರವೆ ಅವರಿಗೆ ತಿಳಿದಿಲ್ಲ. ತಪ್ಪಾದ ಬೋಧನಾ ಕ್ರಮಗಳು ಗೀತಗಳನ್ನು ರಚಿಸಿಕೊಂಡು ಅದರ ಪ್ರಕಾರ ನಡೆದು ದೇವರಯೋಜನೆಯನ್ನು ಬದಲು ಮಾಡಲು ಸೈತಾನನು ಪ್ರಯತ್ನಿಸುತ್ತಿರುವನು. ನ್ಯಾಯವಿಚಾರಣೆಯ ದಿನವನ್ನು ಹಿಂದಿನ ಕಾಲದ ಪ್ರವಾದಿಗಳು ಮತ್ತು ಅಪೊಸ್ತಲರು ಎಂಥ ಉತ್ತಮ ದೃಷ್ಠಿಯಿಂದ ನೋಡುವವರಾಗಿದ್ದರು. ಇದರ ವಿಷಯವಾಗಿ ದಾವೀದನು ಪ್ರವಾದಿಸಿರುವುದನ್ನು ಗಮನಿಸಿರಿ 1 ಪೂ. ವೃತ್ತಾಂತ 16:31–34.

1Ch 16:31 – 34

ಆಕಾಶಗಳು ಸಂತೋಷಿಸಲಿ, ಭೂಮಿಯು
ಉಲ್ಲಾಸಪಡಲಿ
ಕರ್ತನು ಆಳುತ್ತಾನೆಂದು ಜನಾಂಗಗಳಲ್ಲಿ ಹೇಳಲಿ.
ಸಮಾಜವೂ ಅದರ ಪರಿಪೂರ್ಣತ್ವೂ
ಘೋಷಿಸಲಿ; ಹೊಲಗಳು ಅವುಗಳಲ್ಲಿರುವ
ಸಮಸ್ತವೂ ಉಲ್ಲಾಸಪಡಲಿ.
ಆತ ಕರ್ತನ ಮುಂದೆಯೇ ಅಡವಿಯ ಮರಗಳೆಲ್ಲಾ
ಉತ್ಸಾಹ ಧ್ವನಿ ಮಾಡಲಿ; ಆತನು ಭೂಮಿಗೆ
ನ್ಯಾಯ ತೀರಿಸಲು ಬರುತ್ತಾನೆ. ಕರ್ತನಿಗೆ
ಕೃತಜ್ಞಾಸ್ತುತಿ ಮಾಡಿರಿ; ಆತನು ಒಳ್ಳೆಯವನು;
ಆತನ ಕೃಪೆಯು ಯುಗಯುಗಕ್ಕೂ ಅವೆ.

ಅಪೋಸ್ತಲರ ವರ್ಣನೆಯು ರೋಮಾ 8:21,22ರಲ್ಲಿ ಕಂಡುಬರುತ್ತದೆ. ಯೋಹಾನ 5:28, 29 ಆ ದಿನವನ್ನು ಕುರಿತು ವಿಶೇಷ ವಾಗ್ದಾನ ಮಾಡಲಾಗಿದೆ.

## Afterward

"God's ways are equal: storm or calm,
Seasons of peril and of rest,
The hurting dart, the healing balm,
Are all apportioned as is best.
In judgments oft misunderstood,
In ways mysterious and obscure,
He brings from evil lasting good,
And makes the final gladness sure.
While Justice takes its course with strength,
Love bids our faith and hope increase:
He'll give the chastened world at length
His afterward of peace.
"When the dread forces of the gale
His sterner purposes perform,
And human skill can naught avail
Against the fury of the storm,
Let loving hearts trust in him still,
Through all the dark and devious way;
For who would thwart his blessed will,
Which leads through night to joyous day?
Be still beneath his tender care;
For he will make the tempest cease,
And bring from out the anguish here
An afterward of peace.
"Look up, O Earth; no storm can last
Beyond the limits God hath set.
When its appointed work is past,
In joy thou shalt thy grief forget.
Where sorrow's plowshare hath swept through,
Thy fairest flowers of life shall spring,
For God shall grant thee life anew,
And all thy wastes shall laugh and sing.
Hope thou in him; his plan for thee
Shall end in triumph and release.
Fear not, for thou shalt surely see
His afterward of peace."

# ಅಧ್ಯಾಯ-9

## ಈಡುಬಲಿ ಮತ್ತು ಸಮಸ್ತವನ್ನು ಸರಿಪಡಿಸುವಿಕೆ

**ಈಡುಬಲಿಯಿಂದ, ಪೂರ್ವಸ್ಥಿತಿಗೆ ತರುವ ಕಾರ್ಯ ಖಾತರಿಯಾಗಿದೆ-ಈಡು ಬಲಿಯಿಂದ ನಿತ್ಯಜೀವವಲ್ಲ ಆದರೆ ಅದಕ್ಕೆ ವಿಚಾರಣೆ ಹೊಂದುವ ಅವಕಾಶದ ಖಾತ್ರಿಯಾಗಿದೇ-ವಿಚಾರಣೆಯ ಉಪಯೋಗಗಳು ಮತ್ತು ಷರತ್ತುಗಳು-ಕ್ರಿಸ್ತನ ತ್ಯಾಗ ಅವಶ್ಯಕ-ಹೇಗೆ ಜನಾಂಗವು ಒಬ್ಬನ ಮರಣದಿಂದ ಬಿಡುಗಡೆ ಹೊಂದಲು ಸಾಧ್ಯ ಮತ್ತು ಹೇಗೆ ಬಿಡುಗಡೆ ಹೊಂದಿತು- ನಂಬಿಕೆ ಮತ್ತು ಕ್ರಿಯೆ ಇನ್ನೂ ಅವಶ್ಯಕವಾಗಿದೆ-ಬೇಕೆಂದು ಪಾಪಮಾಡಿದರೆ ಅದಕ್ಕೆ ಸಂಬಳ ಖಚಿತ-ಪುನರುತ್ಥಾನ ಮಾಡಲ್ಪಡುವ ಲಕ್ಷಾಂತರ ಜನರಿಗೆ ಭೂಮಿಯ ಮೇಲೆ ಸ್ಥಳವಶವಾಗುವುದೇ? ಪೂರ್ವಸ್ಥಿತಿಗೆ ತರುವುದರ ವಿರುದ್ಧ ವಿಕಾಸವಾದ.**

ಆದಾಮನು ಏದೇನಿನಲ್ಲಿ ಕಳೆದುಕೊಂಡ ಮಹಿಮೆಯನ್ನು ಮಾನವನು ಪುನಃ ಪಡೆದುಕೊಳ್ಳುವುದನ್ನೇ ದೇವರ ಯೋಜನೆಯು ಪ್ರಕಟ ಮಾಡುವುದಾಗಿದೆ. ವಿಮೋಚನೆಯ ಪರಿಪೂರ್ಣ ಸ್ವಭಾವವನ್ನು ಅರ್ಥಮಾಡಿಕೊಂಡರೆ ಮಾತ್ರ ಈ ವಿಷಯವನ್ನು ಪ್ರಶಸಂಸಿಸಲು ಸಾಧ್ಯ. ಪ್ರವಾದಿಗಳೂ ಮತ್ತು ಅಪೋಸ್ತಲರು ಮುಂತಿಳಿಸಿರುವ ಸಮಸ್ತವನ್ನು ಸರಿಪಡಿಸುವ ಕಾರ್ಯವು ವಿಮೋಚನೆಯ ಮೂಲಕವೇ ನೆರವೇರಬೇಕು. ಮಾನವರಿಗಾಗಿ ದೇವರು ಗೊತ್ತುಮಾಡಿರುವ ವಿಮೋಚನೆಯ ಕಾರ್ಯವು ಮೂಲಶಿಕ್ಷೆಯಾದ ಮರಣದಿಂದಲೇ ನಡೆಯಬೇಕು. ಇಲ್ಲದಿದ್ದರೆ ಎಲ್ಲರಿಗೂ ವಿಮೋಚನೆ ದೊರೆಯುವುದಿಲ್ಲ.

ಪೌಲನು ಈ ವಿಷಯವನ್ನು ಬಹಳ ಸ್ಪಷ್ಟವಾಗಿ ತಿಳಿಸಿರುವನು "ಯಾಕೆಂದರೆ ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿರಬೇಕೆಂತಲೇ ಕ್ರಿಸ್ತನು ಸತ್ತು ಜೀವಿತನಾದನು." ರೋಮಾ 14:9 ಅಂದರೆ ಕ್ರಿಸ್ತನ ಮರಣ ಮತ್ತು ಪುನರುತ್ಥಾನವು ಕೇವಲ ಬದುಕಿರುವವರನ್ನು ಆಶೀರ್ವದಿಸಿ ದೊರೆತನ ಮಾಡುವುದಕ್ಕೆ. ಅಲ್ಲ, ಬದುಕಿರುವವರಿಗೂ ಸತ್ತವರಿಗೂ ಎಲ್ಲರಿಗೂ ಒಡೆಯನಾಗಲು ಆತನು ಎಲ್ಲರಿಗಾಗಿ ಕ್ರಯಕೊಟ್ಟನು. ಯಾಕೆಂದರೆ ಎಲ್ಲರನ್ನು ಪ್ರತ್ಯೇಕವಾಗಿ ಆಶೀರ್ವದಿಸಲು ಮತ್ತು ಪ್ರತಿಯೊಬ್ಬರು ಜೀವಿತದ ವಿಚಾರಣೆಗೆ ಒಳಗಾಗಲು ಎಲ್ಲರಿಗಾಗಿ ಆತನು ಕ್ರಯ ಕೊಟ್ಟನು ಎಂದು ಸ್ಪಷ್ಟವಾಗಿ ತಿಳಿಸಿರುವಾಗ ಕೆಲವರು ಕೇವಲ ಕೆಲವರಿಗಾಗಿ ಮಾತ್ರ ಆತನು ವಿಮೋಚನೆಯನ್ನುಂಟುಮಾಡಿರುವನು ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ. ಯಾಕೆಂದರೆ ಇಲ್ಲಿ ದೇವರು ವಿಮೋಚನೆಯ ಕ್ರಯವನ್ನು ತೆಗೆದುಕೊಂಡು ನ್ಯಾಯವಾಗಿ ಸಲ್ಲತಕ್ಕದ್ದನ್ನು ಎಲ್ಲರಿಗೆ ದೊರಕಿಸದೆ ಅನ್ಯಾಯ ಮಾಡುವವನಾಗಿದ್ದಾನೆ ಎಂದು ಸೂಚಿಸುತ್ತದೆ ದೈವಿಕ ನ್ಯಾಯ ಮತ್ತು ಪ್ರೀತಿಯು ಕಾಲವು ಪರಿಪೂರ್ಣವಾದಾಗ ದೇವರ ಯೋಜನೆಯ ಕಾರ್ಯಗಳೆಲ್ಲವೂ ತಕ್ಕ ಸಮಯದಲ್ಲಿ ಪರಿಪೂರ್ಣವಾಗಿ ನೆರವೇರುವುದು ಎಂಬ ಭರವಸೆಯನ್ನು ಕೊಡುವುದಾಗಿದೆ. ಆದಾಮನ ಪಾಪದಿಂದ ವಿಮೋಚನೆಯನ್ನು ಹೊಂದಿ ಶಾಪಕ್ಕೆ ಮುಂಚೆ ಇದ್ದ ಸಂತೋಷವನ್ನು ಕ್ರಿಸ್ತನ ಮೂಲಕ ಮಾನವರು ಪಡೆಯುವರು.

ಎಲ್ಲಕ್ಕಿಂತ ಮೊದಲು ವಿಮೋಚನೆಯ ಪರಿಣಾಮ ಮತ್ತು ಪ್ರಯೋಜನಗಳನ್ನು ತಿಳಿದುಕೊಳ್ಳುವುದು ಅಗತ್ಯ. ಕ್ರಿಸ್ತನ ಮರಣವು ಎಲ್ಲಾ ಮನುಷ್ಯರಿಗೆ ಆಶೀರ್ವಾದ ಅಥವಾ ನಿತ್ಯಜೀವವನ್ನು ಕೊಡುವುದಿಲ್ಲ. ಆದರೆ ಪ್ರತಿಯೊಬ್ಬನಿಗೂ ನಿತ್ಯಜೀವವನ್ನು ಪಡೆದುಕೊಳ್ಳುವ ಅವಕಾಶವನ್ನು ಒದಗಿಸಿಕೊಡುತ್ತದೆ. ಮಾನವನು ಅವಿಧೇಯತ್ವದಿಂದ ದೇವರ ಆಶೀರ್ವಾದನ್ನು ಕಳೆದುಕೊಂಡು ಪಾಪದಲ್ಲಿ ಬಿದ್ದು ಜೀವಿತದ ಅನುಭವವನ್ನು ಪಡೆದಿರುವನು. ಅದುದರಿಂದ ವಿಧೇಯತೆಯಿಂದಲೇ ಬಿಡುಗಡೆಯುನ್ನು ಪಡೆಯ ಬೇಕಾಗಿರುವುದು. ಬಿಡುಗಡೆಯನ್ನು ಹೊಂದಿದ ಮೇಲೆ ವಿಮೋಚಕನಿಂದಲೇ ನಿತ್ಯಜೀವವನ್ನು ಪಡೆಯುವರು ಆದರೆ ಆಗಲೂ ಅವಿಧೇಯರಾಗಿ ಸ್ವಯಿಚ್ಛೆಯಿಂದ ನಡೆಯುವರೋ ಅಂಥವರು ಎರಡನೇ ಮರಣಕ್ಕೆ ಗುರಿಯಾಗುವರು. ಆದರಿಂದ ವಿಮೋಚನೆ ಎನ್ನುವುದೇ ಇಲ್ಲ ನಿತ್ಯ ನಾಶಕ್ಕೆ ಗುರಿಯಾಗುವರು. ಹೀಗೆ ಎಲ್ಲರೂ ಒಳ್ಳೆಯದನ್ನು ಕೆಟ್ಟದ್ದನ್ನು ರುಚಿ ನೋಡುವರು. ಹೆಚ್ಚಾಗಿ ಏನೂ ಹೇಳಲುಸಾಧ್ಯವಿಲ್ಲ. ನ್ಯಾಯ ವಿಚಾರಣೆಯು ಎಲ್ಲವನ್ನು ತೀರ್ಮಾನಿಸುತ್ತದೆ.

ದೇವರ ನಿಯಮವು ಒಂದೇ ತೆರನಾಗಿರುವುದು. ಅದು ಎಂದಿಗೂ ಬದಲಾವಣೆಯಾಗುವುದಿಲ್ಲ. "ಪಾಪ ಮಾಡುವ ಪ್ರಾಣೀಯೇ ಸಾಯುತ್ತದೆ" ಎಂದು ತಿಳಿಸುತ್ತದೆ. ಏದೇನಿನಲ್ಲಿದ್ದಂತೆ ಮಾನವನು ವಾಸಿಸುವ ವಾತಾವರಣದಲ್ಲಿ ಯಾವ ಬದಲಾಣೆಯೂ ಇರುವುದಿಲ್ಲ. ಒಂದೇ ವ್ಯತ್ಯಾಸವೆಂದರೆ ಒಳ್ಳೆಯದು ಮತ್ತು ಕೆಟ್ಟದನ್ನು ಅನುಭವಿಸಿ ಮಾನವನ ಜ್ಞಾನ ಹೆಚ್ಚಾಗಿರುತ್ತದೆ. ಆದುದರಿಂದ ಎರಡನೆಯ ವಿಚಾರಣೆಯ ಫಲಿತಾಂಶ ಮೊದಲನೆಯದಕ್ಕಿಂತ ಬೇರೆಯಾಗಿರುತ್ತದೆ. ಕ್ರಿಸ್ತನ ಸಾವಿರ

ವರ್ಷ ಆಳ್ವಿಕೆಯ ತರುವಾಯ ಮಾನವನಿಗೆ ವಿಮೋಚನೆ ಎಂಬುದಿರುವುದಿಲ್ಲ.

ಕ್ರಿಸ್ತನ ವಿಮೋಚನೆಯು ಪಾಪವನ್ನು ಎಂದಿಗೂ ಕ್ಷಮಿಸುವುದಿಲ್ಲ. ಅನೀತಿವಂತರನ್ನು ನೀತಿವಂತರು ಎಂದು ಪರಿಗಣಿಸಿ ಅವರಿಗೆ ನಿತ್ಯ ಜೀವವನ್ನು ಕೊಡುವುದಿಲ್ಲ. ಆದರೆ ನಿತ್ಯ ಜೀವ ಪಡೆಯಲು ಅರ್ಹನೋ ಇಲ್ಲವೋ ಎಂದು ತಿಳಿಯಲು ಅವಕಾಶ ಒದಗಿಸಿಕೊಡುತ್ತದೆ.

ಕೇವಲ ಸತ್ಯವೇದವನ್ನು ಹೊಂದಿರುವುದರಿಂದಾಗಲಿ ಅಥವಾ ಉತ್ತಮ ಮಟ್ಟದ ಜೀವಿತವನ್ನು ಜೀವಿಸಿರುವುದರಿಂದ ನಿತ್ಯ ಜೀವ ಪಡೆಯಲು ಅವಕಾಶವಿದೆ ಎಂದು ತಿಳಿಯಬಾರದು. ಯಾಕೆಂದರೆ ಪಾಪವು ಆದಾಮನ ಮಕ್ಕಳಲ್ಲಿ ಒಂದೇ ತೆರನಾಗಿಲ್ಲ. ಕೆಲವರು ಬಲಹೀನರಾಗಿ ಈ ಲೋಕದ ಅಧಿಪತಿಯಾದ ಸೈತಾನನಿಗೆ ಅಡಿಯಾಳಾಗಿ ಪಾಪದಲ್ಲಿ ಮುಳುಗಿದವರಾಗಿರುತ್ತಾರೆ. ಅವರಲ್ಲಿ ಒಳ್ಳೇತನವೆಂಬುದು ಸ್ವಲ್ಪವಾದರೂ ಇರುವುದಿಲ್ಲ. ಅವರ ಕೆಟ್ಟತನವು ಕ್ಷಮಿಸಲು ಅನರ್ಹವಾಗಿರುತ್ತದೆ.

ಕ್ರಿಸ್ತನನ್ನು ಅರಿತು ಆತನ ವಿಮೋಚನೆಯನ್ನು ಅಂಗೀಕರಿಸಿರುವವರು ಕೇವಲ ಕೊಂಚ ಮಂದಿ. ಮುಂದೆ ಇವರು ಕ್ರಿಸ್ತನ ರಾಜ್ಯದಲ್ಲಿ ದೇವರ ಜೊತೆಯಲ್ಲಿ ಕೆಲಸ ಮಾಡುವವರಾಗಿರುವುದರಿಂದ ಇವರನ್ನು ಈಗ ಕಠಿಣ ಶಿಕ್ಷೆಗೆ ಒಳಪಡಿಸಲಾಗುವುದು. ಈಗ ಪರೀಕ್ಷೆಗೆ ಒಳಗಾದರೂ ಮುಂದೆ ನಿತ್ಯಜೀವವೆಂಬ ಆಶೀರ್ವಾದವನ್ನು ಹೊಂದುವರು. ಅವರುನಂಬಿಕೆಯಿಂದಲೇ ಅದನ್ನು ಪಡೆಯುವರು. ಆದಾಮನಿಂದ ಕಳೆದುಕೊಂಡ ಪರಿಪೂರ್ಣತೆಯನ್ನು ಕ್ರಿಸ್ತನ ಮೂಲಕವಾಗಿ ಪಡೆಯುವರು.ಸಭೆಯ ಪರಿಪೂರ್ಣತೆಯ ಕಾಲವೇ ಪ್ರಪಂಚದ ಪರೀಕ್ಷಾ ಸಮಯವಾಗಿದೆ. ಅನಂತರ ಲೋಕವು ಸತ್ಯದ ಪರಿಜ್ಞಾನವನ್ನು ಪಡೆಯುವುದು. ಆಗ ಪ್ರತಿಯೊಬ್ಬರನ್ನು ಪಾಪಿಗಳೆಂದು ಪರಿಗಣಿಸದೆ ದೇವರ ಮಕ್ಕಳೆಂದು ಪರಿಗಣಿಸಲಾಗುವುದು ಮತ್ತು ಆಶೀರ್ವಾದಕ್ಕೆ ಪಾತ್ರರಾಗುವರು.

ಸಭೆಯ ನ್ಯಾಯವಿಚಾರಣೆಗೂ ಲೋಕದ ಸರ್ವಜನಾಂಗದ ನ್ಯಾಯ ವಿಚಾರಣೆಗೂ ಇರುವ ಒಂದೇ ವ್ಯತ್ಯಾಸವೆಂದರೆ ಕ್ರಿಸ್ತನಿಗಾಗಿ ಮರಣವನ್ನನುಭವಿಸಿರುವವರು ಕೂಡಲೇ ಆಶೀರ್ವಾದಕ್ಕೆ ಪಾತ್ರರಾಗುವರು ಉಳಿದವರು ನಿಧಾನವಾಗಿ ಪ್ರಗತಿ ಹೊಂದುತ್ತಾ ಆಶೀರ್ವಾದ ಹೊಂದುವರು. ಮತ್ತೊಂದು ವ್ಯತ್ಯಾಸವೆಂದರೆ ಆಗ ನೀತಿ ನ್ಯಾಯಗಳಿರುವುದರಿಂದ ನೀತಿಗೆ ಫಲ, ಪಾಪಕ್ಕೆ ಶಿಕ್ಷೆ. ಈಗ ಸೈತಾನನು ಲೋಕಾಧಿಪತಿಯಾಗಿರುವುದರಿಂದ ನೀತಿಯಿಂದ ಸಭೆಯು ಕಷ್ಟಕ್ಕೆ ಗುರಿಯಾಗಬೇಕಾಗಿದೆ. ಆದರೆ ಮುಂದೆ ದೈವಜ್ಞಾನವನ್ನು ಹೊಂದಿ ಮಹಿಮೆ ಸನ್ಮಾನಗಳನ್ನು ಪಡೆದು ನಿತ್ಯಜೀವ ಪಡೆಯುವುದು.

ಆದಮನು 930 ವರ್ಷಗಳು ಬದುಕಿದ್ದರೂ ಕಡೆಗೆ ಸಾಯಲೇ ಬೇಕಾಯಿತು. ಹಾಗೆಯೇ ಅವನ ಸಂತತಿಯೆಲ್ಲವೂ ಜೀವಿಸುವ ಹಕ್ಕಿಲ್ಲದೆ ಸಾಯುತ್ತಿರುವರು. ಕಷ್ಟ ಅನುಭವಿಸುವುದು ಮುಖ್ಯವಲ್ಲ. ಪಾಪದ ಸಂಬಳವಾದ ಮರಣ ಮುಖ್ಯ. ಕಷ್ಟದಿಂದಲೋ ಕಷ್ಟವಿಲ್ಲದೆಯೋ ಅಂತೂ ಮಾನವನು ಸಾಯಲೇ ಬೇಕು. ದೇವರು ಆದಾಮನಿಗೆ ಮರಣ ಶಿಕ್ಷೆಯನ್ನು ವಿಧಿಸಿದನಂತರ ಕೂಡಲೇ ಅದಕ್ಕೆ ಪರಿಹಾರವನ್ನು ಸೂಚಿಸಲಿಲ್ಲ. ಮುಂದೆಸಮಸ್ತವನ್ನು ಸರಿಪಡಿಸುವ ಕಾಲದಲ್ಲಿ ನಿತ್ಯ ಜೀವವನ್ನು ಪಡೆಯುವ ಅವಕಾಶವು ದೇವರ ಉಚಿತಾರ್ಥ ವರ ಮತ್ತು ಆತನ ಪ್ರೀತಿಯನ್ನು ಸೂಚಿಸುತ್ತದೆ.

ಸ್ತ್ರೀಯ ಸಂತಾನವು ಸರ್ಪದ ತಲೆಯನ್ನು ಜಜ್ಜುವುದು ಎಂದು ದೇವರು ಹೇಳಿದ ಮಾತಿನಿಂದ ಮಾನವರಿಗೆ ಒಂದು ನಿರೀಕ್ಷೆಯಿರುವುದು. ಇದರಿಂದ ಮಾನವರಿಗಾಗಿ ದೇವರ ಯೋಜನೆಯಿರುವುದು ಎಂದು ತಿಳಿದು ಬರುತ್ತದೆ. ನಿನ್ನ ಸಂತತಿಯಿಂದ ಸಕಲ ಜನಾಂಗಗಳು ಆಶೀರ್ವಾದ ಹೊಂದುವರು ಎಂದು ದೇವರು ಆದಾಮನಿಗೆ ಮಾಡಿದ ಆಶೀರ್ವಾದದಿಂದ ಸತ್ತವರಿಗೂ ಪುನರುತ್ಥಾನವಿದೆ ಎಂದು ತಿಳಿದುಬರುವುದು. ಯಾಕೆಂದರೆ ಕ್ರಿಸ್ತನು ಕ್ರಯ ಕೊಡುವ ಮೊದಲೇ ಅನೇಕರು ಸತ್ತುಹೋಗಿದ್ದರು. ಆದರೂ ವಾಗ್ದಾನವು ಉಚಿತವಾದದೇ ಸಮಸ್ತವನ್ನು ಸರಿಪಡಿಸುವ ಕಾಲದಲ್ಲಿ ಎಲ್ಲರೂ ಆಶೀರ್ವಾದಪಡೆಯುವರು. ಅ.ಕೃ. 3:19 ಆದಾಮನಿಗೆ ದೇವರ ಪ್ರೀತಿಯ ಬದಲು ಶಾಪ ಬಂದಿತು. ಆದರೆ ಆತನ ವಾಗ್ದಾನದಂತೆ ಶಾಪವು ತೊಲಗಿ ಮೊದಲಿನಂತೆ ದೇವರ ಪ್ರೀತಿಯು ಕಂಡುಬರುವುದು. ಇದಕ್ಕಾಗಿಯೇ ದೇವರು ತನ್ನ ಮಗನನ್ನು ನಮ್ಮ ರಕ್ಷಕನೂ ವಿಮೋಚಕನೂ ಆಗಿ ಕಳುಹಿಸಿರುವನು.

ದೇವರು ತನ್ನ ಯೋಜನೆಯ ಬಗ್ಗೆ ಅಬ್ರಹಾಮನು ಅನುಮಾನ ಪಡಲು ಬಿಡಲಿಲ್ಲ. ಕೇವಲ ಯಜ್ಞಾರ್ಪಣೆಯು ಪಾನಿವಾರಕವಲ್ಲ ಅದು ಶಿಕ್ಷೆಗೆ ಸರಿಹೊಂದುವುದಾಗಿರಬೇಕು ಎಂಬುದನ್ನು ಸ್ಪಷ್ಟವಾಗಿ ಅಬ್ರಹಾಮನಿಗೆ ತೋರಿಸಲಾಯಿತು. ಅಬ್ರಹಾಮನ ಮಗನ ಮೂಲಕ ಆಶೀರ್ವಾದ ಪ್ರಾಪ್ತವಾಯಿತು. ಆದುದರಿಂದ ಆಶೀರ್ವಾದಕ್ಕೆ ಮೊದಲು ಅವನು ಬಲಿಯಾಗಿ ಅರ್ಪಿತವಾಗಬೇಕಾಯಿತು. ಸತ್ತವರೊಳಗೆ ಜೀವಿತನಾಗಿ ಬಂದವನಂತೆ ಅಬ್ರಹಾಮನು ಅವನನ್ನು ಪುನಃ ಪಡೆದನು. ಇಸಾಕನು ಸತ್ಯ ಸಂತಾನದ ಗುರುತಾಗಿರುವನು. ಹಾಗೆಯೇ ಮಾನವರು ವಿಮೋಚನೆ ಹೊಂದಲು ಕ್ರಿಸ್ತನು ಯಜ್ಞವಾಗಿ ಅರ್ಪಿತವಾಗಬೇಕಾಯಿತು. ದೇವರು ಹಾಗೆಯೇ ಏನೂ ಇಲ್ಲದೆ ಕ್ಷಮಿಸುವವನಾಗಿದ್ದರೆ ಅಬ್ರಹಾಮನಿಗೆ ದೇವರ ವಾಗ್ದಾನದಲ್ಲಿ ನಂಬಿಕೆಯಿರುತ್ತಿರಲಿಲ್ಲ.ದೇವರು ತನ್ನ ಯೋಜನೆಯನ್ನು ಎಂದಿಗೂ ಬದಲಾಯಿಸುವುದಿಲ್ಲ. ಆತನು ತನ್ನ ಮಕ್ಕಳನ್ನು

ಎಷ್ಟೇ ಪ್ರೀತಿಸಿದರೂ ಅವರಿಗೆ ಕ್ಷಮಾಪಣೆಯಿಲ್ಲ. ಅದಕ್ಕಾಗಿ ತನ್ನ ಸ್ವಂತ ಮಗನನ್ನು ಉಳಿಸಿಕೊಳ್ಳದೆ ಎಲ್ಲರ ವಿಮೋಚನಾರ್ಥವಾಗಿ ಆತನನ್ನು ಮರಣಕ್ಕೆ ಒಪ್ಪಿಸಿದನು. "ಒಂದೇ ಅಪರಾಧಧ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ. ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು." ರೋಮಾ 5:18,19 "ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವುದಕ್ಕಾಗಿ ಒಂದೇ ಸಾರಿ ಪಾಪನಿವಾರಣೆಗೋಸ್ಕರ ಬಾಧೆಪಟ್ಟು ಸತ್ತನು" 1 ಪೇತ್ರ 3:18 ಇದರಿಂದ ದೇವರ ಉಚಿತಾರ್ಥವರವು ಮಾನವರಿಗಾಗಿ ಅದೆ ಎಂದು ಸ್ಪಷ್ಟವಾಗಿ ತಿಳಿದುಬರುವುದು. ನಮ್ಮ ವಿಮೋಚನೆಗಾಗಿ ಕ್ರಿಸ್ತನು ರಕ್ತ ಚೆಲ್ಲಿದ್ದರೂ ಕೇವಲ ಸ್ವಲ್ಪ ಮಂದಿ ಮಾತ್ರ ಪರಿಶುದ್ಧ ರಕ್ತದಲ್ಲಿ ನಂಬಿಕೆಯಿಡುವುದರ ಮೂಲಕ ಆದಾಮನ ಪಾಪದಿಂದ ಬಿಡುಗಡೆಯಾಗುವುದು. ದೇವರಲ್ಲಿ ಎಂದಿಗೂ ಅನೀತಿಯೆಂಬುದಿಲ್ಲ. "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿ ಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು." 1 ಯೋಹಾ 1:9 ಯಾವ ನ್ಯಾಯದಿಂದ ಮನುಷ್ಯನುಸಾವಿಗೆ ಗುರಿಯಾದನೋ ಅದೇ ನ್ಯಾಯದಿಂದ ಮನುಷ್ಯನು ಕ್ರಿಸ್ತನ ಮೂಲಕ ಜೀವ ಪಡೆಯುವನು. ರೋಮಾ 8:33;34 ಸಮಸ್ತವನ್ನು ಸರಿಪಡಿಸುವ ಕಾರ್ಯವು ನಡೆಯಬೇಕಾದರೆ ಮಾನವನ ವಿಮೋಚನೆ ಅಗತ್ಯ. ಆಗ ಕ್ರಯವಿಲ್ಲದೆ ಜೀವ ಪಡೆದುಕೊಳ್ಳಲು ಸಾಧ್ಯ ಪ್ರಕ 22:17 ದೇವರ ಮುಖ್ಯ ಲಕ್ಷಣ ನೀತಿ ನ್ಯಾಯ ಆತನ ವಾಗ್ದಾನಗಳು ಅದನ್ನು ಶ್ರುತಪಡಿಸುತ್ತದೆ. ಎಲ್ಲಾ ಯಜ್ಞಗಳು ಕ್ರಿಸ್ತನ ಯಜ್ಞಕ್ಕೆ ಮೂಲವಾಗಿದೆ. "ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ" ಯೋಹಾನ 1:29 "ಆತನು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ" 1 ಯೋಹಾನ 2:2 ಪಾಪದ ಸಂಬಳ ಮರಣ. ಪಾಪವೇ ನಿವಾರಣೆಯಾದ ಮೇಲೆ ಅದರ ಸಂಬಳವೂ ನಿಂತು ಹೋಗುವುದು. ಕ್ರಿಸ್ತನು ಸತ್ತು ಎರಡು ಸಾವಿರ ವರ್ಷಗಳುಕಳೆದಿದ್ದರೂ ಆದಾಮನ ಸಂತತಿಯು ವಿಮೋಚನೆಯನ್ನು ಪಡೆದಿಲ್ಲ. ಆದುದರಿಂದ ಮುಂದೆ ಸಮಸ್ತವನ್ನು ಸರಿಪಡಿಸುವ ಕಾರ್ಯವು ನಡೆಯುವುದು ಎಂದು ಇದು ಶ್ರುತಪಡಿಸುವುದು. ಕ್ರಿಸ್ತನು ಸಾಯುವುದಕ್ಕೆ ಮೊದಲು ನಾಲ್ಕು ಸಾವಿರ ವರ್ಷಗಳು ನಂತರ ಎರಡು ಸಾವಿರ ವರ್ಷಗಳು ಇವೆಲ್ಲವು ಸಿದ್ಧತೆಯ ಕಾಲವಾಗಿದೆ.

ದೇವರಲ್ಲಿ ನಂಬಿಕೆ, ಪಾಪಗಳಿಗೆ ಪಶ್ಚಾತ್ತಾಪ ಇವುಗಳಿಂದ ರಕ್ಷಣೆ ಸಾಧ್ಯವೆಂದು ಯಾರೂ ಭಾವಿಸಕೂಡದು. ಈ ಲೋಕದ ದೇವರು ಕೆಲವರನ್ನು ಕುರುಡರನ್ನಾಗಿ ಮಾಡಿರುವನು. ಯಾರು ಅದರಿಂದ ಎಚ್ಚತ್ತುಕೊಂಡು ನೀತಿವಂತರಾಗಿ ನಡೆಯುವರೋ ಅವರಿಗೆ ಮಾತ್ರ ನಿತ್ಯ ಜೀವ. ಯಾರು ಜೀವಿಸಲು ಅನರ್ಹರೋ ಅವರು ಎರಡನೇ ಮರಣಕ್ಕೆ ಗುರಿಯಾಗುವರು. ಅದರಿಂದ ಪುನರುತ್ಥಾನವೆಂಬುದಿಲ್ಲ. ಆದಾಮನ ಪಾಪದ ಮೂಲಕ ಬಂದ ಮರಣಕ್ಕೆ ವಿಮೋಚನೆಯಿದೆ. ಆದರೆ ಸ್ವಯಿಚ್ಛೆಯಿಂದ ಪಾಪ ಮಾಡಿದವರಿಗೆ ಮನ್ನಣೆಯಿಲ್ಲ ಅಂಥವರು ಎರಡನೇ ಮರಣಕ್ಕೆ ಗುರಿಯಾಗುವರು. ಪಾಪದ ಸಂಬಳ ಮರಣ ಎಂದು ಒಪ್ಪಿಕೊಳ್ಳದಿದ್ದರೆ ಸತ್ಯವಾಕ್ಯದ ಕಾರ್ಯಗಳನ್ನು ಮೆಚ್ಚಲು ಸಾಧ್ಯವಿಲ್ಲ. ಕೆಲವರು ಮರಣವು ನರಕಕ್ಕೆ ಮಾರ್ಗ ಎಂದು ತಿಳಿದಿರುವರು. ಅವರು ಜೀವ ಮರಣವನ್ನೇ ತಪ್ಪಾಗಿ ತಿಳಿದುಕೊಂಡಿರುವರು. ತಿನ್ನಬಾರದೆಂದು ಹೇಳಿದ ಹಣ್ಣನ್ನು ತಿಂದದ್ದಕ್ಕಾಗಿ ಆದಾಮನು ನಿತ್ಯ ನರಕಕ್ಕೆ ಹೋದನು ಎಂದು ತಿಳಿಯುವುದು ಅರ್ಥಹೀನ. ಅಂಥವರಿಗೆ ನಮ್ಮ ಪಾಪ ನಿವಾರಣೆಗಾಗಿ ಕ್ರಿಸ್ತನು ಸತ್ತನು ಎಂದು ಅರ್ಥಮಾಡಿಕೊಳ್ಳುವುದು ಕಷ್ಟ. ನಿತ್ಯ ಯಾತನೆ ಎಂಬ ಸಿದ್ಧಾಂತವು "ನಮ್ಮೆಲ್ಲರ ದೋಷ ಫಲವನ್ನು ಯೆಹೋವನು ಅವನ ಮೇಲೆ ಹಾಕಿದನು" ಮತ್ತು ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು ಎಂಬ ಮಾತುಗಳಿಗೆ ವಿರುದ್ಧವಾಗಿದೆ. ಆದರೂ ಕೆಲವರು ಅದನ್ನು ದೃಢವಾಗಿ ನಂಬಿ ಸತ್ಯವೇದದ ಸತ್ಯಕ್ಕೆ ವಿರುದ್ಧವಾಗಿ ನಡೆಯುತ್ತಿರುವರು.

### ಸಮಸ್ತವನ್ನು ಸರಿಪಡಿಸುವುದು ಸಾಧ್ಯವೆ?

ಸತ್ತಿರುವಂಥ ಕೋಟ್ಯಾನುಗಟ್ಟಲೇ ಜನರಿಗೆ ಪುನರುತ್ಥಾನವಾದರೆ ಈ ಭೂಮಿಯ ಮೇಲೆ ಎಲ್ಲರಿಗೂ ಸ್ಥಳವಿರುವುದೇ? ಇದ್ದರೂ ಅಂತಹ ಒಂದು ಜನಸಂಖ್ಯೆಯನ್ನು ಭೂಮಿಯು ತಡೆಯಬಲ್ಲದೇ ಎಂದು ಕೆಲವರು ಸಂದೇಹ ಪಡುವವರಾಗಿದ್ದಾರೆ ಮತ್ತೆ ಕೆಲವರು ಈ ಭೂಮಿಯು ಒಂದು ದೊಡ್ಡ ಸಮಾಧಿ ಎಲ್ಲರಿಗೂ ಪುನರುತ್ಥಾನವಾದರೆ ಸ್ಥಳಕ್ಕೋಸ್ಕರ ಒಬ್ಬರನ್ನೊಬ್ಬರು ತುಳಿದಾಡುವರು ಎಂದು ಹೇಳುವರು. ಇದೊಂದು ಪ್ರಾಮುಖ್ಯವಾದ ಸಂಗತಿಯಾಗಿದೆ. ಸತ್ಯವೇದವು ಎಲ್ಲರಿಗೂ ಪುನರುತ್ಥಾನವಾಗುತ್ತದೆ ಎಂದು ತಿಳಿಸುವಾಗ ಭೂಮಿಯನ್ನು ಅಳೆದರು ಪ್ರತಿಯೊಬ್ಬನಿಗೆ ಒಂದು ಅಡಿ ಜಾಗ ಕೂಡ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಇದೆಷ್ಟು ವಿಚಿತ್ರವಾಗಿದೆ. ಆದರೆ ಇದು ಭಯಪಡುವ ವಿಷಯವಲ್ಲ. ದೇವರು ತನ್ನ ಪ್ರವಾದಿಗಳ ಬಾಯಿಂದ ಹೇಳಿಸಿರುವಂತೆ ಸಮಸ್ತವನ್ನು ಸರಿಪಡಿಸುವ ಕಾಲದಲ್ಲಿ ಸರ್ವರಿಗೂ ಸಾಕಷ್ಟು ಸ್ಥಳವಿರುತ್ತದೆ.

ಮಾನವನನ್ನು ಸೃಷ್ಟಿಸಿ ಸುಮಾರು ಆರು ಸಾವಿರ ವರುಷಗಳು ಕಳೆದಿವೆ. ಇಂದು ಭೂಮಿಯ ಮೇಲೆ

ಸುಮಾರು 14000,000,000 ಜನರು ವಾಸಿಸುತ್ತಿರುವರು. ಮಾನವ ಜನಾಂಗವು ಒಂದು ಜೋಡಿಯಿಂದ ಪ್ರಾರಂಭವಾಯಿತು. ವಿಶಾಲ ಭಾವನೆಯಿಂದ ಲೆಕ್ಕ ಹಾಕಿ ಈಗಿರುವಷ್ಟೇ ಜನರು ಪ್ರಾರಂಭದಲ್ಲೂ ಇದ್ದರು ಎಂದು ತಿಳಿಯೋಣ, ಅದಕ್ಕಿಂತ ಕಡಿಮೆ ಎಂದೂ ಇರಲಿಲ್ಲ. ಆದರೆ ಜಲ ಪ್ರಳಯವು ಈ ಸಂಖ್ಯೆಯನ್ನು 8 ಕ್ಕೆ ಇಳಿಸಿತು. ಆದಿಕಾಂಡ 5ನೇ ಅಧ್ಯಾಯದಲ್ಲಿ ತಿಳಿಸಿರುವಂತೆ ಆದಾಮನಿಂದ ಪ್ರಳಯದವರೆಗೆ ಸುಮಾರು 11 ಸಂತತಿಗಳಿದ್ದವು. ಪ್ರತಿ ಸಂತತಿಗೂ 156 ವರ್ಷಗಳಂತೆ 1656 ವರ್ಷ ಗಳಾದವು. 6000 ವರ್ಷಗಳು ಅಂದರೆ 60 ಶತಮಾನಗಳು. ಪ್ರತಿ ಶತಮಾನಕ್ಕೆ ಮೂರು ಸಂತತಿಗಳಂತೆ ಲೆಕ್ಕ ಹಾಕಿದರೆ ಆದಾಮನಿಂದ 180 ಸತತಿಗಳು ಬರುತ್ತವೆ. ಒಂದು ಸಂತತಿಗೆ 14000,000,000 ಜನರಂತೆ ಲೆಕ್ಕ ಹಾಕಿದರೆ ಇಲ್ಲಿಯವರೆಗೆ 252 ಬಿಲಿಯನ್‌ಗಳಾಗುವುದು (250,000,000,000) ಈ ಸಂಖ್ಯೆಯು ಇರುವುದಕ್ಕಿಂತ ಎರಡರಷ್ಟಾಗುವುದು.

ಇಂತಹ ಮಹಾ ಸಮೂಹಕ್ಕೆ ಸ್ಥಳವನ್ನು ಎಲ್ಲಿಂದ ಒದಗಿಸುವುದು. ಭೂಮಿಯನ್ನು ಅಳತೆ ಮಾಡಿ ನೋಡೋಣ. ಅಮೆರಿಕಾ ಸಂಯುಕ್ತ ಸಂಸ್ಥಾನದ ಟೆಕ್ಸಾಸ್ 23,700 ಚದರ ಮೈಲಿಗಳಾಗುವುದು. ಒಂದು ಮೈಲಿಗೆ 27,8784000 ಚದರ ಅಡಿಗಳು. ಆದುದರಿಂದ ಟೆಕ್ಸಾಸ್‌ನಲ್ಲಿ 6,607,180,800,000 ಚದರ ಅಡಿಗಳಿವೆ. ಒಂದು ಸತ್ತ ದೇಹಕ್ಕೆ 10 ಚದರ ಅಡಿ ಎಂದು ಲೆಕ್ಕ ಹಾಕಿದರೆ ಟೆಕ್ಸಾಸ್‌ನಲ್ಲಿ ಮಾತ್ರ 6600,718,080,000 ಶರೀರಗಳನ್ನು ಸಮಾಧಿ ಮಾಡಬಹುದು. ಒಬ್ಬ ಮನುಷ್ಯನಿಗೆ ನಿಲ್ಲಲು ಬೇಕಾಗುವ ಸ್ಥಳ 1 $^{2}/_{3}$ ಚದರ ಅಡಿ ಅದರ ಪ್ರಕಾರ ಈಗಿನ ಜನಸಂಖ್ಯೆ 86 ಚದರ ಮೈಲಿಯೊಳಗೆ ನಿಲ್ಲಬಹುದು. ಇದು ಲಂಡನ್ ಅಥವಾ ಫಿಲಡೆಲ್ಫಿಯದ ವಿಸ್ತೀರ್ಣಕ್ಕೆ ಕಡಿಮೆಯಿರುವುದು. ಐರ್ಲೆಂಡ್ ದೇಶವೊಂದರಲ್ಲೇ ನಾವು ಲೆಕ್ಕ ಹಾಕಿರುವುದಕ್ಕಿಂತ ಎರಡರಷ್ಟು ಜನ ವಾಸಿಸಲು ಸ್ಥಳಾವಕಾಶ ವಿರುವುದು.ಆದುದರಿಂದ ಈ ಸಮಸ್ಯೆಯನ್ನು ಬಗೆಹರಿಸುವುದು ಅಷ್ಟೇನು ಕಷ್ಟದ ಕೆಲಸವಲ್ಲ. ಅರಣ್ಯವೂ ಮರುಭೂಮಿಯೂ ಆನಂದಿಸುವವು; ಒಣ ನೆಲವು ಹರ್ಷಿಸಿ ತಾವರೆಯಂತೆ ಕಳಕಳಿಸುವುದು. ಅದು ಸಮೃದ್ಧಿಯಾಗಿ ಹೂಬಿಟ್ಟು ಉತ್ಸಾಹ ಧ್ವನಿಮಾಡುವಷ್ಟು ಉಲ್ಲಾಸಿಸುವುದು. ಅರಣ್ಯದಲ್ಲಿ ಒರತೆಗಳು ಒಡೆಯುವವು. ಒಣ ನೆಲದಲ್ಲಿ ನದಿಗಳು ಹುಟ್ಟಿ ಹರಿಯುವವು ಹೀಗೆ ಯೊಹೋವನು ತನ್ನ ಯೋಜನೆಯನ್ನೆಲ್ಲಾ ಮುಂದಾಗಿ ತಿಳಿಸಿರುವನು. ಯೆಶಾಯ 35:1–6ರ ಪ್ರಕಾರ ಸ್ಥಳದ ಅಭಾವವೇ ಕಂಡುಬರುವುದಿಲ್ಲ.

## ಸಮಸ್ತವನ್ನು ಸರಿಪಡಿಸುವಿಕೆ ಮತ್ತು ವಿಕಾಸವಾದ

ಸತ್ಯವೇದದಲ್ಲಿ ತಿಳಿಸಿರುವ ಪುನರುತ್ಥಾನವು ತತ್ವಶಾಸ್ತ್ರ ಮತ್ತು ವಿಜ್ಞಾನದ ವಿಕಾಸವಾದ ಬೋಧನೆಗೂ ಹೊಂದಾಣಿಕೆಯಿಲ್ಲವೆಂದು ಕೆಲವರ ವಾದ. ಶಿಲಾಯುಗದ ಮಾನವರಿಗಿಂತ 20ನೇ ಶತಮಾನದ ಮಾನವರಿಗೆ ಜ್ಞಾನ ಹೆಚ್ಚಾಗಿದೆ. ಇದು ಬೆಳವಣಿಗೆಯ ಲಕ್ಷಣ ಎನ್ನುತ್ತಾರೆ. ಆದುದರಿಂದ ಮಾನವನು ತನ್ನ ಪೂರ್ವಸ್ಥಿತಿಗೆ ಹಿಂತಿರುಗಲು ಸ್ವಲ್ಪವೂ ಇಷ್ಟಪಡುವುದಿಲ್ಲ ಎಂಬುದು ಅವರ ವಾದ. ಇದು ದೇವರ ಆಶೀರ್ವಾದಕ್ಕೆ ತೀರ ವಿರುದ್ಧವಾಗಿದೆ. ಅನೇಕರು ಸತ್ಯವನ್ನು ಪರಿಶೀಲಿಸದೆ ಇದನ್ನು ನಂಬುವವರಾಗಿರುವರು. ಆದಾಮನ ಬೀಳುವಿಕೆ ಪ್ರಗತಿಯ ಏಳಿಗೆಗೆ ಮೂಲವಾಯಿತು. ಆದುದರಿಂದ ಅವನ ಮೂಲ ಸ್ವಭಾವದಿಂದ ಬಿದ್ದು ಹೋದಂತೆಲ್ಲಾ ನಮಗೆ ಉತ್ತಮ ಎಂದು ಬ್ರೂಕ್‌ಲಿನ್ ಬೋಧಕರು ತಿಳಿಸಿರುವರು. ಹೀಗೆ ಬೋಧಿಸಲ್ಪಟ್ಟ ತತ್ವಶಾಸ್ತ್ರವು ದೇವರ ವಾಕ್ಯದ ಮೇಲೆ ಯಾವ ಪರಿಣಾಮವನ್ನುಂಟು ಮಾಡಿಲ್ಲ. ಆದಾಮನ ಅವಿಧೇಯತ್ವದಿಂದಪಾಪ ಪ್ರಾರಂಭವಾಯಿತು. ಇದರಿಂದ ಬಿಡುಗಡೆ ಕ್ರಿಸ್ತನಿಂದಲೇ ಎಂದು ತಿಳಿಸಿರುವ ಅಪೋಸ್ತಲರು ಅವರಿಗೆ ಮೂರ್ಖರಾಗಿರುವರು. ರೋಮಾ 5:10,12,17–19,21;8:19–22 ಅ.ಕೃ. 3:19 21; ಪ್ರಕ 21:3–5 ಅಪೋಸ್ತಲರನ್ನು ಖಂಡಿಸುವ ಮೊದಲು ಈಗಿನ ಕಾಲದ ತತ್ವವನ್ನು ವಿಮರ್ಶಿಸೋಣ. ಯಾಕೆಂದರೆ ಅನೇಕರಿಗೆ ಇದರಲ್ಲಿ ನಂಬಿಕೆಯಿಲ್ಲ. ಮೊದಲು ಮಾನವನ ಸೃಷ್ಟಿಯಾದಾಗ ಅವನಲ್ಲಿ ಮೃಗದ ಸ್ವಭಾವವು ಕಂಡುಬರುತ್ತಿತ್ತು. ದೈಹಿಕ ಶಕ್ತಿಯು ಅಧಿಕಾವಾಗಿತ್ತು. ಕಾಲಕಳೆದಂತೆಲ್ಲಾ ಅವನ ಸ್ವಭಾದಲ್ಲಿ ಬದಲಾವಣೆಯಾಗಿ ಪ್ರಗತಿಹೊಂದಿ ಮಾನವನೆನ್ನಿಸಿಕೊಂಡಿರುವನು. ಈ ಸ್ವಭಾವದಲ್ಲಿ ಮೆದುಳು ಹೆಚ್ಚು ಕೆಲಸ ಮಾಡುತ್ತಿರುವುದರಿಂದ ಇದನ್ನು ಮೆದುಳಿನ ಯುಗ ಎಂದು ಕರೆಯಬಹುದು. ಮಾನವನು ತನ್ನ ಬುದ್ಧಿಶಕ್ತಿಯಿಂದ ಎಲ್ಲಾ ವಸ್ತುವನ್ನು ಪಡೆದಿರುವುದಲ್ಲದೆ ಪ್ರಕೃತಿಯನ್ನು ತನ್ನ ಅಧೀನ ಮಾಡಿಕೊಂಡಿರುವನು. ಕಡೆಗೆ ಎಲ್ಲಾ ಜೀವಿಗಳಿಗೆ ನಾನೇ ದೊಡ್ಡವನು ಎಂದು ಹೇಳಬಹುದು ಎಂಬುದಾಗಿ ತತ್ವಶಾಸ್ತ್ರದ ಪ್ರತಿನಿಧಿಯೊಬ್ಬನು ಬರೆದಿರುವನು. ಈ ತರ್ಕವು ನ್ಯಾಯ ಬದ್ಧವಾಗಿ ಕಂಡರೂ ಆತುರದಿಂದ ಅಂಗೀಕರಿಸದೆ ಸತ್ಯವೇದದೊಂದಿಗೆ ವಿಮರ್ಶಿಸುವುದನ್ನ ಕಲಿಯಬೇಕು. ಅನೇಕ ರೀತಿಯಲ್ಲಿ ಸತ್ಯವೇದದ ಸತ್ಯವು ಸಾಧಿಸಲ್ಪಟ್ಟಿದೆ. ಅದು ಅಮಾನುಷ ಜ್ಞಾನದಿಂದ ಬರೆಯಲ್ಪಟ್ಟಿರುವುದರಿಂದ ಅದರಲ್ಲಿ ಲೋಪವಿಲ್ಲ. ಪ್ರಕೃತಿಯ ವಿದ್ಯಾರ್ಥಿಯು ತನ್ನ ಪ್ರಯೋಗಗಳನ್ನು ಸತ್ಯವೇದದೊಂದಿಗೆ ಹೋಲಿಸಿದರೆ ತನ್ನ ತರ್ಕವು ತಪ್ಪಾದದ್ದೆಂದು ಕಂಡುಕೊಳ್ಳುವನು. ಯಾಕೆಂದರೆ ಅವರ ಸ್ವಭಾವವು ದೇವರ ಉಪದೇಶವನ್ನು ದೇವರ

ಬೋಧನೆಯನ್ನು ವಿಚಾರಿಸುವ ಎಂಬುದಾಗಿದೆ. ಯೆಶಾ 8:20 ಇಲ್ಲದಿದ್ದರೆ ಅವರಿಗೆ ಎಂದಿಗೂ ಬೆಳಗಾಗುವುದಿಲ್ಲ. ಎರಡರಲ್ಲೂ ಪರಿಪೂರ್ಣವನ್ನು ಹೊಂದಿ ವಿಮರ್ಶಿಸಿಸುವುದಾದರೆ ಒಂದಕ್ಕೊಂದು ಸರಿಹೊಂದುವದು. ದೈವಿಕ ಪ್ರಕಟನೆಯನ್ನು ಅರಿಯಲು ದೇವರ ಮಕ್ಕಳಿಗೆ ಮಾತ್ರ ಸಾಧ್ಯ.

ವಿಕಾಸವಾದದ ಸಿದ್ಧಾಂತವನ್ನು ಬಿಟ್ಟರೆ ಬೇರೆ ಯಾವುದಾದರೂ ಸಿದ್ಧಾಂತವು ದೊರಕುವುದೇ ಎಂದು ಪರಿಶಿಲಿಸೋಣ. ಈ ವಿಕಾಸವಾದವು ಮನುಷ್ಯನ ಜೀವಿತದಲ್ಲಾದ ಬದಲಾವಣೆಯನ್ನು ಎತ್ತಿ ಹಿಡಿಯುತ್ತದೆ. ಮನುಷ್ಯ ಕ್ರಮೇಣ ಬುದ್ಧಿವಂತನಾಗಿ ಇಂದಿನ ಮೆದುಳಿನ ಯುಗ ಮುಟ್ಟಿದ್ದಾನೆ ಎಂದು ಸಾಧಿಸುತ್ತದೆ. ಆದರೆ ಇದು ಎಷ್ಟರ ಮಟ್ಟಿಗೆ ಸತ್ಯ? ಯಾಕೆಂದರೆ ಮೆದುಳಿನ ಯುಗದಲ್ಲಿ ಜೀವಿಸುತ್ತಿರುವ ಜ್ಞಾನಿಗಳು ತಮ್ಮ ಮಾರ್ಗದರ್ಶನಕ್ಕಾಗಿ ಹಿಂದಿನ ಕಾಲದವರ ರೀತಿನೀತಿಗಳನ್ನು ಹುಡುಕುವರು. ಇಂದಿನ ತರ್ಕಶಾಸ್ತ್ರಜ್ಞರು ಹಿಂದಿನ ಕಾಲದ ಪ್ಲೇಟೋ ಅರಿಸ್ಟಾಟಲ್ ಡೆಮೋಸ್ತನೀಸರ ಪುಸ್ತಕಗಳನ್ನು ಬಯಸುತ್ತಾರೆ. ಇಂದಿನ ಸಾರ್ವಜನಿಕ ಭಾಷಣಕಾರರು ಡೆಮೋಸ್ತನೀಸ್‌ರ ಅಥವಾ ಅಪೋಲಸನ ಭಾಷಣಗಳಿಂದ ಸ್ಫೂರ್ತಿ ಪಡೆಯಲು ಬಯಸುತ್ತಾರೆ. ಅದಕ್ಕೂ ಮಿಗಿಲಾಗಿ ಅಪೋಸ್ತಲನಾದ ಪೌಲನ ತರ್ಕ ಜ್ಞಾನವನ್ನು ಬಯಸುತ್ತಾರೆ.

ಇನ್ನೂ ಹಿಂದಿನ ಕಾಲಕ್ಕೆ ಹೋದರೆ ಪ್ರವಾದಿಗಳ ಪ್ರವಾದನೆಯನ್ನು ನೋಡಬಹುದು. ಶ್ರೇಷ್ಠ ಕವಿತೆಗಳಿಂದ ತುಂಬಿರುವ ಕೀರ್ತನಾ ಗ್ರಂಥವಿದೆ ಯೋಬನ ಮತ್ತು ಅವ ಸ್ನೇಹಿತನ ನೀತಿ ವಾಕ್ಯಗಳು ಅಪೂರ್ವವಾಗಿವೆ. ಮೋಶೆಯನ್ನು ತೆಗೆದುಕೊಂಡರೆ ಐಗುಪ್ತದ ಎಲ್ಲಾ ಜ್ಞಾನಿಗಳಿಗಿಂತ ಅವನು ಶ್ರೇಷ್ಠನು. ಅವನ ನ್ಯಾಯವಿಧಿಗಳು ಎಲ್ಲಾ ನಾಗರಿಕರ ಜನಾಂಗದ ನ್ಯಾಯ ವಿಧಿಗಳಿಗೆ ಮೂಲವಾಗಿದೆ. ಭೂಗರ್ಭ ಶೋಧನೆಯಿಂದ ಪ್ರಕಟವಾಗಿರುವ ಕಲೆ ಮತ್ತು ವಿಜ್ಞಾನವು ಇಂದಿನ ಬುದ್ಧಿ ಜೀವಿಗಳನ್ನು ಚಕಿತಗೊಳಿಸಿವೆ. ಶವಗಳನ್ನು ಕೆಡದಂತೆ ಕಾಪಾಡುವ ಕ್ರಮ, ತಾಮ್ರವನ್ನು ಹದಮಾಡುವುದು, ಗಾಜಿನ ಉಪಯೋಗ ಮುಂತಾದ ಹಿಂದಿನ ಕಾಲದ ಕೆಲಸಗಳನ್ನೇ ಇಂದಿನವರು ಅನುಸರಿಸಲು ಪ್ರಯತ್ನಿಸುತ್ತಿರುವರು.

ನಾಲ್ಕು ಸಾವಿರ ವರುಷಗಳ ಹಿಂದೆ ಅಬ್ರಹಾಮನ ಕಾಲದಲ್ಲಿ ಕಟ್ಟಿದ ಪಿರಮಿಡ್‌ಗಳು (ನೆಲ ಗೋಪುರಗಳು) ಇಂದಿನ ವಿಜ್ಞಾನಿಗಳಿಗೆ ಕೌತುಕವನ್ನುಂಟುಮಾಡಿದೆ. ಇಂದಿನ ಖಗೋಳ ಮತ್ತು ಗಣಿತಶಾಸ್ತ್ರದ ಕ್ರಮದಲ್ಲೇ ಅದು ಕಟ್ಟಲ್ಪಟ್ಟಿದೆ. ಅದರಲ್ಲಿರುವ ಸತ್ಯವನ್ನು ಈ ಕಾಲದ ಉಪಕರಣಗಳಿಂದ ತಿಳಿಯಬಹುದು. ಅದು ಕಟ್ಟಲ್ಪಟ್ಟಿರುವ ರೀತಿಯನ್ನು ನೋಡಿ ಅದು ದೈವಪ್ರೇರಣೆಯ ಕೆಲಸವೇ ಎಂದು ಅನೇಕರು ಹೇಳಿರುವರು. ದೈವ ಪ್ರೇರಣೆಯಾದರು ಮಾನವ ನಿರ್ಮಿತ ಕಟ್ಟಡ ಎಂದು ಯಾರಾದರೂ ಸರಿಯೇ ಒಪ್ಪಿಕೊಳ್ಳಲೇಬೇಕು. ಬುದ್ಧಿ ಬೆಳವಣಿಗೆಯಿಲ್ಲದ ಮನುಷ್ಯರು ಕಟ್ಟಿದ ಒಂದು ಮಾದರಿಯನ್ನಿಟ್ಟುಕೊಂಡು ಎಲ್ಲಾ ರೀತಿಯ ಆಧುನಿಕ ಉಪಕರಣಗಳನ್ನು ಬಳಸಿ ಮೆದುಳಿನ ಯುಗದಲ್ಲಿ ಜೀವಿಸುವ ಜ್ಞಾನಿಗೂ ಅಂತಹ ಅದ್ಭುತ ಕಟ್ಟಡವನ್ನು ಕಟ್ಟಲು ಕಷ್ಟವಾಗಬಹುದು.

ಈಗಿನ ಕಾಲದ ಮಾನಸಿಕ ಶಕ್ತಿಯು ಹಿಂದಿನವರಿಗಿಂತಹೆಚ್ಚೇನು ಇಲ್ಲ ಬಹಳ ಕಡಿಮೆಯೇ ಇರಬಹುದು ಎಂದು ತಿಳಿದರೆ ಈಗ ಜ್ಞಾನ ಹೆಚ್ಚಾಗಿದೆ ಎಂದು ಹೇಗೆ ತಿಳಿಯುವುದು? 100 ವರ್ಷಗಳ ಹಿಂದೆಯೇ ಆವಿಯಂತ್ರ, ವಿದ್ಯುಚ್ಛಕ್ತಿ ಮುಂತಾದವು ಕಂಡುಹಿಡಿಯಲ್ಪಟ್ಟವು. ರೈಲು ಮತ್ತು ಹಡಗು ಸಂಚಾರ ಆಗಲೇ ಪ್ರಾರಂಭವಾಯಿತು. ಇವೆಲ್ಲಾ ಮೆದುಳಿನ ಯುಗದ ಪ್ರಾರಂಭದಲ್ಲಿ ಕಂಡುಬಂದದ್ದು. ಹೀಗೆ ಮುಂದುವರೆದರೆ ದಿನಕ್ಕೊಂದು ಸೂಚಕ ಕಾರ್ಯಗಳನ್ನು ನೋಡಬಹುದು ಎಂದು ತರ್ಕಿಸಿದ್ದಾರೆ.

ಆದರೆ ಎಲ್ಲರಿಗೂ ಸಂಶೋಧನಾ ಶಕ್ತಿಯಿದೆ ಎಂದು ಹೇಳಲು ಸಾಧ್ಯವಿಲ್ಲ. ಕೆಲವಂತೂ ಆಕಸ್ಮಿಕವಾಗಿ ಕಂಡುಹಿಡಿಯಲ್ಪಟ್ಟವು. ಮನುಷ್ಯನ ನೆಲೆಯಿಂದ ಈಗಿನ ಕಾಲದ ಸಂಶೋಧನೆಗಳನ್ನು ಪರಿಗಣಿಸಿದರೆ ಕ್ರಿ.ಶ. 1440 ರಲ್ಲಿ ಕಂಡುಹಿಡಿಯಲ್ಪಟ್ಟ ಮುದ್ರಣಯಂತ್ರವೇ ಮೂಲವಾಗಿದೆ. ಜ್ಞಾನಿಗಳ ಜ್ಞಾನವೆಲ್ಲವೂ ಪುಸ್ತಕದಲ್ಲಿ ಮುದ್ರಿತವಾಗಿ ರುವುದರಿಂದಲೇ ಹೊಸ ಸಂಶೋಧನೆಗೆ ಕಾರಣವಾಗಿರುವುದು ಪುಸ್ತಕಗಳಿಂದ ವಿದ್ಯಾಪ್ರಸಾರಣೆಯು ಪ್ರಾರಂಭವಾಯಿತು. ಶಾಲಾ ಕಾಲೇಜುಗಳು ಮಾನವನ ಮಾನಸಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಸಹಾಯಕವಾಗಿದೆ. ಅನುಭವ ಪಡೆಯಲು ಅನುಕೂಲವಾಗಿದೆ. ವಿದ್ಯೆಯನ್ನು ಕಲಿತು ವಿದ್ಯಾವಂತನಾಗಬೇಕೆಂಬುದು ಮಾನವನ ಹೆಬ್ಬಯಕೆಯಾಗಿದೆ. ಇದಕ್ಕಾಗಿ ಜನರು ಪರಿಶ್ರಮಿಸುತ್ತಲೇ ಇರುವರು. ಇದಲ್ಲದೆ ದಿನ ಪತ್ರಿಕೆಗಳಲ್ಲಿ ಪ್ರಕಟವಾಗುವ ಹೊಸ ಸಂಶೋಧನೆಗಳ ರಚನೆಯ ವಿಚಾರಗಳನ್ನು ತಿಳಿದು ತಮ್ಮ ಬುದ್ಧಿಶಕ್ತಿಯಿಂದ ಸಮಾಜಕ್ಕೆ ಹಿತ ತೋರುವ ವಸ್ತುಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿರುವರು. ಆದುದರಿಂದ ಇವುಗಳನ್ನೆಲ್ಲಾ ಪರಿಶೀಲಿಸಿದರೆ ಮಾನವನ ಬುದ್ಧಿಶಕ್ತಿ ಹೆಚ್ಚುತ್ತಿರುವುದು ಕಂಡುಬರುವುದಿಲ್ಲ. ಸ್ವಾಭಾವಿಕವಾಗಿ ಸೂಕ್ಷ್ಮವಾಗುತ್ತಿರುವುದು ಕಂಡುಬರುತ್ತದೆ.

ಈ ವಿಷಯವನ್ನು ಕುರಿತು ಸತ್ಯವೇದವು ಏನು ತಿಳಿಸುತ್ತದೆ ಎಂದು ಪರಿಶಿಲೀಸೋಣ. ಈ ಸಂಶೋಧನೆಗಳು, ಅತಿಯಾದ ಜ್ಞಾನ ಎಲ್ಲವೂ ಸ್ವಾಭಾವಿಕವಾದುದ್ದೆ ಇವೆಲ್ಲವು ತಕ್ಕ ಕಾಲದಲ್ಲಿ ನೆರವೇರಲೇಬೇಕು ಎಂದು ಬಹಳ ಹಿಂದಿನ ಕಾಲದಲ್ಲೇ ಯೆಹೋವ ದೇವರು ಗೊತ್ತುಪಡಿಸಿರುವನು. ಆ ಕಾಲದಲ್ಲಿ

ಕ್ರಿಸ್ತನಲ್ಲಿ ಸಮಸ್ತವನ್ನು ಒಂದಾಗಿ ಕೂಡಿಸಬೇಕೆಂಬುದೇ ಎಫೆಸ 1:11 ಆತನ ವಾಕ್ಯದಲ್ಲಿ ತಿಳಿಸಿರುವ ಆತನ ಯೋಜನೆಯ ಪ್ರಕಾರ ಸುಮಾರು 6 ಸಾವಿರ ವರ್ಷಗಳವರೆಗೆ ಪಾಪವು ಪ್ರಪಂಚದಲ್ಲಿರುವುದು; ಅನಂತರ ಏಳನೆಯ ಸಾವಿರ ವರ್ಷದಲ್ಲಿ ಅಂದರೆ ಸಮಸ್ತವನ್ನು ಸರಿಪಡಿಸುವ ಕ್ರಿಸ್ತನ ರಾಜ್ಯದಲ್ಲಿ ಪಾಪವನ್ನು ನಿರ್ಮೂಲಮಾಡಿ ಮಾನವರನ್ನು ಹಿಂದಣ ಸ್ಥಿತಿಗೆ ತರುವುದೇ ಆತನ ಯೋಜನೆಯಾಗಿದೆ. ಇದಕ್ಕೋಸ್ಕರವಾಗಿಯೇ ಕ್ರಿಸ್ತನು ನೇಮಿಸಲ್ಪಟ್ಟನು. ಆದುದರಿಂದ 6 ಸಾವಿರ ವರ್ಷದ ಪಾಪದ ಯುಗ ಮುಕ್ತಾಯವು ಸಮೀಪವಾಗುತ್ತಿರುವುದರಿಂದ ದೇವರು ತನ್ನ ಗ್ರಂಥದಿಂದಲೂ ಮತ್ತು ಪ್ರಕೃತಿಯಿಂದಲೂ ಅನೇಕ ಸಂಶೋಧನೆಗಳನ್ನು ನಡೆಸಲು ಅವಕಾಶಕೊಟ್ಟಿರುವನು. ಇವು ಮುಂದೆ ಮಾನವನು ಆಶೀರ್ವಾದ ಪಡೆಯಲಿಕ್ಕೆ ಎತ್ತಲ್ಪಡುವಾಗ ಇವುಗಳು ಪ್ರಯೋಜನವಾಗುವುವು. ಪ್ರವಾದಿಯಾದ ದಾನಿಯೇಲನ ಹೇಳಿಕೆಯಲ್ಲಿ ದೇವರ ಯೋಜನೆಯು ಸ್ಪಷ್ಟವಾಗಿ ತಿಳಿದುಬರುವುದು. "ದಾನಿಯೇಲನೇ ನೀನು ಈ ಮಾತುಗಳನ್ನು ಮುಚ್ಚಿಡು ಅವುಗಳನ್ನು ಬರೆಯುವ ಗ್ರಂಥಕ್ಕೆ ಮುದ್ರೆಹಾಕು, ಅಂತ್ಯಕಾಲದವರೆಗೆ ಮರೆಯಾಗಿರಲಿ, ಬಹುಜನರು ಅತ್ತಿತ್ತತಿರುಗುವರು, ತಿಳುವಳಿಕೆಯು ಹೆಚ್ಚುವುದು. ದುಷ್ಟರು ದುಷ್ಟರಾಗಿಯೇ ನಡೆಯುವರು; ಅವರಲ್ಲಿ ಯಾರಿಗೂ ವಿವೇಕವಿರದು; ಜ್ಞಾನಿಗಳಿಗೆ ವಿವೇಕವಿರುವುದು" ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವುದು. ದಾನಿ 12:1,4,10.

ಈ ನೂತನ ಸಂಶೋಧನೆಗಳು ದೇವರ ಶಾಪವನ್ನು ಹಗುರ ಮಾಡಲಿಕ್ಕಿವೆ ಎಂದು ತಿಳಿಯಲು ದೇವರು ಯಾಕೆ ಗೊತ್ತು ಮಾಡಲಿಲ್ಲ ಎಂದು ಕೆಲವರಿಗೆ ಆಶ್ಚರ್ಯವಾಗಬಹುದು. ಆದರೆ ಮಾನವನು ಪಾಪದಿಂದ ಯಾವ ಲಾಭ‌ವಿಲ್ಲ ಎಂದು ಅರ್ಥಮಾಡಿಕೊಳ್ಳುವುದಕ್ಕಾಗಿಯೇ ತನ್ನ ಯೋಜನೆಯನ್ನು ಗೂಢಾರ್ಥವಾಗಿ ಇಟ್ಟಿರುವನು. ಒಂದು ವೇಳೆ ಮುಂದೆ ದೊರೆಯುವ ಆಶೀರ್ವಾದವನ್ನು ಮಾನವನಿಗೆ ಪ್ರಕಟಿಸಿದ್ದರೆ ಇನ್ನೂ ಹೆಚ್ಚಿನ ದುಷ್ಟತನಕ್ಕೆ ಕಾರಣವಾಗಬಹುದು ಎಂದು ದೇವರು ತಿಳಿದಿದ್ದನು. ದೇವರು ಮಾನವನನ್ನು ಆಶೀರ್ವದಿಸಿ ಅವನ ಜ್ಞಾನವನ್ನು ಹೆಚ್ಚಿಸಿರುವುದು ಒಂದು ಉದಾಹರಣೆಯಾಗಿದೆ. ಇದು ದೇವದೂತರಿಗೂ ರಕ್ಷಿಸಲ್ಪಟ್ಟ ಮಾನವರಿಗೂ ಪಾಠಕಲಿಸುವುದಕ್ಕಾಗಿಯೇ ಇದೆ. ಮೊದಲನೆಯದಾಗಿ ಮಾನವರು ಕೆಟ್ಟುಹೋದ ಸ್ಥಿತಿಯಲ್ಲಿರುವುದರಿಂದ ಸರಿಯಾದ ನ್ಯಾಯವಾಗಲಿ, ಉತ್ತಮ ರಾಜ್ಯಾಡಳಿತವಾಗಲಿ ಇಲ್ಲದಿರುವುದರಿಂದ ಎಲ್ಲರಲ್ಲಿ ಸ್ವಾರ್ಥತೆಯು ತುಂಬಿದೆ. ಒಬ್ಬೊಬ್ಬರಲ್ಲಿ ಒಂದೊಂದು ವಿಧವಾದ ಬುದ್ಧಿಯಿರುವುದರಿಂದ ಯಂತ್ರಗಳ ನಿರ್ಮಾಣದಿಂದ ದಿನೇ ದಿನೇ ಐಶ್ವರ್ಯವಂತನಾಗುತ್ತಿರುವನು. ಇದರಿಂದ ಸಮಾಜದಲ್ಲಿ ತಾರತಮ್ಯ ಹೆಚ್ಚಿ ಬಡವರು ಬಡವರಾಗಿಯೇ ಇರುವರು. ಹೀಗೆ ಧನಿಕರ ಪ್ರಭಾವವು ಹೆಚ್ಚಾಗಿ ಎಲ್ಲವನ್ನು ಆಕ್ರಮಿಸಿ ತಾವೇ ಆಡಳಿತಾಧಿಕಾರಿಗಳಾಗುವರು.

ಎರಡನೆಯದಾಗಿ ಐಶ್ವರ್ಯವು ಮಾನವರಲ್ಲಿ ಸಮವಾಗಿ ಹಂಚಿಕೆಯಾಗಬೇಕು ಎಂಬಕಾನೂನು ಜಾರಿಗೆ ಬಂದರೆ ಪರಿಸ್ಥಿತಿಯು ಅಷ್ಟೇನೂ ಉತ್ತಮವಾಗಿರುವುದಿಲ್ಲ. ಆದಾಯವು ಸಮವಾಗಿ ಹಂಚಿಕೆಯಾದರೆ (ಕೂಲಿಯ ಕಾಲ) ದುಡಿಮೆಯ ಕಾಲ ಕಡಿಮೆಯಾಗಿ ವಿರಾಮವು ಹೆಚ್ಚುತ್ತದೆ. ಇದರಿಂದ ಸೋಮಾರಿತನವು ಹೆಚ್ಚಾಗಿದುಷ್ಟತನವು ಅಧಿಕವಾಗುತ್ತದೆ. ಮಾನವನು ದೈಹಿಕವಾಗಿ ಮಾನಸಿಕವಾಗಿ ಕೆಡಲು ಸೋಮಾರಿತನವೇ ಮೂಲ. ಆದುದರಿಂದ ಮುಂದೆ ಬರುವ ಆಶೀರ್ವಾದಕ್ಕೆ ಇದೊಂದು ಸಿದ್ಧತೆಯ ಕಾಲವಾಗಿದೆ. ಆ ಕಾಲದಲ್ಲಿ ಆಶೀರ್ವಾದವು ಸಮವಾಗಿ ಹಂಚಲ್ಪಡುವುದಲ್ಲದೆ ವಿಧಾನವು ಒಂದೇ ತೆರನಾಗಿರುವುದು. ಇದರಿಂದ ಮಾನವನ ಸದ್ಗುಣಗಳು ದೈಹಿಕ ಮತ್ತು ಮಾನಸಿಕವಾಗಿ ಹೆಚ್ಚುತ್ತದೆ. ಈಗ ಮಾನವರಲ್ಲಿ ತಿಳಿವಳಿಕೆ ಹೆಚ್ಚುತ್ತಿದೆ ಜ್ಞಾನವು ಹೆಚ್ಚಿದಂತೆಲ್ಲಾ ಸಂಕಟವು ಹೆಚ್ಚುವುದು ಎಂದು ದಾನಿಯೇಲನು ತಿಳಿಸಿರುವನು. ಜ್ಞಾನವು ಸಂಕಟವನ್ನು ಹೆಚ್ಚಿಸುವುದು ಯಂತ್ರಗಳ ಸೌಲಭ್ಯ ಹೆಚ್ಚಿಸಿ ಕೂಲಿ ಉಳಿತಾಯವಾಗುತ್ತಿದೆ ವೈದ್ಯಕೀಯ ಸೌಲಭ್ಯಗಳಿಂದ ಮಾನವನ ಆಯುಸ್ಸು ಹೆಚ್ಚುತ್ತಿದೆ ಮಾನವರಲ್ಲಿನ ಹೊಡೆದಾಟ ಕಡಿಮೆಯಾಗುತ್ತಿದೆ ಇದರಿಂದಾಗಿ ಜನಸಂಖ್ಯೆಯು ಮಿತಿಮೀರಿ ಬೆಳೆಯುತ್ತಿದೆ. ಇಂದಿನ ತತ್ವಶಾಸ್ತ್ರಜ್ಞರಿಗೆ ಇದೊಂದು ಬಗೆಹರಿಯದ ಸಮಸ್ಯೆಯಾಗಿದೆ. ದಿನೇದಿನೇ ನಿರುದ್ಯೋಗಸಮಸ್ಯೆಯು ಅಧಿಕವಾಗುತ್ತಿದೆ. ಇವು ಮಾನವನ ಜ್ಞಾನಕ್ಕೆ ಮೀರಿದ ಸಮಸ್ಯೆಯಾಗಿ ಪರಿಹಾರ ಕಂಡು ಹಿಡಿಯಲಾರದೆ ದಿಗ್ಭ್ರಮೆಗೊಂಡಿರುವರು.

ಐಶ್ವರ್ಯವಂತರಲ್ಲಿ ಸ್ವಾರ್ಥತೆಯು ಹೆಚ್ಚುತ್ತಿರುವುದು. ನ್ಯಾಯವನ್ನು ಕುರುಡು ಮಾಡಿ ಸ್ವಪ್ರಯೋಜನ ಹೊಂದುತ್ತಿರುವರು. ಇದೇ ಕಾಲಕ್ಕೆ ಬಡವರಲ್ಲಿಯೂ ತಾವು ಜೀವಿಸಬೇಕು ಎಂಬ ವಿಚಾರವು ಹೆಚ್ಚಿ ಸಂಕಟವು ಅತಿಯಾಗುವುದು. ದೇವರ ವರವನ್ನು ಸರಿಯಾಗಿ ಉಪಯೋಗಿಸದಿರುವುದೇ ಈ ಸಂಕಟಕ್ಕೆ ಕಾರಣವಾಗಿರುವುದು.

ಈ ಸಂಕಟ ಸಮಯವು ಮುಕ್ತಾಯವಾಗುವುದು. ಯೇಸುಗಲಿಲಾಯ ಸಮುದ್ರವನ್ನು ಶಾಂತಿಗೊಳಿಸಿದಂತೆ ಸಮಾಧಾನದ ಪ್ರಭುವು ಬರುವಾಗ ಸಮಾಧಾನವು ನೆಲೆಯಾಗುವುದು. ಆಗ ಮಾನವರು ಕ್ರಿಸ್ತನನ್ನು ಗುರುತಿಸಿ ಯೆಹೋವನ ಮಹಿಮೆಯನ್ನು ಕೊಂಡಾಡುವರು. ಹೀಗೆ ಕ್ರಿಸ್ತನ ಮೂಲಕ ಸಮಸ್ತವು ಒಂದಾಗಿ ಜನಾಂಗವು

ಆಶೀರ್ವಾದವನ್ನು ಪಡೆಯುವುದು. ಆಗ ಲೋಕದ ಈ ಬುದ್ಧಿಯುಗವು ಮುಂದಿನ ಕಾರ್ಯಕ್ಕೆ ತಳಹದಿ ಎಂದು ತಿಳಿದುಕೊಳ್ಳುವರು. ಆದರೆ ಇವೆಲ್ಲವೂ ದೇವಜನರಿಗೆ ಮತ್ತು ಸದ್ಭಕ್ತರಿಗೆ ತಿಳಿದಿರುವುದು. ಯಾಕೆಂದರೆ ಯೆಹೋವನು ತನ್ನ ಸದ್ಭಕ್ತರಿಗೆ ಆಪ್ತ ಮಿತ್ರನಂತಿರುವನು. ಅವರಿಗೆ ತನ್ನ ಒಡಂಬಡಿಕೆಯ ಅನುಭವವನ್ನು ದಯಪಾಲಿಸುವನು ಕೀರ್ತ 25:14. ದೇವರಿಗೆ ಸ್ತೋತ್ರ ತನ್ನ ವಾಕ್ಯದಿಂದ ತಿಳಿಯಲು ತಿಳುವಳಿಕೆಯನ್ನು ಹೆಚ್ಚಿಸುತ್ತಿರುವನು.

ಮನುಷ್ಯನ ಸೃಷ್ಟಿಯನ್ನು ಕುರಿತು ಸತ್ಯವೇದವು ದೇವರು ತನ್ನ ಸ್ವರೂಪದಲ್ಲಿ ಮನುಷ್ಯರನ್ನು ಸತ್ಯವಂತರನ್ನಾಗಿ ಸೃಷ್ಟಿಸಿದನು. ಅವರಾದರೋ ಬಹು ಕುಯುಕ್ತಿಗಳನ್ನು ಕಲ್ಪಿಸಿಕೊಂಡು ತಮ್ಮನ್ನು ಕೆಡಿಸಿಕೊಂಡಿರುವರು ಆದಿ 1:27, ರೋಮಾ 5:12, ಪ್ರಸಂಗಿ 7:29 ಎಲ್ಲರೂ ಪಾಪಿಗಳಾಗಿರುವುದರಿಂದ ಯಾವನು ತನ್ನ ಸಹೋದರನಿಗೆ ಈಡನ್ನು ಕೊಟ್ಟು ಅವನ ಪ್ರಾಣವನ್ನು ಬಿಡಿಸಲಾರನು ಕೀರ್ತ 49:7,15, ಆದರೆ ದೇವರು ಪ್ರೀತಿಯಿಂದ ಇದಕ್ಕೊಂದು ಪರಿಹಾರವನ್ನು ಸೂಚಿಸಿ ತನ್ನ ಮಗನನ್ನೇ ಮಾನವರ ವಿಮೋಚನಾರ್ಥವಾಗಿ ಮಾನವ ಸ್ವರೂಪದಲ್ಲಿ ಈ ಲೋಕಕ್ಕೆ ಕಳುಹಿಸಿಕೊಟ್ಟನು. ಕ್ರಿಸ್ತನು ಅದಕ್ಕಾಗಿ ತನ್ನನ್ನೂ ಅಭಿಷೇಕಿಸಿಕೊಂಡು ದೈವಿಕ ಸ್ವಭಾವಕ್ಕೆ ಏರಿ ಕಾಲವು ಪರಿಪೂರ್ಣವಾದಾಗ ಸಮಸ್ತವನ್ನು ಸರಿಪಡಿಸುವ ಕಾಲದಲ್ಲಿ ಮಾನವರನ್ನು ಪೂರ್ವಸ್ಥಿತಿಗೆ ತಂದು ಆಶೀರ್ವದಿಸುವನು. ಈ ಸತ್ಯವನ್ನೇ ದೇವರ ವಾಕ್ಯವಾದ ಸತ್ಯವೇದವು ಮೊದಲಿನಿಂದಕಡೆಯವರೆಗೆ ಬೋಧಿಸುತ್ತಿರುವುದು. ಇದು ವಿಕಾಸವಾದ ತತ್ವಕ್ಕೆ ಸಂಪೂರ್ಣವಾಗಿ ವಿರೋಧವಾಗಿರುವುದು. ವಿಜ್ಞಾನದ ಸುಳ್ಳಿನ ಮಾತುಗಳು ದೇವರ ವಾಕ್ಯದೊಂದಿಗೆ ಸತತ ಹೋರಾಟ ನಡೆಸುತ್ತಿದೆ. ಆದರೆ ಕಡೆಯಲ್ಲಿ ಜಯ ದೇವರ ವಾಕ್ಯಕ್ಕೆ ಎಂಬುದನ್ನು ದೇವರ ಮಕ್ಕಳು ಮಾತ್ರ ಅರಿತಿರುವರು.

"Still o'er earth's sky the clouds of anger roll,
And God's revenge hangs heavy on her soul;
Yet shall she rise—though first by God chastised—
In glory and in beauty then baptized.

"Yes, Earth, thou shalt arise; thy Father's aid
Shall heal the wound his chastening hand hath made;
Shall judge the proud oppressor's ruthless sway,
And burst his bonds, and cast his cords away.

"Then on your soil shall deathless verdure spring;
Break forth, ye mountains, and ye valleys, sing!
No more your thirsty rocks shall frown forlorn,
The unbeliever's jest, the heathen's scorn.

"The sultry sands shall tenfold harvests yield,
And a new Eden deck the thorny field.
E'en now we see, wide-waving o'er the land,
The mighty angel lifts his golden wand,

"Courts the bright vision of descending power,
Tells every gate and measures every tower;
And chides the tardy seals that yet detain
Thy Lion, Judah, from his destined reign."

—*Heber*

# ಅಧ್ಯಾಯ-10

## ಆತ್ಮಿಕವಾದ ಮತ್ತು ಮಾಂಸಿಕವಾದ ಸ್ವಭಾವಗಳು ಭಿನ್ನವಾಗಿದೆ ಮತ್ತು ಪ್ರತ್ಯೇಕವಾಗಿದೆ.

**ಸಾಮಾನ್ಯವಾದ ತಪ್ಪು ತಿಳುವಳಿಕೆಗಳು-ಲೌಕಿಕ ಅಥವ ಮಾಂಸಿಕ ಮತ್ತು ಪರಲೋಕ ಅಥವ ಆತ್ಮೀಕ ಸ್ವಭಾವಗಳು-ಲೌಕಿಕ ಮಹಿಮೆ ಮತ್ತು ಪರಲೋಕ ಮಹಿಮೆ-ಆತ್ಮೀಕ ಜೀವಗಳ ವಿಷಯವಾಗಿ ಸತ್ಯವೇದದ ಸಾಕ್ಷಿ-ಮರ್ತ್ಯತೆ ಮತ್ತು ಅಮರತ್ವ-ಮರ್ತ್ಯ ಜೀವಗಳು ನಿತ್ಯಜೀವ ಹೊಂದಬಹುದೇ? ಅನುಗ್ರಹಗಳನ್ನು ನೀಡುವಾಗ ನ್ಯಾಯಕ್ರಮ ಒಂದು ಊಹಿಸಲ್ಪಟ್ಟ ತತ್ವವನ್ನು ಪರೀಕ್ಷಿಸಲಾಗಿದೆ-ಪರಿಪೂರ್ಣತೆಯಲ್ಲಿ ವೈವಿಧ್ಯತೆ-ದೇವರ ಪರಮ ಹಕ್ಕುಗಳು-ಮನುಷ್ಯರಿಗೆ ದೇವರು ಒದಗಿಸುವಿಕೆಗಳು ಒಂದು ತೃಪ್ತಿಕರವಾದ ಭಾಗ-ಕ್ರಿಸ್ತನ ದೇಹದ ಆರಿಸುವಿಕೆ-ಹೇಗೆ ಅವರ ಸ್ವಭಾವದ ಬದಲಾವಣೆಗಳು ಪರಿಣಮಿಸುತ್ತದೆ/ಉಂಟಾಗುತ್ತದೆ.**

ಮಾನವನು ಏದೇನ್‌ನಲ್ಲಿ ಕಳೆದುಕೊಂಡ ಪರಿಪೂರ್ಣತೆಯನ್ನು ಅವನಿಗೆಪುನಃ ದಯಪಾಲಿಸುವುದೇ ದೇವರ ಯೋಜನೆ. ಆದರೆ ದೇವರ ಈ ಯೋಜನೆಯ ಅರಿವಿಲ್ಲದೆ ಯಾರು ಪರಿಪೂರ್ಣರಾಗಿ ಆತ್ಮೀಕ ಸ್ವಭಾವಕ್ಕೆ ಅರ್ಹರೋ ಅಂಥವರು ಮಾತ್ರ ರಕ್ಷಣೆಗೆ ಬಾಧ್ಯರು ಎಂದು ಕೆಲವರು ಅಭಿಪ್ರಾಯವಾಗಿದೆ. ಆದರೆ ಸತ್ಯವೇದದ ಪ್ರಕಾರ ದೇವರ ವಾಗ್ದಾನದಂತೆ ಲೋಕದ ಸರ್ವಜನಾಂಗಗಳಿಗೆ ನಿತ್ಯ ಜೀವ ಮತ್ತು ಆಶೀರ್ವಾದ ದೊರೆಯುವುದು, ಸಭೆಯು ಮಾತ್ರ ಸುವಾರ್ತಾಯುಗದಲ್ಲಿ ಆತ್ಮೀಕ ರೀತಿಯಲ್ಲಿ ಮೇಲಕ್ಕೆತ್ತಲ್ಪಡುವುದು ಎಂದು ತಿಳಿಸುತ್ತದೆ. ಆದಾಮನ ಅವನತಿಯಿಂದ ಮನೋವೋತ್ತಮತೆಯನ್ನು ಪಡೆದಾಗ ಎಲ್ಲರನ್ನು ರಕ್ಷಿಸಿದಂತಾಗುವುದು ಮತ್ತು ಈ ಸುವಾರ್ತಾ ಯುಗದಲ್ಲಿ ಪರಲೋಕದ ಕರೆಗೆ ಓಗೊಡುವವರು ದೈವಿಕ ಸ್ವಭಾವದಲ್ಲಿ ಪಾಲುಗಾರರಾಗುವರು. ಆದರೆ ಕೆಲವರು ಲಯ ನಿರ್ಲಯುತ್ವದ ಅರ್ಥವನ್ನು ಗ್ರಹಿಸದೆ ಗೊಂದಲಕ್ಕೀಡಾಗಿರುವರು.

ಸತ್ಯವೇದದ ಪ್ರಕಾರ ಜಗತ್ತಿನಲ್ಲಿ ಪರಿಪೂರ್ಣ ಮಾನವೋತ್ತಮರು ಇಬ್ಬರೇ ಆದಮನು ಮತ್ತು ಯೇಸುಕ್ರಿಸ್ತನು. ಆದಾಮನು ದೇವರ ಪ್ರತಿರೂಪವಾಗಿ ಸೃಷ್ಟಿಸಲ್ಪಟ್ಟನು. ಮಾನವನಲ್ಲಿರಬೇಕಾದ ಎಲ್ಲಾ ಗುಣಗಳನ್ನು ಹೊಂದಿದ್ದನು. ಕೆಲವು ಸಂದರ್ಭದಲ್ಲಿ ದೇವರು ಕೆಟ್ಟು ಹೋಗಿರುವ ಮಾನವರನ್ನೇ ಬನ್ನಿರಿ ವಾದಿಸುವ ಎಂದು ಹೇಳಿರುವನು. ಆದಾಮನು ಭೂಲೋಕದವನಾಗಿದ್ದರೂ ಕೆಲವು ಆತ್ಮೀಯ ಗುಣಗಳನ್ನು ಪಡೆದಿದ್ದನು.

ಯೆಹೋವನು ಹೇಗೆ ಸಮಸ್ತಕ್ಕೂ ಒಡೆಯನೋ ಹಾಗೆಯೇ ಆದಾಮನು ಇಡಿ ಭೂಲೋಕಕ್ಕೆ ಒಡೆಯನಾಗಿದ್ದನು. "ಸಮುದ್ರದಲ್ಲಿರುವ ಮೀನುಗಳ ಮೇಲೆ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆ... ಭೂಮಿಯ ಮೇಲೆ ದೊರೆತನ ಮಾಡುವುದಕ್ಕೆ ಅಧಿಕಾರಕೊಟ್ಟನು. ಆದಿ 1:26 ದೇವರು ತಾನು ಉಂಟುಮಾಡಿದ ಮನುಷ್ಯನನ್ನು ಬಹು ಒಳ್ಳೆಯದೆಂದು ಕಂಡನು ಎಂದು ಮೋಶೆ ತಿಳಿಸಿರುವನು ಆದಿ 1:31 ಮಾನವನ ಪರಿಪೂರ್ಣತೆಯನ್ನು ಕೀರ್ತ 8:5-8ರಲ್ಲಿ ಬಹುಸ್ಪಷ್ಟವಾಗಿ ತಿಳಿಸಲಾಗಿದೆ. "ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದೆಯಲ್ಲಾ... ಸಕಲ ವಿಧವಾದ ಜೀವ ಜಂತುಗಳನ್ನು ಅವನಿಗೆ ಅಧೀನಮಾಡಿದ್ದಿಯಲ್ಲವೇ" ಇಬ್ರಿಯ 2:7ರಲ್ಲಿರುವ ಸ್ವಲ್ಪವೇ ಎನ್ನುವುದು ವಿಕಾಸವಾದ ಸಿದ್ಧಾಂತ ಎಂದು ಕೆಲವರ ಅಭಿಪ್ರಾಯ. ಆದರೆ ಅದು ಅರ್ಥವಿಲ್ಲದ್ದು.

ದೇವದೂತರಿಗಿಂತ ಸ್ವಲ್ಪವೇ ಕಡಿಮೆ ಎಂದು ದಾವೀದನು ಬರೆಯುವಾಗ ದೇವರು ಮಾನವರನ್ನು ಪೂರ್ವಸ್ಥಿತಿಗೆ ತರುವ ಯೋಜನೆಯನ್ನು ಕೈಬಿಟ್ಟಿಲ್ಲ ಎಂದು ತಿಳಿದುಬರುತ್ತದೆ. ಇದೇ ವಿಷಯವನ್ನು ಇಬ್ರಿ 2:7ರಲ್ಲಿ ತಿಳಿಸಲಾಗಿದೆ. ದೇವರ ಯೋಜನೆಯ ಪ್ರಕಾರ ಮೊದಲು ಮಾನವನು ದೈವಸ್ವರೂಪದಲ್ಲಿದ್ದು ಹೇಗೆ ಭೂ ರಾಜನಾಗಿದ್ದನೋ ಪುನಃ ಅದೇ ಸ್ಥಿತಿಗೆ ಮಾನವರನ್ನು ಏರಿಸುವನು; ಆದರೆ ಇದು ನಿಧಾನವಾಗಿ ಕಾರ್ಯಗತವಾಗತಕ್ಕದ್ದು. ಮೊದಲು ಕ್ರಿಸ್ತನಿಗೆ ಪ್ರಭಾವ ಮಾನದ ಕೀರಿಟವನ್ನಿಟ್ಟು ಅವನನ್ನು ಪರಿಪೂರ್ಣ ಮಾನವನನ್ನಾಗಿ ಮಾಡಿ ಮಾನವರಿಗೆ ತಕ್ಕ ವಿಮೋಚನೆಯಾಗುವಂತೆ ಮಾಡಿ ಎಲ್ಲರ ವಿಮೋಚ ನಾರ್ಥವಾಗಿ ಮರಣನ್ನನುಭವಿಸಿದನು. ಇದರಿಂದ ಮಾನವನು ಕಳೆದುಕೊಂಡಿದ್ದನ್ನು ಪಡೆಯಲು ದಾರಿಯಾಯಿತು. ಸ್ವಲ್ಪ ಕಡಿಮೆ ಎಂದರೆ ಸ್ವಲ್ಪ ಉತ್ತಮನೆಂದು ತಿಳಿಯಕೂಡದು. ಪ್ರತಿಯೊಂದಕ್ಕೂ ಒಂದು ಮಟ್ಟವಿದೆ; ಬೇರೆಯದಕ್ಕಿಂತ ಕಡಿಮೆಯಿದ್ದರೂ ತನ್ನದರಲ್ಲೇ ಉತ್ತಮವಾಗಿರಬಹುದು. ಕೆಳಗಿನ ಪಟ್ಟಿಯಿಂದ ಉತ್ತಮತೆಯನ್ನು ಮಟ್ಟವನ್ನು ತಿಳಿದುಕೊಳ್ಳಬಹುದು.

ಹೀಗೆ ಎಲ್ಲಾ ಖನಿಜಗಳು ಶುದ್ಧವಾದದ್ದೇ ಆದರೂ ಚಿನ್ನಕ್ಕೆ ಮೊದಲನೆಯ ಸ್ಥಾನ. ಹೀಗೆ ಸಸ್ಯವರ್ಗಧಲ್ಲೂ ಮತ್ತು ಪ್ರಾಣಿವರ್ಗದಲ್ಲೂ ಭೇದಗಳಿವೆ. ಆತ್ಮೀಕ ವರ್ಗದಲ್ಲೂ ಒದು ಹೆಚ್ಚಿನ ಮಟ್ಟದ್ದು ಒಂದು ಕಡಿಮೆ ಮಟ್ಟದ್ದು. ಉತ್ತಮ ಮಟ್ಟದ್ದು ದೈವೀಕ ಸ್ವಭಾವ. ಕ್ರಿಸ್ತನು ಪುನರುತ್ಥಾನವಾದ ಮೇಲೆ ಎಲ್ಲಾ ಹೆಸರುಗಳಿಗಿಂತ

ಶ್ರೇಷ್ಠವಾದ ಹೆಸರನ್ನು ಹೊಂದಿದನು. ಇಬ್ರಿಯ 1:3–5.

ಶ್ರೇಷ್ಠವರ್ಗದ ಖನಿಜ ಅತ್ಯಂತ ಕೆಳಮಟ್ಟದ ಸಸ್ಯಕ್ಕಿಂತಲೂ ಕೀಳು ಯಾಕೆಂದರೆ ಸಸ್ಯಗಳಲ್ಲಿ ಜೀವವಿರುವುದು. ಇದೇ ರೀತಿ ಅತ್ಯಂತ ಉತ್ತಮ ಮಟ್ಟದ ಸಸ್ಯ ಕೀಳು ದರ್ಜೆಯ ಪ್ರಾಣಿಗಿಂತಲೂ ಕಡೆ ಯಾಕೆಂದರೆ ಪ್ರಾಣಿಗಳಲ್ಲಿ ಬುದ್ಧಿ ಇದೆ. ಹಾಗೆಯೇ ಮಾನವನು ದೇವದೂತರಿಗಿಂತ ಕೆಳಮಟ್ಟದಲ್ಲಿರುವನು. ಯಾಕೆಂದರೆ ಅವರು ಆತ್ಮೀಕ ಜೀವಿಗಳು.

ದೇವರು ಸೃಷ್ಟಿಸಿದ ಮಾನವನಿಗೂ ಪಾಪದಲ್ಲಿ ಬಿದ್ದಿರುವ ಮಾನವನಿಗೂ ಅಗಾಧ ವ್ಯತ್ಯಾಸವಿದೆ. ಪಾಪವು ಅವನ ಸ್ವಭಾವ ಮತ್ತು ಗುಣವನ್ನು ಸಂಪೂರ್ಣವಾಗಿ ಬದಲಾಯಿಸಿಬಿಟ್ಟಿದೆ. ಅಜ್ಞಾನದ ಸಂತತಿಯು ಹೆಚ್ಚಿದಂತೆಲ್ಲಾ ಅವನಲ್ಲಿರುವ ದೈವತ್ವವೇ ಅಳಿಸಿಹೋಗಿದೆ. ನೈತಿಕಜ್ಞಾನದ ಮಟ್ಟ ಕಡಿಮೆಯಾಗಿ ಮೃಗದ ಸ್ವಭಾವ ಹೆಚ್ಚುತ್ತಿರುವುದು.ದೈಹಿಕಶಕ್ತಿಯನ್ನು ಕಳೆದುಕೊಂಡವನಾಗಿ ಆಯುಸ್ಸನ್ನು ಕಳೆದುಕೊಂಡಿರುವನು. ವೈದ್ಯಕೀಯ ಸೌಲಭ್ಯಗಳಿಂದ ಮನುಷ್ಯನ ಸರಾಸರಿ ಆಯಸ್ಸು 30 ವರ್ಷ. ಪಾಪದಲ್ಲಿ ಬಿದ್ದ ಆದಾಮನು 930 ವರ್ಷ ಬದುಕಿದ್ದನು. ಈಗ ಸಂಕಟವಿದ್ದರೂ ಮುಂದೆ ಕ್ರಿಸ್ತನ ರಾಜ್ಯದಲ್ಲಿ ಇವೆಲ್ಲವನ್ನು ಹೋಗಲಾಡಿಸಿ ಮೊದಲಿದ್ದ ಮಾನಸಿಕ ದೈಹಿಕ ಪ್ರಭಾವವನ್ನು ಪಡೆಯುವನು.ಹೀಗೆ ಆದಾಮನಿಂದ ಕಳೆದುಕೊಂಡದ್ದನ್ನು ಕ್ರಿಸ್ತನ ಮೂಲಕ ಪಡೆಯುವರು. ರೊಮಾ 5:18,19 ಮಾನವನು ಪರಲೋಕದ ಸುಖ ಮತ್ತು ಭೂ ಲೋಕದ ಸುಖ ಯಾವುದನ್ನೂ ಕಳೆದುಕೊಳ್ಳಲಿಲ್ಲ. ಮರಣಶಿಕ್ಷೆಯಿಂದ ಮಾನವಶರೀರವಾಗಿ ಬದುಕುವುದನ್ನು ಕಳೆದುಕೊಂಡನೇ ಹೊರತು ಆತ್ಮೀಕತೆಯನ್ನು ಕಳೆದುಕೊಳ್ಳಲಿಲ್ಲ. ಮಾನವನು ಕಳೆದುಕೊಂಡದ್ದನ್ನೆಲ್ಲಾ ವಿಮೋಚಕನು ಬೆಲೆತೆತ್ತು ಕೊಂಡುಕೊಂಡಿರುವನು. ಮನುಷ್ಯಕುಮಾರನು ಕೆಟ್ಟುಹೋಗಿರುವವರನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನುಲೂಕ 19:10. ಪರಿಪೂರ್ಣ ಮಾನವನು ಆತ್ಮೀಕ ಜೀವಿಯಾಗಿರಲಿಲ್ಲ. ಆದುದರಿಂದಲೇ ಕ್ರಿಸ್ತನು ತನ್ನ ಆತ್ಮೀಕ ಸ್ವಭಾವವನ್ನು ತ್ಯಜಿಸಿ ಮಾನವರೂಪ ಧರಿಸಿ ಮಾನವನಾಗಿ ಬಂದನು. ಪೌಲನು ಹೇಳಿರುವಂತೆ ಕ್ರಿಸ್ತನು ಒಂದು ಹೆಜ್ಜೆ ಕೆಳಕ್ಕೆ ಬಂದು ದೇವ ದೂತರ ರೂಪವನ್ನು ಹೊಂದಲಿಲ್ಲ. ಎರಡು ಹೆಜ್ಜೆ ಕೆಳಕ್ಕೆ ಬಂದು ಮಾಂಸಧಾರಿಯ ಮಾನವ ರೂಪವನ್ನು ಧರಿಸಿದನು. ಆತನು ನರನಾಗಿ ಬಂದನು. ಇಬ್ರಿಯ 2:16: ಫಿಲಿಪ್ಪಿ 2:7,8, ಯೋಹಾನ 1:14. ಇಲ್ಲಿ ಒಂದು ವಿಷಯವನ್ನು ಸ್ಪಷ್ಟವಾಗಿ ಗಮನಿಸಬೇಕು. ಆತ್ಮೀಕ ಜೀವಿಯಲ್ಲಿ ದೇವದೂತರ ಸ್ವಭಾವವೊಂದೇ ಅಲ್ಲ ನಮ್ಮ ಕರ್ತನು ಮಾನವನಾಗುವುದಕ್ಕಿಂತ ಮೊದಲು ಇದ್ದ ಸ್ವಬಾವಕ್ಕಿಂತ ದೇವದೂತರ ಸ್ವಭಾವ ಕೆಳಮಟ್ಟದ್ದು. ಆತನು ತನ್ನನ್ನು ತಗ್ಗಿಸಿಕೊಂಡು ಶಿಲುಬೆಯ ಮರಣವನ್ನಾದರೂ ಹೊಂದುವ ವಿಧೇಯನಾದನು. ಆದುದರಿಂದ ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರು ಗಳಿಗಿಂತ ಶ್ರೇಷ್ಠವಾದ ಹೆಸರನ್ನು ದಯಪಾಲಿಸಿದ್ದಾನೆ. ಫಿಲಿಪ್ಪಿ 2:8,9 ದೈವ ಸ್ವಭಾವದಲ್ಲಿ ಪಾಲುಗಾರನಾಗಿರುವನು.

ಮಾನವ ಸ್ವಭಾವವೇ ಬೇರೆ ದೇವದೂತರ ಸ್ವಭಾವವೇ ಬೇರೆ. ಪರಿಪೂರ್ಣ ಮಾನವನು ದೇವದೂತನು ಎಂದು ಹೇಳುವ ಹಾಗಿಲ್ಲ. ಆದುದರಿಂದಲೇ ಕ್ರಿಸ್ತನು ದೇವದೂತರ ರೂಪವನ್ನು ಹೊಂದದೆ ಮಾನವ ರೂಪವನ್ನೇ ಧರಿಸಿದನು. ಅಂದರೆ ಪಾಪ ರಹಿತ ಪರಿಪೂರ್ಣ ಮಾನವ ರೂಪ ಆತನು ಅತ್ಯುತ್ತಮ ಮಾನವನಾಗಿರದಿದ್ದರೆ ಮಾನವರ ಪಾಪನಿವಾರಣೆಗಾಗಿ ತನ್ನನ್ನು ಈಡು ಬಲಿಯಾಗಿ ಒಪ್ಪಿಸಲು ಸಾಧ್ಯವಾಗುತ್ತಿರಲಿಲ್ಲ. 1 ತಿಮೋ 2:6 ಯಾಕೆಂದರೆ ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನ ಉಂಟಾಗುವುದು 1 ಕೊರಿ. 15:21 ಕ್ರಿಸ್ತನ ಸ್ವಭಾವದಲ್ಲಿ ಸ್ವಲ್ಪ ಕುಂದಿದ್ದರೂ ಆತನ ಯಜ್ಞಾರ್ಪಣೆಯೂ ಅಂಗೀಕೃತವಾಗುತ್ತಿರಲಿಲ್ಲ. ಉತ್ತಮ ಮನುಷ್ಯನು ಬಿದ್ದು ತಿರಸ್ಕೃತನಾದುದ್ದರಿಂದ ಉತ್ತಮ ಮನುಷ್ಯನೇ ವಿಮೋಚನೆಯ ಬೆಲೆ ಕೊಟ್ಟು ರಕ್ಷಕನಾದನು. ಸತ್ಯವೇದದ ಪ್ರಕಾರ ಯೇಸುವು ಪರಿಪೂರ್ಣ ಮನುಷ್ಯನಾದನು. ದೇವದೂತನಲ್ಲ ದೇವದೂತರಿಗಿಂತ ಸ್ವಲ್ಪ ಕಡಿಮೆ ಮಟ್ಟದವನಾದನು. ಇದನ್ನೇ ಕೀರ್ತ 8:5–8 ಸಮರ್ಥಿಸುವುದು ಮತ್ತು ಪೌಲನು ಇಬ್ರಿಯ 2:7–9ರಲ್ಲಿ ಹೇಳಿರುವುದನ್ನು ಸ್ಪಷ್ಟಪಡಿಸುವುದು.

ಯೇಸುವು ಮಾನವ ಮತ್ತು ಆತ್ಮೀಕ ಸ್ವಭಾವದ ಮಿಶ್ರವಾಗಿರಲಿಲ್ಲ. ಅಂಥ ಮಿಶ್ರ ಸ್ವಭಾವವು ದೇವರ ಕಾರ್ಯಕ್ರಮಕ್ಕೆ ಸರಿಹೊಂದುವುದಿಲ್ಲ. ಯೇಸು

| ಆತ್ಮೀಕ ಮಟ್ಟ | ಭೂಲೋಕದ ಪ್ರಾಣಿಗಳ ಮಟ್ಟ | ಸಸ್ಯಗಳ ಮಟ್ಟ | ಖನಿಜಗಳ ಮಟ್ಟ |
|---|---|---|---|
| ದೈವಿಕ | ಮಾನವ | ಮರಗಳು | ಚಿನ್ನ |
| – | ಪ್ರಾಣಿ | ಗಿಡಗಳು | ಬೆಳ್ಳಿ |
| – | ಪಕ್ಷಿ | ಹುಲ್ಲುಗಳು | ತಾಮ್ರ |
| ದೇವದೂತರು | ಮೀನು | ಕುರುಚಲು | ಕಬ್ಬಿಣ |

ನರಮಾನವನಾಗಿದ್ದಾಗ ಪರಿಪೂರ್ಣ ಮಾನವನಾಗಿದ್ದ. ಅದಕ್ಕಿಂತ ಮೊದಲು ಪರಿಪೂರ್ಣ ಆತ್ಮೀಕ ಜೀವಿಯಾಗಿದ್ದ. ಪುನರುತ್ಥಾನವಾದ ಮೇಲೆ ಆತ್ಮೀಕ ಜೀವಿಗಳಲ್ಲಿ ಶ್ರೇಷ್ಠನಾಗಿ ದೈವ ಸ್ವಭಾವವನ್ನು ಹೊಂದಿದ್ದನು. ಆತನು ದೀಕ್ಷಾಸ್ನಾನ ಮಾಡಿಸಿಕೊಂಡಾಗ 30 ವರ್ಷದವನಾಗಿದ್ದನು. (ಧರ್ಮಶಾಸ್ತ್ರದ ಪ್ರಕಾರ ಮನುಷ್ಯನು ಪ್ರತಿಷ್ಠಿಸಿಕೊಳ್ಳುವ ವಯಸ್ಸು ಅದು) ಮಾನವನಾಗಿ ಮರಣಕ್ಕೆ ವಿಧೇಯನಾಗಿ ದೈವ ಸ್ವಭಾವಕ್ಕೇರಿಸಲ್ಪಟ್ಟನು ಮತ್ತಾ 3:16–17 ಮತ್ತು ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ದಯಪಾಲಿಸಿ ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟನು. ಫಿಲಿಪ್ಪಿ 2:8,9 ಇದಕ್ಕೆ ಮಾನವಸ್ವಭಾವವು ಯಜ್ಞಾರ್ಪಣೆಯಾಗಬೇಕಾಯಿತು. ಆದುದರಿಂದ ಕ್ರಿಸ್ತನದು ಮಿಶ್ರಸ್ವಭಾವವಲ್ಲ. ಆದರೆ ಎರಡು ಬದಲಾವಣೆ ಕಂಡುಬರುತ್ತದೆ. ಮೊದಲನೆಯದು ಆತ್ಮೀಕದಿಂದ ಮಾನವಧಾರಿಯಾದದ್ದು ಎರಡನೆಯದು ಎಲ್ಲಾ ಆತ್ಮೀಕ ಜೀವಿಗಳಿಗಿಂತ ಶ್ರೇಷ್ಠವಾದ ಸ್ಥಾನಹೊಂದಿ ದೈವಸ್ವಭಾವದಲ್ಲಿ ಪಾಲುಹೊಂದಿದ್ದು ಆದಾಮನು ಯಾವುದನ್ನು ಕಳೆದುಕೊಂಡನೋ ಅದಕ್ಕೆ ಸರಿಸಮವಾದ ಬೆಲೆಯನ್ನು ಕ್ರಿಸ್ತನು ಕೊಟ್ಟನು. ಇದರಿಂದ ಮಾನವರೆಲ್ಲರೂ ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನ ವಿಧಿಗಳನ್ನು ಕೈಗೊಂಡು ಆತ್ಮೀಕ ಸ್ವಭಾವದಲ್ಲಿ ಮಹಿಮಾತಿಶಯವಾದ ಮಾನವ ಸ್ವಭಾವ ಕಳೆದುಕೊಂಡಿದ್ದನ್ನು ಪಡೆಯಬಹುದು. ಇದರಿಂದ ಉತ್ತಮತೆಯು ಹೆಚ್ಚಿ ಜ್ಞಾನವು ಅಧಿಕವಾಗುವುದು. ಇದೇ ದೇವರು ಮಾನವರಿಗೆ ಅನುಗ್ರಹಿಸಿರುವ ಶಾಶ್ವತವಾದ ವಾಗ್ದಾನ. ಯೇಸು ಉತ್ತಮನಾಗಿದ್ದು ಮುಂದೆ ಮಾನವರೆಲ್ಲರೂ ಉತ್ತಮರಾಗಿರುವುದಕ್ಕೆ ಮಾದರಿಯಾಗಿದ್ದಾನೆ. ಹಾಗೆಯೇ ದೈವಸ್ವಭಾವದಲ್ಲಿ ಪಾಲು ಹೊಂದುವ ಸತ್ಯ ಸಭೆಗೂ ಮಾದರಿಯಾಗಿದ್ದಾನೆ. ಸುವಾರ್ತಾಯುಗದಲ್ಲಿ ಬೇರೆ ಬೇರೆ ಸ್ವಭಾವಕ್ಕೆ ಹೋಗುವ ತರಗತಿಯವರನ್ನು ತಿಳಿಸಲಾಗಿದೆ. ಪೌಲನ ಪತ್ರಿಕೆಗಳು ಚಿಕ್ಕಹಿಂಡನ್ನು ಸೂಚಿಸುತ್ತದೆ. ಈ ಚಿಕ್ಕ ಹಿಂಡು ದೈವ ಸ್ವಬಾವಕ್ಕೇರಿಸಿದ ಕೂಡಲೇ ದೇವರ ಯೋಜನೆ ಪೂರ್ಣವಾಯಿತೆಂದು ತಿಳಿಯಕೂಡದು. ಅಲ್ಲದೆ ಚಿಕ್ಕಹಿಂಡಿಗೆ ದೊರಕುವ ಆಶೀರ್ವಾದದಲ್ಲಿ ಮಾನವರೆಲ್ಲರೂ ಭಾಗಿಗಳಾಗುವರು ಎಂದು ತಿಳಿಯುಕೂಡದು. ಚಿಕ್ಕಹಿಂಡಿಗೋಸ್ಕರ ಕೊಡಲ್ಪಡುವ ಆಶೀರ್ವಾದಗಳು ಪೂರ್ತಿಯಾದ ಮೇಲೆ ಮಾನವರಿಗೂ ದೇವರ ಹೆಚ್ಚಿನ ಆಶೀರ್ವಾದವಿರುವುದು. ಸತ್ಯವಾಕ್ಯದ ಪ್ರಕಾರ ನೋಡಿದರೆ ಚಿಕ್ಕಹಿಂಡು ದೈವಸ್ವಭಾವಕ್ಕೇರವುದು ಮತ್ತು ಲೋಕದ ಮಾನವರು ಉತ್ತಮರಾಗುವುದು ಎರಡು ಪ್ರತ್ಯೇಕವಾದ ಕೆಲಸಗಳೆಂದು ಸತ್ಯವೇದವು ತಿಳಿಸುತ್ತದೆ.

ಆತ್ಮೀಕ ಜೀವಿಗಳೆಂದರೇನು? ಅವುಗಳಿಗಿರುವ ಶಕ್ತಿಯೇನು? ಅವು ಯಾವ ನಿಯಮಕ್ಕೆ ಒಳಗಾಗಿವೆ? ಎಂಬಪ್ರಶ್ನೆಗಳಿಗೆ ಉತ್ತರವನ್ನು ತಿಳಿಯೋಣ. ಕೆಲವರು ಆತ್ಮೀಕ ಜೀವಿ ಎಂದರೆ ಕಟ್ಟುಕತೆ ಅದು ಕೇವಲ ಮೂಢನಂಬಿಕೆ ಎಂದು ತಿಳಿದಿರುವರು. ಆದರೆ ಪೌಲನಿಗೆ ಈ ಅಭಿಪ್ರಾಯವಿರಲಿಲ್ಲ. ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ 1 ಕೊರಿ. 2: 14 ಆದರೂ ಮಾನವ ಜೀವಿಗಳೇ ಬೇರೆ ಆತ್ಮೀಕ ಜೀವಿಗಳೇ ಬೇರೆ. ಭೂಲೋಕದ ಮಹಿಮೆಯೇ ಬೇರೆ ಪರಲೋಕದ ಮಹಿಮೆಯೇ ಬೇರೆ. ಆದಾಮನು ಕಳೆದುಕೊಂಡ ಮಹಿಮೆಯನ್ನು ಕ್ರಿಸ್ತನ ರಾಜ್ಯದಲ್ಲಿ ಕ್ರಿಸ್ತನು ಸಭೆಯ ಮೂಲಕ ಎಲ್ಲಾ ಜನಾಂಗದವರಿಗೆ ಕೊಡುವನು. ಆ ಜೀವಿಗಳ ಕಾರ್ಯ ಮತ್ತು ವಿಷಯವನ್ನು ಅರ್ಥ ಮಾಡಿಕೊಳ್ಳುವುದಕ್ಕಾಗುವುದಿಲ್ಲ. 1 ಕೊರಿ. 15:38–49 ಆತ್ಮೀಕ ಜೀವಿಗಳು ಪರಲೋಕದ ಮಹಿಮೆಯನ್ನು ಹೊಂದಿರುತ್ತವೆ. ಕ್ರಿಸ್ತನ ರಾಜ್ಯದ ಅಂದರೆ ಪರಲೋಕದ ಮಹಿಮೆಯು ಕಣ್ಣಿಗೆ ಕಾಣದಿದ್ದರೂ ಸತ್ಯವಾಕ್ಯದ ಮೂಲಕ ನಂಬಿಕೆ ಎಂಬ ಕಣ್ಣುಗಳಿಂದ ಆತ್ಮೀಕ ಜೀವಿಗಳಿಗೆ ಕಾಣುತ್ತದೆ. ನಮಗಿರುವ ಸ್ವಭಾವವು ಮುಂದೆ ಉತ್ತಮ ಹೊಂದಿದ ಮೇಲೆ ನಾವು ಮೆಚ್ಚಬಹುದು. ಯಾಕೆಂದರೆ "ದೇಹದಿಂದ ಹುಟ್ಟಿದ್ದು ದೇಹವೇ" ಆತ್ಮನಿಂದ ಹುಟ್ಟಿದ್ದು ಆತ್ಮವೇ "ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಿಲ್ಲ... ನಾವು ಆತನ ಹಾಗಿರುವೆವೆಂದು ಬಲ್ಲೆವು" ಯೋಹಾನ 3:6;1 ಯೋಹಾನ 3:2.

ಮನುಷ್ಯಕುಮಾರನಲ್ಲದೆ ಯಾವುದೇ ಜೀವಿಯಾದರೂ ಆತ್ಮೀಕವಾಗಿಯಾಗಲಿ ಮಾನವನಾಗಿಯಾಗಲಿ ಬದಲಾವಣೆ ಹೊಂದಿದ ವರದಿ ಎಲ್ಲೂ ಕಂಡುಬಂದಿಲ್ಲ. ಕ್ರಿಸ್ತನು ಮಾತ್ರ ಒಂದು ವಿಶೇಷ ಕಾರ್ಯಕ್ಕಾಗಿ (ಆ ರೀತಿಯ) ಬದಲಾವಣೆ ಹೊಂದಬೇಕಾಯಿತು. ದೇವರು ದೇವ ದೂತರನ್ನು ಸೃಷ್ಟಿಸಿದಾಗ ಅವರು ಸದಾಕಾಲ ಯಾವ ಬದಲಾವಣೆ ಇಲ್ಲದೆ ಇರುವುದಕ್ಕಾಗಿಯೇ ಸೃಷ್ಟಿಸಿದನು ಮತ್ತು ಅದೇ ಉದ್ದೇಶದಿಂದಲೇ ಮಾನವರನ್ನೂ ಸೃಷ್ಟಿಸಿದನು. ಹಾಗೆಂದು ಸತ್ಯವೇದ ತಿಳಿಸುತ್ತದೆ. ಹೇಗೆ ನಿರ್ಜೀವ ವಸ್ತುಗಳಲ್ಲಿ ವಿಂಗಡವಿದ್ದು ಶ್ರೇಷ್ಠತೆ ಎಂಬುದಿದೆಯೋ ಹಾಗೆಯೇ ಬುದ್ಧಿಜೀವಿಗಳಲ್ಲೂ ವಿವಿಧ ಪಂಗಡಗಳಿದ್ದು ಶ್ರೇಷ್ಠ ಎಂಬುದಿದೆ. ಸೃಷ್ಠಿಯ ಪ್ರತಿಯೊಂದರಲ್ಲೂ ಶ್ರೇಷ್ಠತೆಯ ಮಹಿಮೆ ಎಂಬುದಿದೆ. ಆದರೆ ಪೌಲನು ಹೇಳುವ ಹಾಗೆ ಪರಲೋಕದ ದೇಹಗಳ ಮಹಿಮೆ ಬೇರೆ. ಭೂಲೋಕದ ದೇಹಗಳ ಮಹಿಮೆ ಬೇರೆ. ಕ್ರಿಸ್ತನ ಪುನರುತ್ಥಾನ ದೇವದೂತರುಗಳ ವಿಷಯವಾಗಿ ಹೇಳುವುದಾದರೆ "ಆತ್ಮ ಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸಬೇಕು." 1 ಕೊರಿ. 2:13 ಆತ್ಮೀಕ ಜೀವಿಗಳ ಕೆಲವು ವಿಷಯ ನಮಗೆ ತಿಳಿದಿದೆ. ಅನೇಕ ವೇಳೆ ಆತ್ಮೀಕ ಜೀವಿಗಳು ಅಗೋಚರವಾಗಿ ಪ್ರತ್ಯಕ್ಷವಾಗಿವೆ. "ಯೆಹೋವನು ಭಯ

ಭಕ್ತಿಯುಳ್ಳವರ ಸುತ್ತಲು ದಂಡಿಳಿಸಿ ಕಾವಲಾಗಿದ್ದು ಕಾಪಾಡುತ್ತಾನೆ." ಕೀರ್ತ. 34:7; ಇಬ್ರಿಯ 1:14 ಅವರು ಅಗೋಚರವಾಗಿ ಕೆಲಸ ಮಾಡಿರುವರು ಎಂಬುದರಲ್ಲಿ ಸಂಶಯವಿಲ್ಲ. ಒಂದು ಸಾರಿ ಎಲೀಷನು ಅಶೂರ್ಯದ ದಂಡಿನಿಂದ ಸುತ್ತವರಿಯಲ್ಪಟ್ಟಾಗ ಅವರ ಸೇವಕನು ಹೆದರಿದನು. ಎಲೀಷನು ದೇವರಿಗೆ ಪ್ರಾರ್ಥಿಸಿದಾಗ ಅವನ ಕಣ್ಣುಗಳು ತೆರೆಯಲ್ಪಟ್ಟು ತಾವು ಅಗ್ನಿಮಯ ರಥಾಶ್ವಗಳ ಬಲದಲ್ಲಿ ರುವುದನ್ನು ಕಂಡನು. ಮತ್ತೊಂದು ಸಂದರ್ಭದಲ್ಲಿ ಬಿಳಾಮನಿಗೆ ಅಗೋಚರವಾದದ್ದು ಅವನ ಕತ್ತೆಗೆ ಗೋಚರವಾಯಿತು. ಎರಡನೆಯದಾಗಿ ದೇವದೂತರು ಮನುಷ್ಯ ರೂಪದಲ್ಲೂ ಕಾಣಿಸಿಕೊಳ್ಳುತ್ತಾರೆ. ಕರ್ತನು ಮತ್ತು ಇಬ್ಬರು ದೇವದೂತರು ಮನುಷ್ಯ ರೂಪದಲ್ಲಿ ಬಂದು ಅಬ್ರಹಾಮನಿಗೆ ಕಾಣಿಸಿಕೊಂಡು ಅವನ ಬಳಿ ಊಟ ಮಾಡಿದರು. ಅವರು ಮೂವರು ಎಂದು ಅಬ್ರಹಾಮನು ತಿಳಿದಿದ್ದನು.ಆದರೆ ಅವರು ಹೊರಟು ನಿಂತಾಗ ಅವರಲ್ಲಿ ಒಬ್ಬನು ಕರ್ತನು ಎಂದು ಅವನಿಗೆ ತಿಳಿಯಿತು. ಅನಂತರ ಉಳಿದವರಿಬ್ಬರು ಸೋದೋಮಿಗೆ ಹೋಗಿ ಲೋಟನನ್ನು ಬಿಡಿಸಿದರು. ಆದಿ 18:1, 2 ಒಬ್ಬ ದೇವದೂತನು ಗಿದ್ಯೋನನಿಗೆ ಮನುಷ್ಯ ರೂಪದಲ್ಲಿ ಕಾಣಿಸಿಕೊಂಡು ಅನಂತರ ನಿಜ ಸಂಗತಿಯನ್ನು ತಿಳಿಸಿದನು. ಹೀಗೆಯೇ ಸಂಸೋನನ ತಂದೆತಾಯಿಗಳೂ ಮನುಷ್ಯ ರೂಪದಲ್ಲಿ ದೇವದೂತನನ್ನು ಕಂಡರು. ಆದರೆ ಅವನು ಹೋಮದ ಹೊಗೆಯಲ್ಲಿ ಏರಿ ಹೋದಾಗ ಅದು ದೇವದೂತನು ಎಂದು ಕಂಡುಕೊಂಡರು. ನ್ಯಾಯ 6:11–22;13–20.

ಮೂರನೆಯದಾಗಿ ಆತ್ಮೀಕ ಜೀವಿಗಳು ಸಾಧಾರಣ ರೀತಿಯಲ್ಲೂ ಮಹಿಮಾತಿಶಯವಾಗಿರುತ್ತವೆ. ಸಮಾಧಿಯ ಬಾಗಿಲಿನ ಕಲ್ಲನ್ನು ಹೊರಳಿಸಿದವನು ಮಿಂಚಿನಂತೆ ಹೊಳೆಯುತ್ತಿದ್ದನು. ದಾನಿಯೇಲನು ಕಂಡ ಜೀವಿಯ ಕಣ್ಣುಗಳು ಉರಿಯುವ ಪಂಜಿನಂತಿದ್ದುವು. ಮುಖವು ಮಿಂಚಿನಂತೆ ಹೊಳೆಯುತ್ತಿತ್ತು. ಅವನ ಕೈಕಾಲುಗಳು ಬೆಳಗಿದ ತಾಮ್ರದ ಹಾಗೆ ಥಳಥಳಿಸುತ್ತಿದ್ದವು. ಅವನ ಸ್ವರವು ಸಂಧಣಿಯ ಕೋಲಾಹಲದಂತಿತ್ತು. ಅವನ ಮುಂದೆ ದಾನಿಯೇಲನು ಸತ್ತವನ ಹಾಗೆ ಬಿದ್ದನು ದಾನಿ. 10:6,10,15,17. ತಾರ್ಸದ ಸೌಲನಿಗೆ ಕಾಣಿಸಿದ ಕ್ರಿಸ್ತನ ಮಹಿಮಾ ಪ್ರಕಾಶವು ಮಧ್ಯಾಹ್ನದ ಸೂರ್ಯನ ಪ್ರಕಾಶಕ್ಕಿಂತಲೂ ಮಿಗಿಲಾಗಿತ್ತು. ಆ ಪ್ರಕಾಶಕ್ಕೆ ಸೌಲನು ದೃಷ್ಟಿ ಹೀನನಾಗಿ ಕೆಳಗೆ ಬಿದ್ದನು. ಆದರೆ ಅದು ಎಲ್ಲರ ಕಣ್ಣಿಗೂ ಗೋಚರವಾಗುವುದಿಲ್ಲ. ಸೌಲನಿಗೆ ಮಾತ್ರ ಗೋಚರವಾಯಿತೇ ಹೊರತು ಅವನ ಜೊತೆಯಲ್ಲಿದ್ದವರಿಗಲ್ಲ. ಅ.ಕೃ. 9:7 ದಾನಿಯೇಲನ ಜೊತೆಯಲ್ಲಿದ್ದವರಿಗೂ ಗೋಚರವಾಗಲಿಲ್ಲ "ಪಾರಸಿಯ ರಾಜ್ಯದ ದಿವ್ಯಪಾಲಕನು ಇಪ್ಪತ್ತೊಂದು ದಿವಸ ನನ್ನನ್ನು ತಡೆದನು" ದಾನಿ. 10:13 ಹೀಗೆ ತಡೆಹಿಡಿಯಬೇಕಾದರೆ ಮಾನವನಾಗಿಯೇ ಕಾಣಿಸಿರಬೇಕು. ಇದರಿಂದ ಆತ್ಮೀಕ ಜೀವಿಗಳ ಸ್ವಭಾವವೇ ಬೇರೆ ಮಾನವನರ ಸ್ವಭಾವವೇ ಬೇರೆ ಎಂದು ಸತ್ಯವೇದದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಒಂದು ಜೀವಿಯು ಮತ್ತೊಂದಾಗಲು ಸಾಧ್ಯವಿಲ್ಲ. ಆದರೆ ಮಾನವರಲ್ಲಿ ಕೆಲವರು ದೈವಸ್ವಭಾವಕ್ಕೆ ಏರಿಸಲ್ಪಡುತ್ತಾರೆ. ಮುಂದೆ ಇವರಿಂದ ಮಾಹಾಕಾರ್ಯವಾಗಬೇಕಾದ್ದರಿಂದ ಯೆಹೋವನೇ ಇದನ್ನು ನೇಮಿಸಿದ್ದಾನೆ.

**ಮರ್ತ್ಯತೆ ಮತ್ತು ಅಮರತ್ವ**

ಸತ್ಯವೇದದ ಸಹಾಯದಿಂದ ಆತ್ಮೀಕ ಜೀವಿಗಳ ವಿಷಯವನ್ನು ತಿಳಿದಾಯಿತು. ಈಗ ಮಾನವರಿಗೆ ಮತ್ತು ಆತ್ಮೀಕ ಜೀವಿಗಳಿಗಿರುವ ಭೂಲೋಕದ ಮತ್ತು ಪರಲೋಕದ ವಾಗ್ದಾನವನ್ನು ಸತ್ಯವೇದದ ಸಹಾಯದಿಂದ ತಿಳಿಯೋಣ. ಮರ್ತ್ಯತೆ ಎಂದರೆ ಸಾಯುವಂತಾದ್ದು ಅಥವಾ ಮರಣಾಧೀನವಾದದ್ದು. ಅಮರತ್ವ ಎಂದರೆ ಸಾಯದೇ ಇರುವಂಥಾದ್ದು. ಅಲ್ಲಿ ಮರಣವೆಂಬುದು ಸಾಧ್ಯವೇ ಇಲ್ಲ. ಅಂದರೆ ಮರ್ತ್ಯತೆಯಲ್ಲಿ ಮರಣ ಹೊಂದದೇ ಇರುವುದು ಅಸಾಧ್ಯ. ಅಮರತ್ವದಲ್ಲಿ ಮರಣ ಹೊಂದುವುದು ಅಸಾಧ್ಯ. ಆದರೆ ಕೆಲವರು ಈ ಎರಡು ಪದಗಳ ಅರ್ಥವನ್ನು ತಪ್ಪಾಗಿ ಗ್ರಹಿಸಿ ಆದಾಮನು ಪಾಪಮಾಡುವ ಮೊದಲು ಮರ್ತ್ಯತೆಯಾಗಿದ್ದನೋ ಅಥವಾ ಅಮರತ್ವವಾಗಿದ್ದನೋ ಎಂಬುದನ್ನು ತಿಳಿಯದೆ ಸಂದೇಹಪಡುತ್ತಿದ್ದಾರೆ. ಅವನು ಅಮರನಾಗಿದ್ದರೆ 'ತಿಂದ ದಿನ ಸತ್ತೇ ಹೋಗುವಿ' ಎಂದು ಹೇಳುತ್ತಿರಲಿಲ್ಲ. ಯಾಕೆಂದರೆ ಅಮರನು ಸಾಯುವುದಿಲ್ಲವೆಂದು ಗೊತ್ತು. ಆದರೂ ಕೆಲವರು ವಾದಿಸುವುದೇನೆಂದರೆ ಆದಾಮನು ಸಾಯುವವನಾಗಿದ್ದರೆ ತಿಂದ ದಿನವೇ ಸಾಯುವಿ ಎಂದು ದೇವರು ಏಕೆ ಹೇಳಬೇಕಾಗಿತ್ತು. ಹೇಗಿದ್ದರೂ ಅವನು ಸಾಯಲೇ ಬೇಕಾಗಿತ್ತಲ್ಲ? ಯಾವಾಗ ಮರ್ತ್ಯತೆ ಪದದ ಅರ್ಥವನ್ನು ಸರಿಯಾಗಿ ಗ್ರಹಿಸುವುದಿಲ್ಲವೋ ಆಗ ಇಂಥ ಸಂಶಯಗಳು ಉದ್ಭವಿಸುವವು. ಆದಾಮನು ಮರಣಾಧೀನನಾಗಿದ್ದನು. ಒಂದು ಮರದ ಹಣ್ಣನ್ನುಬಿಟ್ಟು ಎಲ್ಲಾ ಮರಗಳ ಹಣ್ಣನ್ನು ತಿಂದು ಜೀವಿಸುವವನಾಗಿದ್ದನು. ದೇವರಿಗೆ ವಿಧೇಯವಾದಷ್ಟು ದಿನ ಅವನಿಗೆ ಜೀವಕೊಡಲ್ಪಟ್ಟಿತ್ತು. ಆದರೂ ಅವನಿದ್ದ ಸ್ಥಿತಿಯಲ್ಲಿ ಮರಣವನ್ನು ಹೊಂದುವುದು ಸಾಧ್ಯವಾಗಿತ್ತು. ಏಕೆಂದರೆ ಅವನು ಮರ್ತ್ಯನಾಗಿದ್ದನು. ಹಾಗಾದರೆ ಆದಾಮನು ಮರ್ತ್ಯನಾಗಿದ್ದು ದೇವರಿಂದ ಅಮರತ್ವದ ವಿಚಾರಣೆಗೆ ಒಳಗಾಗಿದ್ದನೋ? ಎಂಬುದು ಕೆಲವರ ಪ್ರಶ್ನೆಯಾಗಿದೆ. ವಾಸ್ತವವಾಗಿ ಎಲ್ಲರೂ ಈ ಪ್ರಶ್ನೆಗೆ ಹೌದು ಎಂದು ಉತ್ತರಿಸುವರು ಆದರೆ ನಮ್ಮ ಉತ್ತರ ಇಲ್ಲ. ತಾನು ಪಡೆದಿದ್ದ ಜೀವಿತದಲ್ಲಿ ಮುಂದುವರೆಯಲು ಅರ್ಹನೋ ಇಲ್ಲವೋ ಎಂಬುದೇ

ಅವನ ವಿಚಾರಣೆಯಾಗಿತ್ತು. ಮಾತ್ರವಲ್ಲದೆ ಆದಾಮನು ವಿಧೇಯನಾದರೆ ಅಮರನಾಗುವನು ಎಂಬ ವಾಗ್ದಾನವು ಎಲ್ಲೂ ಕಂಡುಬರುವುದಿಲ್ಲ ವಾದ್ದರಿಂದ ಇಂತಹ ಪ್ರಶ್ನೆಗಳನ್ನು ಕೈಬಿಡಬೇಕಾಗುತ್ತದೆ. ವಿಧೇಯನಾದರೆ ದೇವರಿಂದ ಬಂದ ಎಲ್ಲಾ ಆಶೀರ್ವಾದಗಳು ಮುಂದುವರೆಯುವುದು. ಆದರೆ ಅವಿಧೇಯನಾದರೆ ಎಲ್ಲವನ್ನು ಕಳಕೊಂಡು ಮರಣವನ್ನು ಅನುಭವಿಸಬೇಕು. ಇದೇ ದೇವರು ಆದಾಮನಿಗೆ ಕೊಟ್ಟಆಜ್ಞೆ. ಕೆಲವರು ಸಾಯದೇ ಇರುವುದೆಲ್ಲ ಅಮರತ್ವೆಂದು ಭಾವಿಸಿ ಆ ಗುಂಪಿಗೆ ಪರಲೋಕದ ತಂದೆಯನ್ನು, ಯೇಸುವನ್ನು ಮತ್ತು ದೇವದೂತರನ್ನು ಸೇರಿಸುತ್ತಾರೆ. ಇದು ಬಹಳ ತಪ್ಪು. ಪೂರ್ವಸ್ಥಿತಿಗೆ ಸೇರುವ ಎಲ್ಲಾ ಮಾನವರು ಮತ್ತು ದೇವದೂತರು ಮರ್ತ್ಯರು. ದೇವದೂತರು ಉತ್ತಮರಾದರೂ ಪಾಪ ಮಾಡುವವರಾಗಿದ್ದಾರೆ. ಪಾಪ ಮಾಡಿದವರಿಗೆ ಮರಣವುಂಟು. ದೇವರು ಆದಾಮನಿಂದ ಹೇಗೆ ವಿಧೇಯತೆಯನ್ನು ಅಪೇಕ್ಷಿಸಿದನೋ ಹಾಗೆಯೇ ದೇವದೂತರೂ ಸಹ ದೇವರಿಗೆ ವಿಧೇಯರಾಗಿರಬೇಕು. ಸತ್ಯವೇದದಲ್ಲಿ ಎಲ್ಲೂ ದೇವದೂತರಾಗಲಿ ಮಾನವರಾಗಲಿ ಅಮರರು ಎಂದು ಹೇಳಿಲ್ಲ. ಪ್ರಾರಂಭದಲ್ಲಿ ದೇವರೊಬ್ಬನೆ ಅಮರನು. ಅನಂತರ ದೈವ ಸ್ವಭಾವದಲ್ಲಿ ಪಾಲು ಹೊಂದಿದ ಯೇಸುವಿಗೂ ಸಹ ಇದೆ. ಮುಂದೆ ಆತನ ಮಹಿಮೆಯಲ್ಲಿ ಭಾಗಿಯಾಗುವ ದೇಹವೆಂಬ ಸಭೆಗೂ ಆ ವಾಗ್ದಾನವಿದೆ. 1 ತಿಮೋ. 6:16; ಯೋಹಾನ 5:26; ಪೇತ್ರ 1:4; 1 ಕೊರಿ. 15:53, 54 ಇದರಿಂದ ದೈವ ಸ್ವಭಾವದವರಿಗೆ ಮಾತ್ರ ಅಮರತ್ವವೆಂಬ ಆದಾರ ಸಿಕ್ಕಿದಂದಾಯಿತು ಮತ್ತು ದೇವದೂತರು ಮರ್ತ್ಯರು ಎಂದು ತಿಳಿದುಬಂತು. ಮುಂದೆ ಅವರ ನಾಯಕನಾದ ಸೈತಾನನು ನಾಶವಾಗುವನು. ಇಬ್ರಿಯ 2:14 ಇದರಿಂದ ದೇವದೂತರು ಮರ್ತ್ಯರು ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ.ಹೀಗೆ ಘೋರ ಪಾಪಿಗಳೆಲ್ಲಾ ನಾಶವಾದ ಮೇಲೆ ಮರ್ತ್ಯರು ಮತ್ತು ಅಮರರು ಒಟ್ಟಿಗೆ ಪ್ರೀತಿಯಿಂದ ಸಂತೋಷವಾಗಿ ಜೀವಿಸುವರು. ಮೊದಲನೆಯುವರು ಮರಣಕ್ಕೆ ಒಳಗಾದವರು ಎರಡನೆಯವರು ಮರಣಾಧೀನರಾಗದೆ ತಮ್ಮಲ್ಲಿಯೇ ಸಹಜ ಜೀವನವನ್ನು ಹೊಂದಿರುತ್ತಾರೆ. ಹೀಗೆ ಮಾನವರು ಪರಿಪೂರ್ಣವಾಗಿ ನಿತ್ಯ ಜೀವಿಸುವರು. ದೇವರು ಅವರಿಗೆ ನಿತ್ಯ ಜೀವದ ವಸ್ತುಗಳನ್ನು ಕೊಡುತ್ತಿರುವವರೆಗೆ ನಿರಂತರವಾಗಿ ಜೀವಿಸಬಹುದು. ಹೀಗೆ ಸತ್ಯವೇದದ ಸಹಾಯದಿಂದ ಮರ್ತ್ಯ ಮತ್ತು ಅಮರತ್ವಗಳ ಅರ್ಥವನ್ನು ತಿಳಿದುಕೊಂಡದರಿಂದ ನಿರಂತರ ನರಕಯಾತನೆಯ ತರ್ಕವನ್ನು ನಾಶಮಾಡುತ್ತದೆ. ಈ ತರ್ಕದ ಪ್ರಕಾರ ದೇವರು ಮಾನವರನ್ನು ಶಾಶ್ವತವಾಗಿರಬೇಕೆಂದು ಸೃಷ್ಟಿಸಿದನು. ಆದುದರಿಂದ ಮಾನವನು ಲಯವಾಗದೆ ಪಾಪಮಾಡಿದ್ದರಿಂದ ದೇವರ ದಯೆ ತಪ್ಪಿ ಸಂಕಟದಿಂದ ನರಕ ಯಾತನೆಯನ್ನು ಅನುಭವಿಸುತ್ತಾ ಎಲ್ಲೋ ಇರಬೇಕು ಎಂದು ಹೇಳುವರು. ಆದರೆ ದೇವರ ವಾಕ್ಯ ನಮಗೆ ಧೈರ್ಯಕೊಡುತ್ತದೆ. ಏನೆಂದರೆ ಪಾಪಿಗಳಿಗೆ ತಕ್ಕ ಶಿಕ್ಷೆ ಇದೆ. ಅದು ಎರಡನೇ ಮರಣ ಸ್ವಇಚ್ಛೆಯಿಂದ ಪಾಪ ಮಾಡುವವನಿಗೆ ದೊರಕುವ ಸಂಬಳ ಮರಣ...ಪಾಪ ಮಾಡುವ ಪ್ರಾಣಿಯೇ ಸಾಯುವನು, ಯೆಹೆಜ್ಕೆ 18:4.

ದೇವರಿಗೆ ಎದುರು ಮಾತಾಡುವುದಕ್ಕೆ ನೀನು ಎಷ್ಟರವನು ರೋಮಾ 9:20

ದೇವರು ಎಂದಿಗೂ ಪಕ್ಷಪಾತಮಾಡಬಾರದು. ಒಬ್ಬನನ್ನು ಉತ್ತಮಪಡಿಸಿ ಅತ್ಯುನ್ನತ ಸ್ಥಾಕ್ಕೆ ಏರಿಸಿದರೆ ಅದೇ ಸ್ಥಾನವನ್ನು ಎಲ್ಲರಿಗೂ ನ್ಯಾಯವಾಗಿ ದೊರಕಿಸಲೇಬೇಕು; ಸರಿಸಮಾನತೆ ಇರಬೇಕು ಎಂಬುದು ಕೆಲವರ ಅಭಿಪ್ರಾಯವಾಗಿದೆ. ಈ ಅಭಿಪ್ರಾಯ ನ್ಯಾಯಬದ್ಧವಾಗಿದ್ದಲ್ಲಿ ಯೇಸುವನ್ನು ದೇವದೂತರಿಗಿಂತ ಹೆಚ್ಚಿನ ಮಟ್ಟದಲ್ಲಿ ಸೃಷ್ಟಿಸಿ ಮುಂದೆ ದೈವ ಸ್ವಭಾವಕ್ಕೇರಿಸುವ ಹಕ್ಕು ದೇವರಿಗಿಲ್ಲ. ಇಲ್ಲವಾದರೆ ಎಲ್ಲಾ ಮಾನವರನ್ನೂ ಮತ್ತು ದೇವದೂತರನ್ನೂ ಅದೇ ಸ್ಥಾನಕ್ಕೆ ಏರಿಸಬೇಕು. ಇನ್ನೂ ಮುಂದುವರೆದರೆ ಸಭೆಯು ದೈವ ಸ್ವಭಾವದಲ್ಲಿ ಪಾಲು ಹೊಂದುವುದಾದರೆ ಮಾನವರೆಲ್ಲರೂ ಅದರಲ್ಲಿ ಭಾಗಿಗಳಾಗಬೇಕು. ಹಾಗೆ ಇನ್ನೂ ಮುಂದುವರೆದು ದೇವರ ಸೃಷ್ಟಿಗಳಾದ ಪಶುಪ್ರಾಣಿ ಪಕ್ಷಿ ಕ್ರಿಮಿಕೀಟ ಎಲ್ಲವೂ ಏಕೆ ದೈವ ಸ್ವಭಾವವನ್ನು ಹೊಂದಬಾರದು? ಇದು ಅರ್ಥವಿಲ್ಲದ ತರ್ಕ. ಇದೇ ದೇವರ ಯೋಜನೆಯಾಗಿದ್ದಲ್ಲಿ ದೇವರ ಸೃಷ್ಟಿಯಲ್ಲಿ ವಿಧೇಯತೆ ಎಂಬುದು ಎಲ್ಲಿ ಇರುತ್ತಿತ್ತು? ಎಲ್ಲಾ ಸೃಷ್ಟಿಗಳು ಆತನ ಮಹಿಮೆ ದೈವೀಕ ಶಕ್ತಿ ಮತ್ತು ಜ್ಞಾನವನ್ನು ಪ್ರಚುರಪಡಿಸುತ್ತದೆ. ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ; ಗಗನವು ಆತನ ಕೈಕೆಲಸವನ್ನು ಪ್ರಕಟಿಸುತ್ತದೆ. ಸಮಸ್ತವು ದೇವರ ಜ್ಞಾನ ಮತ್ತು ಮಹಿಮೆಯನ್ನು ಹೊಂದಿರುತ್ತದೆ.

ನ್ಯಾಯದ ವಿಷಯವಾಗಿ ಸರಿಯಾದ ತಿಳಿವಳಿಕೆಯನ್ನು ಹೊಂದಿರುವುದು ಅವಶ್ಯಕ. ದೇವರ ಅನುಗ್ರಹವನ್ನು ಯೋಗ್ಯತೆಯ ಪ್ರತಿಫಲವೆಂದು ತಿಳಿಯಕೂಡದು. ತನ್ನ ಸೃಷ್ಟಿಯ ಮೇಲೆ ದೇವರು ತನ್ನ ಪ್ರೀತಿಯನ್ನು ಮಿತಿಯಿಲ್ಲದೆ ಸುರಿಸುವವನಾಗಿದ್ದಾನೆ. ಅದಕ್ಕೆ ಆತನು ಅಪೇಕ್ಷಿಸುವುದು ಅವರ ಪ್ರೀತಿ ಮತ್ತು ಸ್ತೋತ್ರ.

ನಾವು ಪಾಪಮಾಡದೇ ಹೋಗಿದ್ದರೂ ನಮ್ಮನ್ನು ಕೆಲವು ಕಾಲ ಮಾತ್ರ ಜೀವಿಸುವ ಸೃಷ್ಟಿಗಳಾಗಿ ಸೃಷ್ಟಿಸುವ ಹಕ್ಕು ದೇವರಿಗಿದೆ. ಅದಕ್ಕಾಗಿಯೇ ಕೆಳಮಟ್ಟದ ಪ್ರಾಣಿಗಳನ್ನು ಸೃಷ್ಟಿಸಿರುವನು. ಮಾನವರು ಕೆಲವು ಕಾಲ ಆತನ ಆಶೀರ್ವಾದದ ಸಂತೋಷವನ್ನು ಅನುಭವಿಸುವಂತೆ ಮಾಡಿ ಅನಂತರ ಹೆಸರಿಲ್ಲದಂತೆ ಅಳಿಸಿ ಬಿಡುವ ಹಕ್ಕು ದೇವರಿಗಿದೆ.

ಹಾಗೆ ನೋಡಿದರೆ ಕ್ಷಣಿಕವಾಗಿ ಜೀವಿಸುವ ಭಾಗ್ಯ ದೇವರ ಅನುಗ್ರಹವೇ. ಈಗ ನಾವು ಪಾಪಮಾಡಿದ್ದರೂ ಅದರಿಂದ ನಮಗೆ ರಕ್ಷಣೆಯುಂಟಾಗುವುದು ದೇವರ ಕೃಪೆಯಿಂದಲೇ. ಯೇಸುವು ಮತ್ತು ಆತನ ದೇಹವೆಂಬ ಮದಲಗಿತ್ತಿಯು ದೈವಸ್ವಭಾವದಲ್ಲಿ ಪಾಲು ಹೊಂದುವುದು ದೇವರ ಕೃಪೆಯಿಂದಲೇ. ಆದ್ದರಿಂದ ದೇವರು ನಮ್ಮನ್ನು ಇಟ್ಟಿರುವ ಸ್ಥಿತಿಯಲ್ಲಿಯೇ ಆತನಿಗೆ ಕೃತಜ್ಞತಾ ಸ್ತುತಿ ಮಾಡೋಣ. ದೇವದೂತರು ತಪ್ಪು ಮಾಡಿದರೆ ಅವರೂ ಸಹ ನಾಶಹೊಂದಬಹುದು. ಮಾನವರಾದ ನಾವು ದೇವದೂತರಾಗುವುದಕ್ಕೆ ಹಕ್ಕಿಲ್ಲ. ಇದೇ ರೀತಿ ಸೈತಾನನ ಗರ್ವವು ಅವನ ಅವನತಿಯನ್ನು ತಂದುದಲ್ಲದೆ ಮುಂದೆ ಅವನು ನಾಶವಾಗಿ ಹೋಗುತ್ತಾನೆ. ಯೆಶಾಯ 14:14 'ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿ ಕೊಳ್ಳುವವನು ಹೆಚ್ಚಿಸಲ್ಪಡುವನು ಲೂಕ 14:11.

ತಪ್ಪಭಿಪ್ರಾಯಗಳಿಂದ ಸತ್ಯವೇದದ ಹೇಳಿಕೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ತಮ್ಮದೇ ಆದ ಊಹೆಗಳಿಂದ ಗೊಂದಲ ಉಂಟುಮಾಡಿಕೊಂಡಿರುವರು. ಸಭೆಯನ್ನು ಪ್ರತ್ಯೇಕಿಸುವುದು ಎಂದರೇನು? ಅದಕ್ಕಿರಬೇಕಾದ ಅರ್ಹತೆಗಳೇನು? ಯಾರು ಅದಕ್ಕೆ ಬಾಧ್ಯರು ಎಂಬ ಅನೇಕ ಪ್ರಶ್ನೆಗಳನ್ನು ಕೇಳುವವರಾಗಿರುವರು, ಆದರೆ ಅದು ದೇವರ ಇಚ್ಛೆ. ತಾನು ನಡೆಸುವ ಒಂದು ಕಾರ್ಯಕ್ಕಾಗಿ ತನಗೆ ಮನ ಬಂದವರನ್ನು ಆರಿಸಿಕೊಳ್ಳುವ ಹಕ್ಕು ಅವನಿಗಿದೆ. ತನ್ನ ಸೃಷ್ಟಿಗಳಲ್ಲಿ ಕೆಲವರನ್ನು ದೇವದೂತರನ್ನಾಗಿಯೂ, ಕೆಲವರನ್ನು ಮಾನವರನ್ನಾಗಿಯೂ ಕೆಲವನ್ನು ಪ್ರಾಣಿ ಪಕ್ಷಿಗಳನ್ನಾಗಿ ಮಾಡಿದ ಹಾಗೆ ಕೆಲವರನ್ನು ದೈವ ಸ್ವಭಾವಕ್ಕೇರಿಸಿ ತನ್ನ ಸೇವಕರನ್ನಾಗಿ ಮಾಡಿಕೊಳ್ಳುವ ಹಕ್ಕು ಆತನಿಗಿದೆ. ಯಾರು ಆತನ ಅನುಗ್ರಹಕ್ಕೆ ಪಾತ್ರರಾಗುವರೋ ಅವರು ಆ ಕೃಪೆಯನ್ನು ಹೊಂದುವರು. 'ಆದುದರಿಂದ ದೇವರ ದಯವು ಮನುಷ್ಯರು ಇಚ್ಛೈಸುವುದರಿಂದಾಗಲಿ ಪ್ರಯತ್ನಿಸುವುದರಿಂದಾಗಲಿ ದೊರೆಯದೆ ದೇವರು ಕರುಣಿಸುವುದರಿಂದಲೇ ದೊರೆಯುತ್ತದೆ.' ರೋಮಾ 9:16 ಆರಿಸಿಕೊಂಡವರು ಇತರರಿಗಿಂತ ಉತ್ತಮರು ಎಂದು ಅವರಿಗೆ ದೈವ ಸ್ವಭಾವವನ್ನು ಪಡೆಯಲಿಲ್ಲ. ಪಾಪಮಾಡದೇ ಇದ್ದ ದೇವದೂತರನ್ನು ದೈವ ಸ್ವಭಾವಕ್ಕೇರಿಸಲಿಲ್ಲ. ಪಾಪದಿಂದ ರಕ್ಷಣೆಯುಂಟಾದವರನ್ನು ದೈವ ಸ್ವಭಾವಕ್ಕೆ ಕರೆದನು. ದೇವರು ತನ್ನ ಇಷ್ಟದಂತೆ ಕಾರ್ಯನಡೆಸುತ್ತಾನೆ. ತನ್ನ ಉದ್ದೇಶವನ್ನು ಪೂರೈಸುವವರನ್ನು ಆತನು ಅನುಗ್ರಹಿಸುತ್ತಾನೆ. ಆದುದರಿಂದ 'ಎಲೋ ಮನುಷ್ಯನೇ ದೇವರಿಗೆ ಎದುರು ಮಾತಾಡುವುದಕ್ಕೆ ನೀನು ಎಷ್ಟರವನು? ರೂಪಿಸಲ್ಪಟ್ಟದ್ದು ರೂಪಿಸಿದವನಿಗೆ ನನ್ನನ್ನು ಹೀಗೇಕೆ ಮಾಡಿದೆ ಎಂದು ಕೇಳುವುದುಂಟೇ? ಒಂದೇ ಮುದ್ದೆಯಿಂದ ಉತ್ತಮವಾದ ಬಳಕೆಗೆ ಒಂದು ಪಾತ್ರೆಯನ್ನು ಹೀನವಾದ ಬಳಕೆಗೆ ಮತ್ತೊಂದು ಪಾತ್ರೆಯನ್ನು ಮಾಡುವುದಕ್ಕೆ ಕುಂಬಾರನಿಗೆ ಮಣ್ಣಿನ ಮೇಲೆ ಅಧಿಕಾರವಿಲ್ಲವೋ?' ರೋಮಾ. 9:20, 21, ಎಲ್ಲವೂ ದೇವರ ಶಕ್ತಿಯಿಂದಲೇ ಸೃಷ್ಟಿಸಲ್ಪಟ್ಟವು. ಅದರಲ್ಲಿ ಕೆಲವು ಮೇಲ್ಮಟ್ಟದ ಮಾನಸನ್ಮಾನಗಳನ್ನು ಹೊಂದುವವು. ಕೆಲವು ಕಡಿಮೆ ಮಟ್ಟದ ಸನ್ಮಾನಗಳನ್ನು ಪಡೆಯುವವು. 'ಇಸ್ರಾಯೇಲ್ಯರ ಸದಮಲ ಸ್ವಾಮಿಯೂ ಸೃಷ್ಟಿಕರ್ತನೂ ಆದ ಯೆಹೋವನ ಮಾತನ್ನು ಕೇಳಿರಿ : 'ಭವಿಷ್ಯತ್ತುಗಳ ವಿಷಯವಾಗಿ ನನ್ನನ್ನು ವಿಚಾರಿಸಿರಿ ನಾನೇ ನಿರ್ಮಿಸಿದ ಮಕ್ಕಳ ವಿಷಯದಲ್ಲಿ ನನಗೆ ಏನನ್ನು ವಿಧಿಸಿದರೂ ವಿಧಿಸಿರಿ; ಭೂಲೋಕವನ್ನುಂಟುಮಾಡಿ ಅದರಲ್ಲಿ ಮನುಷ್ಯರನ್ನು ಸೃಷ್ಟಿಸಿದವನು ನಾನೇ. ನನ್ನ ಕೈಗಳೇ ಆಕಾಶಮಂಡಲವನ್ನು ಹರಡಿದವು; ನಕ್ಷತ್ರ ಸೈನ್ಯಕ್ಕೆ ಅಪ್ಪಣೆಯನ್ನು ಕೊಟ್ಟವನೂ ನಾನೆ' 'ಭೂಲೋಕವನ್ನು ನಿರ್ಮಿಸಿ ರೂಪಿಸಿ ಸ್ಥಾಪಿಸಿದನು; ಅದನ್ನು ಶೂನ್ಯ ಸ್ಥಾನವಾಗಿರಲೆಂದು ಸೃಷ್ಟಿಸದೆ ಜನ ನಿವಾಸಕ್ಕಾಗಿಯೇ ರೂಪಿಸಿದನು. ನಾನೇ ಯೆಹೋವನು, ಇನ್ನು ಯಾವನು ಇಲ್ಲ' ಯೆಶಾಯ 45:11,12, 18 ದೇವರಿಗೆ ಅಜ್ಞಾಪಿಸಲು ಯಾರಿಗೂ ಸಾಧ್ಯವಿಲ್ಲ. ಭೂಮಿಯನ್ನು ನರರಿಗಾಗಿ ಸೃಷ್ಟಿಸಿದನು. ಪುನರುತ್ಥಾನಹೊಂದಿದ ಜನರು ಅದರಲ್ಲಿ ವಾಸವಾಗಿರಬೇಕೆಂದು ಆತನ ಇಷ್ಟ. ತನಗೆ ಇಷ್ಟ ಬಂದವರನ್ನು ದೈವಿಕ ಸ್ವಭಾವಕ್ಕೇರಿಸುವುದೂ ಆತನ ಇಷ್ಟ. ದೇವರಿಗೆ ಎದುರು ಮಾತಾಡುವುದು ಅನ್ಯಾಯ. ದೇವರ ಕಾರ್ಯವನ್ನು ಪರೀಕ್ಷಿಸುವ ಅಪರಾಧವನ್ನು ಮಾಡದೆ ಇರುವ ಹಾಗೆ ಪ್ರಾರ್ಥಿಸೋಣ.

ಮಾನವ ಜನಾಂಗವು ದೇವರು ಸೃಷ್ಟಿಸಿದ ಮಕ್ಕಳು. ಅವರಿಗಾಗಿರುವ ದೇವರ ಯೋಜನೆಯನ್ನು ಆತನ ವಾಕ್ಯವು ಸ್ಪಷ್ಟವಾಗಿ ತಿಳಿಸುತ್ತದೆ. ಮೊದಲನೆ ಮಾನವನಾದ ಆದಾಮನು ಭೂಮಿಗೆ ಸಂಬಂಧಪಟ್ಟವನು. ಹಾಗೆಯೇ ನಾವು ಕೂಡ ಭೂಮಿಗೆ ಸಂಬಂಧಿಸಿದವರಾಗಿದ್ದೇವೆ. ಪೌಲನು 1 ಕೊರಿ. 15:38, 44 ರಲ್ಲಿ ವಿಷದವಾಗಿ ತಿಳಿಸಿರುವನು. ಹಾಗೆಯೇ ದಾವೀದನು ಕೀರ್ತ 8:4–8ರಲ್ಲಿ ಮಾನವರನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟ' ಎಂದು ತಿಳಿಸಿರುವನು. ಹಾಗೆಯೇ ಪೇತ್ರನು, ನಮ್ಮ ಕರ್ತನು, ಎಲ್ಲಾ ಪ್ರವಾದಿಗಳು ಹೇಳಿರುವಂತೆ ಮುಂದೆ ಮಾನವರು ಉತ್ತಮರಾಗಿ ಮೊದಲು ಆದಾಮನು ಹೊಂದಿದ್ದ ಅಧಿಕಾರವನ್ನು ಹೊಂದುವರು. ಅ.ಕೃ. 3:19–21. ದೇವರು ಮಾನವರಿಗಾಗಿಟ್ಟಿರುವ ಬಹುಮಾನ ಇದೇ. ಎಂಥ ಅದ್ಭುತವಾದ ಭಾಗ! ಮುಂದೆ ದೇವರ ರಾಜ್ಯದಲ್ಲಿ ದುಃಖವಾಗಲಿ, ಸಂಕಟವಾಗಲಿ ಇರುವುದಿಲ್ಲ. ಎಲ್ಲರ

ಹೃದಯದಲ್ಲಿ ಪ್ರೀತಿಯು ತುಂಬಿರುತ್ತದೆ. ಇತರರ ಮಾತಿಗೆ ಪ್ರೀತಿಯ ಉತ್ತರವನ್ನೇ ಕೊಡುತ್ತದೆ. ಪ್ರತಿಕಾರ್ಯವು ದಯೆಯಿಂದ ತುಂಬಿರುತ್ತದೆ. ದೇಹವು ಕುಂದುವುದೇ ಇಲ್ಲ. ಅಲ್ಲಿ ರೋಗವೆಂಬುದು ಇನ್ನಿಲ್ಲ, ನೋವಿಲ್ಲ. ಅವುಗಳ ಭಯವೂ ಇರುವುದಿಲ್ಲ. ಮಾನವನ ಪರಿಪೂರ್ಣತೆಯ ಸೌಂದರ್ಯವು ಎಲ್ಲಾ ಸೌಂದರ್ಯವನ್ನು ಮೀರಿಸಿರುತ್ತದೆ. ದೈಹಿಕ ಶುದ್ಧತೆ, ನೈತಿಕ ಉತ್ತಮತೆ ಎಲ್ಲವೂ ಆಗಿನ ಉತ್ತಮ ಸಮಾಜವನ್ನೂ ಸೂಚಿಸುತ್ತದೆ. ಇನ್ನು ದುಃಖವಾಗಲಿ ಗೋಳಾಟವಾಗಲಿ ಇರುವುದಿಲ್ಲ; ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು. ಪುನರುತ್ಥಾನದ ಕೆಲಸವು ಪೂರ್ತಿಯಾದ ಮೇಲೆ ಮಾನವನು ಇವೆಲ್ಲವುಗಳನ್ನು ಕಂಡುಕೊಳ್ಳುತ್ತಾನೆ. ಪ್ರಕ. 21:4 ಇದು ಮಾನವ ಸಮಾಜದಲ್ಲಾಗುವ ಬದಲಾವಣೆ. ಭೂಮಿಯು ಸಹ ಏದೇನ್ ಉದ್ಯಾನವನದಂತೆ ಕಂಗೊಳಿಸುವುದು. ಮುಳ್ಳುಗಳು ಪೊದೆಗಳು ಬೆಳೆಯುವುದಿಲ್ಲ. ಮನುಷ್ಯನು ತನ್ನ ಆಹಾರಕ್ಕಾಗಿ ಬೆವರುಸುರಿಸಿ ಕಷ್ಟಪಡಬೇಕಾಗಿಲ್ಲ. ಭೂಮಿಯ ಉತ್ಪನ್ನ ಹೆಚ್ಚುವುದು.ಅರಣ್ಯವೂ ಮರುಭೂಮಿಯೂ ಆನಂದಿಸುವುವು: ಒಣನೆಲವು ಹರ್ಷಿಸಿ ತಾವರೆಯಂತೆ ಕಳಕಳಿಸುವುದು. ಪ್ರಾಣಿಗಳೆಲ್ಲಾ ಮಾನವನಿಗೆ ವಿಧೇಯವಾಗಿರುವವು. ಪ್ರಕೃತಿಯು ಮಾನವನನ್ನು ಕೈಬೀಸಿ ಕರೆಯುವುದು. ಅದರಿಂದ ಮಾನವನು ದೇವರ ಪ್ರೀತಿ, ಶಕ್ತಿ ಮತ್ತು ಮಹಿಮೆಯನ್ನು ಕಂಡುಕೊಂಡು ಆನಂದಿಸುವನು. ಅಲ್ಲಿ ಮಾನವನು ಯಾವ ಹೊಸ ಸಂಗತಿಯನ್ನು ಆಶಿಸುವುದಿಲ್ಲ. ಹೊಸದನ್ನು ಆಶಿಸುವುದು ದೇವರ ಮಕ್ಕಳ ಲಕ್ಷಣವಲ್ಲ. ಯಾಕೆಂದರೆ ದೇವರಿಗೆ ಎಲ್ಲವೂ ಹಳೆಯದು. ಹಳೆಯದರ ಶ್ರೇಷ್ಠತೆಯನ್ನು ದೇವರು ಅಪೇಕ್ಷಿಸುವನು. ಆಗ ಮಾನವನು ದೇವರಪ್ರತಿರೂಪದಲ್ಲಿರುತ್ತಾನೆ. ತನ್ನ ಸುತ್ತಲಿರುವ ಮಹಿಮೆಯ ವಸ್ತುಗಳನ್ನು ನೋಡುವುದರಲ್ಲೇ ಸಂತೋಷಪಡುತ್ತಾನೆ. ತಾನು ಹೊಂದಿರುವದಕ್ಕಿಂತ ಹೆಚ್ಚಿನದೇನನ್ನೂ ಆಶಿಸುವುದಿಲ್ಲ. ಇದಕ್ಕೆ ಉದಾಹರಣೆ ಈಗಿನ ಸತ್ಯಸಭೆಯಾಗಿದೆ. ಈಗಿನ ಐಶ್ವರ್ಯವಂತರು ದೇವರ ರಾಜ್ಯದಲ್ಲಿ ಸೇರುವುದು ಕಷ್ಟ. ಇಂದಿನ ಕೆಟ್ಟಲೋಕದಲ್ಲಿ ಒಳ್ಳೆಯತನವು ಬಂಧಿಸಲ್ಪಟ್ಟಿರುವುದರಿಂದ ದೇವರ ಸಹಾಯದಿಂದ ಆತ್ಮೀಕ ವಾಗ್ದಾನವನ್ನು ಎದುರು ನೋಡಬೇಕಾಗಿರುವುದು. ಆದಿಯಲ್ಲೇ ಮಾನವನು ಪಾಪಕ್ಕೆ ಒಳಗಾದುದರಿಂದ ಜಗದುತ್ಪತ್ತಿಗೆ ಮುಂಚೆ ಕ್ರೈಸ್ತಸಭೆಯನ್ನು ಆರಿಸಿಕೊಳ್ಳಲು ನಿರ್ಧರಿಸಿದನು. ಎಫೆಸ. 1:4–5 ಈ ಸುವಾರ್ತಾ ಯುಗದಲ್ಲಿ ಕ್ರೈಸ್ತಸಭೆಯನ್ನು ನಂಬಿಕೆಯಿಂದ ನೀತಿವಂತರನ್ನಾಗಿ ಮಾಡಿ, ಮಹಿಮೆಪಡಿಸಿ ಯೇಸುವಿನೊಂದಿಗೆ ದೈವ ಸ್ವಭಾವದಲ್ಲಿ ಪಾಲುಗಾರರಾಗುವುದಕ್ಕೆ ಕರೆದಿರುತ್ತಾನೆ. ಮುಂದೆ ಇವರು ಕ್ರಿಸ್ತನ ರಾಜ್ಯಕ್ಕೆ ಭಾದ್ಯರಾಗಿ ಸಮಾಧಾನವೂ ನೀತಿಯೂ ನೆಲೆಸುವಂತೆ ಮಾಡುವರು. ಈ ಸತ್ಯಸಭೆಗೆ ಒಬ್ಬೊಬ್ಬರನ್ನಾಗಿ ಪರೀಕ್ಷಿಸಿ ಆಯ್ದುಕೊಳ್ಳುತ್ತಿಲ್ಲ. ಜಗದುತ್ಪತಿಗೆ ಮೊದಲೇ ಈ ಸುವಾರ್ತಾ ಯುಗದಲ್ಲಿ ಒಂದು ಗುಂಪನ್ನು ಆರಿಸಿಕೊಂಡಿರುವನು. ಈಗ ಆ ಸತ್ಯ ಮಕ್ಕಳನ್ನು ಪರೀಕ್ಷಿಸಲಾಗುತ್ತಿದೆ. ಇವರು ಪ್ರಪಂಚದ ಎಲ್ಲಾ ಆಶೆಗಳನ್ನು ತೊರೆದು ಸಾಯುವವರೆಗೆ ನಂಬಿಕೆಯಿಂದ ವಿಧೇಯರಾಗಿರಬೇಕು. ಯುಗದ ಸಮಾಪ್ತಿಯಲ್ಲಿ ಇವರನ್ನೆಲ್ಲಾ ಒಂದುಗೂಡಿಸಿ ದೇವರ ಕಾರ್ಯವನ್ನು ನಡೆಸುವುದಕ್ಕಾಗಿ ಮಹಿಮೆ ಪಡಿಸಲಾಗುವುದು.

ರೋಮಾ. 8:28–31ರಲ್ಲಿ ಬಳಸಿರುವ ಮಹಿಮೆ ಎಂಬ ಪದವು ಗ್ರೀಕ್ ಭಾಷೆಯಲ್ಲಿ ಗೌರವ ಅಥವಾ ಸನ್ಮಾನ ಎಂಬಅರ್ಥವನ್ನು ಕೊಡುತ್ತದೆ. ಆದುದರಿಂದ ಸಭೆಯನ್ನು ಆರಿಸಿಕೊಂಡಿರುವುದು ಒಂದು ಗೌರವ. ಅಂತಹ ಒಂದು ಗೌರವ ಸ್ಥಾನವನ್ನು ಪಡೆಯಲು ಯಾವ ಮನುಷ್ಯನಿಂದಲೂ ಸಾಧ್ಯವಿಲ್ಲ.ಯೇಸುವು ಸಹ ಈ ಸ್ಥಾನಕ್ಕೆ ಕರೆಯಲ್ಪಟ್ಟವನು. ಯೇಸು ಮಹಿಮೆ ಹೊಂದಿದ ಮೇಲೆ ನನಗೆ ನೀನು ಮಗನು ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ. ಎಂದು ದೇವರು ಗೌರವಿಸಿರುವನು. ಇದೇ ರೀತಿ ಸತ್ಯ ಸಭೆಯು ಕ್ರಿಸ್ತನ ಜೊತೆ ಕೆಲಸದವರಾದಾಗ ಯೆಹೋವನಿಂದ ಗೌರವ ಪಡೆಯುವರು. ಸತ್ಯ ಮಕ್ಕಳ ತಲೆಯಾದ ಯೇಸುಕ್ರಿಸ್ತನಂತೆ ಸುಚಿತ್ತದ ಪ್ರಕಾರ ಸತ್ಯ ಬೋಧನೆಯ ವಾಕ್ಯದಿಂದ ಅನುಭವವನ್ನು ಪಡೆಯುತ್ತಾರೆ. ಯಾಕೋಬ 1:18 ಇವರು ಉತ್ತಮರಾಗಿಯೂ ಶುದ್ಧರಾಗಿಯೂ ಇರಬೇಕು. ಪಾಪಿಗಳಾದ ಮಾನವರನ್ನು ಈ ಉತ್ತಮ ಬಾಧ್ಯತೆಗೆ ಕರೆದದ್ದು ಮಾತ್ರವಲ್ಲ ಅವರ ಪಾಪನಿವಾರಣೆಗಾಗಿ ತನ್ನ ಒಬ್ಬನೇ ಮಗನನ್ನೂ ಕಳುಹಿಸಿಕೊಟ್ಟನು. ತನ್ನ ಮಗನ ಮರಣದ ಮೂಲಕ ಈ ಗೌರವ ಸ್ಥಾನಕ್ಕೆ ನಮ್ಮನ್ನು ಕರೆಯುತ್ತಿರುವನು. ಚಿಕ್ಕ ಹಿಂಡನ್ನು ಆರಿಸಿಕೊಳ್ಳುವುದಕ್ಕಾಗಿ ದೇವರು ಒಂದು ಕರೆಕೊಟ್ಟನು. ಎಲ್ಲರೂ ಕರೆಯಲ್ಪಡಲಿಲ್ಲ. ಅನೇಕರು ಕರೆಯಲ್ಪಟ್ಟರು. ಯೇಸುವಿನ ಬೋಧಕೋದ್ಯೋಗದ ಸಮಯದಲ್ಲಿ ಈ ಬೋಧನೆಯು ಇಸ್ರಾಯೇಲ್ಯರಿಗೆ ಕೊಡಲ್ಪಟ್ಟಿತು. ತರುವಾಯ ಅನೇಕರನ್ನು ಔತಣಕ್ಕೆ ಕರೆಯಲಾಯಿತು. ಆದರೆ ಯಾರು ಮದುವೆಯ ಔತಣಕ್ಕೆ ಮದುವೆಯ ಬಟ್ಟೆಯನ್ನು ಧರಿಸಿಕೊಂಡು (ಕ್ರಿಸ್ತನ ನೀತಿ) ಬರುವರೋ ಅಂಥವರಿಗೆ ಮಾತ್ರ ಔತಣದಲ್ಲಿ ಪಾಲುಂಟು ಲೂಕ 14:23 ಅವರನ್ನು ದೈವಸ್ವಭಾವಕ್ಕೆ ಏರಿಸುವನು. ಯಾರು ಮಹಿಮೆಯ ಕುರಿಮರಿಯೊಂದಿಗೆ ನಿಲ್ಲುವುದಕ್ಕೆ ಯೋಗ್ಯರೋ ಅವರು ದೇವರಾದುಕೊಂಡವರೂ ನಂಬಿಗಸ್ಥರೂ ಆಗುತ್ತಾರೆ. ಪ್ರಕ 14:1;17:14 ಕರೆಯು ಖಂಡಿತ; ಸತ್ಯಸಭೆಯನ್ನು ಆರಿಸುವಲ್ಲಿ ದೇವರ ಮನಸ್ಸು ಸ್ಥಿರವಾದದ್ದು, ಆದರೆ ನಿಯಮಗಳನ್ನು ಪಾಲಿಸುವವನು ಮಾತ್ರ ಇದರಲ್ಲಿ ಸೇರುವನು. 'ಹೀಗಿರಲಾಗಿ ದೇವರ ವಿಶ್ರಾಂತಿಯಲ್ಲಿ ಸೇರಬಹುದೆಂಬ ವಾಗ್ದಾನವು

ಇನ್ನೂ ಇರುವಲ್ಲಿ ನಿಮ್ಮೊಳಗೆ ಯಾವನಾದರೂ ಆ ವಾಗ್ದಾನದ ಫಲವನ್ನು ಹೊಂದದೆ ತಪ್ಪುವವನಾದನೋ ಎಂದು ನಾವು ಭಯ ಪಡೋಣ ಇಬ್ರಿ. 4:1 ಯಾರು ಆತನ ಕರೆಗೆ ಓಗೊಟ್ಟು ಆತನ ಚಿತ್ತವನ್ನು ನೆರವೇರಿಸಲು ಇಷ್ಟಪಡುವವರೋ ಅಂಥವರಿಗೆ ದೇವರ ಅನುಗ್ರಹವಿರುವುದು. ದೇವರ ಚಿತ್ತ ಆತನ ಕೃಪೆ ಎಲ್ಲವೂ ಒಳ್ಳೆಯದಕ್ಕೆಂದು ತಿಳಿಯೋಣ. ಮಾನವ ಮತ್ತು ಆತ್ಮೀಕ ಸ್ವಭಾವಗಳು ವಿಂಗಡವಾದದ್ದೆಂದು ಸತ್ಯವೇದದ ಸಹಾಯದಿಂದ ತಿಳಿದುದಾಯಿತು. ಅವೆರಡನ್ನು ಸೇರಿಸುವುದು ದೇವರ ಯೋಜನೆಯಲ್ಲ; ಆದುದರಿಂದ ಕ್ರಿಸ್ತನು ಯಾವ ರೀತಿ ಬದಲಾವಣೆ ಹೊಂದಿದನು ಮುಂದೆ ಸಭೆ ಯಾವ ರೀತಿ ಬದಲಾವಣೆ ಹೊಂದುತ್ತದೆ ಎಂಬುದನ್ನು ಅರಿಯುವುದು ಆವಶ್ಯಕ. ಕ್ರಿಸ್ತನು ಯಾವ ನಿಯಮಗಳನ್ನು ಅನುಸರಿಸಿದನೋ ಅದೇ ನಿಯಮಗಳನ್ನು ಸಭೆಯೂ ಅನುಸರಿಸಬೇಕು 2 ಪೇತ್ರ 1:4 ತನ್ನ ಹೆಜ್ಜೆ ಜಾಡಿನಲ್ಲಿಯೇ ನಡೆದು ಯಜ್ಞಾರ್ಪಿತವಾಗಬೇಕೆಂದು ಆತನು ತೋರಿಸಿಕೊಟ್ಟಿರುವನು. 1 ಪೇತ್ರ 2:21 ಯಾರು ಸುವಾರ್ತಾಯುಗದಲ್ಲಿ ಮಾನವ ಸ್ವಭಾವವನ್ನು ಯಜ್ಞವಾಗಿ ಅರ್ಪಿಸುವರೋ ಅಂಥವರಿಗೆ ಬಹುಮಾನಾಗಿ ದೈವೀಕ ಸ್ವಭಾವದಲ್ಲಿ ಪಾಲುಕೊಡಲಾಗುವುದು. ಅವರು ಪುನರುತ್ಥಾನದಲ್ಲಿ ಮಾನವನ ಪರಿಪೂರ್ಣತೆಯಲ್ಲಿ ಭಾಗಿಗಳಾಗದೆ ಕ್ರಿಸ್ತನೊಂದಿಗೆ ದೈವ ಸ್ವಭಾವದಲ್ಲಿ ಭಾಗಿಗಳಾಗಿ ಸಂತೋಷ ಮಹಿಮೆಯನ್ನು ಹೊಂದುವರು. ರೋಮಾ. 8:17; 2 ತಿಮೋ. 2:12 ಮಾನವನು ಹುಟ್ಟಿ ಬೆಳೆದಹಾಗೆ ಈ ಹೊಸ ಸ್ವಭಾವವು ಅವನಲ್ಲಿ ಹುಟ್ಟಿ ಬೆಳೆಯುವುದು. ಅವರ ಹೊಸದಾಗಿ ಹುಟ್ಟಿದವರು ದೇವ ಜನರು ಸತ್ಯವಾಕ್ಯದಿಂದ ದೇವರಿಗೆ ಹುಟ್ಟಿದವರಾಗಿರುತ್ತಾರೆ. ಆತನ ವಾಕ್ಯದಿಂದ ದೈವ ಜೀವನದ ಪ್ರೇರೇಪಣೆಯನ್ನು ಹೊಂದುತ್ತಾರೆ. 1 ಪೇತ್ರ 1:3;1 ಯೋಹಾನ 5:18: ಯಾಕೋಬ 1:18 ಅವರು ನಂಬಿಕೆಯಿಂದ ನೀತಿವಂತರಾದ ಮೇಲೆ ಅವರ ದೇಹಗಳನ್ನು ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸುವರು. ಇದೇ ಅವರ ವಿವೇಕ ಪೂರ್ವಕವಾದ ಆರಾಧನೆ. ರೋಮಾ. 12:1 ಅವರು ತಮ್ಮ ದೇಹಗಳನ್ನು ಸಜೀವ ಯಜ್ಞವಾಗಿ ಅರ್ಪಿಸಿದ ಮೇಲೆ ಆತ್ಮೀಕ ಜೀವಿಗಳಾಗುತ್ತಾರೆ. ಅವರಲ್ಲಿ ನೂತನ ಸ್ವಭಾವವುಂಟಾಗಿ ನೂತನ ಮನಸ್ಸಿನಿಂದ ಕಾರ್ಯಮಾಡುತ್ತಾರೆ. ಆಗ ಅವರು ದೇವರ ದೃಷ್ಟಿಯಲ್ಲಿ ನೂತನ ಸೃಷ್ಟಿಗಳೆಂದೆಣಿಸಲ್ಪಡುತ್ತಾರೆ. ಹೊಸ ಸ್ವಭಾವ ಬಂದು ಹಳೆಯ ಸ್ವಬಾವ ಅಳಿಸಿ ಹೋಗುತ್ತದೆ. ಆಗ ಅವರು ಪವಿತ್ರಾತ್ಮನ ಸಹಾಯದಿಂದ ದೇವರ ಯೋಜನೆಗಳನ್ನು ತಿಳಿದುಕೊಳ್ಳುತ್ತಾರೆ. ಮರಣಾಧೀನವಾದ ದೇಹವು ದೇವರ ಕಾರ್ಯಗಳಿಗೋಸ್ಕರ ಬಲಹೊಂದುತ್ತದೆ. ರೋಮಾ. 8:11 ಅನಂತರ ಆತ್ಮೀಕ ದೇಹವನ್ನು ಪಡೆದು ಎಲ್ಲಾ ವಿಧದಲ್ಲಿ ದೈವ ಸ್ವಭಾವಕ್ಕೆ ಹೊಂದಿಕೊಳ್ಳುತ್ತದೆ. ಪುನರುತ್ಥಾನದಲ್ಲಿ ನೂತನ ಸೃಷ್ಟಿಯ ಜನನದ ಹಾಗೆ ಈ ಪುನರುತ್ಥಾನವನ್ನು ಪ್ರಥಮ ಪುನರುತ್ಥಾನ ಎಂದು ಕರೆಯಲಾಗಿದೆ. ಕೊಲೆಸ್ಸ 1:18; ಪ್ರಕಟನೆ 20:6 ಪುನರುತ್ಥಾನದವರೆಗೆ ಇವರು ಆತ್ಮೀಕ ಜೀವಿಗಳಾಗುವುದಿಲ್ಲ. ರೋಮಾ. 8:23–25 ಎಫೆಸ. 1:13, 14; ರೋಮಾ. 6:10, 11 ಆತ್ಮೀಕ ಜೀವಿಗಳಾದ ಮೇಲೆ ದೇಹವಿರುವುದಿಲ್ಲ. ಯಾಕೆಂದರೆ ಆತ್ಮನಿಂದ ಹುಟ್ಟಿದ್ದು ಆತ್ಮವೇ. ಆತ್ಮೀಕವಾಗಿ ಹುಟ್ಟುವುದಕ್ಕೆ ಮೊದಲು ಆತ್ಮನಿಗೆ ಪ್ರತಿಷ್ಠಿತವಾಗಿರಬೇಕು. ಹೇಗೆಂದರೆ ದೇಹದಿಂದ ಹುಟ್ಟುವುದು ದೇಹವನ್ನು ಪಡೆಯುವುದು. ಹೀಗೆ ಆದಾಮನಿಂದ ಹುಟ್ಟಿದ ಮಾನವರು ಮೊದಲು ದೇಹವನ್ನು ಪಡೆದು ಹುಟ್ಟಿದರು. ಆದರೆ ಕೆಲವರು ದೇವರ ವಾಕ್ಯದಿಂದ ದೇವರಾತ್ಮನನ್ನು ಪಡೆದು ಪ್ರಥಮ ಪುನರುತ್ಥಾನದಲ್ಲಿ ಆತ್ಮೀಕ ಜೀವಿಗಳಾಗುತ್ತಾರೆ. ನಾವು ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು ಧರಿಸಿಕೊಂಡ ಪ್ರಕಾರ ಪರಲೋಕದಿಂದ ಬಂದಾತನ ಸಾರೂಪ್ಯವನ್ನು ಧರಿಸಿಕೊಳ್ಳಬೇಕು. 1 ಕೊರಿ. 15:49; ಇಬ್ರಿಯ 6:6 ಇದನ್ನೇ ಪೌಲನು ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ ಎಂದು ಬರೆಯುತ್ತಾನೆ. ರೋಮಾ. 12:2 ಪೌಲನ ಈ ಮಾತುಗಳು ಸಹೋದರರಿಗೆ ಮಾತ್ರ ಅನ್ವಯಿಸುತ್ತದೆಯೇ ಹೊರತು ಇತರರಿಗಲ್ಲ. ಅಂದರೆ ಅವರಲ್ಲಿ ಒಂದು ರೂಪಾಂತರವಾಗಬೇಕು. ಪ್ರಾಪಂಚಿಕದಿಂದ ಆತ್ಮೀಕಕ್ಕೆ ಬದಲಾವಣೆಯನ್ನು ಆತನು ಒತ್ತಿ ಹೇಳುವವನಾಗಿರುವನು. ಇದು ನೂತನ ಸೃಷ್ಟಿಗೂ ಸಹೋದರರಿಗೂ ಇರುವ ವ್ಯತ್ಯಾಸವನ್ನು ಸೂಚಿಸುತ್ತದೆ. ಸಹೋದರರು ಭೂಲೋಕದವರು, ನಂಬಿಕೆಯುಳ್ಳವರು. ಸಮಸ್ತವನ್ನು ಸರಿಮಾಡುವ ಕಾರ್ಯದಲ್ಲಿ ಸಂತೋಷಪಡುತ್ತಾರೆ. ಆದರೆ ನೂತನ ಸೃಷ್ಟಿಯಾದವರು ಕ್ರಿಸ್ತನಂತೆ ಅವರು ಈ ಲೋಕದವರಲ್ಲ ಅವರ ದೃಷ್ಟಿಯೂ ದೇವರ ಬಲಗಡೆಯಲ್ಲಿ ಆಸೀನನಾಗಿರುವ ಕ್ರಿಸ್ತನಲ್ಲಿ ನೆಲಸಿರುವುದು ಮತ್ತು ಅವರ ದೃಷ್ಟಿಯು ಕಾಣದೆ ಇರುವಂತವುಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ. ಎಲ್ಲವನ್ನು ಜಯಿಸಿದವರು ಕ್ರಿಸ್ತನ ಪ್ರತಿರೂಪದಂತಿರುವರು ಆತನಿರುವ ಪ್ರಕಾರವೇ ಆತನನ್ನು ನೋಡುವವರು ಯೋಹಾನ 3:2 'ಪ್ರಾಕೃತ ದೇಹವಿರುವುದಾದರೆ ಆತ್ಮಿಕ ದೇಹವು ಇರುವುದು' 1 ಕೊರಿ 15:44. ಇದರಿಂದ ತಂದೆಯಾದ ದೇವರು ಕರ್ತನಾದ ಕ್ರಿಸ್ತನು ದೇಹವಿಲ್ಲದೆ ಮಹಾಮನಸ್ಸುಳ್ಳವರು ಎಂದು ಭಾವಿಸಕೂಡದು. ಅವರು ಮಹಿಮಾ ಆತ್ಮೀಕ ಶರೀರಗಳು. ದೈವಸ್ವಭಾವಕ್ಕೇರಿಸಲ್ಪಟ್ಟವರಿಗೆ ಮಾತ್ರ ಅವರು ಗೋಚರವಾಗುವರು. ಮಾನಸಿಕವಾಗಿ ಮಾನವನಿಂದ ಆತ್ಮೀಕಕ್ಕೆ ಬದಲಾವಣೆಯು ಕ್ರಮವಾಗಿ ನಿಧಾನವಾಗಿ ಆಗುವುದು. ಆದರೆ ದೈಹಿಕ ಬದಲಾವಣೆಯು ಒಂದು

ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಆಗುವುದು. 1 ಕೊರಿ 15:52 ಪೌಲನು ಹೇಳುವ ಹಾಗೆ ದೈವಿಕ ಮನಸ್ಸೆಂಬ ಆಸ್ತಿಯು ಮಣ್ಣಿನ ಪಾತ್ರೆಯಲ್ಲಿದೆ. ಮುಂದೆ ಈ ಆಸ್ತಿಯು ಮಹಿಮಾಪಾತ್ರೆಗೆ ಬದಲಾವಣೆಯಾಗುತ್ತದೆ.

ಮನುಷ್ಯನ ಸ್ವಭಾವವು ದೇವರ ಹೋಲಿಕೆಗೆ ಸರಿಯಾಗಿದೆ ಆದಿ. 5:1 ಉದಾ. ದೇವರಿಗೆ ಚಿತ್ತ ಉದ್ದೇಶವಿದೆ. ಅದೇ ಮನುಷ್ಯರಿಗೂ ಮತ್ತು ದೇವದೂತರಿಗೂ ಇದೆ. ದೇವರಿಗೆ ಆಲೋಚಿಸುವ ಶಕ್ತಿಯಿದೆ. ಅದೇ ಎಲ್ಲಾ ಬುದ್ಧಿಜೀವಿಗಳಲ್ಲಿ ಕಂಡುಬರುತ್ತದೆ. ಆದರೆ ಅದು ಮಾನವರ ಮಟ್ಟಕ್ಕಿಂತ ಉತ್ತಮಮಟ್ಟದ್ದಾಗಿದೆ. ದೈವತ್ವವು ಆತ್ಮೀಕ ಸ್ವಭಾವದಲ್ಲಿ ಅತ್ಯಂತ ಮೇಲ್ಮಟ್ಟದ್ದಾಗಿದೆ. ದೇವರಿಗೂ ಆತನ ಸೃಷ್ಟಿಗಳಿಗೂ ಇರುವ ಅಂತರವನ್ನು ಅಳೆಯಲು ಸಾಧ್ಯವೇ ಇಲ್ಲ. ನಮ್ಮ ಮುಂದಿರುವ ಮಹತ್ಕಾರ್ಯಗಳಿಂದ ದೈವಜ್ಞಾನದ ಮಹಿಮೆಯನ್ನು ಕಂಡುಕೊಳ್ಳಬಹುದಷ್ಟೆ. ಆದರೆ ಪರಿಪೂರ್ಣತೆಯನ್ನು ಹೊಂದಿದ ಮೇಲೆ ಅದರ ಮಹಿಮೆಯನ್ನು ಕಂಡುಕೊಳ್ಳಬಹುದು. ಇದೀಗ ಪ್ರಾರಂಭದಲ್ಲಿದ್ದೇವೆ ಅದು ಖಂಡಿತವಾಗಿಯೂ ಮುಕ್ತಾಯವಾಗುವುದು. ಎಫೆಸ. 1:13,14.

ಬದಲಾವಣೆ ಹೊಂದಿದಾಗ ಅದನ್ನು ತಿಳಿದುಕೊಳ್ಳುವುದು ಹೇಗೆ? ನಮ್ಮ ಜೊತೆಯಲ್ಲಿ ಕಷ್ಟಪಟ್ಟವರೂ ಸಹ ಈ ಮಹಿಮೆಯಲ್ಲಿ ಭಾಗಿಗಳಾಗುವರು ಎಂದು ತಿಳಿಯುವುದು ಹೇಗೆ? ಆಗಲೂ ನಮಗೆ ಎಲ್ಲದರ ಅರಿವಾಗುವುದೋ? ಎಂಬ ಪ್ರಶ್ನೆಗಳನ್ನು ಕೆಲವರು ಕೇಳುವವರಾಗಿರುವರು. ಧೈರ್ಯವಾಗಿ ಹೌದು ಎಂದು ಉತ್ತರಿಸಬಹುದು. ಯಾಕೆಂದರೆ ನಾವು ಕ್ರಿಸ್ತನೊಡನೆ ಸತ್ತಪಕ್ಷದಲ್ಲಿ ಆತನೊಡನೆ ಜೀವಿಸುವೆವು. ರೋಮಾ. 6:8 ಪ್ರತಿದಿನ ಸಂಭವಿಸುವ ಬದಲಾವಣೆಗಳಿಂದ ಹಿಂದಿನವುಗಳನ್ನು ಮರೆಯಲು ಸಾಧ್ಯವಿಲ್ಲ. ಇದರಿಂದ ಕ್ರಿಸ್ತನು ಬದಲಾವಣೆಹೊಂದಿದ್ದು ಸುಲಭವಾಗಿ ಅರ್ಥವಾಗುತ್ತದೆ. ಯೇಸು ಮಾನವನಾಗಿದ್ದಾಗ ಹಿಂದಿನವುಗಳನ್ನು ನೆನೆಸಿಕೊಳ್ಳುವವನಾಗಿದ್ದನು. ‘ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು. ಲೋಕ ಉಂಟಾಗುವುದಕ್ಕಿಂತ ಮುಂಚೆ ನಿನ್ನ ಬಳಿಯಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು’ ಯೋಹಾನ 17:5 ಈ ವಾಕ್ಯ ಅದನ್ನು ಸ್ಪಷ್ಟಪಡಿಸುತ್ತದೆ. ಪೌಲನು ಹೇಳುವಂತೆ ಇದ್ದದ್ದರಲ್ಲಿ ದೃಢವಾಗಿರದೆ...ಬದಲಾಯಿಸಿಕೊಳ್ಳೋಣ.

ಸತ್ಯವೇದವು ಭೂಲೋಕದ ವಾಗ್ದಾನ ಮತ್ತು ಪರಲೋಕದ ವಾಗ್ದಾನ ಎರಡನ್ನೂ ಹೊಂದಿದೆ. ಅದರಲ್ಲಿ ಎರಡನೇ ಭಾಗವನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮನ್ನೇ ಸಜೀವಯಜ್ಞವಾಗಿ ಅರ್ಪಿಸಿಕೊಳ್ಳೋಣ. ಪರಲೋಕದ ಆಸ್ತಿಯನ್ನೇ ಹೊಂದಲು ಅಪೇಕ್ಷಿಸುವವರಾಗಿರೋಣ. ಕೆಟ್ಟತನಕ್ಕೆ ತಪ್ಪಿಸಿಕೊಡು ದೈವಸ್ವಭಾವದಲ್ಲಿ ಪಾಲುಹೊಂದು ವವರಾಗಬೇಕೆಂಬ ಉದ್ದೇಶವಿರಬೇಕು. 2 ಪೇತ್ರ 1:4 ದೇವದೂತರಿಗಿಂತಲೂ ಉತ್ತಮರಾಗಬೇಕು ಇಬ್ರಿಯ 1:4 ಈ ಸ್ವರ್ಗೀಯ ಕರೆಯು ಸುವಾರ್ತಾಯುಗಕ್ಕೆ ಮಾತ್ರ ಮೀಸಲು. ಅದು ಮುಕ್ತಾಯವಾದಾಗ ಕರೆಯು ನಿಂತು ಹೋಗುವುದು. ಅನಾದಿಕಾಲದಲ್ಲಿ ಆ ಕೃಪೆಯನ್ನು ಅನುಗ್ರಹಿಸಿ ಕ್ರಿಸ್ತನ ಪ್ರತ್ಯಕ್ಷತೆಯ ಮೂಲಕ ಅದನ್ನು ಪ್ರಕಾಶಪಡಿಸಿದ್ದಾನೆ 2 ತಿಮೋ 1:10 ಎರಡು ಸ್ವಭಾವಗಳು ವಿಂಗಡವಾಗಿಯೇ ಪರಿಪೂರ್ಣತೆಯಲ್ಲಿ ಮಹಿಮೆಪಡೆಯುವವು. ದೇವರ ಕೆಲಸವೆಲ್ಲಾ ಪರಿಪೂರ್ಣವಾಗಿ ಎಲ್ಲವು ಅದ್ಭುತವಾದ ರೀತಿಯಲ್ಲಿ ಸರಿಹೊಂದಿಕೊಂಡು ದೇವರೊಂದಿಗೆ ಐಕ್ಯವಾಗುವವು.

## The Church of God

“Zion, arise, break forth in songs
Of everlasting joy;
To God eternal praise belongs,
Who doth thy foes destroy.
Thou Church of God, awake! awake!
For light beams from on high;
From earth and dust thy garments shake,
Thy glory’s drawing nigh.

“To raise thee high above the earth,
God will his power employ;
He’ll turn thy mourning into mirth,
Thy sorrow into joy.
In shining robes thyself array,
Put on thy garments pure;
Thy King shall lead thee in the way
That’s holy, safe and sure.”

# ಅಧ್ಯಾಯ-11

## ಮೂರು ಮಾರ್ಗಗಳು-ವಿಶಾಲವಾದ ಮಾರ್ಗ, ಇಕ್ಕಟ್ಟಾದ ಮಾರ್ಗ, ರಾಜಮಾರ್ಗ

**ನಾಶನಕ್ಕೆ ಹೋಗುವ ವಿಶಾಲವಾದ ಮಾರ್ಗ-ಜೀವಕ್ಕೆ ಹೋಗುವ ಇಕ್ಕಟ್ಟಾದ ಮಾರ್ಗ-ಜೀವ ಎಂದರೇನು?-ದೈವೀಕ ಸ್ವಭಾವ-ದೈವೀಕ ಮತ್ತು ಮಾನವ ಸ್ವಭಾವಕ್ಕೆ ಇರುವ ಸಂಬಂಧಗಳು-ಇಕ್ಕಟ್ಟಾದ ಮಾರ್ಗದ ಅಂತ್ಯದಲ್ಲಿರುವ ಪ್ರತಿಫಲ-ಉನ್ನತವಾದ ಕರೆಯುವಿಕೆಯು ಸುವಾರ್ತಾ ಯುಗಕ್ಕೆ ಮಾತ್ರ ಸೀಮಿತವಾಗಿದೆ-ಇಕ್ಕಟ್ಟಾದ ಮಾರ್ಗದ ಕಷ್ಟಗಳು ಮತ್ತು ಅಪಾಯಗಳು-ಪರಿಶುದ್ಧವಾದ ರಾಜಮಾರ್ಗ.**

'ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ. ನಾಶಕ್ಕೆ ಹೋಗುವ ಬಾಗಿಲು ದೊಡ್ಡದ್ದು, ದಾರಿ ಅಗಲವೂ; ಅದರಲ್ಲಿ ಹೋಗುವವರು ಬಹುಜನ. ನಿತ್ಯ ಜೀವಕ್ಕೆ ಹೋಗುವ ಬಾಗಿಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ' ಮತ್ತಾಯ 7: 13,14.

'ಅಲ್ಲಿ ರಾಜ ಮಾರ್ಗವಿರುವುದು, ಹೌದು ಹೋಗಿಬರುವ ದಾರಿ; ಅದು ಪರಿಶುದ್ದ ಮಾರ್ಗ ಎನಿಸಿಕೊಳ್ಳುವುದು; ಯಾವ ಅಶುದ್ಧನೂ ಅಲ್ಲಿ ನಡೆಯನು. ಅದು ದೇವಜನರಿಗಾಗಿಯೇ ಇರುವುದು; ಅಲ್ಲಿ ಹೋಗುವ ಮೂಢನು ದಾರಿತಪ್ಪನು. ಸಿಂಹವು ಅಲ್ಲಿರದು, ಕ್ರೂರ ಜಂತು ಅಲ್ಲಿ ಸೇರದು. ಕಾಣುವುದೇ ಇಲ್ಲ: ಬಿಡುಗಡೆಯಾದವರೇ ಅಲ್ಲಿ ನಡೆಯುವರು' ಯೆಶಾಯ 35:8,9

ಅಗಲವಾದ ಮಾರ್ಗ, ಇಕ್ಕಟ್ಟಾದ ಮಾರ್ಗ ಮತ್ತು ರಾಜ ಮಾರ್ಗ ಎಂಬ ಮೂರು ಮಾರ್ಗಗಗಳನ್ನು ಸತ್ಯವೇದವು ನಮ್ಮ ಗಮನಕ್ಕೆ ತರುವುದು.

### ನಾಶಕ್ಕೆ ಹೋಗುವ ಅಗಲವಾದ ದಾರಿ

ಕೆಟ್ಟು ಹೋದ ಜನಾಂಗಕ್ಕೆ ಈ ದಾರಿಯು ಸುಲಭವಾದ ಮಾರ್ಗವಾಗಿದೆ. ಆರು ಸಾವಿರ ವರುಷಗಳ ಹಿಂದೆ ಆದಾಮನು ಪಾಪಮಾಡಿ ನಾಶಕ್ಕೆ ಗುರಿಯಾದ ಮೇಲೆ ಅವನು ಈ ದಾರಿಯಲ್ಲೇ ನಡೆದು 930 ವರ್ಷಗಳ ನಂತರ ನಾಶಕ್ಕೆ ಗುರಿಯಾದನು. ಅಂದರೆ ಸತ್ತನು. ಶತಮಾನಗಳು ಕಳೆದ ಹಾಗೆಲ್ಲಾ ಈ ಮಾರ್ಗವು ಸವೆದು ಸವೆದು ಮತ್ತಷ್ಟು ಅಗಲವಾಗಿ ಬಹು ವೇಗವಾಗಿ ಜಾರಿ ಮಾನವ ಜನಾಂಗವು ನಾಶಕ್ಕೆ ಗುರಿಯಾಗುತ್ತಿದೆ. ದಿನ ದಿನಕ್ಕೆ ಪಾಪ ಹೆಚ್ಚಿದಂತೆಲ್ಲಾ ಮಾರ್ಗವು ಪ್ರಕಾಶವಾಗಿ ಜಾರುವಂತದಾಗಿದೆ. ದಿನೇ ದಿನೇ ಜಾರುವದಲ್ಲದೆ ಮಾನವನಲ್ಲಿ ತಡೆದುಕೊಳ್ಳುವ ಶಕ್ತಿಯೇ ಕಡಿಮೆಯಾಗುತ್ತಿದೆ. ಇಂದು ಮಾನವನ ಸರಾಸರಿ ಆಯುಸ್ಸು 35ವರ್ಷಕ್ಕೆ ಇಳಿದಿದೆ. ಅತಿ ಶೀಘ್ರದಲ್ಲಿಯೇ ಮಾರ್ಗದ ಅಂತ್ಯವನ್ನು ಮುಟ್ಟುವವನಾಗಿರುವನು. ಮೊದಲನೆ ಮನುಷ್ಯನಿಗೆ 900 ವರ್ಷಗಳ ಮುಂಚೆಯೇ ಮಾರ್ಗದ ಅಂತ್ಯದಲ್ಲಿ ನಾಶವಾಗಿ ಹೋಗುತ್ತಿರುವರು. 6000 ವರ್ಷಗಳಿಂದ ಮಾನವ ಜನಾಂಗವು ಅಗಲವಾದ ಮಾರ್ಗದಲ್ಲಿ ಭದ್ರವಾಗಿ ನಡೆಯುತ್ತಿರುವರು. ಅತಿ ಕೊಂಚ ಮಂದಿ ತಮ್ಮ ಹೆಜ್ಜೆಯನ್ನು ಬದಲಾಯಿಸಲು ಇಷ್ಟಪಟ್ಟರೂ ಅದೇನು ಅಷ್ಟು ಫಲಕಾರಿಯಾಗಿಲ್ಲ. 6000 ವರ್ಷಗಳಿಂದ ಪಾಪ ಮತ್ತು ಮರಣ ಮಾನವ ಜನಾಂಗವನ್ನು ಆಳುತ್ತಿರುವುದು. ಸುವಾರ್ತಾ ಯುಗವು ಆ ದಾರಿಯಿಂದ ತಪ್ಪಿಸಿಕೊಳ್ಳಲು ಒಂದು ಆಶಾ ಕಿರಣವನ್ನು ಮೂಡಿಸಿದೆ. ಹಿಂದಿನ ಯುಗಗಳಲ್ಲಿ ಈ ಆಶಾಕಿರಣವು ಮೂಡಿತ್ತು ಆದರೆ ಅದು ಪ್ರಕಾಶ ಮಾನವಾಗಿರದೆ ಬಹಳ ಮಂಕಾಗಿತ್ತು. ಕೆಲವರು ಅದನ್ನೇ ಸಂತೋಷದಿಂದ ಅಂಗೀಕರಿಸಿದರು. ಆದರೆ ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ನಂತರವೇ ಅಮರತ್ವವು ಬೆಳಕಿಗೆ ಬಂದಿದ್ದು. ನಂತರ ಅಪೋಸ್ತಲರು ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದರು 2 ತಿಮೋ. 1:10 ಕ್ರಿಸ್ತನು ಪಾಪ ವಿಮೋಚನೆಗಾಗಿ ಮಾಡಿದ ಕಾರ್ಯವನ್ನು ಹಳೇ ಒಡಂಬಡಿಕೆಯಲ್ಲಿರುವ ಯಜ್ಞಾರ್ಪಣೆಯು ಸೂಚಿಸುತ್ತದೆ ಎಂಬುದನ್ನು ಅಪೋಸ್ತಲರು ತೋರಿಸಿಕೊಟ್ಟರು. ಇದರಿಂದ ಸುವಾರ್ತಾ ಸಭೆಯ ಅತ್ಯುತ್ತಮ ಬಹುಮಾನವಾದ ಅಮರತ್ವವನ್ನು ಬೆಳಕಿಗೆ ತಂದದ್ದು.

ನಾಶನಕ್ಕೆ ಹೋಗುವ ಅಗಲವಾದ ದಾರಿಯಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ಸುವಾರ್ತೆಯ ಮೂಲಕ ಸಾರಿದರು. ಜನರು ಅದಕ್ಕೆ ಗಮನಕೊಡದೆ ಸೈತಾನನಿಂದ ವಂಚಿತರಾಗಿ ದುಷ್ಟರಾಗಿಯೇ ಮುಂದುವರೆಯುತ್ತಿರುವರು. ಆದರೆ ಕ್ರಿಸ್ತನನ್ನು ಅಂಗೀಕರಿಸಿ ಜೀವದ ವಾಗ್ದಾನವನ್ನು ತಿಳಿದು ಕ್ರಿಸ್ತನ ಮೂಲಕ ಬಿಡುಗಡೆ ಹೊಂದಲು ಸಾಧ್ಯ ಎಂದು ತಿಳಿದಿರುವವರು. ಒಂದು ಹೊಸ ದಾರಿಯನ್ನು ತೋರಿಸಿರುವರು. ಅದರ ಮೂಲಕ ಕ್ರಿಸ್ತನನ್ನು ನಂಬಿ ಆತನಿಗಾಗಿ ಪ್ರತಿಷ್ಠಿಸಿಕೊಂಡವರು ಮಾನವ ಸ್ವಬಾವವನ್ನು ಬಿಟ್ಟು ಆತ್ಮೀಕ ಸ್ವಭಾವಕ್ಕೆ ಪರಿವರ್ತನೆಹೊಂದಲು ಸಾಧ್ಯ. ಆದುದರಿಂದ ಜೀವವುಳ್ಳ ಹೊಸದಾರಿಯು ಆತನಿಗಾಗಿ ಪ್ರತಿಷ್ಠಿತರಾಗಿರುವ ರಾಜವಂಶದ ಯಾಜಕರಿಗೆ ಮಾತ್ರ. ಇಬ್ರಿ 10:20.

## ನಿತ್ಯ ಜೀವಕ್ಕೆ ಹೋಗುವ ಇಕ್ಕಟ್ಟಾದ ದಾರಿ

ನಮ್ಮ ಕರ್ತನು ಹೇಳಿರುವ ಪ್ರಕಾರ ಈ ಮಾರ್ಗವು ಬಹಳ ಇಕ್ಕಟ್ಟಾದುದು ಮತ್ತು ಕಷ್ಟಕರವಾದುದು. ಆದ್ದರಿಂದ ಅನೇಕರು ನಾಶನದ ಅಗಲವಾದ ದಾರಿಯಲ್ಲೇ ಇರಲು ಬಯಸುತ್ತಾರೆ. ನಿತ್ಯ ಜೀವಕ್ಕೆ ಹೋಗುವ ಬಾಗಿಲು ಇಕ್ಕಟ್ಟು, ದಾರಿ ಬಿಕ್ಕಟ್ಟು. ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ. ಈ ದಾರಿಯ ಕಷ್ಟ ಅಪಾಯಗಳನ್ನು ನೋಡುವ ಮೊದಲು ಅದು ಎಲ್ಲಿಗೆ ನಡೆಸುತ್ತದೆ ಎಂದು ಸ್ವಲ್ಪ ಗಮನಿಸೋಣ. ಮೊದಲೇ ತಿಳಿದಿರುವಂತೆ ಮೇಲ್ಮಟ್ಟದಲ್ಲಾಗಲೀ ಕೆಳಮಟ್ಟದಲ್ಲಾಗಲಿ ಜೀವಿತದ ಸುಖವನ್ನು ಅನುಭವಿಸಬಹುದು. ಜೀವ ಎನ್ನುವುದು ವಿಶಾಲವಾದ ಮತ್ತು ಕೂಡಲೇ ಗ್ರಹಿಸುವ ಒಂದು ಸಂಗತಿ. ಆದರೆ ಇಲ್ಲಿ ನಮ್ಮ ಕರ್ತನು ತಿಳಿಸಿರುವಂತೆ ಅದು ಮೇಲ್ಮಟ್ಟದ ಜೀವಿತ ದೈವೀಕ ಸ್ವಭಾವಕ್ಕೆ ಸಂಬಂಧಿಸಿದ್ದು. ಅಮರತ್ವವುಳ್ಳದ್ದು ಅಂತಹ ಒಂದು ಬಹುಮಾನಕ್ಕೆ ಆತನು ನಮ್ಮನ್ನು ಕರೆದಿರುವನು. ಜೀವ ಎಂದರೇನು? ಇದು ಮಾನವರಲ್ಲಿ ಮಾತ್ರವಲ್ಲದೆ, ಪ್ರಾಣಿಗಳಲ್ಲೂ ಸಸ್ಯಗಳಲ್ಲೂ ನಮಗೆ ಕಂಡುಬರುತ್ತದೆ. ಮೇಲ್ಮಟ್ಟದ ದೇವದೂತರಲ್ಲಿಯೂ ದೈವತ್ವದಲ್ಲಿಯೂ ಇದೆ ಎಂದು ಹೇಳಲ್ಪಟ್ಟಿದೆ. ಇಂಥ ವಿಶಾಲವಾದ ಸಂಗತಿಯನ್ನು ಸ್ಪಷ್ಟಪಡಿಸುವುದು ಹೇಗೆ? ಎಲ್ಲರಲ್ಲಿಯೂ ಅಡಗಿರುವ ಜೀವದ ಬುಗ್ಗೆಯನ್ನು ಕಂಡುಹಿಡಿಯಲಾಗದಿದ್ದರೂ ಸಮಸ್ತಕ್ಕೂ ಜೀವದ ಮೂಲ ಯೆಹೋವ ದೇವರೇ. ಆತನಿಂದಲೇ ಸಮಸ್ತವೂ ಜೀವ ಪಡೆದು ಜೀವಿಸುತ್ತಿರುವುದು ಎಂದು ಧಾರಳವಾಗಿ ತಿಳಿದುಕೊಳ್ಳಬಹುದು. ಎಲ್ಲಾ ಜೀವಿಗಳು ಜೀವಕ್ಕಾಗಿ ಆತನನ್ನೇ ಅವಲಂಬಿಸಿವೆ. ಆತನು ತನ್ನ ಎಲ್ಲಾ ಸೃಷ್ಟಿಗಳಿಗೆ ಕೊಟ್ಟಿರುವ ಜೀವ ಒಂದೇ. ಅದು ಒಂದು ವಸ್ತುವಲ್ಲ. ಜೀವಕೊಡುವ ಶಕ್ತಿ ದೇವರಲ್ಲಿದೆ. ಆತನೇ ಇದನ್ನು ಎಲ್ಲರಿಗೂ ದಯಪಾಲಿಸುತ್ತಾನೆ. ಇದರಿಂದ ಜೀವಿಯು ದೇವರ ಒಂದು ಭಾಗ ಎಂದು ತಿಳಿಯಬಾರದು. ಅದು ದೇವರ ಕೈಕೆಲಸವಾಗಿದೆ. ದೈವಸ್ವಬಾವದಲ್ಲಿ ಮಾತ್ರ ಜೀವವು ಸ್ವತಂತ್ರವಾಗಿದೆ. ಯೆಹೋವ ದೇವರ ಜೀವಕ್ಕೆ ರೋಗವಾಗಲಿ, ನೋವಾಗಲಿ ಮರಣವಾಗಲಿ ಇಲ್ಲದಿರುವುದರಿಂದ ಅದನ್ನು ಅಮರತ್ವವೆಂದು ಕರೆಯುತ್ತೇವೆ. ಈ ಒಂದು ಶಕ್ತಿಯು ದೈವಸ್ವಭಾವಕ್ಕೆ ಮಾತ್ರ ಇರುವುದು. ಸೂರ್ಯನು ಭೂಮಿಗೆ ಬೆಳಕನ್ನು ಕೊಡುವ ರೀತಿಯಲ್ಲಿ ಎಲ್ಲಾ ಜೀವಿಗಳು ಜೀವ ಬುಗ್ಗೆಯಿಂದ ಜೀವ ಪಡೆಯುವವು. ಸೂರ್ಯನಿಂದ ಬರುವ ಬೆಳಕು ಒಂದೇ ಆದರೂ ವಿವಿಧ ವಸ್ತುಗಳ ಮೇಲೆ ವಿವಿಧ ಬಣ್ಣಗಳಿಂದ ಪ್ರಕಾಶಿಸುತ್ತದೆ. ವಜ್ರ, ಗಾಜು, ಇಟ್ಟಿಗೆ ಮುಂತಾದವುಗಳ ಮೇಲೆ ವಿವಿಧ ಬಣ್ಣಗಳಿಂದ ಪ್ರಕಾಶಿಸಿದರೂ ಬೆಳಕೆಲ್ಲಾ ಒಂದೇ. ಅದೇ ರೀತಿ ಜೀವವು ಶಾಶ್ವತ. ಎಂದೆಂದಿಗೂ ಮುಗಿಯದ ಬುಗ್ಗೆಯಿಂದ ಹರಿಯುವುದು. ಬೆಳಕು ವಿವಿಧ ರೀತಿಯಲ್ಲಿ ಪ್ರತಿಬಿಂಬಿಸುವ ಹಾಗೆ ವಿವಿಧಜೀವಿಗಳು ತಮ್ಮ ಅಂಗ ರಚನೆಯ ಪ್ರಕಾರ ಆಕಾಶದಲ್ಲಿ ಬೇರೆಬೇರೆಯಾಗಿ ಕಂಡರೂ ಎಲ್ಲಾ ಜೀವಿಗಳಲ್ಲಿರುವ ಜೀವ ಒಂದೇ. ಹೀಗೆ ಪಶು, ಪಕ್ಷಿ ಮತ್ತು ಮೀನುಗಳಲ್ಲಿ ಜೀವದ ಹೆಚ್ಚು ಹೆಚ್ಚಿನ ಪ್ರಕಟನೆಯನ್ನು ಕಾಣಬಹುದು.ವಜ್ರವು ಪ್ರಕಾಶಮಾನವಾದ ಗಾಜು. ಅದು ಸೂರ್ಯನಿಂದ ಪಡೆದುಕೊಂಡ ಬೆಳಕನ್ನೇ ಹೊಂದಿಕೊಂಡಿರುವುದು. ಆದರೆ ನೋಡುವುದಕ್ಕೆ ಅದೇ ಒಂದು ಚಿಕ್ಕ ಸೂರ್ಯನಂತೆ ಪ್ರಕಾಶಿಸುವುದು. ಹಾಗೆಯೇ ಮಾನವರೂ ಸಹ ದೇವರ ಸೃಷ್ಟಿಯಲ್ಲಿ ಮುಖ್ಯನಾದರೂ ದೇವದೂತರಿಗಿಂತ ಕಡಿಮೆಯಾಗಿರುವನು. ಆತನು ಎಷ್ಟು ಅದ್ಭುತವಾಗಿ ಸೃಷ್ಟಿಸಲ್ಪಟ್ಟವನೆಂದರೆ ದೇವರು ಒದಗಿಸುವ ಒಂದು ನಾಲೆಯ ಮೂಲಕ ಜೀವ ಹೊಂದಿ ಅದನ್ನು ಉಳಿಸಿಕೊಂಡು ಎಂದೆಂದಿಗೂ ಬಾಡದೆ ಇರುವಂಥದಾಗಿತ್ತು. ಪಾಪಮಾಡುವ ಮೊದಲು ಆದಾಮನು ಅಂತಹ ಒಂದು ವೈಭವದಲ್ಲಿ ಸೃಷ್ಟಿಸಲ್ಪಟ್ಟಿದ್ದನು. ಜೀವದ ಪ್ರತಿಭೆಯನ್ನು ಎಲ್ಲಾ ಸೃಷ್ಟಿಗಳಿಗಿಂತ ಚೆನ್ನಾಗಿ ಹೊಂದಿದ್ದನು. ವಜ್ರ ಹೇಗೆ ತನ್ನ ಪ್ರಕಾಶಕ್ಕೆ ಸೂರ್ಯನನ್ನು ಅವಲಂಬಿಸಿದೆಯೋ ಹಾಗೆಯೇ ಮಾನವನ ಇರುವಿಕೆಯೂ ದೇವರಿಂದ ಬರುವ ಜೀವವನ್ನು ಅವಲಂಬಿಸಿದೆ. ಮಾನವನಲ್ಲಿ ಜೀವದ ಬುಗ್ಗೆಯಿಲ್ಲ. ಇದಕ್ಕೆ ಕಾರಣ ಪಾಪವು ಅವನಲ್ಲಿ ಹೊಕ್ಕಿ ಮರಣಕ್ಕೆ ದಾರಿಮಾಡಿಕೊಟ್ಟಿರುವುದು. ದೇವರು ತಾನು ಸೃಷ್ಟಿಸಿದ ಮನುಷ್ಯನನ್ನು ಏದೇನ್ ತೋಟದಲ್ಲಿಟ್ಟು ಅವನ ಜೀವಿತಕ್ಕೆ ಬೇಕಾದ ಎಲ್ಲಾ ಮರಗಳನ್ನು ಉಂಟುಮಾಡಿದನು ತಿನ್ನುವುದಕ್ಕೆ ಯೋಗ್ಯವಾದ ಮತ್ತು ನೋಟಕ್ಕೆ ರಮ್ಯವಾದ ವಿವಿಧ ಬಗೆಯ ಹಣ್ಣುಗಳನ್ನು ಉಂಟುಮಾಡಿದನು ಆದಿ. 2:9,16,17 ಈ ಎಲ್ಲಾ ಮರಗಳಲ್ಲಿ ತಿನ್ನ ಬಾರದೆಂಬ ನಿಷಿದ್ಧವಾದ ಮರದ ಹಣ್ಣನ್ನು ಬಿಟ್ಟು ಉಳಿದ ಎಲ್ಲಾ ಹಣ್ಣುಗಳನ್ನು ತಿಂದು ಜೀವಿಸುತ್ತಿದ್ದರು. ಆದರೆ ಯಾವಾಗ ಅವನು ದೇವರ ಆಜ್ಞೆಯನ್ನು ಮೀರಿ ನಡೆದನೋ ಅಂದೇ ಮರಣಶಿಕ್ಷೆಗೆ ಒಳಗಾದದು ಮಾತ್ರವಲ್ಲದೆ ತೋಟದಿಂದಲೇ ಹೊರಗೆ ಹಾಕಲ್ಪಟ್ಟನು ಆದಿ 3:22.

ಹೇಗೆ ವಜ್ರವು ಸೂರ್ಯನ ಬೆಳಕಿರುವವರೆಗೆ ಪ್ರಜ್ವಲಿಸುತ್ತದೆಯೋ ಹಾಗೆಯೇ ಮಾನವನ ಪ್ರಭಾವ ಮತ್ತು ಸೌಂದರ್ಯವು ಜೀವವಿರವವರೆಗೆ ಇರುತ್ತದೆ. ಆದರೆ ಪಾಪವು ಮಾನವನಲ್ಲಿ ಪ್ರವೇಶಿಸಿರುವುದರಿಂದ ಜೀವಿತದ ಹಕ್ಕನ್ನು ಕಳೆದುಕೊಂಡು ದಿನೇ ದಿನೇ ಜೀವವೆಂಬ ವಜ್ರದ ಕಾಂತಿಯು ಕುಂದಿಹೋಗುತ್ತಾ ಬಂದು ಕಡೆಗೆ ಸಮಾಧಿಯಲ್ಲಿ ಪೂರ್ಣವಾಗಿ ನಶಿಸಿಹೋಗುವುದು. ಅವನ ಚೆಲುವಿಕೆಯು ನುಸಿಹತ್ತಿತ್ತೊ ಎಂಬಂತೆ ಹಾಳಾಗಿ ಹೋಗುತ್ತದೆ. ಕೀರ್ತ. 39:11 ಸೂರ್ಯನಿಲ್ಲದೆ ವಜ್ರವು ಹೇಗೆ ಪ್ರಕಾಶಿಸುವುದಿಲ್ಲವೋ

ಹಾಗೆಯೇ ದೇವರು ಜೀವದ ಸರಬರಾಜನ್ನು ನಿಲ್ಲಿಸಿದಾಗ ಮಾನವನು ಸಾಯುತ್ತಾನೆ. "ಮನುಷ್ಯನಾದರೋ ಸತ್ತು ಬೋರಲು ಬೀಳುವನು, ಪ್ರಾಣಹೋಗಲು ಅವನು ಎಲ್ಲಿಯೋ? ಯೋಬ 14:10." ಅವನ ಮಕ್ಕಳು ಘನತೆಯನ್ನು ಹೊಂದುವುದು ಅವನಿಗೆ ತಿಳಿಯುವುದಿಲ್ಲ. 14:21 "ನೀನು ಸೇರಬೇಕಾದ ಪಾತಾಳದಲ್ಲಿ ಯಾವ ಕೆಲಸವೂ ಯುಕ್ತಿಯೂ ತಿಳಿವಳಿಕೆಯೂ ಜ್ಞಾನವೂ ಇರುವುದಿಲ್ಲ" ಪ್ರಸಂಗಿ 9:10 ಆದರೆ ಈ ಮರಣ ಶಿಕ್ಷೆಗೆ ವಿಮೋಚನೆಯೆಂಬ ಬೆಲೆತೆತ್ತಿರುವುದರಿಂದ ಜೀವವೆಂಬ ವಜ್ರವು ಪುನಃ ಪ್ರಕಾಶಿಸುವುದು. ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟುಮಾಡುವ ಕಿರಣಗಳುಳ್ಳವನಾಗಿ ಮೂಡಿದಾಗ ಮಾನವನು ತನ್ನ ಸೃಷ್ಟಿಕರ್ತನ ಪ್ರತಿ ರೂಪದಲ್ಲಿ ಪ್ರತಿಬಿಂಬಿಸುತ್ತಾನೆ. ಮಲಾಕಿ 4:2. ಕ್ರಿಸ್ತನ ಯಜ್ಞಾರ್ಪಣೆಯ ಫಲವಾಗಿ ಸಮಾಧಿಗಳಲ್ಲಿರುವವರೆಲ್ಲರೂ ಹೊರಗೆ ಬರುವರು. ಅನಂತರ ವಿಮೋಚಕನಲ್ಲಿ ನಂಬಿಕೆಯಿಟ್ಟವರೆಲ್ಲರೂ ಪರಿಪೂರ್ಣತೆಯನ್ನು ಪಡೆಯುವರು.

ಕ್ರಿಸ್ತನು ಹೇಳಿರುವಂಥ ಇಕ್ಕಟ್ಟಾದ ದಾರಿಯ ಕಡೆಯಲ್ಲಿರುವ ಬಹುಮಾನ ಇದು. ಯಾರು ಇಕ್ಕಟ್ಟಾದ ದಾರಿಯಲ್ಲಿ ನಡೆದು ಗುರಿ ತಲುಪುತ್ತಾರೋ ಅವರಿಗೆ ದೊರಕುವ ಬಹುಮಾನ ದೈವ ಸ್ವಭಾವ ಮತ್ತು ಅಮರತ್ವ. ಆಹಾ ಎಂಥ ಅದ್ಭುತ ನಿರೀಕ್ಷೆ. ಅಲ್ಲಿಗೆ ಹೋಗಲು ನಮಗೆ ಧೈರ್ಯವಿದೆಯೊ? ತಿಮೋ. 6:14–16ರ ಪ್ರಕಾರ ಯೆಹೋವ ದೇವರೊಬ್ಬನೇ ಅಮರತ್ವವುಳ್ಳವನು. "ಭಾಗ್ಯವಂತನಾದ ಏಕಾಧಿಪತಿಯು ತನ್ನ ಕ್ಲುಪ್ತ ಸಮಯದಲ್ಲಿ ಆತನನ್ನು ಪ್ರಕಟಪಡಿಸುವನು. ಆ ಏಕಾಧಿಪತಿಯು ರಾಜಧಿರಾಜನೂ ಕರ್ತರ ಕರ್ತನೂ ತಾನೊಬ್ಬನೇ ಅಮರತ್ವವುಳ್ಳವೂ ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ. ಮನುಷ್ಯರಲ್ಲಿ ಯಾರೂ ಆತನನನ್ನು ಕಾಣಲಾರರು. ಆದರೆ ಯೆಹೋವನು ತನ್ನ ಮಗನಾದ ಯೇಸುವಿಗೆ ಈ ಅಮರತ್ವವನ್ನು ದಯಪಾಲಿಸಿ ಮಹಿಮೆ ಪಡಿಸಿದ್ದಾನೆ. ತಂದೆಯು ಹೇಗೆ ಜೀವವುಳ್ಳವನಾಗಿದ್ದಾನೋ ಹಾಗೆಯೆ ಮಗನು ಸಹ ಜೀವವುಳ್ಳವನಾಗಿರುವನು. ಯೋಹಾನ 5:26. ಯೇಸು ಪುನರುತ್ಥಾನ ಹೊಂದಿದ ಮೇಲೆ ಇಬ್ಬರು ಅಮರತ್ವವುಳ್ಳವರಾದರು. ಸುವಾರ್ತಾಯುಗದಲ್ಲಿ ಯಜ್ಞದ ಕುರಿಯಾದ ಮದಲಗಿತ್ತಿಯಾದ ಸತ್ಯಸಭೆಗೆ ಈ ಆಹ್ವಾನವನ್ನು ಕೊಡಲಾಗಿದೆ. ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆದು ಎಲ್ಲಾ ಕಷ್ಟಗಳನ್ನು ಅನುಭವಿಸುತ್ತಾ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುತ್ತಾ ಮರಣ ಪರಿಯಂತರ ವಿಧೇಯರಾಗುತ್ತಾರೋ ಅಂಥವರು ಪುನರುತ್ಥಾನವಾದ ಮೇಲೆ ದೈವಸ್ವಬಾವದಲ್ಲಿ ಪಾಲುಹೊಂದುವರು. ಈ ವರ್ಗಧವರು ಪುನರುತ್ಥಾನದಲ್ಲಿ ಮಾನವರಂತೆ ಎದ್ದುಬರುವುದಿಲ್ಲ. ಪೌಲನು ಇವರ ವಿಷಯವಾಗಿ ಪ್ರಾಕೃತದೇಹವಾಗಿ ಬಿತ್ತಲ್ಪಡುತ್ತದೆ ಆತ್ಮಿಕ ದೇಹವಾಗಿ ಎದ್ದು ಬರುತ್ತದೆ ಎಂದು ಹೇಳುತ್ತಾನೆ. ಭೂಲೋಕದ ಪ್ರತಿರೂಪವನ್ನು ಪಡೆದಿರುವ ಹಾಗೆ ಪರಲೋಕದ ರೂಪವನ್ನೂ ಹೊಂದುತ್ತಾರೆ. ಮುಂದೆ ನಾವು ಏನಾಗುವೆವೋ ಅದು ಇನ್ನೂ ಪ್ರತ್ಯಕ್ಷವಾಗಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು ಮತ್ತು ಪ್ರಕಟವಾಗುವ ಮಹಿಮೆಯಲ್ಲಿ ಭಾಗಿಗಳಾಗುವೆವು. 1 ಯೋಹಾನ 3:2; ಕೊಲೊಸ್ಸೆ 1:27; 2 ಕೊರಿ. 4:17; ಯೋಹಾನ 17:22; 1 ಪೇತ್ರ 5:10; 2 ಥೆಸ. 2:14. ಈ ಕರೆಯು ಈ ಸುವಾರ್ತೆಯುಗಕ್ಕೆ ಮಾತ್ರ ಮೀಸಲಾಗಿರುವುದು. ನಮ್ಮ ಕರ್ತನು ಹೇಳಿರುವಂತೆ ಈ ಕರೆಯನ್ನು ಸ್ವೀಕರಿಸದೆ ಇರುವವರೆಲ್ಲರೂ ನಾಶನದ ಅಗಲವಾದ ಮಾರ್ಗಧಲ್ಲೇ ನಡೆಯುತ್ತಿರುವರು. ಮಾನವರು ತಮ್ಮ ಬಲಹೀನತೆಯಿಂದ ಸುಲಭವಾಗಿರುವ ಅಗಲವಾದ ಮಾರ್ಗವನ್ನೇ ಬಯಸುವವರಾಗಿರುವರು.

ಇಕ್ಕಟ್ಟಾದ ಮಾರ್ಗ ಮರಣವನ್ನು ಕೊನೆಗೊಳಿಸುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಯಾಕೆಂದರೆ ಮಾನವ ಶರೀರದಲ್ಲೇ ವಿಮೋಚನೆಯೆಂಬ ಯಜ್ಞವು ಅರ್ಪಿತವಾಗಿದೆ. ಲೋಕವು ದಂಡನೆ ಹೊಂದಿ ಆದಾಮನಲ್ಲಿ ಸಾಯುತ್ತಿದೆ. ಆದರೆ ಸತ್ಯಮಕ್ಕಳು ಕ್ರಿಸ್ತನಲ್ಲಿ ನಂಬಿಕೆ ಇಟ್ಟು ಆತನಲ್ಲಿ ಸಾಯುತ್ತಿರುವರು. ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು. ಕ್ರಿಸ್ತನಿಗೆ ಸಂಭವಿಸಿದ ಭಾದೆಗಳಲ್ಲಿ ಪಾಲುಗಾರರಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು. ರೋಮಾ 8:17; 2 ತಿಮೋ 2:11,12. ಮುಂದೆ ಕ್ರಿಸ್ತನ ಆಳ್ವಿಕೆಯಲ್ಲಿ ದೈವಸ್ವಬಾವದಲ್ಲಿ ಪಾಲುಹೊಂದಿ ಸಮಸ್ತವನ್ನು ಸರಿಪಡಿಸುವ ಕಾರ್ಯದಲ್ಲಿ ಭಾವದಲ್ಲಿ ಪಾಲುಹೊಂದಿ ಸಮಸ್ತವನ್ನು ಸರಿಪಡಿಸುವ ಕಾರ್ಯಧಲ್ಲಿ ಭಾಗಿಗಳಾಗಿ ಲೋಕವನ್ನು ಆಶೀರ್ವದಿಸುವರು. ಈ ಯುಗದ ಅಂತ್ಯದಲ್ಲಿ ನಿತ್ಯಜೀವಕ್ಕೆ ಹೋಗುವ ದಾರಿಯನ್ನು ಮುಚ್ಚಲಾಗುವುದು. ಯಾಕೆಂದರೆ ಈ ಯುಗಾಂತ್ಯದಲ್ಲಿಯೇ ಚಿಕ್ಕ ಹಿಂಡು ಆರಿಸಲ್ಪಡುವ ಕೆಲಸ ಅಂತ್ಯಗೊಳ್ಳುವುದು. ಈಗಲೇ ಕ್ರಿಸ್ತನನ್ನು ಅಂಗೀಕರಿಸುವ ಕಾಲವಾಗಿದೆ. ಈ ಕಾಲದ ಯಜ್ಞವೇ ದೇವರಿಗೆ ಸುಗಂಧ ವಾಸನೆಯಾಗಿದೆ. ಆದಾಮನ ಶಿಕ್ಷೆಯಿಂದ ಬಂದ ಮರಣವು ಶಾಶ್ವಾತವಾಗಿರುವುದಿಲ್ಲ. ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯಲ್ಲಿ ಮರಣವು ಸಂಪೂರ್ಣವಾಗಿ ನಾಶವಾಗುವುದು. ಈ ಸುವಾರ್ತಾಯುಗದಲ್ಲಿ ದೇವ ಜನರು ನೂತನ ಸೃಷ್ಟಿಯಾಗುವರು. ಸಜೀವ ಯಜ್ಞವಾಗಿ ಅರ್ಪಿತವಾಗಿ ಕ್ರಿಸ್ತನಲ್ಲಿ ಸಾಯುವರು. ಆತ್ಮಿಕ ಜೀವಿಗಳಾಗಿ ಆತನೊಡನೆ ಬದುಕುವರು. ರೋಮಾ 6:8 ಬದಲಾಯಿಸಲ್ಪಟ್ಟ ಮನಸ್ಸು ಅಂದರೆ ದೇವರ ಮನಸ್ಸೆ ಹೊಸ ಸೃಷ್ಟಿಯ ಬೀಜವಾಗುವುದು.

ಈ ಹೊಸ ಜೀವಿತವು ಬಹು ಬೇಗ ಸಾಯುವ ಸಂಭವವಿರುವುದು. ಪೌಲನು ಹೇಳುವಂತೆ ಸತ್ಯದ ಮೂಲಕ ಆತ್ಮಿಕವಾಗಿರುವವರು ದೇಹದ ಮೂಲಕ ಜೀವಿಸಲು ಯತ್ನಿಸಿದರೆ ಸಾಯುವುದು ಖಡಿತ. ಅತ್ಮಿಕ ರಾಗಿ ದೇಹದ ದುರಿಚ್ಛೆಗಳನ್ನು ಕೊಲ್ಲಬೇಕು. ಯಾಕೆಂದರೆ ದೇವ ಪುತ್ರರು ದೇವರಾತ್ಮನಿಂದಲೇ ನಡೆಸಲ್ಪಡುತ್ತಾರೆ. ರೋಮಾ. 8:13,14 ಇದು ಸಜೀವಯಜ್ಞವಾಗಿ ಅರ್ಪಿತರಾದವರಿಗೆ ಬಹು ಮುಖ್ಯ. ಮಾನವಸ್ವಭಾವವು ಸಂಪೂರ್ಣವಾಗಿ ನಾಶವಾಗಬೇಕು. ಇದು ದೇವರ ದೃಷ್ಟಿಯಲ್ಲಿ ಬಹು ಮುಖ್ಯ.

ಆದರೆ ಕೆಲವರು ತಮ್ಮನ್ನೇ ಸಜೀವ ಯಜ್ಞವಾಗಿ ಅರ್ಪಿಸಿಕೊಂಡು ಆತ್ಮಿಕವಾಗಿ ಹುಟ್ಟಿ ಬಂದವರು ಈ ಲೋಕದ ಆಸೆ ಮತ್ತು ಸೈತಾನನ ಶೋಧನೆಗಳನ್ನು ಎದುರಿಸಿ ಬಂದವರು ತಮ್ಮೆದುರಿಗಿರುವ ಬಹುಮಾನದ ಮೇಲೆ ದೃಷ್ಟಿ ಇಡದೆ ದೇವರನ್ನು ಮೆಚ್ಚಿಸುವುದಕ್ಕೂ ಮತ್ತು ಲೋಕದ ಆಸೆಗಳನ್ನು ಪೂರೈಸುವುದಕ್ಕೆ ಪ್ರಯತ್ನಿಸಿ ಎರಡರ ಮಧ್ಯದಲ್ಲಿ ನಡೆಯುತ್ತಾ ಕಡೆಗೆ ಪ್ರಾಮುಖ್ಯವಾದದ್ದನ್ನೇ ಮರೆಯುತ್ತಾರೆ. ಯಾಕೆಂದರೆ "ಇಹ ಲೋಕದ ಸ್ನೇಹವು ದೇವರ ವೈರಿ" ಯಾಕೋಬ 4:4 ಬಹುಮಾನ ಪಡೆಯಲು ಓಡುತ್ತಿರುವವರೆಲ್ಲರಿಗೂ ಕೊಡುವ ಸಲಹೆಯೆಂದರೆ ಲೋಕವನ್ನು ಪ್ರೀತಿಸಬೇಡಿರಿ, ಇತರರಿಂದ ಸನ್ಮಾನವನ್ನು ಬಯಸಬೇಡಿರಿ. ದೇವರಿಂದ ಬರುವ ಮಾನವನ್ನು ಮಾತ್ರಹುಡುಕಿರಿ. ಲೋಕವನ್ನಾಗಲಿ ಲೋಕದಲ್ಲಿ ರುವವುಗಳನ್ನಾಗಲಿ ಪ್ರೀತಿಸಬೇಡಿರಿ. 1 ಯೋಹಾನ 2:15; ಯೋಹಾನ 5:44.

ಒಬ್ಬನೇ ದೇವರಿಂದ ಬರುವ ಮಾನವನನ್ನು ಅಪೇಕ್ಷಿಸದೆ ಈ ಪ್ರಪಂಚವನ್ನೇ ಪ್ರೀತಿಸಿ. ಆದರೂ ದೇವರ ಒಡಂಬಡಿಕೆಯನ್ನು ಪೂರ್ಣವಾಗಿ ಬಿಡದೆ ಇರುವವರನ್ನು ಕಷ್ಟ ಸಂಕಟಗಳೆಂಬ ಬೆಂಕಿಯಲ್ಲಿ ಶುದ್ಧಿಗೊಳಿಸುವನು. ಪೌಲನು ಹೇಳುವಂತೆ ''ಅಂಥವನ ಆತ್ಮವು ರಕ್ಷಣೆಹೊಂದುವುದಕ್ಕಾಗಿ ಅವನ ಶರೀರಭಾವವು ನಾಶವಾಗಬೇಕೆಂದು ನಮ್ಮ ಕರ್ತನಾದ ಯೇಸುವಿನ ಹೆಸರಿನಲ್ಲಿ ಅವನನ್ನು ಸೈತಾನನಿಗೆ ಒಪ್ಪಿಸಿಕೊಡಬೇಕೆಂಬುದೇ" 1 ಕೊರಿ. 5:5 ಅಂಥವರು ಶಿಸ್ತಿನ ಜೀವಿತದಲ್ಲೇ ಮುಂದುವರೆದರೆ ಅಂಥವರು ಅಮರತ್ವದ ಶಿಕ್ಷೆಯನ್ನು ಕಳೆದುಕೊಂಡು ದೇವದೂತರಂತೆ ನಿರಂತರವಾದ ಆತ್ಮೀಕ ಜೀವವನ್ನು ಹೊಂದುತ್ತಾರೆ ಮತ್ತು ದೇವರ ಸಿಂಹಾಸನದ ಮುಂದೆ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡು ಆತನ ಸೇವೆ ಮಾಡುವರು. ಪ್ರಕ 7:9–17 ಆದರೂ ಇವರ ಮಹಿಮೆಯು ಚಿಕ್ಕ ಹಿಂಡಿನ ಮಹಿಮೆಗಿಂತ ಕಡಿಮೆ ಮಟ್ಟದ್ದು. ಅವರು ಕ್ರಿಸ್ತನ ಮದಲಗಿತ್ತಿಯಾಗಿ, ಆತನ ರಾಜ್ಯದಲ್ಲಿ ರಾಜವಂಶದ ಯಾಜಕರಾಗಿ ಕ್ರಿಸ್ತನೊಂದಿಗೆ ಸಿಂಹಾಸನದಲ್ಲಿ ಕುಳಿತು ಅಮರತ್ವವೆಂಬ ಕಿರೀಟವನ್ನು ಪಡೆಯುವರು.

ಇಕ್ಕಟ್ಟಾದ ಮಾರ್ಗವು ಬಹು ಕಡಿದಾದದ್ದು, ಪ್ರತಿ ಹೆಜ್ಜೆಗೂ ದೇವರ ಶಕ್ತಿ ಒದಗದಿದ್ದರೆ ಗುರಿ ಮುಟ್ಟುವುದು ಅಸಾಧ್ಯ. ಆದರೆ ನಮ್ಮ ನಾಯಕನ ಮಾತುಗಳು ನಮಗೆ ಧೈರ್ಯಕೊಡುತ್ತವೆ. ಧೈರ್ಯವಾಗಿರಿ ನಾನು ಲೋಕವನ್ನು ಜಯಿಸಿದ್ದೇನೆ, ನನ್ನ ಕೃಪೆಯೇ ನಿನಗೆ ಸಾಕು ಬಲಹೀನತೆಯಲ್ಲಿಯೇ ಬಲವು ಪೂರ್ಣ ಸಾಧಕವಾಗುತ್ತದೆ. ಯೋಹಾನ 16:33;2 ಕೊರಿ. 12:9 ಈ ದಾರಿಯ ಸಂಕಷ್ಟಗಳು ದೇವಜನರನ್ನು ಶೋಧಿಸಿ ಶುದ್ಧಿಗೊಳಿಸಿ ಅವರು ಕ್ರಿಸ್ತನೊಂದಿಗೆ ದೇವರ ಜೊತೆಗೆ ಸಹಭಾಗಿಗಳೂ ಬಾಧ್ಯರೂ ಆಗುವಂತೆ ಸಿದ್ಧಪಡಿಸಲಾಗುವುದು. ಆದುದರಿಂದ ಧೈರ್ಯದಿಂದ ಆತನ ಕೃಪಾಸನದ ಬಳಿಗೆ ಬಂದು ವಿಶೇಷ ಹೋರಾಟವನ್ನು ನಡೆಸಿ ಪ್ರಭಾವದ ಕಿರೀಟ, ಅಮರತ್ವ ಮತ್ತು ದೈವಸ್ವಭಾವವನ್ನು ಹೊಂದುವುದಕ್ಕೆ ದೇವರಿಂದ ಸಹಾಯವನ್ನೂ ಕರುಣೆಯನ್ನೂ ಹೊಂದೋಣ 2 ತಿಮೋ. 4:8;1 ಪೇತ್ರ 5:4.

**ಪರಿಶುದ್ಧವಾದ ರಾಜಮಾರ್ಗ**

ಈ ಸುವಾರ್ತಾ ಯುಗದ ವಿಶೇಷ ನಿರೀಕ್ಷೆಯು ಮಹಿಮಾತಿಶಯವಾಗಿದ್ದರೆ. ಅದಕ್ಕೆ ಹೋಗುವ ದಾರಿಯನ್ನು ಕಂಡುಹಿಡಿಯುವವರು ಕೆಲವು ಜನ ಮಾತ್ರ. ಮುಂದೆ ಸಿಕ್ಕುವ ವಿಶೇಷವಾದ ಪ್ರತಿಫಲವನ್ನು ಪಡೆಯಲು ಆ ದಾರಿಯಲ್ಲಿ ಹೋಗುವರಿಗೆ ಪ್ರತಿಹೆಜ್ಜೆಗೂ ಕಷ್ಟವಿದ್ದರೆ ಮುಂದೆ ಬರುವ ನೂತನ ಯುಗದಲ್ಲಿ ಎಲ್ಲವೂ ನೂತನವಾಗುವುದು. ಅಮರತ್ವವನ್ನು ಪಡೆಯುವ ನಿರೀಕ್ಷೆಯಿರುವವರು ಎಲ್ಲಾ ಮಾನವ ಸ್ವಭಾವ, ಇಚ್ಛೆ ನಿರೀಕ್ಷೆಗಳನ್ನು ಯಜ್ಞರೂಪವಾಗಿ ಸಮರ್ಪಿಸಬೇಕು. ಇಂಥಹ ಒಂದು ಸೌಭಾಗ್ಯವನ್ನು ಪಡೆಯುವ ಮಾರ್ಗವು ನೂತನವಾಗಿದೆ. ಮಾನವನು ತನ್ನ ಪಾಪವನ್ನು ಸಂಪೂರ್ಣವಾಗಿ ಬಿಡುವುದು ಅವಶ್ಯಕ. ಆಗ ಶುದ್ದಿಯಾಗಿ ದೇವರ ಪ್ರತಿರೂಪವನ್ನು ಹೊಂದಿ ಪಾಪವು ಪ್ರಪಂಚವನ್ನು ಪ್ರವೇಶಿಸುವುದಕ್ಕೆ ಮುಂಚೆ ಆದಾಮನಲ್ಲಿದ್ದ ಸಂತೋಷವನ್ನು ಅನುಭವಿಸುವರು.

ಮಾನವನು ಉತ್ತಮನಾಗುವ ಮಾರ್ಗ ಬಹಳ ಸುಲಭ ಮತ್ತು ಸರಳವಾದದ್ದು. ಅಲ್ಲಿ ಯಾರು ಗೊಂದಲಕ್ಕೀಡಾಗುವುದಿಲ್ಲ. "ಅದು ದೇವ ಜನರಿಗಾಗಿಯೇ ಇರುವುದು, ಅಲ್ಲಿ ಹೋಗುವ ಮೂಢನು ದಾರಿ ತಪ್ಪನು" ಯೆಶಾ 35:8 ರಲ್ಲಿ ನೆರೆಹೊರೆಯವರು ಒಬ್ಬರಿಗೊಬ್ಬರು ಯೆಹೋವನ ಜ್ಞಾನಪಡೆಯಿರಿ ಎಂದು ಬೋಧಿಸಬೇಕಾಗಿರುವುದಿಲ್ಲ. ಚಿಕ್ಕವರಿಂದ ದೊಡ್ಡವರ ತನಕ ಎಲ್ಲರೂ ಯೆಹೋವನ ಜ್ಞಾನ ಪಡೆದಿರುವರು. ಯೆರೆ 31:34 ಚಿಕ್ಕ ಹಿಂಡು ನಡೆದು ಬಂದಂತ ಇಕ್ಕಟ್ಟಾದ

ಮಾರ್ಗವಲ್ಲ. ರಾಜಮಾರ್ಗವಾಗಿರುವುದು. ಪ್ರಯಾಣಿಕರ ಸೌಕರ್ಯಕ್ಕಾಗಿ ಎಲ್ಲವನ್ನು ಒದಗಿಸಲಾಗುವುದು. ರಕ್ಷಣೆ ಹೊಂದುವವರಿಗೆ ಈ ಮಾರ್ಗವನ್ನು ತೆರೆಯಲಾಗಿದೆ. ಯಾರಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವರೆಲ್ಲರೂ ಕ್ರಿಸ್ತನ ರಕ್ತದಿಂದ ಕೊಂಡುಕೊಂಡವರಾಗಿ ಆಶೀರ್ವಾದವನ್ನು ಪಡೆದು ಮಾನವೋತ್ತಮತೆಗೂ ನಿತ್ಯಜೀವಕ್ಕೂ ಆ ಪರಿಶುದ್ಧವಾದ ಮಾರ್ಗದಲ್ಲಿ ನಡೆದು ಗುರಿಯನ್ನು ಮುಟ್ಟಬಹುದು. ಇವರು ದೇವರ ದೃಷ್ಟಿಯಲ್ಲಿ ನಂಬಿಕೆಯಿಂದ ಪವಿತ್ರರಾದವರು ಎಂದು ಪರಿಗಣಿಸಲಾಗುವುದಿಲ್ಲ. ಆದರೂ ರಾಜಮಾರ್ಗದಲ್ಲಿ ನಡೆದು ರಕ್ಷಕನಿಗೆ ವಿಧೇಯರಾಗಿ ಉತ್ತಮ ಸ್ಥಿತಿಗೆ ಹೋಗಬಹುದು.

ಆ ರಾಜ್ಯದ ಆಡಳಿತದೊಡೆಯನಾದ ರಕ್ಷಕನಿಂದ ಎಲ್ಲಾ ಸೌಲಭ್ಯಗಳು ದೊರೆಯುವವು. ಪ್ರತಿಯೊಬ್ಬನಿಗೂ ಅವನ ಅವಶ್ಯಕತೆಗೆ ತಕ್ಕಂತೆ ಹೊಸ ರಾಜ್ಯದ ಆಡಳಿತದಲ್ಲಿ ಸಹಾಯ ಮಾಡಲಾಗುವುದು. ಇದು ವಿಮೋಚನೆಯ ನ್ಯಾಯವಾದ ಫಲಿತಾಂಶ. ಎಲ್ಲಾ ಮನುಷ್ಯರು ಸತ್ಯಜ್ಞಾನ ಪಡೆಯಬೇಕೆಂದು ಲೋಕರಕ್ಷಕನು ತನ್ನನ್ನೇ ವಿಮೋಚನಾರ್ಥವಾಗಿ ಒಪ್ಪಿಸಿ ಕೊಟ್ಟಮೇಲೆ ಎಲ್ಲರಿಗೂ ಕೂಡಲೇ ಒಳ್ಳೆಯ ರಾಜಮಾರ್ಗವನ್ನೇಕೆ ಮಾಡಲಿಲ್ಲ? ಅದರಲ್ಲಿರುವ ಅಡ್ಡಿ ಆತಂಕಗಳನ್ನು ಏಕೆ ತೆಗೆಯಲಿಲ್ಲ? ಮಾರ್ಗವನ್ನು ಇಕ್ಕಟಾಗಿಯೂ ಕಡಿದಾಗಿಯೂ ಮಾಡುವ ಬದಲು ಪಾಪಿಗಳು ಶೀಘ್ರವಾಗಿ ದೇವರ ಅನ್ಯೋನ್ಯತೆಯನ್ನು ಹೊಂದಲು ಏಕೆ ಸಹಾಯಮಾಡಲಿಲ್ಲ? ಎಂದು ಅನೇಕರು ಯೋಚಿಸುವವರಾಗಿರುವರು. ಆದರೆ ಅವರು ದೇವರ ವಾಕ್ಯವನ್ನು ಸರಿಯಾಗಿ ಗ್ರಹಿಸದೆ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವ ಚಿಕ್ಕ ಹಿಂಡು ವಿಶೇಷ ಫಲವನ್ನು ಹೊಂದುವುದು.. ಈಗ ಅವರನ್ನು ಪರೀಕ್ಷಿಸಿ ಜಯಶೀಲರಾದವರು ಮುಂದೆ ದೇವರ ರಾಜ್ಯದಲ್ಲಿ ಕ್ರಿಸ್ತನ ಸಹಬಾಧ್ಯರಾಗಿ ಜನಾಂಗಗಳನ್ನು ಆಶೀರ್ವದಿಸುವ ಭಾಗ್ಯವನ್ನು ಪಡೆಯುವರು ಎಂಬ ವಿಷಯವನ್ನು ಅನೇಕರು ಗ್ರಹಿಸದೆ ಅನೇಕ ಪ್ರಶ್ನೆಗಳನ್ನು ಕೇಳುವವರಾಗಿರುವರು. ದೇವರ ಯೋಜನೆಯನ್ನು ಸರಿಯಾಗಿ ತಿಳಿಯದೇ ಪರಿಶುದ್ಧವಾದ ರಾಜಮಾರ್ಗವು ಸುಲಭವಾದ ಮಾರ್ಗ ಈಗಲೇ ಇದೆ ಎಂದು ಬೋಧಿಸಿ ತಮ್ಮ ಕಲ್ಪನೆಗಳನ್ನು ಸತ್ಯವೇದದೊಂದಿಗೆ ಸರಿಹೊಂದಿಸಲು ಪ್ರಯತ್ನಿಸುವರು. ರಾಜಮಾರ್ಗವು ಶೀಘ್ರವಾಗಿ ತೆರೆಯಲ್ಪಡುವುದು; ಪಾಪದ ಸಂಗತಿಗಳೆಲ್ಲವೂ ಅಲ್ಲಿಂದ ತೆಗೆದುಹಾಕಲ್ಪಡುವುದು. ಆದರೆ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವವರು ತಮ್ಮನ್ನು ನಿರಾಕರಿಸಿ ತಮಗೆ ಮುತ್ತಿಗೆ ಹಾಕುವ ಪಾಪಗಳೊಂದಿಗೆ ಹೋರಾಟ ನಡೆಸಿ ಜಯಿಸಿ ತಮ್ಮ ಪರಿಶುದ್ಧ ದೇಹವನ್ನು ಯಜ್ಞವಾಗಿ ಅರ್ಪಿಸಬೇಕು. ಇಕ್ಕಟ್ಟಾದ ಮಾರ್ಗವು ಯಜ್ಞ ಸಮರ್ಪಿಸುವ ಮಾರ್ಗವಾದರೆ ಮುಂದೆ ಬರುವ ರಾಜಮಾರ್ಗವು ಯಥಾರ್ಥವೆಂಬ ನೀತಿಮಾರ್ಗವಾಗುವುದು. "ಆ ರಾಜಮಾರ್ಗದಲ್ಲಿ ಸಿಂಹವು ಅಲ್ಲಿರದು. ಕ್ರೂರ ಜಂತು ಅಲ್ಲಿ ಸೇರದು. ಕಾಣುವುದೇ ಇಲ್ಲ" ಎಂದು ಹೇಳಲಾಗಿದೆ. ಯೆಶಾಯ 35:9.

ನೀತಿ ಮಾರ್ಗಕ್ಕೆ ಸೇರಬೇಕಾದರೆ ಎಷ್ಟು ಭಯಂಕರ ಸಿಂಹಗಳಿರುವುದು ತಮ್ಮ ದಾರಿಗೆ ಅಡ್ಡಲಾಗಿರುವ ಪಾಪವನ್ನು ತೊಲಗಿಸಿದರೆ ತಾವು ನೀತಿವಂತರಾಗಬಹುದೆಂಬ ಆಸೆ ಅನೇಕರಿಗಿರುವುದು. ಕಾಲದ ಕೆಲಸದ ಕಾರ್ಯಗಳಲ್ಲಿ ಮಗ್ನರಾಗಿರುವಾಗ ಸೈತಾನನೆಂಬ ಸಿಂಹದ ಶೋಧನಗೆ ಬಲಿಯಾಗುವರು. ಆ ಶೋಧನೆಯಲ್ಲಿ ಜಯಹೊಂದಿದರೆ ಮಾತ್ರ ಸಂತೋಷವುಂಟು. ಈ ಕಾಲದಲ್ಲಿ ಅನೇಕರು ಮಾದಕ ದ್ರವ್ಯಗಳ ಸೇವನೆಗೆ ಒಳಗಾಗಿರುವರು. ಮುಂದಿನ ಯುಗದಲ್ಲಿ ಅದು ಸಂಪೂರ್ಣವಾಗಿ ನಿಷೇಧಿಸಲ್ಪಡುವಾಗ ಸಾವಿರಾರು ಮಂದಿ ಹರ್ಷಿಸುವರು. ಹಾಗೆಯೇ ಈಗಿನ ಕಾಲದ ನೈತಿಕ ಮಟ್ಟವು ಮುಂದಿನ ಯುಗದಲ್ಲಿ ಸುಧಾರಿಸಲ್ಪಡುವುದು. ಕ್ರೂರ ಜಂತು ಅಲ್ಲಿ ಸೇರದು. ಅಂದರೆ ಈಗಿನ ಸ್ವಾರ್ಥಪರ ಸರಕಾರದ ಶಾಸನಗಳು ಅಲ್ಲಿ ಕಂಡುಬರುವುದಿಲ್ಲ. ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಯಾರು ಕೇಡು ಮಾಡುವುದಿಲ್ಲ. ಯಾರು ಹಾಳು ಮಾಡುವುದಿಲ್ಲ ಯೆಶಾಯ 11:9 ಇಕ್ಕಟ್ಟಾದ ಮಾರ್ಗದಲ್ಲಿದ್ದ ಯಾವ ಕೇಡು ಶೋಧನೆಗಳು ರಾಜಮಾರ್ಗಧಲ್ಲಿರುವುದಿಲ್ಲ. ಆ ಮಾರ್ಗವು ಸರಳವಾಗಿರುವುದು. ಅಲ್ಲಿ ಸಿಕ್ಕುವ ಅಡ್ಡಿ ಆತಂಕಗಳೆಂಬ ಕಲ್ಲುಗಳನ್ನು ತೆಗೆಯಲಾಗುವುದು ಮತ್ತು ಸತ್ಯವನ್ನು ಎಲ್ಲರಿಗೆ ಸಾರಲಾಗುವುದು ಯೆಶಾಯ 62:10 ದುಷ್ಕರ್ಮಿಗಳು ಏಳಿಗೆಗೆ ಬಂದಿದ್ದಾರೆ ಅಜ್ಞಾನ ಮತ್ತು ಕುರುಡು ನಂಬಿಕೆಗಳು ಹೋಗಿ ಅಲ್ಲಿ ನೀತಿಯು ನೆಲಸುತ್ತದೆ. ನೀತಿಗೆ ಪ್ರತಿ ಫಲವು ಕೆಟ್ಟತನಕ್ಕೆ ನಾಶವೂ ಇರುವುದು. ಮಲಾಕಿ 3:15, 18 ಆದಾಮನ ಮೂಲಕ ಕಳೆದು ಕೊಂಡದ್ದನ್ನೆಲ್ಲಾ ಪುನಃ ಮಾನವನು ಪಡೆದುಕೊಳ್ಳಲು ಶಿಕ್ಷಣ ಕೊಡಲಾಗುವುದು. ಹೀಗೆ ವಿಮೋಚಿಸಲ್ಪಟ್ಟವರು ಹಿಂದಿರುಗಿ ಶಾಶ್ವತ ಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹ ಧ್ವನಿಯೊಡನೆ ಚೀಯೋನಿಗೆ ಸೇರುವರು, ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯು ಕರೆಕೆರೆಯು ತೊಲಗಿ ಹೋಗುವವು" ಯೆಶಾಯ 35:10 ನಮ್ಮ ಕರ್ತನು ಎರಡು ಮಾರ್ಗಗಳನ್ನು ಮಾತ್ರ ಕುರಿತು ಮಾತಾಡಿರುವನು ಯಾಕೆಂದರೆ ಮೂರನೆಯದು ಇನ್ನೂ ತೆರೆದಿಲ್ಲ ಇಷ್ಟರಲ್ಲೇ ತೆರೆಯಲ್ಪಡುವುದು. ಈ ಒಳ್ಳೆ ಸಮಾಚಾರವನ್ನು ಪ್ರಕಟಿಸುತ್ತಾ ಹೀಗೆ ಹೇಳಿರುವನು "ಯೆಹೋವನು ನೇಮಿಸಿರುವ ಶುಭ ವರ್ಷ, ಮುಯ್ಯಿ ತೀರಿಸುವ ದಿನ ಇನ್ನೂ ಬಂದಿಲ್ಲ ಲೂಕ 4:19; ಯೆಶಾಯ 61:2 ಈ ಇಕ್ಕಟ್ಟಾದ ದಾರಿಯು ಮುಗಿದ ಮೇಲೆ ಉದಯ

ಕಾಲದ ಬೆಳಕಿನಲ್ಲಿ ನೀತಿಯು ರಾಜಮಾರ್ಗವು ಪ್ರಾರಂಭವಾಗುವುದನ್ನು ನೋಡಬಹುದು.

ಹೀಗೆ ನಾವು ಅಗಲವಾದ ಮಾರ್ಗವನ್ನು ಕಂಡುಕೊಂಡಿದ್ದೇವೆ. ಆದರೆ ಈ ಲೋಕದ ಅರಸನು ಅದನ್ನು ಜನರಿಗೆ ಮರೆ ಮಾಡಿರುವನು. ಒಬ್ಬನ ವಿಧೇಯತ್ವದಿಂದ ಮರೆಮಾರ್ಗವು ತೆರೆದು ಮಾನವ ಜನಾಂಗವೆಲ್ಲವೂ ಅದರಲ್ಲಿ ನಡೆಯುವುದು ಎಂದು ತಿಳಿದು ಬಂದಿದೆ. ಇದಕ್ಕಾಗಿ ಕ್ರಿಸ್ತನು ವಿಮೋಚನೆಯೆಂಬ ಬೆಲೆತೆತ್ತು ರಾಜಮಾರ್ಗವನ್ನು ತೆರೆದಿರುವನು. ಆತನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟ ನಾವೆಲ್ಲರು ಅದರಲ್ಲಿ ನಡೆಯುವವರಾಗುತ್ತೇವೆ. ಈಗ ಇಕ್ಕಟ್ಟಾದ ದಾರಿಯಲ್ಲಿ ನಡೆಯುವವರು ಮುಂದೆ ದೇವರಿಂದ ವಿಚಾರಣೆ ಹೊಂದಿ ಕ್ರಿಸ್ತನ ಮಹಿಮೆಯಲ್ಲಿ ಪಾಲುಗಾರರಾಗಿ ಆತನ ಮಹಿಮೆಯ ರಾಜ್ಯದಲ್ಲಿ ಎಲ್ಲರನ್ನು ಆಶೀರ್ವದಿಸಲು ಬಾಧ್ಯರಾಗಿರುವರು. ಈ ರೀತಿಯ ನಿರೀಕ್ಷೆ ಇಟ್ಟಿರುವವರು ಆ ಪ್ರತಿಫಲಕೋಸ್ಕರ ತಮ್ಮ ಕಷ್ಟನಷ್ಟಗಳನ್ನು ಗಣನೆಗೆ ತರುವುದಿಲ್ಲ. ಫಿಲಿಪ್ಪಿ 3:8:15.

# ಅಧ್ಯಾಯ-12

## ಯುಗಯುಗಾಂತರಗಳ ಯೋಜನೆಯನ್ನು ಪ್ರತಿನಿಧಿಸುವ ನಕ್ಷೆಯ ವಿವರಣೆ.

**ಯುಗಗಳು-ಸುಗ್ಗಿಗಳು-ನಿಜವಾದ ಮತ್ತು ಪರಿಗಣಿಸಲ್ಪಟ್ಟ ಸ್ಥಾನದ ಮಟ್ಟಗಳು-ನಮ್ಮ ಕರ್ತನಾದ ಯೇಸುವಿನ ಜೀವನಗತಿ-ಆತನ ಹಿಂಬಾಲಕರ ಜೀವನಗತಿ-ಹೆಸರಿನ ಕ್ರೈಸ್ತರಲ್ಲಿ ಮೂರು ಗುಂಪುಗಳು-ಸುಗ್ಗಿಯಲ್ಲಿ ಬೇರ್ಪಡಿಸುವಿಕೆ-ಅಭಿಷೇಕಿಸಲ್ಪಟ್ಟ ಗುಂಪು ಮಹಿಮೆಪಡಿಸಲಾಗಿದೆ-ಮಹಾ ಸಂಕಟದ ಗುಂಪು-ಹಣಜಿ ಸುಡಲ್ಪಟ್ಟಿದೆ-ಲೋಕ ಆಶೀರ್ವದಿಸಲ್ಪಟ್ಟಿದೆ-ಫಲಿತಾಂಶ ಮಹಿಮೆಯುಳ್ಳದ್ದಾಗಿದೆ.**

ಪ್ರಪಂಚದ ರಕ್ಷಣೆಗಾಗಿರುವ ದೇವರ ಯೋಜನೆಯನ್ನು ತಿಳಿಸುವ ನಕ್ಷೆಯನ್ನು ಇಲ್ಲಿ ಕೊಡಲಾಗಿದೆ. ಇದರ ಸಹಾಯದಿಂದ ದೇವರ ಯೋಜನೆಯು ಕ್ರಮವಾಗಿ ಮುಂದುವರಿಯುತ್ತಿರುವುದು ಹಾಗೂ ಮಾನವ ಸ್ವಭಾವದಿಂದ ದೈವೀಕ ಸ್ವಬಾವಕ್ಕೆ ಬದಲಾಗುವುದನ್ನು ತಿಳಿದುಕೊಳ್ಳಬಹುದು.

ಮೊದಲು A, B, C ಯೆಂಬ ಮೂರು ಮಹಾಯುಗಗಳನ್ನು ತಿಳಿಸಲಾಗಿದೆ. ಇವುಗಳಲ್ಲಿ ಪ್ರಥಮವಾದದ್ದು. A ಇದು ಮಾನವ ಸೃಷ್ಟಿಯಿಂದ ಪ್ರಳಯದವರೆಗಿನ ಕಾಲವನ್ನು ತಿಳಿಸುತ್ತದೆ. B ಜಲ ಪ್ರಳಯದಿಂದ ಕ್ರಿಸ್ತನ ಎರಡನೇಯ ಬರುವಿಕೆಯ ಸಾವಿರ ವರ್ಷದ ಆಳ್ವಿಕೆಯ ಪ್ರಾರಂಭದವರೆಗಿರುವ ಕಾಲ, C ಇದು ಮುಂದೆ ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪ.ಇದು ಕ್ರಿಸ್ತನ ಆಡಳಿತದಿಂದ ಪ್ರಾರಂಭವಾಗಿ "ಮುಂದಣ ಯುಗಗಳವರೆಗೆ" ಹೋಗುವುದು (ಎಫೆಸ 1:10:2:7). ಈ ಮೂರು ಮಹಾ ಯುಗಗಳನ್ನು ಕುರಿತು ಸತ್ಯವೇದದಲ್ಲಿ ಅನೇಕ ಸಲ ಪ್ರಸ್ತಾಪಿಸಲಾಗಿದೆ. A ಅಂದರೆ "ಹಿಂದೆ ಇದ್ದ ಲೋಕ" ಅಂದರೆ ಜಲಪ್ರಳಯಕ್ಕೆ ಮುಂಚೆ. B ಎಂದರೆ ಈಗಿನ ಕಾಲ. ಕ್ರಿಸ್ತನು ಈ ಲೋಕವೆಂದು, ಪೌಲನು ಈಗಿನ ಕೆಟ್ಟ ಲೋಕವೆಂದು, ಪೇತ್ರನು ಈಗಿರುವ ಲೋಕವೆಂದು ಕರೆದಿದ್ದಾರೆ. C ಅಂದರೆ "ಮುಂದೆ ಬರುವ ಯುಗ ಅಲ್ಲಿ ನೀತಿಯು ವಾಸವಾಗಿರುತ್ತದೆ". ಇಂದಿನ ಯುಗದಲ್ಲಿ ಕೆಟ್ಟತನವು ಆಳ್ವಿಕೆ ನಡೆಸುತ್ತಿರುವುದರಿಂದ ನೀತಿವಂತರು ಸಂಕಟ ಪಡುತ್ತಾರೆ. ಮುಂದೆ ನೀತಿವಂತರು ಆಳುವುದರಿಂದ ಕೆಟ್ಟವರು ಸಂಕಟ ಪಡುತ್ತಾರೆ. ಕೊನೆಗೆ ಕೆಟ್ಟತನವು ಸಂಪೂರ್ಣವಾಗಿ ನಾಶವಾಗುವುದು.

ದೇವರ ಯೋಜನೆಯನ್ನು ಮೂರು ಪ್ರತ್ಯೇಕ ಯುಗಗಳಾಗಿ ತೋರಿಸಿದ್ದರೂ ಪ್ರತಿಯೊಂದು ಯುಗವು ಆ ಮಹಾ ಯೋಜನೆಯ ಒಂದು ಅಂಗವಾಗಿದೆ. ಅದು ಪರಿಪೂರ್ಣವಾದಾಗಲೇ ಅದರಲ್ಲಿರುವ ದೈವ ಜ್ಞಾನವನ್ನು ಪ್ರಕಟಿಸುವುದು. ಆದರೆ ಮಾನವನು ಇದನ್ನು ಅರ್ಥ ಮಾಡಿಕೊಳ್ಳದೆ ಪ್ರತಿಯೊಂದು ಯುಗವು ಬಿಡಿ ಬಿಡಿ ಭಾಗವಾಗಿದೆಯೆಂದು ತಿಳಿದಿರುವನು. ಮೊದಲಿದ್ದ ಯುಗವು ಪ್ರಳಯದಿಂದ ನಾಶವಾಯಿತು. ಆದುದರಿಂದ ಈಗಿನ ಕೆಟ್ಟ ಲೋಕಕ್ಕಿಂತ ಅದು ಬೇರೆಯಾಗಿದ್ದಿರಲೇ ಬೇಕು. ನಮ್ಮ ಕರ್ತನು ಹೇಳಿರುವಂತೆ ಸೈತಾನನು ಈ ಲೋಕದ ಅಧಿಪತಿಯಾ ಗಿರುವುದರಿಂದ ಹಿಂದೆ ಇದ್ದ ಲೋಕದಲ್ಲಿ ಅವನ ಸಹಾಯಕರು ಇದ್ದರೂ ಸಹ ಅವನು ಅಧಿಪತಿಯಾಗಿರಲಿಲ್ಲವೆಂದು ತಿಳಿದುಬರುತ್ತದೆ. ಆ ಕಾಲದ ಜನರೊಂದಿಗೆ ದೇವರು ಯಾವ ರೀತಿಯು ವ್ಯವಹಾರವನ್ನಿಟ್ಟುಕೊಂಡಿದ್ದನು ಎಂದು ಸತ್ಯವೇದವು ಪ್ರಕಟಿಸುತ್ತದೆ. ಇದರಿಂದ ಆತನ ಯೋಜನೆಯು ಒಂದು ಪರಿಪೂರ್ಣವಾದ ಯೋಜನೆಯೆಂದು ತಿಳಿಯಬಹುದು. ಪ್ರಳಯದ ಮುಂಚಿನ ಕಾಲದಲ್ಲಿ ಬಿದ್ದು ಹೋಗಿದ್ದ ಮಾನವ ಜನಾಂಗವನ್ನು ರಕ್ಷಿಸುವುದಕ್ಕಾಗಿ ದೇವದೂತರ ಒಂದು ವಿಶೇಷ ಆಡಳಿತ ಪದ್ಧತಿಯನ್ನು ಇಟ್ಟಿದ್ದನು. ದೇವರ ಅಪ್ಪಣೆಯ ಮೇರೆಗೆ ಮಾನವರನ್ನು ಉತ್ತಮಸ್ಥಿತಿಗೆ ತರುವುದೇ ಅವರ ಗುರಿಯಾಗಿತ್ತು. ದೇವರ ಸೃಷ್ಟಿಕಾರ್ಯವನ್ನು ಹರ್ಷಧ್ವನಿಯಿಂದ ಕೊಂಡಾಡುವುದೇ ಅವರ ಕೆಲಸವಾಗಿತ್ತು (ಯೋಬ 38:7). ಆದರೆ ಅವರ ಆಡಳಿತವು ಸಮರ್ಪಕವಾಗಿರಲಿಲ್ಲ. ಪೌಲನು ಈಗಿನ ಕಾಲವನ್ನು ಹಿಂದಿನ ಮತ್ತು ಮುಂದಿನ ಕಾಲಗಳಿಗೆ ಹೋಲಿಸಿ ಹೀಗೆ ನುಡಿದಿರುವನು. "ನಾವು ಪ್ರಸ್ತಾಪಿಸುವ ಸಾಮ್ರಾಜ್ಯವನ್ನು ಆತನು ದೇವದೂತರಿಗೆ ಅಧೀನ ಮಾಡಲಿಲ್ಲವಲ್ಲಾ" (ಇಬ್ರಿಯ 2:5). ಹೌದು ಮುಂದೆ ಬರುವ ಯುಗವು ಸಂಪೂರ್ಣವಾಗಿ ಕ್ರಿಸ್ತನ ಮತ್ತು ಆತನ ಸಭೆಯು ಆಡಳಿತಕ್ಕೊಳಪಟ್ಟಿರುವುದು. ಅದು ನೀತಿಯುಗವಾಗಿರುವುದರಿಂದ ಹಿಂದಿನ ಮತ್ತು ಇಂದಿನ ಯುಗಗಳಿಗಿಂತ ಸುಂದರವಾಗಿರುತ್ತದೆ.ದೇವದೂತರ ಆಳ್ವಿಕೆಯಲ್ಲಿದ್ದ ಕಾಲದಲ್ಲಿ ಪಾಪವು ಅತಿಯಾಗಿ ಹೆಚ್ಚಿದ್ದರಿಂದ ಕೇವಲ ಎಂಟು ಜನರನ್ನು ಉಳಿಸಿ ಉಳಿದವರನ್ನು ಪ್ರಳಯದಿಂದ ನಾಶಮಾಡಿದನು. ಆದಿ. 7:13.

ಈಗಿನ ಕೆಟ್ಟಲೋಕವನ್ನು ಮಾನವನೇ ಆಳಲಿ ಎಂದು ದೇವರು ಅವಕಾಶವನ್ನು ಕೊಟ್ಟಿರುವನು. ಆದರೆ ಮಾನವನು ಕೆಟ್ಟತನದಿಂದ ಸೈತಾನನ ಅಂದರೆ, "ಈ ಇಹಲೋಕಾಧಿಪತಿಯು" ವಶವಾಗಿದ್ದಾನೆ. ಸೈತಾನನತಂತ್ರೋಪಾಯಗಳ ವಿರುದ್ಧವಾಗಿ ಮಾನವನು ಸ್ವಯಂ ಆಡಳಿತವನ್ನು ನಡೆಸಲು ಜಲಪ್ರಳಯದಿಂದ ಇಂದಿನವರೆಗೂ ಪ್ರಯತ್ನಿಸುತ್ತಲೇ ಇರುವನು. ಸೈತಾನನ ಅಡಿಯಲ್ಲಿರುವ ಮಾನವನ ಆಳ್ವಿಕೆಯ ಪ್ರಯತ್ನವು ಇಡೀ ಪ್ರಪಂಚಕ್ಕೆ ಅಂತಿಮ ಕಾಲದಲ್ಲಿ ಬರುವ

ಮಹಾಸಂಕಟದೊಂದಿಗೆ ಕೊನೆಗೊಳ್ಳುವುದು. ಆ ದೇವದೂತರ ಶಕ್ತಿಯಾಗಲಿ ಮಾನವನ ಸ್ವಂತ ಶಕ್ತಿಯಾಗಲಿ ಈ ಜನಾಂಗವನ್ನು ಉದ್ಧರಿಸಲು ಸಾಧ್ಯವಾಗಲಿಲ್ಲ. ಸ್ವಯಂ ಆಡಳಿತವನ್ನು ಹೊಂದಿರುವ ಸೈತಾನನ ಲೋಕವು ಈ ಪ್ರಪಂಚವು ಅರಿಯದೆ ಇರುವಂತ ಮಹಾ ಸಂಕಟದಲ್ಲಿ ನಾಶವಾಗುವುದು.

ಎರಡನೆ ಹಂಚಿಕೆಯಾದ B ಯುಗವು ಪ್ರತ್ಯೇಕವಾದ ಮೂರು ಉಪ ವಿಭಾಗಗಳಿಂದ ಕೂಡಿದ್ದು ಪ್ರತಿಯೊಂದು ದೇವರ ಯೋಜನೆಯಲ್ಲಿ ಪ್ರಗತಿಮಾರ್ಗಧಲ್ಲಿ ಮುಂದುವರಿ ಯುತ್ತಿರುವುದು.

D ಯುಗದಲ್ಲಿ ದೇವರು ನಮ್ಮ ಪಿತೃಗಳಾದ ಅಬ್ರಹಾಮ್, ಇಸಾಕ್ ಮತ್ತು ಯಾಕೋಬ ಇವರುಗಳೊಂದಿಗೆ ಪ್ರತ್ಯೇಕ ವ್ಯವಹಾರವನ್ನಿಟ್ಟುಕೊಂಡಿದ್ದನು. (ಅಂದರೆ ಅದು ಪಿತೃಗಳ ಕಾಲ)

E ಯುಗವು ಯಾಕೋಬನ ಸಾವಿನಿಂದ ಪ್ರಾರಂಭವಾಗುವ ಯೆಹೂದ್ಯರ ಕಾಲವಾಗಿದೆ. ಈ ಕಾಲದಲ್ಲಿ ದೇವರು ಯೆಹೂದ್ಯ ಜನಾಂಗವನ್ನು ತನ್ನ "ಸ್ವಕೀಯ ಪ್ರಜೆಯೆಂದು" ಪರಿಗಣಿಸಿ "ಭೂಮಿಯ ಸಕಲ ಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ" ಆಮೋಸ 3:2 ಎಂದು ಪ್ರಕಟಿಸಿದ್ದನು. ಈ ಜನಾಂಗವು ಕ್ರಿಸ್ತನ ಸಭೆಗೆ ಗುರುತಾಗಿದ್ದಿತು. ಅವರಿಗೆ ಮಾಡಿದ ವಾಗ್ದಾನಗಳು ಸತ್ಯ ಸಭೆಗೆ ಮಾಡಿದ ಉತ್ತಮ ವಾಗ್ದಾನಗಳ ಛಾಯೆಯಾಗಿತ್ತು. ಅವರು ಐಗುಪ್ತದಿಂದ ಅರಣ್ಯದಲ್ಲಿ ಪ್ರಯಾಣ ಮಾಡಿ ವಾಗ್ದತ್ತ ದೇಶವನ್ನು ಸೇರಿದಂತೆ ಈಗ ಸಭೆಯು ಈ ಪಾಪವೆಂಬ ಅರಣ್ಯದಲ್ಲಿ ಪ್ರಯಾಣ ಮಾಡಿ ಸ್ವರ್ಗೀಯ ಕಾನಾನ್ ಸೇರುವುದನ್ನು ಸೂಚಿಸುತ್ತದೆ. ಅವರ ಯಜ್ಞಾರ್ಪಣೆಗಳೆಲ್ಲಾ ಛಾಯಯಾಗಿದೆಯೇ ಹೊರತು ನಿಜವಲ್ಲ. ಯಾಕೆಂದರೆ ಹೋತ ಹೋರಿಗಳ ರಕ್ತದಿಂದ ಪಾಪಗಳು ಪರಿಹಾರವಾಗುವುದು ಅಸಾಧ್ಯವಾಗಿದೆ. ಇಬ್ರಿಯ 10:4 ಆದರೆ ಸುವಾರ್ತಾ ಯುಗದ F ಲೋಕದ ಪಾಪ ಪರಿಹಾರಕ್ಕೆ "ಉತ್ತಮ ಯಜ್ಞಾರ್ಪಣೆಗಳಿವೆ". ಹೀಗೆ ಅವರು ರಾಜವಂಶದ ಯಾಜಕರಾಗಿ ತಮ್ಮ ದೇಹವನ್ನು ಸಜೀವಯಜ್ಞವಾಗಿ ದೇವರಿಗೆ ಮಹಾಯಾಜಕನಾಗಿರುವ ಯೇಸುಕ್ರಿಸ್ತನ ಮೂಲಕ ಅರ್ಪಿಸುತ್ತಿದ್ದಾರೆ (ಇಬ್ರಿಯ 3:1). ಯೆಹೂದ್ಯರ ಯುಗದಲ್ಲಿ ನಡೆದ ಕಾರ್ಯಗಳು ಮತ್ತು ನಿಯಮಗಳು ಛಾಯೆಯಾಗಿ ಈ ಸುವಾರ್ತಾ ಯುಗದಲ್ಲಿ ಅವುಗಳ ನಿಜಸ್ವರೂಪವು ಕಂಡು ಬರುತ್ತಿದೆ (ಇಬ್ರಿಯ 10:1).

F ಯೆಂಬ ಸುವಾರ್ತಯುಗದಲ್ಲಿ ಕ್ರಿಸ್ತನ ಸಭೆಯು ಲೋಕದಿಂದ ಪ್ರತ್ಯೇಕವಾಗಿ ನಂಬಿಕೆಯಿಂದ ಜೀವವೆಂಬ ಜಯಮಾಲೆಯನ್ನು ಶ್ರೇಷ್ಠ ಭಾಗ್ಯಗಳನ್ನು ಹೊಂದಿ ಮುಂದೆ ದೈವಿಕ ಸ್ವರೂಪದಲ್ಲಿ ಭಾಗಿಗಳಾಗುವರು (2 ಪೇತ್ರ 1:4). ಪಾಪವು ಲೋಕದಲ್ಲಿ ಇನ್ನೂ ಆಡಳಿತ ನಡೆಸುತ್ತಿರುವುದು. ಸಭೆಯು ಈ ಲೋಕದೊಂದಿಗೆ ವ್ಯವಹಾರವನ್ನಿಟ್ಟುಕೊಂಡಿದ್ದರೂ ತಮ್ಮ ಮಾನವಸ್ವಭಾವವನ್ನು ತ್ಯಜಿಸಿ ಸಜೀವಯಜ್ಞವಾಗಿ ಅರ್ಪಿತವಾಗಲು ಅರ್ಹರೋ ಇಲ್ಲವೋ ಎಂದು ಪರೀಕ್ಷಿಸಲಾಗುವುದು. ಆಗ ಪುನರುತ್ಥಾನದಲ್ಲಿ ಇವರು ಕ್ರಿಸ್ತನಂತಾಗಲು ಅರ್ಹರು ಎಂದು ತೀರ್ಮಾನಿಸಲಾಗುವುದು (ಕೀರ್ತನೆ 17:15).

ಮಹಾಯುಗದ C ಹಂಚಿಕೆಯು ಅನೇಕ ಯುಗಗಳಿಂದ ಕೂಡಿರುವುದು. "ಮುಂದೆ ಬರುವ ಯುಗಗಳು" ಅವುಗಳಲ್ಲಿ ನಮಗೆ ಸ್ಪಷ್ಟವಾಗಿ ತಿಳಿದಿರುವ ಯುಗ ಎಂದರೆ ಕ್ರಿಸನ ಸಾವಿರ ವರುಷದ ಆಳ್ವಿಕೆ. G ಈ ಆಳ್ವಿಕೆಯ ಕಾಲದಲ್ಲಿ ಲೋಕದ ಸರ್ವಜನಾಂಗವನ್ನು ಆಶೀರ್ವದಿಸಲಾಗುವುದು. ಅದೇ ಕಾಲದಲ್ಲಿ ಪೂರ್ವದಲ್ಲಿ ದೇವರು ಪ್ರವಾದಿಗಳ ಬಾಯಿಂದ ಹೇಳಿಸಿದ ಸಮಸ್ತವನ್ನು ಸರಿಮಾಡುವ ಕಾರ್ಯವು ನೆರವೇರುವುದು (ಅ.ಕೃ 3:19–21). ಆ ಕಾಲದಲ್ಲಿಪಾಪ ಮತ್ತು ಮರಣ ಸಂಪೂರ್ಣವಾಗಿ ಅಳಿಸಿಹೋಗುವುದು.ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ ಕ್ರಿಸ್ತನು ಆಳುವುದು ಅವಶ್ಯಕ. ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವುದು (1 ಕೊರಿ. 15:25). 26 ಇದು ಪುನರ್ ಸ್ಥಾಪನೆಯ ಕಾಲ. "ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕುಳಿತುಕೊಂಡೆನು. ಹಾಗೆಯೇ ಜಯಹೊಂದುವವರನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು" (ಪ್ರಕ. 3:21) ಎಂದು ಯೇಸು ವಾಗ್ದಾನ ಮಾಡಿದಂತೆ ಮದಲಗಿತ್ತಿಯಾದ ಕ್ರಿಸ್ತನ ಸಭೆಯು ಆತನೊಂದಿಗೆ ಆಳ್ವಿಕೆ ನಡೆಸುವುದು.

H ಎಂಬುದು "ಮುಂದೆ ಬರುವ ಯುಗಗಳಲ್ಲಿ" ಒಂದಾಗಿದೆ. ಇದು ಸಮಸ್ತವನ್ನು ಸರಿಮಾಡಿದ ಅನಂತರ ಬರುವ ಕಾಲವಾಗಿದೆ. ಆದರೆ ಸತ್ಯವೇದದಲ್ಲಿ ಅದರ ವಿಷಯವಾಗಿ ಯಾವುದನ್ನೂ ತಿಳಿಸಿಲ್ಲ. ಆದರೆ ಆಗ ದೈವಿಕ ಕೃಪೆಯಿರುವುದರಿಂದ ಸಂತೋಷ, ಮಹಿಮೆ, ಆಶೀರ್ವಾದಗಳಿರುವುವು ಎಂದು ತಿಳಿದುಕೊಳ್ಳಬಹುದು.

ಪ್ರತಿಯೊಂದು ಯುಗಗಳಿಗೂ ಪ್ರತ್ಯೇಕ ಕಾಲವಿರುವುದು. ಪ್ರತಿಯೊಂದು ಪ್ರಾರಂಭವಾಗಿ ಪ್ರಗತಿಯಿಂದ ಮುಂದುವರೆದು ಸುಗ್ಗಿಯಲ್ಲಿ ಪೂರ್ಣ ಫಲಕೊಡುವುದು. ಯೆಹೂದ್ಯರ ಕಾಲದ ಅಂತ್ಯದಲ್ಲಿದ್ದ ಸುಗ್ಗಿಯ ಕಾಲವು ಸುಮಾರು ನಾಲ್ವತ್ತು ವರ್ಷಗಳಾದ್ದಾಗಿತ್ತು. ಕ್ರಿಸ್ತನು ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟು ಬೋಧಕೋದ್ಯೋಗವನ್ನು ಪ್ರಾರಂಭಿಸಿದಂದಿನಿಂದ ಯೆರುಸಲೇಮಿನ ನಾಶನದವರೆಗಿತ್ತು. (ಕ್ರಿ.ಶ. 29 ರಿಂದ ಕ್ರಿ.ಶ. 70) ಈ ಸುಗ್ಗಿಯಲ್ಲಿ ಯೆಹೂದ್ಯರ ಯುಗವು ಮುಕ್ತಾಯವಾಗಿ ಸುವಾರ್ತಾ ಯುಗವು ಪ್ರಾರಂಭವಾಯಿತು (ಅ.ಕೃ. 10:37, 38) ಚಿತ್ರದಲ್ಲಿ ತೋರಿಸಿರುವಂತೆ ಈ ಯುಗಗಳ ನಡುವೆ ಸ್ಥಳ ಬಿಡಲಾಗಿದೆ.

ಯೆಹೂದ್ಯರ ಕಾಲವು ಅಳತೆಯ ಪ್ರಕಾರ ಮುಕ್ತಾಯವಾಯಿತು. ಆತನ ಮೂರೂವರೆ ವರ್ಷದ ಬೋಧಕೋದ್ಯಮ ಮುಗಿಯುವ ಕಾಲದಲ್ಲಿ "ನೋಡಿರಿ ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ" (ಮತ್ತಾ 23:28) ಎಂದು ಹೇಳಿ ಕರ್ತನು ಆ ಜನಾಂಗವನ್ನು ತಳ್ಳಿಬಿಟ್ಟನು. ಆದರೂ ಪ್ರವಾದನೆಯ ಪ್ರಕಾರ ಅವರಿಗೆ ಕೃಪೆಯನ್ನು ತೋರಿಸಿ ಇನ್ನೂ ಮೂರೂವರೆ ವರ್ಷಕಾಲ ಸುವಾರ್ತಾ ಕರೆಯನ್ನು ಕೊಡಲಾಯಿತು (ದಾನಿ 9:24,27). ಪ್ರವಾದಿಯ ಪ್ರಕಟಣೆಯ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳಿಗೋಸ್ಕರ ಸತ್ತನು ಮತ್ತು ಇದರಿಂದಾಗಿ ಯಜ್ಞನೈವೇದ್ಯಗಳು ನಿಂತುಹೋದವು. ನಿಜವಾದ ಯಜ್ಞವು ಅರ್ಪಿತವಾದುದ್ದರಿಂದ ಉಳಿದ ಯಜ್ಞಗಳನ್ನು ಯೆಹೋವನು ಲಕ್ಷಿಸನು.

ಆದರೂ ಪ್ರವಾದನೆಯ ಪ್ರಕಾರ ಅವರಿಗೆ (ಯೆಹೂದ್ಯರಿಗೆ) $3^{1}/_{2}$ ವರ್ಷಗಳ ಕಾಲದ ಕೃಪೆ ಕೊಡಲಾಯಿತು (ದಾನಿಯೇಲ. 9:24–27). ಪ್ರವಾದಿಯು ವಿಧಿಯುಕ್ತವಾಗಿ ತಿಳಿಸಿದ 70ನೇ ವಾರದ (ಅಂತ್ಯದ ವಾರದ) ಮಧ್ಯದಲ್ಲಿ ನಮ್ಮ ಮಸ್ಸೀಯನು ಛೇದಿಸಲ್ಪಟ್ಟನು. "ಆತನು ಪ್ರಾಣವನ್ನು ಅರ್ಪಿಸಿದ್ದು (ತನಗೋಸ್ಕರವಲ್ಲ) ನಮ್ಮ ಪಾಪಪರಿಹಾರಕ್ಕೋಸ್ಕರ". ಇದರಿಂದಾಗಿ ಯಜ್ಞನೈವೇದ್ಯಗಳು ನಿಂತುಹೋದವು. ಹೀಗೆ 70 ವಾರದ $3^{1}/_{2}$ ವರ್ಷಗಳ ಅಂತ್ಯದಲ್ಲಿ ಯೆಹೂದ್ಯರ ಕಾಲವು ಮುಕ್ತಾಯವಾಗಿ ಅನ್ಯ ಜನಾಂಗಗಳಿಗೆ ಸುವಾರ್ತೆಯನ್ನು ಸಾರಲಾಯಿತು. ಇದು ಕೊರ್ನೇಲ್ಯ ನೆಂಬುವನಿಂದ ಪ್ರಾರಂಭವಾಯಿತು (ಅಕೃ 10:45). ಹೀಗೆ ಯೆಹೂದ್ಯ ಜನಾಂಗವು ದೇವರ ಕೃಪೆಯನ್ನು ಕಳೆದುಕೊಂಡು ಕಷ್ಟ ಸಂಕಟಗಳಿಗೆ ಗುರಿಯಾಯಿತು. ಹೀಗೆ ಯೆಹೂದ್ಯರ ಸುಗ್ಗಿಯ ಕಾಲವು ಮುಗಿದು ಸುವಾರ್ತಾ ಯುಗವು ಪ್ರಾರಂಭವಾಗಿದೆ. ಇದು ಕ್ರಿಸ್ತನ ದೇಹವೆಂಬ ಸಭೆಯನ್ನು ಕೂಡಿಸಿ ಆರಿಸುವ ಕಾಲವಾಗಿದೆ. ಇದು ಪವಿತ್ರಾತ್ಮನ ಕಾಲವಾಗಿದೆ. ಆದುದರಿಂದ ಕ್ರಿಸ್ತನು ದೀಕ್ಷಾ ಸ್ನಾನ ಹೊಂದುವ ಸಮಯದಲ್ಲಿ ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟಂದಿನಿಂದ ಸುವಾರ್ತಾ ಯುಗವು ಪ್ರಾರಂಭವಾಗಿದೆ ಎಂದು ಹೇಳಬಹುದು. ಅ.ಕೃ. 10:38; ಲೂಕ 3:22; 4:1,18 ಆದರೆ ಆತನ ದೇಹವೆಂಬ ಸಭೆಯ ಆರಿಸುವಿಕೆಯು ಮೂರವರೆ ವರ್ಷಗಳ ತರುವಾಯ ಪ್ರಾರಂಭವಾಯಿತು.

ಈ ಸುವಾರ್ತ ಯುಗದ ಅಂತ್ಯದಲ್ಲೂ "ಸುಗ್ಗಿಯ" ಕಾಲವಿರುವುದು. ಇಲ್ಲೂ ಎರಡು ಯುಗಗಳು ಒಂದರ ಮೇಲೊಂದು ಪ್ರಸರಿಸಿರುವುದು. ಅದು ಸುವಾರ್ತಾ ಯುಗದ ಮುಕ್ತಾಯ ಮತ್ತು ಕ್ರಿಸ್ತನ ಸಾವಿರ ವರ್ಷಗಳ ಆಳ್ವಿಕೆಯ ಪ್ರಾರಂಭದ ಕಾಲ. ಯೆಹೂದ್ಯರ ಕಾಲವು ಮುಕ್ತಾಯವಾದಂತೆ ಸುವಾರ್ತಾ ಯುಗವು ಕ್ರಮ ಕ್ರಮವಾಗಿ ಮುಗಿಯುತ್ತಾ ಬರುವುದು. ಆ ಕಾಲದಲ್ಲಿ ಇಸ್ರಾಯೇಲ್ಯರಿಗೆ ಹೇಗೆ ಏಳು ವರ್ಷಗಳ ಕಾಲ ವಿಶೇಷ ಅವಕಾಶವನ್ನು ಕೊಡಲಾಯಿತೋ ಅದೇ ರೀತಿಯಲ್ಲಿ ಈ ಕಾಲದಲ್ಲೂ ಸಭೆಗೆ ಏಳು ವರ್ಷಗಳ ಕೃಪಾ ಕಾಲವನ್ನು ಕೊಡಲಾಗುವುದು. ಅನಂತರ ಈ ಲೋಕಕ್ಕೆ ಮಹಾ ಸಂಕಟವು ಬರುವುದು. ದುಷ್ಟರು ಶಿಕ್ಷೆಗೆ ಒಳಗಾಗುವರು. ನೀತಿವಂತರು ಆಳ್ವಿಕೆಗೆ ಸಿದ್ಧವಾಗುವರು.

**ಪ್ರಭಾವಕ್ಕೆ ಮಾರ್ಗ**

K, L, M, N, P, R ಪ್ರತಿಯೊಂದು ಪ್ರತ್ಯೇಕ ಸ್ವಭಾವವನ್ನು ಸೂಚಿಸುತ್ತದೆ. N ಪರಿಪೂರ್ಣ ಮಾನವನ ಸ್ವಭಾವವನ್ನು ತಿಳಿಸುತ್ತದೆ. ಪಾಪ ಮಾಡುವ ಮೊದಲು ಆದಾಮನು ಈ ಸ್ವಭಾವದವನಾಗಿದ್ದನು. ಆದರೆ ಅವಿಧೇಯತ್ವದಿಂದ ಪಾಪದ ಸ್ವಭಾವಕ್ಕೆ ಬಿದ್ದನು. ಹಾಗೆಯೇ ಅವನ ಸಂತತಿಯೆಲ್ಲವು ಹುಟ್ಟಿರುವುದು. R ಇದು ನಾಶಕ್ಕೆ ಹೋಗುವ ಅಗಲವಾದ ದಾರಿಯನ್ನು ಸೂಚಿಸುತ್ತದೆ. P ಎಂಬುದು ಧರ್ಮಶಾಸ್ತ್ರದ ನಿಯಮದ ಪ್ರಕಾರ ಯಜ್ಞಾರ್ಪಣೆಯು ದೋಷನಿವಾರಕ ಎಂಬುದನ್ನು ತಿಳಿಸುತ್ತದೆ.ಇದು ಪರಿಪೂರ್ಣ ನಿವಾರಕವಲ್ಲ ಯಾಕೆಂದರೆ – "ಧರ್ಮಶಾಸ್ತ್ರವು ಯಾವುದನ್ನು ಸಿದ್ಧಿಗೆ ತಾರದು" ಇಬ್ರಿಯ 7:19.

N ಎಂಬುದು ಮಾನವನ ಪರಿಪೂರ್ಣತೆಯನ್ನು ಸೂಚಿಸುತ್ತದೆ. ಪಾಪಮಾಡುವ ಮೊದಲು ಆದಾಮನಿಗಿದ್ದ ಸ್ವಭಾವವನ್ನಲ್ಲದೆ ಎಲ್ಲಾ ನೀತಿವಂತರನ್ನು ಸೂಚಿಸುತ್ತದೆ. ಸುವಾರ್ತೆಯ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು. ಯಾರು ಈ ಸತ್ಯವನ್ನು ನಂಬಿ ದೇವರ ದೃಷ್ಟಿಯಲ್ಲಿ ಪರಿಪೂರ್ಣರಾಗಿರುವರೋ ಅಂಥವರನ್ನು ನೀತಿ ವಂತರೆಂದು ಪರಿಗಣಿಸಲಾಗುವುದು. N ಸ್ವಭಾವದ ಮೂಲಕವೇ ಮನುಷ್ಯನು ದೇವರನ್ನು ಸಮೀಪಿಸಲು ಅಥವಾ ವ್ಯವಹರಿಸಲು ಸಾಧ್ಯ. ಇವರನ್ನು ದೇವಪುತ್ರರು ಎಂದು ಕರೆಯಲಾಗುವುದು. ಆದಾಮನು ದೇವರ ಮಗನಾಗಿದ್ದನು (ಲೂಕ 3:38). ಅವಿಧೇಯನಾಗುವ ಮೊದಲು ದೇವರೊಂದಿಗೆ ವ್ಯವಹರಿಸುತ್ತಿದ್ದನು. ಹಾಗೆಯೇ ಯಾರು ಕ್ರಿಸ್ತನ ವಿಮೋಚನೆಯಲ್ಲಿ ನಂಬಿಕೆಯಿಟ್ಟು ಉತ್ತಮರೆಂದು ಪರಿಗಣಿಸಲ್ಪಡುವರೋ ಅಂಥವರು ದೇವರ ಅನ್ಯೋನ್ಯತೆಯಲ್ಲಿರುವರು.

ನೀತಿವಂತರಿಗೆ ಸುವಾರ್ತಾಯುಗದಲ್ಲಿ ಒಂದು ವಿಶೇಷ ಬಹುಮಾನವನ್ನು ಕೊಡಲಾಗುವುದು. ಕೆಲವು ನಿಯಮಗಳಿಗೆ ಒಳಗಾದರೆ ತಮ್ಮ ಮಾನವ ಸ್ವಭಾವವನ್ನು ಕಳೆದುಕೊಂಡು ತಮ್ಮ ರಕ್ಷಕನಂತೆ ಸ್ವರ್ಗೀಯ ಜೀವಿಗಳಾಗುವರು. ಪಾಪಗಳನ್ನು ಬಿಟ್ಟು ಬನ್ನಿರಿ ಎಂಬ ಕರೆಯಿಲ್ಲದೆ ಸಂತೋಷ ಸಮಾಧಾನದಿಂದ ಇರುವರು. ಕೆಲವರು ದೇವರ ಪ್ರೀತಿಯಿಂದಲೇ ತಮ್ಮ ಪಾಪಗಳು ಮನ್ನಿಸಲ್ಪಡುವವು ಎಂದು ತಿಳಿದು, "ಕರ್ತನೇ ನಾವು ಮಾಡಬೇಕಾದ್ದೇನು" ಎಂದು ಕೇಳುವರು. ಇದರ ಉತ್ತರವನ್ನು ಪೌಲನು ತಿಳಿಸಿರುವನು. "ಆದುದರಿಂದ ಸಹೋದರರೇ ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದುಕೊಂಡು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ

ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ, ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆ" ರೋಮಾ. 12:1 ಅಂದರೆ ನಾವು ನಮ್ಮ ಸರ್ವಸ್ವವನ್ನು ದೇವರಿಗೆ ಒಪ್ಪಿಸಿ ನಮ್ಮ ಕುಟುಂಬ ಅಥವಾ ಲೋಕಕ್ಕಾಗಿ ಜೀವಿಸದೆ ತನ್ನ ಸ್ವರಕ್ತವನ್ನು ಚೆಲ್ಲಿ ನಮ್ಮನ್ನು ಕೊಂಡುಕೊಂಡ ಕ್ರಿಸ್ತನಿಗಾಗಿ ಜೀವಿಸಬೇಕು ಎಂಬುದೇ.

ದೇವರು ಲೋಪದೋಷದ ಯಜ್ಞಗಳನ್ನು ಮೆಚ್ಚುವುದಿಲ್ಲ. ಆದಾಮನ ಪಾಪದಿಂದ ಎಲ್ಲರೂ ಪಾಪಿಗಳೇ. ಆದುದರಿಂದ ದೇವರು ನಮ್ಮ ಯಜ್ಞವನ್ನು ಸ್ವೀಕರಿಸುವನೇ? ನಾವು ಪವಿತ್ರವಾಗಿರುವುದರಿಂದ ದೇವರು ನಮ್ಮನ್ನು ಸ್ವೀಕರಿಸುತ್ತಾನೆ ಎಂದು ಪೌಲನು ಹೇಳುತ್ತಾನೆ. ಆದರೆ ನಾವು ಕ್ರಿಸ್ತನಂತೆ ಪವಿತ್ರರಲ್ಲ, ನಾವು ದಂಡನೆಗೆ ಒಳಗಾಗಿರುವವರು. ಆದರೆ ಯಾರ್‍ಯಾರು ಕ್ರಿಸ್ತನ ವಿಮೋಚನೆಯಲ್ಲಿ ನಂಬಿಕೆ ಇಟ್ಟಿರುವರೊ ಅಂಥವರ ಯಜ್ಞವನ್ನು ದೇವರು ಮೆಚ್ಚುವನು. ಅವರು ದೇವರ ಕರೆಯುವಿಕೆಗೆ ವಿಧೇಯರಾಗಿ ಕ್ರಿಸ್ತನಿಗಾಗಿ ಶ್ರಮ ಪಡುವವರಾಗಿರಬೇಕು. ಅವರು ಶ್ರಮದಿಂದಲೇ ಜೀವವೆಂಬ ಜಯಮಾಲೆಯನ್ನು ಹೊಂದುವರು. ದೇವರ ಸೇವೆಗೆ ಮೀಸಲಾದ ಇವರನ್ನು ಮಾನವರೆಂದು ಗುರುತಿಸಲಾಗುವುದಿಲ್ಲ. ಸತ್ಯವಾಕ್ಯದಿಂದ ಹುಟ್ಟಿದ ದೇವರ ಆತ್ಮೀಯ ಮಕ್ಕಳಾಗುವ ಬಾಧ್ಯತೆಯನ್ನು ಹೊಂದುವರು. ನಂಬಿಕೆಯಿಂದ ಪ್ರತಿಫಲದ ಬಹುಮಾನಕ್ಕೆ ಒಂದು ಹೆಜ್ಜೆ ಹತ್ತಿರವಾಗಿರುವರು. ಅವರ ಆತ್ಮೀಕತೆಯು ಪರಿಪೂರ್ಣವಾಗಿಲ್ಲ. ಅವರು ಕೊಳ್ಳಲ್ಪಟ್ಟವರೇ ಹೊರತು ಆತ್ಮೀಕವಾಗಿ ಹುಟ್ಟಿದವರಲ್ಲ. M ಎಂಬುದು ಆತ್ಮೀಕ ಜೀವಿಗಳ ಲೋಕ. ಇವರು ಆತ್ಮೀಕವಾಗಿ ಕೊಳ್ಳಲ್ಪಟ್ಟವರಾಗಿರುವುದರಿಂದ ಮಾನವ ಸ್ವಭಾವವನ್ನು ಕಳೆದುಕೊಂಡು ದೇವರು ಅಂಗೀಕರಿಸುವ ಸಜೀವಯಜ್ಞವಾಗಿರುವರು. ಹೀಗಿರಲಾಗಿ ಅವರು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿರುವರು. ಪೂರ್ವ ಸ್ಥಿತಿಹೋಗಿ ಎಲ್ಲಾ ನೂತನವಾಯಿತು. "ದೇವರ ಆತ್ಮನು ವಾಸವಾಗಿರುವುದಾದರೆ ಶರೀರ ಭಾವಾಧೀನರಲ್ಲ. ದೇವರಾತ್ಮನಿಗೆ ಅಧೀನರಾಗಿದ್ದೀರಿ." 2 ಕೊರಿ 5:17; ರೋಮಾ 8:9 ಆತ್ಮನಿಂದ ಕೊಳ್ಳಲ್ಪಟ್ಟವರು ಸತ್ತವರಾಗಿ ಅವರ ಜೀವವು ಕ್ರಿಸ್ತನ ಮೂಲಕ ದೇವರೊಂದಿಗೆ ಸೇರಿಸಿಕೊಳ್ಳುವುದು.

L ಎಂಬುದು ಪರಿಪೂರ್ಣ ಆತ್ಮೀಕತೆಯನ್ನು ಸೂಚಿಸುವುದು. ಆದರೆ ಅದರೊಳಗೆ ಸೇರುವುದಕ್ಕೆ ಮೊದಲು ದೇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯು ನೆರವೇರಬೇಕು. ದೇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವವರು ಲೋಕದ ಪಾಲಿಗೆ ಸತ್ತವರಾಗಿದ್ದರೂ ಲೋಕದಲ್ಲಿದ್ದು ಕೊಂಡೇ ದೇವರ ಆಜ್ಞೆಯನ್ನು ಕೈಗೊಂಡು ಆತನ ಚಿತ್ತವನ್ನು ನೆರವೇರಿಸಬೇಕು. L ರೇಖೆಯಲ್ಲಿ ಪ್ರವೇಶವೆಂದರೆ ಪುನರ್ಜನ್ಮ. ಸುವಾರ್ತಾ ಯುಗದ ಅಂತ್ಯದಲ್ಲಿ ಈ ಲೋಕದಿಂದ ಆರಿಸಲ್ಪಟ್ಟ ಪೂರ್ಣಸಭೆಯು ಇದರೊಳಗೆ ಪ್ರವೇಶಿಸುವರು. ಕ್ರಿಸ್ತನಿಗಾಗಿ ಸತ್ತವರು ಮೊದಲು ಎದ್ದು ಬರುವರು. ಬದುಕಿರುವವರು ರೆಪ್ಪೆಬಡಿಯುವಷ್ಟರಲ್ಲಿ ಆತ್ಮೀಕ ಜೀವಿಗಳಾಗಿ ಪರಿವರ್ತನೆ ಹೊಂದಿ ಕ್ರಿಸ್ತನ ಮಹಿಮಾ ಶರೀರದಂತೆ ಆತ್ಮೀಕ ಜೀವಿಗಳಾಗುತ್ತಾರೆ. ಆಗ ಮರ್ತ್ಯತೆ ಹೋಗಿ ಅಮರತ್ವವು ಬರುವುದು. ಶರೀರದ ಎಲ್ಲಾ ಅಡಚಣೆಗಳು ತೊಲಗಿಹೋಗುವುದು.

K ರೇಖೆಯನ್ನು ಪ್ರವೇಶಿಸಬೇಕಾದರೆ ಆತ್ಮೀಕ ಜೀವಿಗಳಿಗಿಂತ ಒಂದು ಹೆಜ್ಜೆ ಉತ್ತಮವಾಗಿರಬೇಕು. ಮುಂದೆ ಬರುವ ಮಹಿಮೆ ವ್ಯಕ್ತಿಯ ಮಹಿಮೆಯಲ್ಲ. ಅದು ಮುಂದೆ ಹೊಂದುವ ಅಧಿಕಾರದ ಮಹಿಮೆ. L ರೇಖೆಯನ್ನು ಸೇರಿದ ಮೇಲೆ ಪರಿಪೂರ್ಣ ಪ್ರಭಾವವನ್ನು ಹೊಂದಿ ಕ್ರಿಸ್ತನಂತೆ ಆಗುವರು. ಹೀಗೆ ಆಡಳಿತದ ಮುಖ್ಯಸ್ಥನಾದ ಕ್ರಿಸ್ತನ ಸಹೋದ್ಯೋಗಿಗಳಾಗಿ ಆತನ ಬಲಪಾರ್ಶ್ವದಲ್ಲಿ ಕುಳಿತುಕೊಳ್ಳುವ ಅಧಿಕಾರವನ್ನು ಪಡೆಯುವರು.ಹೀಗೆ ನಿರಂತರ ಪ್ರಭಾವವಾಗಿರುವ K ರೇಖೆಯನ್ನು ಪ್ರವೇಶಿಸುವರು.

ನಕ್ಷೆಯನ್ನು ಚೆನ್ನಾಗಿ ಪರಿಶೀಲಿಸಿ ಅದರಲ್ಲಿರುವ ವಿವಿಧ ಯೋಜನೆಗಳು ದೈವ ಯೋಜನೆಯನ್ನು ಹೇಗೆ ಸೂಚಿಸುತ್ತದೆ ಎಂಬುದನ್ನು ತಿಳಿದುಕೊಳ್ಳೋಣ. ಸಂಪೂರ್ಣ ಪರಿಪೂರ್ಣತೆಯನ್ನು ಸೂಚಿಸಲು ಪಿರಮಿಡ್ ಚಿತ್ರವನ್ನು ಉಪಯೋಗಿಸಲಾಗಿದೆ. ಯಾಕೆಂದರೆ ಧರ್ಮ ಶಾಸ್ತ್ರದಲ್ಲಿ ಅನೇಕ ಸಲ ಇದನ್ನು ಪ್ರಸ್ತಾಪಿಸಲಾಗಿದೆ.

ಆದಾಮನು ಪರಿಪೂರ್ಣ ವ್ಯಕ್ತಿಯಾಗಿದ್ದನು. ಪಿರಮಿಡ್ (a) ಅದರ ಆಕಾರವನ್ನು ಗಮನಿಸಿ N ರೇಖೆಯು ಮಾನವನ ಪರಿಪೂರ್ಣತೆಯನ್ನು ಸೂಚಿಸುತ್ತದೆ. R ರೇಖೆಯು ಪಾಪದಿಂದ ತುಂಬಿದ ದುಷ್ಟ ಸ್ಥಳ. b ಪಿರಮಿಡ್ ಬಿದ್ದು ಹೋದ ಆದಾಮನನ್ನು ಪಾಪದಿಂದ ತುಂಬಿರುವ ಅನ್ಯ ಜನಾಂಗವನ್ನು ಸೂಚಿಸುತ್ತದೆ. ಅಂದರೆ ಆದಾಮನು ಪಾಪದಲ್ಲಿಬೀಳುವ ಮೊದಲು N ರೇಖೆಯಲ್ಲಿದ್ದು ಪಾಪಕ್ಕೆ ವಶವಾದ ಮೇಲೆ R ರೇಖೆಗೆ ಬಿದ್ದನು.

ಅಬ್ರಹಾಮನು ಮತ್ತು ಆ ಕಾಲದ ಇತರ ಭಕ್ತರು ನಂಬಿಕೆಯ ಮೂಲಕ ದೇವರ ಅನ್ಯೋನ್ಯತೆಯಲ್ಲಿದ್ದರು. ಇದನ್ನು N ರೇಖೆಯ ಮೇಲಿರುವ ಪಿರಮಿಡ್ c ಸೂಚಿಸುತ್ತದೆ. ಅಬ್ರಹಾಮನು ಕೆಟ್ಟು ಹೋದ ಮಾನವಜನಾಂಗದ ಸದಸ್ಯನಾಗಿದ್ದು ಸ್ವಾಭಾವಿಕವಾಗಿ R ರೇಖೆಯ ಮೇಲಿದ್ದರೂ ಪೌಲನು ಅವನನ್ನು ನಂಬಿಕೆಯಿಂದ ನೀತಿವಂತನಾಗಿದ್ದು ದೇವರ ದೃಷ್ಟಿಯಲ್ಲಿ ಪಾಪವಿಲ್ಲದ ಪರಿಪೂರ್ಣ ಮನುಷ್ಯನಾಗಿದ್ದನು ಎಂದು ತಿಳಿಸಿರುವನು. ಹೀಗೆ ದೇವರ ದೃಷ್ಟಿಯಲ್ಲಿ ಅವನು R ರೇಖೆಯಿಂದ N ರೇಖೆಗೆ ಏರಿದಂತಾಯಿತು. ಅಪರಿಪೂರ್ಣನಾಗಿದ್ದರೂ

ಆದಾಮನು ಕಳೆದುಕೊಂಡ ಭಾಗ್ಯವನ್ನು ಪಡೆದುಕೊಂಡು ದೇವರ ಸ್ನೇಹಿತನಾದನು (ಯಾಕೋಬ 2:23) N ರೇಖೆಯ ಮೇಲಿರುವವರೆಲ್ಲರೂ ದೇವರ ಸ್ನೇಹಿತರು R ರೇಖೆಯ ಮೇಲಿರುವವರು ತಮ್ಮ ದುಷ್ಟ ಕೃತ್ಯಗಳಿಂದ ದೇವರನ್ನು ವಿರೋಧಿಸಿ ಆತನ ವೈರಿಗಳಾಗಿರುವರು.

R ರೇಖೆಯ ಮೇಲಿರುವ d ಚಿತ್ರವು ಪ್ರಳಯದ ಅನಂತರದ ಮಾನವ ಜನಾಂಗವನ್ನು ಸೂಚಿಸುತ್ತದೆ. ಇದು ಪಾಪದ ಲೋಕ. ಇದು ಸುವಾರ್ತಾ ಸಭೆಯು ಆರಿಸಲ್ಪಟ್ಟು ಕ್ರಿಸ್ತನ ರಾಜ್ಯ ಪ್ರಾರಂಭವಾಗುವವರೆಗೆ ಮುಂದುವರಿಯುವುದು.

ಹೋತ ಹೋರಿಗಳ ರಕ್ತದಿಂದ, ಯಜ್ಞದಿಂದ ದೋಷ ನಿವಾರಣೆ ಮಾಡಿಕೊಳ್ಳುತ್ತಿದ್ದ ಯೆಹೂದ್ಯಯುಗದ ಇಸ್ರಾಯೇಲ್ಯರನ್ನು P ರೇಖೆಯ ಮೇಲಿರುವ (e) ಎಂಬುದು ಸೂಚಿಸುತ್ತದೆ. ಇದು ಸಿನಾಯ್ ಬೆಟ್ಟದ ಮೇಲೆ ದಶಾಜ್ಞೆಗಳನ್ನು ಕೊಟ್ಟಂದಿನಿಂದ ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮೊಳೆಗಳಿಂದ ಜಡಿಯಲ್ಪಡುವವರೆಗೆ ಸೂಚಿಸುತ್ತದೆ. ಆದುದರಿಂದ ಇದು ಮುಂದೆ ಬರುವ ಉತ್ತಮಯಜ್ಞವು ಲೋಕದ ಪಾಪವನ್ನು ನಿವಾರಿಸಿ ದೇವರ ಸಮೀಪಕ್ಕೆ ಬರುವವರನ್ನು ಸಿದ್ಧಿಗೆ ತರುವುದು ಎಂಬುದನ್ನು ತಿಳಿಸುತ್ತದೆ (ಇಬ್ರಿಯ 10:1). ಯೇಸುವಿನ ಕಾಲದಲ್ಲಿ ಕಷ್ಟ ಬಂದಾಗ ಇಸ್ರಾಯೇಲ್ಯರು ಚದರಿ ಹೋದರು. ಹಣಜಿಯಿಂದ ಗೋಧಿಯನ್ನು ಪ್ರತ್ಯೇಕಿಸಿ ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟು ಬಿಡುವುದನ್ನು f ಚಿತ್ರವು ಸೂಚಿಸುತ್ತದೆ. ಆ ದಂಡನೆಯ ಕಾಲದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ (ಲೂಕ 3:17,21,22; 1 ಥೆಸ. 2:16 ನೋಡಿರಿ).

ಯೇಸು ಮುವತ್ತು ವರ್ಷದವನಾಗಿದ್ದಾಗ ಪರಿಪೂರ್ಣನಾಗಿದ್ದನು (g) ಮಾನವರಿಗಾಗಿ ಮರಣವನ್ನನುಭವಿಸಲು ತನ್ನ ಆತ್ಮೀಕ ಮಹಿಮಾ ಪದವಿಯನ್ನು ಬಿಟ್ಟು ಮಾನವನಾಗಿ ಬಂದನು. ಹಲ್ಲಿಗೆ ಹಲ್ಲು, ಕಣ್ಣಿಗೆ ಕಣ್ಣು, ಜೀವಕ್ಕೆ ಜೀವ ಎಂಬ ದೇವರ ನಿಯಮ (ಪರಿಪೂರ್ಣವಾದದ್ದು) ದೃಢವಾದದ್ದು.ಹಾಗೆಯೇ ಮಾನವನಿಗಾಗಿ ಮಾನವನೇ ಸಾಯಬೇಕಾಗಿತ್ತು. ಅದೂ ಬಿದ್ದುಹೋದ ಮಾನವ ಜನಾಂಗದಿಂದ ಸಿಕ್ಕದೇ ಇರುವಂಥ ಪರಿಪೂರ್ಣ ಮನುಷ್ಯನಾಗಿದ್ದನು. ಪರಿಶುದ್ಧನೂ ದೋಷರಹಿತನೂ ಆಗಿದ್ದನು. ಮಾನವ ಸ್ವರೂಪವನ್ನು ಧರಿಸಿದನೇ ಹೊರತು ಆ ಮಾನವ ಸ್ವಭಾವದಲ್ಲಿ ಭಾಗಿಯಾಗಲಿಲ್ಲ. ಆದರೆ ತನ್ನ ಬೋಧಕೋದ್ಯಮದಲ್ಲಿ ಮಾನವರ ಕಷ್ಟ ಸಂಕಟಗಳಲ್ಲಿ ಭಾಗಿಯಾಗಿ ಅವರಿಗೆ ಶಕ್ತಿ ಮತ್ತು ಆರೋಗ್ಯವನ್ನು ದಯಪಾಲಿಸುತ್ತಿದ್ದನು. ನಮ್ಮ ವ್ಯಾಧಿಗಳನ್ನು ಅನುಭವಿಸಿದನು. ನಮ್ಮ ಸಂಕಟಗಳನ್ನು ಹೊತ್ತನು ಎಂದು ವಾಕ್ಯದಲ್ಲಿ ಬರೆಯಲ್ಪಟ್ಟಿದೆ (ಯೆಶಾ 53:4), ಆತನಿಂದ ಹೊರಟ ಶಕ್ತಿಯು ಎಲ್ಲರನ್ನು ವಾಸಿಮಾಡುತ್ತಿತ್ತು (ಮಾರ್ಕ 5:30, ಲೂಕ 6:19; ಮತ್ತಾಯ 8:16,17).

ಹೀಗೆ ಆತನು ಪರಿಪೂರ್ಣನಾಗಿದ್ದು ತನ್ನನ್ನು ತಗ್ಗಿಸಿಕೊಂಡು ಮರಣದವರೆಗೆ ವಿಧೇಯನಾದನು. ದೀಕ್ಷಾಸ್ನಾನದ ಸಮಯದಲ್ಲಿ "ಓ ದೇವರೇ ನಿನ್ನ ಚಿತ್ತವನ್ನು ನೆರವೇರಿಸಲು ಬಂದಿದ್ದೇನೆ" ಎಂದು ಪ್ರತಿಜ್ಞೆಸಿಕೊಂಡನು. ಇದು ದೇವರಿಗೆ ಮೆಚ್ಚಿಗೆಯಾಗಿ ಆತನನ್ನು ಆತ್ಮನಿಂದಲೂ ಶಕ್ತಿಯಿಂದಲೂ ಬಲಪಡಿಸಿದನು. ಅಂದರೆ ಆತನ ಮೇಲೆ ಪವಿತ್ರಾತ್ಮ ಶಕ್ತಿಯೂ ಬಂದಿಳಿಯಿತು. ಹೀಗೆ ಆತನು ಶಿಲುಬೆಯ ಮೇಲೆ ತನ್ನ ಶರೀರವನ್ನು ಯಜ್ಞವಾಗಿ ಅರ್ಪಿಸಿದಾಗ ಈ ಪ್ರತಿಷ್ಠೆಯು ಪರಿಪೂರ್ಣವಾಯಿತು. ಈ ರೀತಿ ಹೊಸ ಸ್ವಭಾವವನ್ನು ಹೊಂದುವ ಸ್ವಭಾವವನ್ನು M ರೇಖೆಯ ಮೇಲಿರುವ h ಪಿರಮಿಡ್‌ನಲ್ಲಿ ತೋರಿಸಲಾಗಿದೆ. ಈ ರೇಖೆಯ ಮೇಲೆ ಯೇಸು $3\frac{1}{2}$ ವರ್ಷಗಳ ಕಾಲ ಜೀವಿಸಿದ್ದನು. ಅನಂತರ ಆತನ ಮಾನವ ಜೀವಿತವು ಶಿಲುಬೆಯ ಮೇಲೆ ಕೊನೆಗೊಂಡಿತು. ಮೂರು ದಿನಗಳ ಅನಂತರ ಜೀವಿತನಾಗಿ ಎದ್ದು ಆತ್ಮೀಕೋತ್ತಮತೆಯನ್ನು ಪಡೆದನು (L ರೇಖೆಯಲ್ಲಿ) i ಪಿರಮಿಡ್ ಸತ್ತವರಲ್ಲಿ ಪ್ರಥಮ ಫಲದ ಸೂಚಕವಾಗಿದೆ. ಆತ್ಮನಿಂದ ಹುಟ್ಟಿದ್ದು ಆತ್ಮವೇ ಆದುದರಿಂದ ಯೇಸು ಆತ್ಮೀಕ ಜೀವಿಯೇ ಹೊರತು ಮಾನವ ಜೀವಿಯಲ್ಲ.

ಸತ್ತು ಪುನರುತ್ಥಾನ ಹೊಂದಿದ ಮೇಲೆ ತಾನು ಬದುಕಿದ್ದೇನೆಂದು ತೋರಿಸುವುದಕ್ಕಾಗಿ ಅನೇಕ ಸಲ ತನ್ನ ಶಿಷ್ಯರಿಗೆ ಕಾಣಿಸಿಕೊಂಡಿರುವನು. ಮಾನವ ಶರೀರದಲ್ಲಿ ಕಾಣಿಸಿಕೊಂಡರೂ ಮಾನವನಾಗಿರಲಿಲ್ಲ. ಗಾಳಿಯ ಹಾಗೆ ಬಂದು ಹೋಗುವ ಶಕ್ತಿಯಿತ್ತು. ಆದುದರಿಂದ ಆತ್ಮನಿಂದ ಹುಟ್ಟಿದವರೆಲ್ಲರೂ ಅದರಂತೆಯೇ (ಯೋಹಾನ 3:8;20:19, 26ರ ರೊಂದಿಗೆ ಹೋಲಿಸಿ). ಹೀಗೆ ಆತನ ಪ್ರತಿಷ್ಠೆಯ ಕಾರ್ಯವು ಪುನರುತ್ಥಾನದಲ್ಲಿ ಮುಕ್ತಾಯವಾಗಿ ಆತ್ಮೀಕ ಜೀವಿಯಾಗಿ L ರೇಖೆಯನ್ನು ಪ್ರವೇಶಿಸಿದನು. ಪುನರುತ್ಥಾನವಾಗಿ 40 ದಿನಗಳ ನಂತರ ದಿವ್ಯಾರೋಹಣವಾಗಿ ದೈವೀಕ ಮಹಿಮೆಯ ವೃತ್ತ K ಪ್ರವೇಶಿಸಿದನು. (ಪಿರಮಿಡ್ k) ಈ ಸುವಾರ್ತಾಯುಗದಲ್ಲಿ ಆತನು ಮಹಿಮಾ ಪದವಿಯನ್ನು ಪಡೆದು ತಂದೆಯ ಬಲಪಾರ್ಶ್ವದಲ್ಲಿ ಕುಳಿತು ಸಭೆಗೆ ಮಾರ್ಗದರ್ಶಕನೂ ಮುಖ್ಯಸ್ಥನೂ ಆಗಿರುವನು. ಈ ಸುವಾರ್ತಾ ಯುಗದಲ್ಲಿ ಸಭೆಯು ಕಷ್ಟಸಂಕಟಗಳಿಗೆ ಒಳಗಾಗಿ ಪರಿಪೂರ್ಣತೆಯನ್ನು ಪಡೆದು ಸುಗ್ಗಿಯ ಸಮಯದಲ್ಲಿ ಮದಲಗಿತ್ತಿಯಾಗಿ ಆರಿಸಲ್ಪಟ್ಟು ಕ್ರಿಸ್ತನೊಂದಿಗೆ ಸಹಭಾಗಿಯಾಗುವಳು. ಆದುದರಿಂದ ಆತನ ಸಂಕಟಗಳಲ್ಲಿ ಪಾಲುಗಾರರಾಗಿ ತಕ್ಕ ಸಮಯದಲ್ಲಿ ಆತನೊಂದಿಗೆ ಮಹಿಮೆ ಪಡೆಯುವರು (K ರೇಖೆ).

ಕ್ರಿಸ್ತನು ಮಹಿಮಾ ಪದವಿಯನ್ನು ಪಡೆದ ರೀತಿಯಲ್ಲೇ ಸಭೆಯೂ ಮಹಿಮೆ ಪಡೆಯಬೇಕಾಗಿರುವುದರಿಂದ ಆತನ ಮಾರ್ಗದರ್ಶನವನ್ನು ಅನುಸರಿಸಿ ಆತನ ಹೆಜ್ಜೆಜಾಡಿನಲ್ಲಿ

ನಡೆಯಬೇಕಾಗಿರುವುದು. ಆದರೆ ಸಭೆಯು ಕೆಳಮಟ್ಟದಿಂದ ಪ್ರಾರಂಭವಾಗುವುದು. ಯೇಸು ಮಾನವನಾಗಿದ್ದರೂ ಪರಿಪೂರ್ಣನಾಗಿದ್ದು N ರೇಖೆಯ ಮೇಲಿದ್ದನು. ಆದಾಮನ ಸಂತತಿಯವರೆಲ್ಲರೂ ಪಾಪಿಗಳಾಗಿರುವುದರಿಂದ ಕೆಳಗಿನ R ರೇಖೆಯ ಮೇಲಿರುವರು. ಆದುದರಿಂದ ನೀತಿವಂತರಾಗಿ N ರೇಖೆಯ ಮೇಲಿರುವರು. ಆದುದರಿಂದ ನೀತಿವಂತರಾಗಿ N ರೇಖೆಯನ್ನು ಪ್ರವೇಶಿಸುವುದೇ ನಮ್ಮ ಪ್ರಥಮ ಕಾರ್ಯ. ಇದನ್ನು ಸಾಧಿಸುವುದು ಹೇಗೆ? ಒಳ್ಳೇ ಕಾರ್ಯಗಳಿಂದಲೋ? ಇಲ್ಲ, ಪಾಪಿಗಳಿಗೆ ಒಳ್ಳೆ ಕೆಲಸ ಮಾಡಲು ಸಾಧ್ಯವಿಲ್ಲ. ದೇವರಿಗೆ ನಮ್ಮನ್ನು ನಾವೇ ಒಪ್ಪಿಸಿಕೊಡಲು ಸಾಧ್ಯವಿಲ್ಲ. ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟಿದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ. ರೊಮಾ 5:8 ಹೀಗೆ ನಂಬಿಕೆಯಿಂದ ನೀತಿವಂತರಾದ ಕಾರಣ ಆದಾಮನು ಬಿದ್ದು ಹೋದ ಮಟ್ಟಕ್ಕೆ ಪ್ರವೇಶಿಸಲು ಸಾಧ್ಯ. ಹೀಗೆ N ರೇಖೆಯನ್ನು ಪ್ರವೇಶಿಸಲು ಸಾಧ್ಯ. "ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ಕರ್ತನಾದ ಯೇಸುವಿನ ಮುಖಾಂತರ ದೇವರೊಂದಿಗೆ ಉಂಟಾಗುವ ಸಮಾಧಾನದಲ್ಲಿರೋಣ" (ರೋಮಾ. 5:1). ಹೀಗೆ ಆದಾಮ ಮತ್ತು ಕ್ರಿಸ್ತನಂತೆ ನಾವು ನೀತಿವಂತರೆಂದು ಪರಿಗಣಿಸಲ್ಪಟ್ಟರೂ ಅವರಷ್ಟು ಪರಿಪೂರ್ಣರಲ್ಲ. ದೇವರು ನಮ್ಮನ್ನು ನೀತಿವಂತರೆಂದು ಕರೆದಿರುವನು ಅಷ್ಟೆ. ಇದು ದೇವರ ವಾಕ್ಯದಲ್ಲಿ ನಂಬಿಕೆಯಿಡುವುದರಿಂದ ಮಾತ್ರ ಸಾಧ್ಯ. ಯಾಕೆಂದರೆ ನಾವು ಕ್ರಯಕ್ಕೆ ಕೊಳ್ಳಲ್ಪಟ್ಟವರು. ಇದರಿಂದ ನಾವು ನೀತಿಯೆಂಬ ನಿಲುವಂಗಿಯನ್ನು ಧರಿಸಿ ನಿಲ್ಲಲು ಸಾಧ್ಯ. ಕ್ರಿಸ್ತನು ನಮ್ಮ ಪಾಪಗಳಿಗಾಗಿ ಮರಣವನ್ನು ಅನುಭವಿಸಿದ್ದರಿಂದ ನಾವು ಪುನಃ ದೇವರ ಅನ್ಯೋನ್ಯತೆಯನ್ನು ಪಡೆಯುವಂತಾಯಿತು. ಹೀಗೆ ನಂಬಿಕೆಯಿಂದ ಪಾಪದಿಂದ ರಕ್ಷಣೆ ಹೊಂದಿ ದೇವರ ಮಕ್ಕಳಾಗುವ ಬಾಧ್ಯತೆ ಪಡೆದಿದ್ದೇವೆ. ನೀತಿಯು ಒಂದು ಆಶೀರ್ವಾದವಾಗಿದ್ದರೂ ಅದು ನಮ್ಮ ಸ್ವಭಾವವನ್ನು ಬದಲಾಯಿಸುವುದಿಲ್ಲ. ನಾವು ಮಾನವರೇ; ದೇವರು ನಮ್ಮನ್ನು ರಕ್ಷಿಸಿರುವುದರಿಂದ ಪಾಪಿಗಳಾಗದೇ ದೇವರ ಮಕ್ಕಳಾಗುವ ಸೌಭಾಗ್ಯವನ್ನು ಪಡೆದಿರುವೆವು. ನಾವು ಆತನ ಮಕ್ಕಳಾಗಿರುವುದರಿಂದ ಆತನು ನಮ್ಮೊಂದಿಗೆ ಮಾತನಾಡುವನು. ಈ ಸುವಾರ್ತಾಯುಗದಲ್ಲಿ ಚಿಕ್ಕ ಹಿಂಡನ್ನು ಕರೆಯುತ್ತಿರುವನು. ಕ್ರಿಸ್ತನ ಮಾದರಿಯನ್ನು ಅನುಸರಿಸಿ ನಿನ್ನ ಸರ್ವಸ್ವವನ್ನು ನನಗೆ ಒಪ್ಪಿಸು; ಮಗನೇ ನಿನ್ನ ಹೃದಯವನ್ನು ನನಗೆ ಕೊಡು ಎಂದು ಕೇಳುತ್ತಿರುವನು. ಸಮಸ್ತವನ್ನು ಕೊಟ್ಟರೆ ನಿನ್ನನ್ನು ಘನಪಡಿಸುತ್ತೇನೆ. ಮಾನವ ಮಟ್ಟಕ್ಕಿಂತ ಉತ್ತಮ ಮಟ್ಟವನ್ನು ಕೊಡುವೆನು ಎಂದು ಕರೆಯುತ್ತಿರುವನು. ಕ್ರಿಸ್ತನ ಹಾಗೆ ಆತ್ಮೀಕ ಶರೀರಗಳಾಗಿ ಆತನ ಜೊತೆ ಕೆಲಸದವರಾಗಿ ದೈವ ಸ್ವಭಾವದಲ್ಲಿ ಪಾಲುಗಾರರಾಗುವಿರಿ. ಆತನೊಂದಿಗೆ ಶ್ರಮೆಯನ್ನು ಅನುಭವಿಸಿದರೆ ಮಹಿಮೆ ಹೊಂದಲು ಸಾಧ್ಯ.

ಈ ಸುವಾರ್ತಾ ಯುಗದಲ್ಲಿ ಯಾರ್‍ಯಾರು ಈ ಬಹುಮಾನವನ್ನು ಶ್ರೇಷ್ಠವೆಂದು ಎಣಿಸುವರೋ ಎಲ್ಲಾ ಭಾರವನ್ನು ಹತ್ತಿಕ್ಕಿ ನೇಮಕವಾದ ಓಟವನ್ನು ತಾಳ್ಮೆಯಿಂದ ಓಡುವರೇ ಹೊರತು ತಮ್ಮ ಕಾರ್ಯಗಳಿಂದ ನೀತಿವಂತರಾಗಲು ಸಾಧ್ಯವಿಲ್ಲ. ಯಾಕೆಂದರೆ ಕ್ರಿಸ್ತನೇ ಎಲ್ಲಾ ಕಾರ್ಯವನ್ನು ಮಾಡಿ ಮುಗಿಸಿರುವನು. ನಂಬಿಕೆಯಿಂದ ಆತನ ಕಾರ್ಯವನ್ನು ಅಂಗೀಕರಿಸಬೇಕಾಗಿದೆ. ಆಗ ನಾವು ನೀತಿವಂತರಾಗಿ N ಮಟ್ಟವನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ.ಹೀಗೆ ದೇವರು ಸ್ವೀಕರಿಸುವ ಶ್ರೇಷ್ಠ ಫಲವಾದರೆ ಅದೇ ನಮ್ಮ ವಿವೇಕ ಪೂರ್ವಕವಾದ ಆರಾಧನೆ.

ನಮ್ಮ ಸರ್ವಸ್ವವನ್ನೇ ದೇವರಿಗೆ ಕೊಡುವುದು ಎಂದರೇನು? ಎಂದು ಪ್ರಶ್ನಿಸಬಹುದು. ಇದಕ್ಕೆ ಉತ್ತರವು ದೇವರ ವಾಕ್ಯದಲ್ಲಿಯೇ ಅಡಕವಾಗಿದೆ. ಕ್ರಿಸ್ತನಂತೆಯೇ ಎಲ್ಲಾ ಮನುಷ್ಯರಿಗೆ ಒಳ್ಳೆಯದನ್ನು ಮಾಡುತ್ತಾ ಆತನ ಮನೆವಾರ್ತೆ ಕೆಲಸದಲ್ಲಿ ನಂಬಿಗಸ್ತ ಸೇವಕರಾಗಿ ನಡೆದು ಆತ್ಮೀಕ ಆಹಾರವನ್ನು ಕೊಟ್ಟು ಕ್ರಿಸ್ತನ ನೀತಿಯೆಂಬ ನಿಲುವಂಗಿಯನ್ನು ತೊಡಿಸಬೇಕು. ಈ ಕಾರ್ಯಗಳಿಂದ ಹೊಸದಾಗಿ ಆತ್ಮೀಕವಾಗಿ ಹುಟ್ಟಿ M ಮಟ್ಟವನ್ನು ಸೇರಲು ಸಾಧ್ಯ. ಹೀಗೆ ನಮ್ಮ ಒಡಂಬಡಿಕೆಯನ್ನು ಪೂರೈಸಿ ನಮ್ಮ ರಕ್ಷಕನ ಮೂಲಕ ವಿಜಯಿಗಳಾಗಿ ಬರುತ್ತೇವೆ! ಹೀಗೆ ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಡೆಯುತ್ತಾ ಜೀವವೆಂಬ ಜಯಮಾಲೆಯನ್ನು ಪಡೆಯುವವರೆಗೆ ನಿನ್ನ ಕಾರ್ಯವು ಮುಕ್ತಾಯವಾಗುವುದಿಲ್ಲ. ಜಯ ಸಿಕ್ಕಿತೆಂದು ತಿಳಿಯಬೇಡ, ವಿಶ್ರಾಂತಿಗೆಂದು ಕುಳಿತುಕೊಳ್ಳಬೇಡ.

ಸಹೋದರ ಪೌಲನಂತೆ ಶ್ರೇಷ್ಠ ಹೋರಾಟವನ್ನು ನಡೆಸಿ ಜಯಹೊಂದಿದಂತೆ ನಾವು ಪ್ರಯತ್ನಿಸಿದರೆ ಶೀಘ್ರವಾಗಿ ಹೊಂದದಿದ್ದರೂ ಜಯಮಾಲೆಯನ್ನು ಹೊಂದುವ ಸಾಧ್ಯತೆಯಿದೆ ಅಲ್ಲಿಯವರೆಗೆ ಯಜ್ಞವೆಂಬ ನಮ್ಮ ಸೇವೆಯು ಸುಗಂಧ ಹೋಮವಾಗಿ ಕ್ರಿಸ್ತನ ಮೂಲಕ ದೇವರಿಗೆ ತಲುಪಬೇಕು. ಸತ್ತವರು ಪುನರುತ್ಥಾನ ಹೊಂದಿ ಆತ್ಮೀಕ ಜೀವಿಗಳಾಗಿ L ಮಟ್ಟಕ್ಕೆ ಸೇರುವರು. ಬದುಕಿರುವವರು ಕ್ಷಣಮಾತ್ರದಲ್ಲಿ ರೂಪಾಂತರಹೊಂದಿ ಮರಣವಿಲ್ಲದೆಯೇ ಆತ್ಮೀಕ ಜೀವಿಗಳಾಗಿ ಅದೇ ಮಟ್ಟವನ್ನು ಸೇರುವರು. ಆಗ ಲಯವಾಗುವ ಈ ದೇಹವು ನಿರ್ಲಯತ್ವವನ್ನು ಪಡೆದು ಅಮರವಾಗುವುದು (1 ಕೊರಿ. 15:44, 52). ಆತ್ಮೀಕ ಜೀವಿಗಳಾದಮೇಲೆ K ಮಟ್ಟವನ್ನು ಪ್ರವೇಶಿಸಿ ಕ್ರಿಸ್ತನ ಮಹಿಮೆಯಲ್ಲಿ ಪಾಲುಗಾರರಾಗಲು ಎಷ್ಟು ಕಾಲ ಬೇಕಾಗುವುದೋ ತಿಳಿದಿಲ್ಲ. ಆಗ ಸಭೆಯು ಮದಲಗಿತ್ತಿಯಾಗಿ ಯಜ್ಞದ ಕುರಿಯಾದಾತನಿಗೆ ಮದುವೆಯಾಗುವುದು.

ನಕ್ಷೆಯನ್ನು ಗಮನಿಸಿದರೆ n, m, p, q ಎಂಬ ಬೇರೆ ಬೇರೆ ವರ್ಗಗಳುಂಟು. ಇವೆಲ್ಲಾ ಸುವಾರ್ತಾ ಯುಗದಲ್ಲಿರುವ ಹೆಸರಿನ ಕ್ರೈಸ್ತ ಸಭೆಗಳಾಗಿ ನಾನೇ ಕ್ರಿಸ್ತನ ಶರೀರ ಎಂದು ಹೇಳುವವರಾಗಿರುವರು. n ಮತ್ತು m

ವರ್ಗಗಳು ಆತ್ಮೀಕವಾಗಿ ಹುಟ್ಟುವ M ಮಟ್ಟದ ಮೇಲಿರುವುದು. ಇವೆರಡು ಸುವಾರ್ತಾ ಯುಗದಲ್ಲಿ ಒಟ್ಟಿಗಿದ್ದು ಜೀವಯಜ್ಞವಾಗಿ ಅರ್ಪಿತವಾಗಲು ದೇವರೊಂದಿಗೆ ಒಡಂಬಡಿಕೆ ಮಾಡಿಕೊಂಡು ಆತ್ಮೀಕವಾಗಿ ಹುಟ್ಟಿ ಹೊಸ ಸೃಷ್ಟಿಗಳಾಗಿರುವರು. ಇವೆರಡಕ್ಕಿರುವ ವ್ಯತ್ಯಾಸವೆಂದರೆ N ವರ್ಗದವರು ತಮ್ಮ ಒಡಂಬಡಿಕೆಯ ಪೂರೈಕೆಗಾಗಿ ಭೂಲೋಕದ ಆಸೆಗಳಿಂದ ಕ್ರಿಸ್ತನೊಂದಿಗೆ ಸತ್ತವರಾಗಿರುವರು. n ವರ್ಗದವರು ಆತ್ಮೀಕವಾಗಿ ಹುಟ್ಟಿದ ಮಹಾ ಸಮೂಹವಾಗಿದ್ದರೂ ಕ್ರಿಸ್ತನಲ್ಲಿ ತಾವು ಮಾಡಿಕೊಂಡ ಒಡಂಬಡಿಕೆಯನ್ನು ಹಿಮ್ಮೆಟ್ಟಿದವರಾದ n ವರ್ಗದವರು ಸಂಕಟಗಳನ್ನು ಜಯಿಸಿ ಕ್ರಿಸ್ತನ ಮದಲಗಿತ್ತಿಯಾಗಿ ಮಹಿಮಾ ಪದವಿಯನ್ನು ಪಡೆದು ಆತನೊಂದಿಗೆ ಕುಳಿತುಕೊಳ್ಳುವರು. K ಮಟ್ಟ ಇವೇ ಆ ಚಿಕ್ಕಹಿಂಡು. ದೇವರು ಇವರಿಗೆ ರಾಜ್ಯವನ್ನು ಕೊಡಲು ಸಂತೋಷವಾಗಿರುವನು. (ಲೂಕ 12:32). m ವರ್ಗದವರು ಮಾನವ ಆಶೆಯನ್ನು ಸಂಪೂರ್ಣವಾಗಿ ಜಯಿಸಿದವರಲ್ಲ. ಆದರೂ ದೇವರು ಇವರನ್ನು ಪ್ರೀತಿಸುತ್ತಾನೆ. ಶ್ರಮೆ ಸಂಕಟಗಳಿಂದ ಪರಿಪೂರ್ಣವಾದ ಆತ್ಮೀಯ ಮಟ್ಟಕ್ಕೆ (L ವೃತ್ತಕ್ಕೆ) ತರುತ್ತಾನೆ. K ಮಟ್ಟದಲ್ಲಿರುವ ಮಹಿಮಾ ಸಿಂಹಾಸನದಲ್ಲಿ ಕುಳಿತುಕೊಳ್ಳುವ ಹಕ್ಕು ಇವರಿಗಿರುವುದಿಲ್ಲ. ಆದ್ದರಿಂದ ದೇವರ ಪ್ರೀತಿಯನ್ನು ನೆನಪಿಗೆ ತಂದುಕೊಂಡು ಕ್ರಿಸ್ತನ ದೇಹವೆಂಬ ಸಭೆಗೆ ಸದಸ್ಯರಾಗಲು ಮಾಡಿಕೊಂಡಿರುವ ಒಡಂಬಡಿಕೆಯನ್ನು ನಂಬಿಕೆಯೆಂಬ ಯಜ್ಞದ ಮೂಲಕ ಮನಃಪೂರ್ತಿಯಾಗಿ ಅರ್ಪಿಸಲು ಪ್ರಯತ್ನಿಸೋಣ.

p ವಿಭಾಗವು ಹೆಸರಿನ ಕ್ರೈಸ್ತ ಸಭೆಗಳನ್ನು ಸೂಚಿಸುತ್ತದೆ. ಇವರು M ಮಟ್ಟದ ಮೇಲಿರದೆ N ಮಟ್ಟದ ಮೇಲಿರುವರು. ಇವರು ನೀತಿವಂತರಾದರೂ ಪರಿಶುದ್ಧರಲ್ಲ. ಪರಿಪೂರ್ಣವಾಗಿ ದೇವರಿಗೆ ಪ್ರತಿಷ್ಠಿತರಲ್ಲ. ಆತ್ಮೀಕವಾಗಿ ಹುಟ್ಟಿದವರಲ್ಲ. ಇವರು ಲೋಕದವರಿಗಿಂತ ಮೇಲ್ಮಟ್ಟದಲ್ಲಿರುವರು, ಕ್ರಿಸ್ತನನ್ನು ತಮ್ಮ ವಿಮೋಚಕನಾಗಿ ಅಂಗೀಕರಿಸಿದ್ದರೂ ದೇವರ ರಾಜ್ಯದಲ್ಲಿ ಭಾಗಿಗಳಾಗುವ ಕರೆಯನ್ನು ಅಂಗೀಕರಿಸಿಲ್ಲ. ಹೀಗೆ ನಂಬಿಕೆಯಿಂದ ನೀತಿವಂತರಾಗಿ ನಡೆದರೆ ಮುಂದೆ ಸಮಸ್ತವನ್ನು ಸರಿಮಾಡುವ ಕಾಲದಲ್ಲಿ ಪಾಪ ಮಾಡುವ ಮೊದಲು ಆದಾಮನಿಗಿದ್ದ ಸ್ವಭಾವವನ್ನು ಪಡೆಯುವರು. ಅವನಿಂದ ಕಳೆದು ಹೋದದ್ದನ್ನು ಪುನಃ ಪಡೆಯುವರು. ಆದಾಮನ ಹಾಗೆ ದೇವರಪ್ರತಿರೂಪವಾಗುವರು. ಹೀಗೆ ಅವರು N ರೇಖೆಯ ಮೇಲಿರುವರು. ಆದರೆ p ವರ್ಗದವರು ನಂಬಿಕೆಯಿಲ್ಲದೆ ನೀತಿಯೆಂಬ ಆಶೀರ್ವಾದವನ್ನು ಕಳೆದುಕೊಂಡಿರುವರು. ಸಧ್ಯದಲ್ಲಿ ಇವನಿಗೆ n ಮಟ್ಟಕ್ಕೆ ಸೇರುವ ಅವಕಾಶವಿದೆ. ದೇವರ ಕೃಪೆಯನ್ನು ವ್ಯರ್ಥ ಮಾಡಿಕೊಳ್ಳಬೇಡಿರೆಂದು ಎಚ್ಚರಿಕೆ ಕೊಡಲಾಗಿದೆ. 2 ಕೊರಿಂಥ 6:1 ದೇವರಿಗೆ ಯಜ್ಞವನ್ನು ಸ್ವೀಕರಿಸುವ ಸಮಯದಲ್ಲಿ ತಮ್ಮನ್ನು ಅರ್ಪಿಸಿಕೊಳ್ಳಲು ಹಿಂಜರಿಯುತ್ತಾರೆ. ಇವರು ಕ್ರಿಸ್ತನ ಅಂಗವಾಗದೇ ಇರುವುದರಿಂದ ಪೌಲನು ಇವರನ್ನು ಸಹೋದರರೇ ಎಂದು ಸಂಬೋಧಿಸಿರುವನು. ರೋಮಾ. 12:1 ಹೀಗೆ ಎಲ್ಲವೂ ಪರಿಪೂರ್ಣವಾದಾಗ ಮಾನವರೆಲ್ಲರೂ ಕ್ರಿಸ್ತನಿಗೆ ಸಹೋದರರಾಗುತ್ತಾರೆ. ಎಲ್ಲಾ ಸ್ವಬಾವದವರಿಗೆ ಎಲ್ಲಾ ಮಟ್ಟದವರಿಗೆ ದೇವರು ತಂದೆಯಾಗುವನು.

N ಮಟ್ಟದ ಕೆಳಗೆ q ಎಂಬ ಇನ್ನೊಂದು ವರ್ಗವಿದೆ. ಇವರು ಹೆಸರಿನ ಸಭೆಯಲ್ಲಿ ಒಂದು ದರ್ಜೆಯವರು. ಇವರು ಕ್ರಿಸ್ತನನ್ನು ನಂಬದೆ ಆತನ ವಿಮೋಚನೆಯನ್ನ ಅಂಗೀಕರಿಸದೆ ಇರುವವರು. ಇವರು ಕುರಿಯ ವೇಷದಲ್ಲಿರುವ ತೋಳಗಳು. ತಮ್ಮನ್ನು ಕ್ರೈಸ್ತರೆಂದು ಕರೆದುಕೊಂಡು ಹೆಸರಿನ ಸಭೆಯಲ್ಲಿ ಸೇರಿರುವವರು. ಇವರು ಕ್ರಿಸ್ತನನ್ನು ತಮ್ಮ ರಕ್ಷಕನೆಂದು ನಂಬಿ R ಮಟ್ಟಕ್ಕೆ ಸೇರಿದವರಾಗಿರುವರು. ಇವರು ಈ ಲೋಕದವರಾಗಿದ್ದು ಸಭೆಯ ಹೊರಗಿರುವರು. ಹೀಗೆ n, m, p, q ಎಂಬ ವಿವಿಧ ವರ್ಗಧವರು ಸುವಾರ್ತಾ ಯುಗದಲ್ಲಿ ಕ್ರೈಸ್ತರೆನ್ನಿಸಿಕೊಂಡು ಸಭೆಯಲ್ಲಿ ಸೇರಲು ಪ್ರಯತ್ನಿಸಿರುವರು. ಕ್ರಿಸ್ತನು ಹೇಳಿರುವಂತೆ ಈ ಲೋಕವೆಂಬ ಹೊಲದಲ್ಲಿ ಗೋಧಿ ಮತ್ತು ಹಣಜಿ ಎರಡನ್ನೂ ಬಿತ್ತಲಾಗಿದೆ. ಸುಗ್ಗೀ ಕಾಲದ ತನಕ ಎರಡೂ ಬೆಳೆಯುವುದು. ಸುಗ್ಗೀ ಕಾಲದಲ್ಲಿ ಹಣಜಿಯನ್ನು ಆರಿಸಿ ತೆಗೆದು ಅದನ್ನು ಸುಡುವುದಕ್ಕೆ ಹೊರೆ ಕಟ್ಟಿ ಹಾಕಿ ಗೋಧಿಯನ್ನು ಕಣಜಕ್ಕೆ ತುಂಬಲಾಗುವುದು (ಮತ್ತಾಯ 13:38, 41, 49). ಕ್ರಿಸ್ತನ ಮಾತಿನ ಪ್ರಕಾರ ಎರಡೂ ಒಟ್ಟಿಗೆ ಬೆಳೆಯುವುದು. ಬೇರ್ಪಡಿಸುವ ಸಮಯದಲ್ಲಿ ಸತ್ಯ ಸಭೆಯನ್ನು ಪ್ರತ್ಯೇಕಿಸಿ ಮಹಿಮೆಪಡಿಸುವನು (ಮತ್ತಾಯ 13:39. ಸುವಾರ್ತಾಯುಗದಲ್ಲಿಯೇ ಒಳ್ಳೆಯ ಬೀಜದವರು ಅಂದರೆ ಪರಲೋಕ ರಾಜ್ಯದವರು ಬೆಳೆಯುವರು. ಅಂದರೆ n ಮತ್ತು m ವರ್ಗದವರು ಹಣಜಿ ಎಂದರೆ ಸೈತಾನನವರು. ಅಂದರೆ q ವರ್ಗದವರು ಮತ್ತು p ವರ್ಗದಲ್ಲಿ ಅನೇಕರು. ಯಾವನಾದರು ಇಬ್ಬರು ಯಜಮಾನರಿಗೆ ಸೇವೆ ಮಾಡಲಾರರು. "ಯಾರಿಗೆ ಸೇವೆ ಮಾಡುತ್ತೀರೋ ಅವರ ಸೇವಕರು ನೀವು" p ವರ್ಗದವರು ತಮ್ಮ ಸೇವೆ ಮತ್ತು ಸಮಯವನ್ನು ಕರ್ತನಿಗಾಗಿ ಪ್ರತಿಷ್ಠಿಸಿಕೊಂಡಿಲ್ಲ. ತಮ್ಮ ಸಮಯವನೆಲ್ಲಾ ದೇವರಿಗೆ ವಿರೋಧಿಯಾದ ಸೈತಾನನಿಗೆ ಮೀಸಲಾಗಿಟ್ಟಿರುವರು.

ಸುವಾರ್ತಾಯುಗದ ಅಂತ್ಯ ಅಥವಾ ಸುಗ್ಗೀ ಕಾಲವನ್ನು ಗುಮನಿಸಿ ಅದು ಎರಡು ಭಾಗವಾಗಿ ವಿಂಗಡವಾಗಿದೆ ಏಳು ವರ್ಷಗಳು ಮತ್ತು 33 ವರ್ಷಗಳು ಅಂದರೆ ಯೆಹೂದ್ಯರ ಯುಗದ ಸುಗ್ಗೀ ಕಾಲಕ್ಕೆ ಸಮಾನಾಂತರವಾಗಿದೆ. ಅದರ ಹಾಗೆಯೇ ಸಭೆಗೆ ಸಂಕಷ್ಟಗಳು ಉಂಟಾಗಿ ಅನಂತರ ಲೋಕದ ಮೇಲೆ ದೇವರ ರೋಷಾಗ್ನಿಯಿಂದ ಏಳು ಉಪದ್ರವಗಳನ್ನು

ಸುರಿಸಲಾಗುವುದು. ಈಗ ಸುವಾರ್ತಾ ಯುಗವು ಆತ್ಮೀಕ ಮಟ್ಟದ ಮೇಲಿರುವುದು. ಹಿಂದೆ ಇದರ ಛಾಯೆಯಂತಿದ್ದ ಯೆಹೂದ್ಯ ಯುಗವು ದೈಹಿಕ ವೃತ್ತದ ಮೇಲಿತ್ತು ಸುವಾರ್ತಾ ಯುಗದ ಸುಗ್ಗಿ ಕಾಲದಲ್ಲಿ ಮುಖ್ಯ ಕೊಯ್ಲು ಗಾರನಾದ ಯೇಸು ಕ್ರಿಸ್ತನು ಸತ್ಯವೆಂಬ ಕುಡುಗೋಲಿನಿಂದ ಅಸತ್ಯವನ್ನು ಪ್ರತ್ಯೇಕಿಸುತ್ತಾನೆ. ಪ್ರಕ. 14:14 ಸುಗ್ಗಿ ಕಾಲದಲ್ಲಿ ಮೊದಲನೆಯ ಕೆಲಸ ಅಸತ್ಯದಿಂದ ಸತ್ಯವನ್ನು ಬೇರ್ಪಡಿಸುವುದು.ಹೆಸರಿನ ಸಭೆಗಳಲ್ಲಿರುವ ವಿವಿಧ ಸ್ವಭಾವಗಳಿಂದ ಅದನ್ನು ಕರ್ತನು ಬಾಬೇಲ್ (ಗಲಿಬಿಲಿ) ಎಂದು ಕರೆದಿರುವನು. ಸುಗ್ಗಿ ಕಾಲದಲ್ಲಿ ವಿವಿಧ ವರ್ಗಗಳನ್ನು ಪ್ರತ್ಯೇಕಿಸಿ n ತರಗತಿಯನ್ನು ಪಕ್ವಮಾಡಿ ಪರಿಪೂರ್ಣಗೊಳಿಸಲಾಗುವುದು. ಹಣಜಿಯಿಂದ ಗೋಧಿಯನ್ನು ಪ್ರತ್ಯೇಕಿಸಲಾಗುವುದು. n ವರ್ಗದಲ್ಲಿರುವವರು ಪ್ರಥಮ ಫಲ ಸ್ವಲ್ಪ ಸಮಯದ ನಂತರ ಕ್ರಿಸ್ತನ ಮದಲಗಿತ್ತಿಯಾಗಿ ಆತನೊಂದಿಗೆ ಆತನ ಹಾಗೆ ಇರುವರು. ಚಿಕ್ಕ ಹಿಂಡನ್ನು ಬಾಬೆಲ್‌ನಿಂದ ಪ್ರತ್ಯೇಕಿಸುವುದನ್ನು 's' ಚಿತ್ರದಲ್ಲಿ ತೋರಿಸಲಾಗಿದೆ. ಸತ್ಯ ಸಭೆಯು ಕ್ರಿಸ್ತನ ಹೆಸರನ್ನು ಹೊಂದಿ ಆತನ ಮಹಿಮೆಯಲ್ಲಿ ಪಾಲುಗೊಂಡು ಆತನೊಂದಿಗೆ ಐಕ್ಯವಾಗಲು ಸಿದ್ಧವಾಗುತ್ತಿದೆ. ಮಹಿಮೆ ಹೊಂದಿದ ಕ್ರಿಸ್ತನ ತಲೆ ಮತ್ತು ಶರೀರವನ್ನು w ಚಿತ್ರದಲ್ಲಿ ತೋರಿಸಲಾಗಿದೆ. t, u, v ಬಾಬೆಲ್ ಅನ್ನು ಸೂಚಿಸುತ್ತದೆ. ಅಥವಾ ಹೆಸರಿನ ಕ್ರೈಸ್ತ ಸಭೆಗಳಾಗಿವೆ. ಇವು ಕರ್ತನ ದಿನದಲ್ಲಿ ನಾಶವಾಗಿ ಹೋಗುವುವು. ಇದೊಂದು ಭಯಂಕರ ಸಂಗತಿಯಾಗಿ ಕಂಡರೂ ನಿಜವಾದ ಗೋಧಿ ಕಾಳಿಗೆ ಒಂದು ಸುಸಮಯ. ತಾನು ಯಾವುದನ್ನು ಸಾಧಿಸಲು ಪ್ರಯತ್ನಿಸುವಳೋ ಅವಳು ಅದಾಗಿಲ್ಲದೇ ಇರುವುದರಿಂದ ಬಾಬೆಲ್ ಬಿದ್ದು ಹೋಗುವುದು. ಹೆಸರಿನ ಕ್ರೈಸ್ತ ಸಭೆಗಳಲ್ಲಿ ಅನೇಕ ಕಪಟಿಗಳಿದ್ದಾರೆ. ಇವರು ಲೋಕದ ದೃಷ್ಟಿಯಲ್ಲಿ ಗೌರವ ಸ್ಥಾನ ಪಡೆದುಕೊಂಡು ಅವಳ ಕೃತ್ಯಗಳಲ್ಲಿ ಭಾಗವಹಿಸಿ ಪ್ರಪಂಚವನ್ನೇ ಕೆಡಿಸುತ್ತಿರುವರು. ಇವರ ನಡವಳಿಕೆಗಳು ದೇವರಿಗೆ ಗೊತ್ತು. ಆದರೆ ಆತನ ಯೋಜನೆಯಂತೆ ಸುಗ್ಗಿ ಕಾಲದವರೆಗೆ ಪ್ರಬಲವಾಗಿರುವರು. ಯುಗದ ಸಮಾಪ್ತಿಯಲ್ಲಿ ಎಲ್ಲಾ ಕಂಟಕರನ್ನು ಅಧರ್ಮಿಗಳನ್ನು ಬೆಂಕಿಯ ಕೊಂಡದಲ್ಲಿ ಹಾಕಲು ದೂತರಿಗೂ ಅಪ್ಪಣೆ ಕೊಡುವನು. ಆಗ ನೀತಿವಂತರು ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು. ಮತ್ತಾಯ 13:41,43 ಈ ಬಾಬೆಲ್ ದೇವರ ವಾಕ್ಯಕ್ಕೆ ವಿರುದ್ಧವಾದ ಅನೇಕ ಸಿದ್ಧಾಂತಗಳನ್ನು ಬೋಧಿಸುತ್ತಿರುವುದರಿಂದ ನ್ಯಾಯವಿಚಾರಣೆಯ ದಿನದಲ್ಲಿ ಅವರ ಗತಿಯು ಬಹಳಕಠಿಣವಾಗಿರುವುದು. ಯೆಹೂದ್ಯರ ಸುಗ್ಗಿಯ ಕಾಲದಲ್ಲಿ ಮಹಿಮೆ ಅಧಿಕಾರಗಳನ್ನು ಎದುರು ನೋಡುತ್ತಿದ್ದ ಯೆಹೂದ್ಯರಿಗೆ ಶಿಲುಬೆಯು ಉರುಳು ಕಲ್ಲಾಗಿತ್ತು ಹಾಗೆಯೇ ಗ್ರೀಕ್ ತತ್ವ ಜ್ಞಾನಿಗಳಿಗೆ ಸುವಾರ್ತಾಯುಗದಲ್ಲಿ ಇದು ಉರುಳು ಕಲ್ಲಾಗುತ್ತದೆ.

ಕ್ರಿಸ್ತನೆಂಬ ಆಸ್ತಿವಾರದ ಮೇಲೆ ಚಿನ್ನ ಬೆಳ್ಳಿ ಕಲ್ಲುಗಳಿಂದ ಕಟ್ಟಿರುವ ಸತ್ಯವನ್ನು ಬಿಟ್ಟು ಸುಣ್ಣ, ಹುಲ್ಲು, ಕಲ್ಲು ಮುಂತಾದ ಸಿದ್ಧಾಂತಗಳೆಲ್ಲವು ಬೆಂಕಿಯಲ್ಲಿ ಉರಿದು ಭಸ್ಮವಾಗುವುದು ಸತ್ಯ ಸಿದ್ಧಾಂತದ ಮೇಲೆ ಕಟ್ಟಲ್ಪಟ್ಟಿರುವುದೆಲ್ಲವನ್ನು s ಚಿತ್ರವು ಸೂಚಿಸುತ್ತದೆ. t ಮಹಾ ಸಮೂಹವನ್ನು ಸೂಚಿಸುತ್ತದೆ. ಇವರೆಲ್ಲರು ಆತ್ಮನಿಂದ ಹುಟ್ಟಿದವರಾದರು ಸುಣ್ಣ, ಹುಲ್ಲು, ಕಲ್ಲುಗಳಿಂದ ಕಟ್ಟಿದವರು. ಅಂದರೆ ಪ್ರಥಮ ಸುಗ್ಗಿಯ ಕಾಲದಲ್ಲಿ ಪಕ್ವವಾಗದೇ ಇದ್ದಂತ ಗೋಧಿ ಕಾಳುಗಳು ಇರುವ ಜೀವ ಕಿರೀಟ ಮತ್ತು ದೈವಿಕ ಸ್ವಭಾವವನ್ನು ಹೊಂದಲು ಅನರ್ಹರು. ದೈವೀಕ ಸ್ವಭಾವದಲ್ಲಿ ಸ್ವಲ್ಪ ಕಡಿಮೆ ಮಟ್ಟದವರು. ಇವರು ದೇವರಿಗಾಗಿ ಪ್ರತಿಷ್ಠಿತರಾಗಿದ್ದರೂ ಸಜೀವಯಜ್ಞವಾಗಿ ಅರ್ಪಿತವಾಗದೇ ಇರುವುದರಿಂದ ಇವರ ಮಟ್ಟ ಕಡಿಮೆ. ಸುಗ್ಗಿ ಕಾಲದಲ್ಲೂ ಸತ್ಯದಿಂದ ಮದಲಗಿತ್ತಿಯನ್ನು ಪ್ರತ್ಯೇಕಿಸುವಾಗ t ವರ್ಗದವರು ಕೇಳಿಸಿಕೊಳ್ಳುವುದರಲ್ಲಿ ಬಹಳ ಮಂದವಾಗಿರುವುದರಿಂದ ಪ್ರತ್ಯೇಕಿಸುವ ಕಾರ್ಯವು ಮುಗಿದ ಮೇಲೆ ಮದಲಗಿತ್ತಿಯು ಕ್ರಿಸ್ತನೊಂದಿಗೆ ಸೇರಿದ್ದಾಯಿತು ಎಂದು ಕೇಳಿದ ಕೂಡಲೆ ಅಯ್ಯೋ ನಾವು ಅಜಾಗರೂಕತೆಯಿಂದ ಇದ್ದೆವಲ್ಲಾ ಎಂದು ನಿರಾಶರಾಗಿ ಮನಮರುಗುತ್ತಾರೆ. ಆದರೂ ದೇವರು ಜಗತ್ತಿಗೆ ತೋರಿಸಿದ ಪ್ರೀತಿಯನ್ನು ಕಂಡು 'ಹಲ್ಲೆಲೂಯ ಸರ್ವಶಕ್ತನಾಗಿರುವ ನಮ್ಮ ದೇವರಾದ ಕರ್ತನು ಆಳುತ್ತಾನೆ. ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು. ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿ ಕೊಂಡಿದ್ದಾಳೆ; ಸಂತೋಷ ಪಡೋಣ, ಹರ್ಷಗೊಳ್ಳೋಣ, ಆತನನ್ನು ಘನಪಡಿಸೋಣ' ಎಂದು ಕೂಗುವರು (ಪ್ರಕ 19:6,7). ಇಲ್ಲಿ ದೇವರ ಪ್ರೀತಿಯನ್ನು ಗಮನಿಸಿ, ಮದಲಗಿತ್ತಿಯಾಗುವ ಭಾಗ್ಯವನ್ನು ಕಳೆದುಕೊಂಡರೂ ಮದುವೆಯ ಔತಣಕ್ಕೆ ಅವರನ್ನು ಆಹ್ವಾನಿಸುವನು. "ಯಜ್ಞದ ಕುರಿಯಾದಾತನ ವಿವಾಹದ ಔತಣಕ್ಕೆ ಕರೆಸಿಕೊಂಡವರು ಧನ್ಯರು" (9ನೇ ವಚನ). ಇವರು ದೇವರಿಂದ ಶಿಕ್ಷೆಯನ್ನು ಹೊಂದಿ ತಮ್ಮ ನಿಲುವಂಗಿಗಳನ್ನು ತೊಳಕೊಂಡು ತಕ್ಕ ಕಾಲದಲ್ಲಿ ಸಿದ್ಧಿಗೆ ಬರುವರು. ಆತ್ಮೀಕ ಮಟ್ಟವಾದ L ಮತ್ತು y ನಲ್ಲಿರುತ್ತಾರೆ. ಪ್ರಕ. 7:14, 15.

ಬಾಬೆಲ್ ಅವನತಿ ಹೊಂದಿ ನಾಶವಾಗುವಾಗ ಲೋಕಕ್ಕೆ ಸಂಕಟ ಬರುತ್ತದೆ.ಆಗ ಎಲ್ಲಾ ರಾಜ್ಯಾಡಳಿತ ಮತ್ತು ಮಾನವ ಸಮಾಜವನ್ನು ಮಾರ್ಪಡಿಸಿ ನೀತಿಯ ಆಳ್ವಿಕೆಗೆ ಸಿದ್ಧಮಾಡಲಾಗುವುದು. ಅನ್ಯ ಜನಾಂಗಗಳಿಂದ ಆರಿಸುವಿಕೆಯು ಮುಗಿಯುವಾಗ ತಳ್ಳಲ್ಪಟ್ಟ (ಶರೀರದಲ್ಲಿರುವ) ಇಸ್ರಾಯೇಲ್ ಪುನಃ ದೇವರ ಕೃಪೆಗೆ ಪಾತ್ರರಾಗುವರು. ಆತ್ಮೀಕ ಇಸ್ರಾಯೇಲ್ ಪೂರ್ಣವಾಗಿ ಮಹಿಮೆಹೊಂದುವರು. ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯ ಕಾಲದಲ್ಲಿ ಇಸ್ರಾಯೇಲ್ ಮುಖ್ಯ ರಾಷ್ಟವಾಗುತ್ತದೆ. ಅನಂತರ

ವಿಧೇಯರಾದವರೆಲ್ಲರೂ ಕ್ರಮೇಣ ಈ ರಾಜ್ಯದಲ್ಲಿ ಸೇರಿಕೊಳ್ಳುವರು. ಈ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ ಆದಾಮನಿಂದ ಬಂದ ಮರಣವು ಸಂಪೂರ್ಣವಾಗಿ ನಾಶವಾಗುವುದು. ಹಾಗೆಯೇ ಕಷ್ಟ, ಸಂಕಟ, ಕಾಯಿಲೇ ಮುಂತಾದ ಸಂಕಷ್ಟಗಳೆಲ್ಲವು ನಾಶವಾಗಿ ಬಿಡುವುದು. ಹೀಗೆ ನಕ್ಷೆಯಲ್ಲಿರುವ ಪಿರಿಮಿಡ್ ಸಂಪೂರ್ಣವಾಗುವುದು. ಕ್ರಿಸ್ತನು (x) ತಲೆಯಾಗಿರುನು. ಅನಂತರ ಆತ್ಮೀಕ ಜೀವಿಗಳಾದ ಮಹಾಸಮೂಹ (y) ಅನಂತರ ದೇವದೂತರು ಅನಂತರ ಇಸ್ರಾಯೇಲ್ಯರು (z) ಅನಂತರ ಲೋಕದ ಸರ್ವಜನಾಂಗದವರು (w) ಸಮಸ್ತವನ್ನು ಸರಿಪಡಿಸುವ ಕಾರ್ಯವು ಸಾವಿರ ವರ್ಷಗಳ ಕಾಲದಲ್ಲಿ ಕ್ರಮೇಣವಾಗಿ ಜರುಗುವುದು (ಅ.ಕೃ. 3:21). ಆದರೆ ಯಾರು ದೇವರಿಗೆ ವಿಧೇಯರಾಗದೆ ನೀತಿವಂತರಾಗಲು ಪ್ರಯತ್ನಿಸುವುದಿಲ್ಲವೋ ಅಂಥವರನ್ನು ಎರಡನೇ ಮರಣದಲ್ಲಿ ನಾಶಪಡಿಸಲಾಗುವುದು (ಪ್ರಕ. 20:9). ಆದ್ದರಿಂದ ಅವರಿಗೆ ಪುನರುತ್ಥಾನವೆಂಬುದಿಲ್ಲ ಪ್ರತಿಯೊಬ್ಬನ ವಿಚಾರಣೆಗೆ ಅವಕಾಶವಿತ್ತು.ಒಂದು ಬಾರಿ ವಿಮೋಚನೆಯನ್ನು ಒದಗಿಸಲಾಯಿತು. ಇನ್ನು ಕ್ರಿಸ್ತನು ತನ್ನ ಪ್ರಾಣವನ್ನು ಈಡು ಕೊಡುವುದಿಲ್ಲ.

ದೇವರ ಮಹಾ ಯೋಜನೆಯಾದ ಸಭೆಯನ್ನು ಪ್ರತ್ಯೇಕಿಸುವುದು ಅದರ ಮೂಲಕ ಇಸ್ರಾಯೇಲ್ ಮತ್ತು ಲೋಕದ ಸರ್ವಜನಾಂಗವನ್ನು ಆಶೀರ್ವದಿಸುವುದು ಸಮಸ್ತವನ್ನು ಸರಿಪಡಿಸುವುದು ಮುಂತಾದ ಕೆಲಸಗಳನ್ನು ನೋಡುವಾಗ ಕ್ರಿಸ್ತನ ಜನನದ ಸಮಯದಲ್ಲಿ ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದೊಳಗೆ ಮನುಷ್ಯರಿಗೆ ಸಮಾಧಾನ, ದೇವರು ಅವರಿಗೆ ಒಲಿಯುತ್ತಾನೆ ಎಂದು ದೇವದೂತರು ಹಾಡಿದ ಹಾಡೂ ಜ್ಞಾಪಕಕ್ಕೆ ಬರುತ್ತದೆ.ಕ್ರಿಸ್ತನಲ್ಲಿ ಎಲ್ಲವನ್ನು ಒಂದುಗೂಡಿಸುವುದೇ ದೇವರ ಯೋಜನೆಯ ಉದ್ದೇಶ. ಹೀಗೆ ಕೆಟ್ಟ ತನದಿಂದ ಒಳ್ಳೆಯದನ್ನು ಗೆಲ್ಲುವಾಗ ದೇವರ ಯೋಜನೆಯು ಸಫಲವಾಗಲಿಲ್ಲವೆಂದು ಯಾರಿಗೆ ಹೇಳಲು ಸಾಧ್ಯ.

ಪರಿಪೂರ್ಣತೆಯನ್ನು ಸೂಚಿಸಲು ಪಿರಮಿಡ್ ಒಂದು ಒಳ್ಳೆಯ ಉದಾ. ಕ್ರಿಸ್ತನು ತಲೆಯಾಗಿರುವನು. ಸಭೆ ಮಾತ್ರವಲ್ಲದೆ ಭೂ ಪರ ಲೋಕದಲ್ಲಿರುವುದೆಲ್ಲವು ಆತನ ಶರೀರವಾಗಿ ಕ್ರಿಸ್ತನಲ್ಲಿ ಒಂದಾಗುವುದು. ಎಫೆಸ. 1:10.

ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು ಸಮಸ್ತವು ಅದರಕೆಳಗೆ ಕಟ್ಟಲ್ಪಡಬೇಕು.ಅವು ಎಂಥಾ ಸ್ವಭಾವದವರಾಗಿದ್ದರೂ ಕ್ರಿಸ್ತನ ಪ್ರತಿರೂಪಿಗಳಾಗುವರು. ಎಲ್ಲರೂ ದೇವರಿಗೆ ವಿಧೇಯರಾಗಬೇಕು. ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಬುದ್ಧಿಯಿಂದಲೂ ಮನಸ್ಸಿನಿಂದಲೂ ಮತ್ತು ಶಕ್ತಿಯಿಂದಲೂ ಪ್ರೀತಿಸಬೇಕು ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು.

ಸರಿಪಡಿಸುವ ಕಾರ್ಯದಲ್ಲಿ ಕ್ರಿಸ್ತನು ತಲೆಯಾಗಿರುವನು ಎರಡನೆಯದಾಗಿ ಆತನ ಶರೀರವಾದ ಸಭೆ, ಅನಂತರ ದೇವದೂತರು ಇತರ ಆತ್ಮೀಕ ಜೀವಿಗಳು, ಕೊನೆಯಲ್ಲಿ ಇಸ್ರಾಯೇಲ್ಯರು ಮತ್ತು ಲೋಕದ ಸರ್ವ ಜನಾಂಗದವರು. ಮೇಲ್ಮಟ್ಟದಿಂದ ಪ್ರಾರಂಭವಾಗಿ ಕ್ರಮವಾಗಿ ಎಲ್ಲವು ಐಕ್ಯವಾಗುವಂತೆ ಮಾಡಲಾಗುವುದು. ಇದರಲ್ಲಿನ ಒಂದು ವಿಶೇಷತೆಯೆಂದರೆ ಮೊದಲು ಮೂಲೆಗಲ್ಲು ಹಾಕಲಾಗುವುದು. ದೇವರ ಕಡೆಗಿರುವ ನೀತಿ ನಿರೀಕ್ಷೆಯೆಂಬ ತಳಹದಿಯನ್ನು ಪರಲೋಕದಲ್ಲಿ ಹಾಕಲಾಗುವುದು. ಈ ನಿಯಮವನ್ನನುಸರಿಸಿ ನಡೆಯುವವನು ಅದರಲ್ಲಿ ಐಕ್ಯವಾಗುವನು. ಹೀಗೆ ಎಲ್ಲವು ಕ್ರಿಸ್ತನಲ್ಲಿ ಒಂದುಗೂಡುವುದು. ಹೀಗೆ ಪ್ರತಿಯೊಂದು ಜೀವಿಯು ದೇವರನ್ನು ಘನಪಡಿಸಲಿಕ್ಕಾಗುವಂತೆ ಈ ಕಾರ್ಯವು ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ ಮುಂದುವರಿಯುವುದು. ಹೀಗೆ ಎಲ್ಲರೂ ದೇವರಿಗೆ ವಿಧೇಯರಾಗುವರು. ಆದರೆ ಆ ದಿನದಲ್ಲಿ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನು ಸಂಪೂರ್ಣವಾಗಿ ನಾಶವಾಗುವನು (ಅಕೃ 3:22, 23). ಅದೇ ಎರಡನೇ ಮರಣ.

### ಅರಣ್ಯದಲ್ಲಿನ ದೇವದರ್ಶನ ಗುಡಾರ

ಯುಗಾಂತರಗಳ ನಕ್ಷೆಯಲ್ಲಿ ತಿಳಿಸಿದ ಪಾಠವನ್ನೇ ಇಲ್ಲಿ ತಿಳಿಸಲಾಗಿದೆ. ಮೆಟ್ಟಲು ಮೆಟ್ಟಲುಗಳಾಗಿ ಏರಿ ಅತಿ ಪವಿತ್ರ ಸ್ಥಳಕ್ಕೆ ಹೋಗಬೇಕು. ಗುಡಾರದ ಹೊರ ಅಂಗಳದಲ್ಲಿ ಪಾಪ ಮಾಡಿದ ಇಡೀ ಲೋಕ R ಮಟ್ಟ, ಅದರ ಬಾಗಿಲ ಮೂಲಕ ಒಳಗೆ ಹೊಕ್ಕವರು ನೀತಿವಂತರು N ಮಟ್ಟ, ದೇವರಿಗೆ ಪ್ರತಿಷ್ಠಿಸಿಕೊಂಡು ಗುಡಾರದ ಬಾಗಿಲಿನ ಮೂಲಕ ಹೋಗಿ ಯಾಜಕರಾಗುವರು M ಮಟ್ಟ, ಇವರು ಸಮ್ಮುಖದ ರೊಟ್ಟಿಯನ್ನು ತಿಂದು ಬಲಹೊಂದಿ ದೀಪದ ಬೆಳಕಿನಲ್ಲಿ ಜ್ಞಾನಹೊಂದಿ ದೇವರು ಸ್ವೀಕರಿಸುವ ಸುಗಂಧ ಧೂಪವಾಗಿ ಕ್ರಿಸ್ತನ ಮೂಲಕ ಬಂಗಾರದ ಕೃಪಾಸನದ ಬಳಿಯಲ್ಲಿ ಅರ್ಪಿತರಾಗುತ್ತಾರೆ. ಪುನರುತ್ಥಾನವಾದ ಮೇಲೆ ಆತ್ಮೀಕ ಜೀವಿಗಳಾಗಿ ಅತಿ ಪರಿಶುದ್ಧಸ್ಥಳವನ್ನು ಪ್ರವೇಶಿಸುವರು. L ಮಟ್ಟ ಮತ್ತು ಕ್ರಿಸ್ತನ ಮಹಿಮೆಯ ರಾಜ್ಯದಲ್ಲಿ ಪಾಲುಗಾರರಾಗುವರು K ಮಟ್ಟದಲ್ಲಿರುವವರಾಗಿದ್ದಾರೆ..

**The Blessed Hope**

"A little while, earth's fightings will be over;
A little while, her tears, be wiped away;
A little while, the power of Jehovah
Shall turn this darkness to Millennial Day.

"A little while, the ills that now o'erwhelm men
Shall to the memories of the past belong;
A little while, the love that once redeemed them
Shall change their weeping into grateful song.

"A little while! 'Tis ever drawing nearer—
The brighter dawning of that glorious day.
Praise God, the light is hourly growing clearer,
Shining more and more unto the perfect day."

# ಅಧ್ಯಾಯ-13

## ಈ ಲೋಕದ ರಾಜ್ಯಗಳು

**ಮೊದಲನೆ ಆಧಿಪತ್ಯ-ಅದನ್ನು ಕಳೆದುಕೊಳ್ಳುವುದು-ಅದರ ವಿಮೋಚನೆ ಮತ್ತು ಪುನಃಸ್ಥಾಪನೆ-ಸಾಂಕೇತಿಕ ದೇವರ ರಾಜ್ಯ-ಪ್ರಸ್ತುತ ಅಧಿಕಾರದ ಎರಡು ಭಾಗಗಳು-ದೇವರಿಂದ ನೇಮಿಸಲ್ಪಟ್ಟ ಅಧಿಕಾರಗಳು-ಅವುಗಳ ಬಗ್ಗೆ ನೆಬೂಕದ್ನೆಚರನ ಅಭಿಪ್ರಾಯ-ದಾನಿಯೇಲನ ಅಭಿಪ್ರಾಯ ಮತ್ತು ಅರ್ಥವಿವರಣೆ-ಈ ಲೋಕದ ರಾಜ್ಯಗಳು ಮತ್ತೊಂದು ದೃಷ್ಟಿಕೋನದಿಂದ ಪರಿಗಣಿಸಿದೆ-ಪ್ರಸ್ತುತ ಸರ್ಕಾರಗಳೊಂದಿಗೆ ಸಭೆಯ ಸರಿಯಾದ ಸಂಬಂಧ-ರಾಜರ ದೈವೀಕ ಅಧಿಕಾರವನ್ನು ಸಂಕ್ಷೇಪ್ತವಾಗಿ ಪರೀಕ್ಷಿಸಲಾಗಿದೆ-ಸುಳ್ಳು ಕ್ರೈಸ್ತರ ಪ್ರತಿಪಾದನೆಗಳು-ಐದನೇ ವಿಶ್ವ ಸಾಮ್ರಾಜ್ಯದಲ್ಲಿ ಒಂದು ಉತ್ತಮ ನಿರೀಕ್ಷೆ.**

ದೈವಪ್ರಕಟನೆಯ ಮೊದಲನೆ ಅಧ್ಯಾಯದಲ್ಲಿ ದೇವರು ಭೂಮಿಯನ್ನು ಸೃಷ್ಟಿಸಿದರ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಸಿರುವನು. ಭೂಮಿಯ ಸೃಷ್ಟಿ ಮತ್ತು ಅದರ ರಾಜ್ಯಾಡಳಿತ ವಿಷಯವಾಗಿ ಆದಿ. 1:26ರಲ್ಲಿ ತಿಳಿಸಿರುವನು. "ದೇವರು ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಟುಮಾಡೋಣ; ಸಮುದ್ರದಲ್ಲಿರುವ ಮೀನುಗಳ ಮೇಲೆಯೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ, ನೆಲದಮೇಲೆ ಹರಿದಾಡುವ ಕ್ರಿಮಿಕೀಟಗಳ ಮೇಲೆಯೂ, ಪಶುಗಳ ಮೇಲೆಯೂ ಎಲ್ಲ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು."

ಹೀಗೆ ಭೂಮಿಯ ಒಡೆತನವನ್ನು ಮಾನವರ ಪ್ರತಿನಿಧಿಯಾದ ಆದಾಮನಿಗೆ ಒಪ್ಪಿಸಲಾಯಿತು. ಅವನು ಪರಿಪೂರ್ಣ ಮಾನವನಾಗಿದ್ದುದರಿಂದ ಭೂಮಿಯ ಒಡೆಯನಾಗುವುದಕ್ಕೆ ಅರ್ಹನಾಗಿದ್ದನು. ಭೂಮಿಯ ಒಡೆತನವು ಆದಾಮನೊಬ್ಬನಿಗೆ ಮೀಸಲಾಗಿರದೆ ಸಮಸ್ತ ಮಾನವರಿಗೂ ಕೊಡಲಾಗಿದೆ. ಒಂದು ವೇಳೆ ಮಾನವನು ಪಾಪಮಾಡದೆ ಪರಿಪೂರ್ಣನಾಗಿದಿದ್ದರೆ ಭೂ ಒಡೆತನವು ಎಂದಿಗೂ ಅವನ ಕೈಬಿಟ್ಟು ಹೋಗುತ್ತಿರಲಿಲ್ಲ. ಇಲ್ಲಿ ನಾವು ಗಮನಿಸಬೇಕಾದ ಒಂದು ಅಂಶವೆಂದರೆ ದೇವರು ಭೂಮಿಯ ಮೇಲೆ ದೊರತನ ಮಾಡಿರಿ ಎಂದು ಹೇಳಿದನ್ನೇ ಹೊರತು ಮಾನವರು ಒಬ್ಬರ ಮೇಲೊಬ್ಬರು ದೊರೆತನ ಮಾಡಿರಿ ಎಂದು ಹೇಳಲಿಲ್ಲ. ಭೂಮಿಯನ್ನು ವ್ಯವಸಾಯ ಮಾಡಿ ಬಂದ ಉತ್ಪತ್ತಿಯನ್ನು ಪ್ರತಿಯೊಬ್ಬರು ಹಂಚಿಕೊಳ್ಳುವಂತೆಯೂ ಅರಣ್ಯ ಸಂಪತ್ತನ್ನೂ ಖನಿಜ ಸಂಪತ್ತನ್ನೂ ಅವನ ಉಪಯೋಗಕ್ಕೆ ಕೊಡಲಾಯಿತು ಮತ್ತು ಎಲ್ಲಾಪ್ರಾಣಿಗಳನ್ನು ಮಾನವರ ಅಧಿಕಾರಕ್ಕೆ ಒಪ್ಪಿಸಲಾಯಿತು. ಹೀಗೆ ಮಾನವನು ಪರಿಪೂರ್ಣನಾಗಿದ್ದು ದೇವರ ಮೂಲ ಉದ್ದೇಶಗಳನ್ನೆಲ್ಲಾ ನೆರವೇರಿಸಿದರೆ ಅವರ ಸಂಖ್ಯೆಯು ಹೆಚ್ಚಿ ಎಲ್ಲರೂ ಒಟ್ಟು ಸೇರಿ ಆಲೋಚಿಸಿ ಸಾರ್ವಜನಿಕ ಆಶೀರ್ವಾದವನ್ನು ಹೇಗೆ ಹಂಚಿಕೊಳ್ಳಬೇಕು ಎಂದು ಯೋಚಿಸಬೇಕಾಗಿತ್ತು. ಆದರೆ ಕಾಲ ಮುಂದುವರೆದಂತೆಲ್ಲಾ ಈ ತೆರನಾದ ಕಾರ್ಯಕ್ರಮವು ಅಸಾಧ್ಯವಾಗಿ ಜನರು ತಮ್ಮ ತಮ್ಮಲ್ಲಿಯೇ ಪ್ರತಿನಿಧಿಗಳನ್ನು ಚುನಾಯಿಸಿಕೊಂಡು ಅವರ ಸಲಹೆಯ ಪ್ರಕಾರ ಕಾರ್ಯ ನಡೆಸುವವರಾದರು. ಮಾನವರೆಲ್ಲರೂ ಮಾನಸಿಕವಾಗಿ, ದೈಹಿಕವಾಗಿ, ನೈತಿಕವಾಗಿ ಪರಿಪೂರ್ಣರಾಗಿದ್ದು, ಒಬ್ಬರನೊಬ್ಬರು ಪ್ರೀತಿಸುವವರಾಗಿದ್ದು ದೇವರನ್ನು ಪ್ರೀತಿಸಿ ಆತನ ಕಟ್ಟಳೆಗಳನ್ನು ಕೈಗೊಂಡು ನಡೆಯುವವರಾಗಿದ್ದರೆ ಈ ಏರ್ಪಾಟಿನಲ್ಲಿ ಯಾವ ಅಡ್ಡಿ ಆತಂಕಗಳು ಉದ್ಭವಿಸುತ್ತಿರಲಿಲ್ಲ. ಇದರಿಂದ ಜಗತ್ತೆಲ್ಲವೂ ಪ್ರಜಾಪ್ರಭುತ್ವವಾಗಿರಬೇಕು ಎಂಬುದೇ ದೇವರ ಮೂಲ ಉದ್ದೇಶವಾಗಿತ್ತು ಎಂದು ತಿಳಿದು ಬರುವುದು. ಇದರಿಂದ ಪ್ರತಿಯೊಬ್ಬನೂ ಪಾಲುಗಾರನಾಗಿ ಸ್ವತಂತ್ರವಾಗಿ ತನ್ನ ಕರ್ತವ್ಯವನ್ನು ತನಗೂ ಮತ್ತು ಇತರರಿಗೂ ಉಪಯುಕ್ತವಾದ ರೀತಿಯಲ್ಲಿ ಮಾಡಬೇಕಾಗಿತ್ತು. ಮಾನವರ ದೊರೆತನವು ದೇವರ ದೊರೆತನದೊಂದಿಗೆ ಸರಿಹೊಂದಬೇಕಾಗಿತ್ತು ಯಾಕೆಂದರೆ ಆತನ ದೊರೆತನದ ಮೂಲ "ಪ್ರೀತಿಯಿಂದಲೇ ಧರ್ಮ ಪ್ರಮಾಣವು ನೆರವೇರುತ್ತದೆ." "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು... ಮತ್ತು ನಿನ್ನ ನೆರೆಯವರನ್ನು ನಿನ್ನಂತೆಯೇ ಪ್ರೀತಿಸಬೇಕು" ರೋಮಾ. 13:10; ಮತ್ತಾ. 22:37-40.

ದೇವರ ಈ ಮಹಾ ಕೃಪೆಯನ್ನು ಕುರಿತು ದೇವರನ್ನು ಹೀಗೆ ಹೊಗಳಿರುವನು "ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದ್ದೀಯಲ್ಲಾ; ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ; ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದ್ದಿ" ಕೀರ್ತ 8:5,6 ಹೀಗೆ ಭೂಮಿಯ ಒಡೆತನವನ್ನು ಆದಾಮನಿಗೆ ಕೊಟ್ಟಾಗ ದೇವರ ರಾಜ್ಯವು ಭೂಮಿಯ ಮೇಲೆ ಮೊದಲು ಸ್ಥಾಪಿತವಾಯಿತು. ಮಾನವನು ದೇವರ ಪ್ರತಿನಿಧಿಯಾಗಿ ದೊರತನ ಮಾಡುವವನಾದನು. ಆದರೆ ತನ್ನ ಅವಿಧೇಯತ್ವದಿಂದ ಜೀವಿತದ ಹಕ್ಕನ್ನು ಕಳೆದುಕೊಂಡದ್ದು ಮಾತ್ರವಲ್ಲದೆ ದೇವರ ಪ್ರತಿನಿಧಿಯಾಗಿ ಭೂಮಿಯನ್ನಾಳುವ ಹಕ್ಕನ್ನು ಕಳೆದುಕೊಂಡನು. ಹೀಗೆ ಒಡನೆತನದ ಹಕ್ಕನ್ನು ಕಳೆದುಕೊಂಡು ಕೆಳಕ್ಕೆ ದೊಬ್ಬಲ್ಪಟ್ಟು ಮರಣಕ್ಕೆ ಬಾಧ್ಯನಾದನು. ಶೀಘ್ರವಾಗಿ

ದೇವರ ರಾಜ್ಯವು ಭೂಮಿಯ ಮೇಲೆ ನಶಿಸಿ ಹೋಯಿತು. ಸ್ವಲ್ಪ ಕಾಲ ಇಸ್ರಾಯೇಲ್ಯರಲ್ಲಿ ರಾಜ್ಯದ ಛಾಯೆಗಳು ಕಂಡುಬಂದವು. ಏದೇನಿನಲ್ಲಿ ಮಾನವನು ಜೀವಿಸುವ ಮತ್ತು ಭೂಮಿಯ ಒಡೆತನದ ಹಕ್ಕನ್ನು ಕಳೆದುಕೊಂಡರೂ ಕೂಡಲೆ ಅದು ಅವನಿಂದ ತೆಗೆಯಲ್ಪಡಲಿಲ್ಲ. ಅದೇ ತಿರಸ್ಕೃತನಾದ ಮಾನವನೇ ಕ್ಲುಪ್ತ ಸಮಯದವರೆಗೆ ಆಳಲು ದೇವರು ಅಧಿಕಾರವನ್ನು ಕೊಟ್ಟಿರುವನು.

ನಮ್ಮ ಕರ್ತನ ಮರಣವು ಮಾನವರನ್ನು ವಿಮೋಚಿಸಿದ್ದು ಮಾತ್ರವಲ್ಲದೆ ಭೂಮಿಯ ಒಡೆತನವನ್ನು ಸಹ ಪಡೆದುಕೊಂಡಿತು. ಹಾಗೆ ಸಂಪಾದಿಸಿಕೊಂಡಿದ್ದರಿಂದಲೇ ಆತನು ಭೂಮಿಗೆ ಬಾಧ್ಯನಾಗಿರುವನು ಮತ್ತು ಇನ್ನು ಕೊಂಚ ಕಾಲದಲ್ಲಿ ಅದನ್ನು ಪ್ರಖ್ಯಾತಿಗೆ ತರುವನು. ಎಫೆಸ. 1:14 ಆತನು ಮಾನವರನ್ನು ಗುಲಾಮರನ್ನಾಗಿಕೊಂಡು ಕೊಳ್ಳಲಿಲ್ಲ. ಮಾನವನು ಉತ್ತಮನಾಗಿ ಪುನಃ ತನ್ನ ಪೂರ್ವಸ್ಥಿತಿಯನ್ನು ಹೊಂದಿ ದೇವರ ಚಿತ್ತಕ್ಕೆ ಸರಿಹೊಂದಿ ಕೊಳ್ಳುವುದಕ್ಕಾಗಿ ಕ್ರಿಸ್ತನ ರಾಜ್ಯಭಾರವು ಭೂಮಿಯ ಮೇಲೆ ಶಾಶ್ವತವಾಗಿರಲು ತನ್ನ ಎಲ್ಲಾ ಶತ್ರುಗಳನ್ನು ನಾಶಮಾಡಿ ಕೆಟ್ಟುಹೋದ ಮಾನವ ಜನಾಂಗವು ಮೂಲಸ್ಥಿತಿಯನ್ನುಪಡೆದು ದೇವರ ಚಿತ್ತದಂತೆ ರಾಜ್ಯವಾಳಲು ಶಕ್ತರಾಗುವಾಗ, ಸಮಸ್ತವನ್ನು ಸರಿಪಡಿಸಿದ ಮೇಲೆ ದೇವರ ಪ್ರತಿನಿಧಿಯಾದ ಮಾನವನಿಗೆ ದೊರೆಯುತ್ತದೆ.

ಯೆಹೂದ್ಯರ ಕಾಲದಲ್ಲಿ ಇಸ್ರಾಯೇಲ್ಯರನ್ನು ತನ್ನ ರಾಜ್ಯದ ಪ್ರಜೆಗಳನ್ನಾಗಿ ಮಾಡಿಕೊಂಡು ಮೋಶೆ ಮತ್ತು ಇತರ ನ್ಯಾಯಸ್ಥಾಪಕರ ಮೂಲಕ ಒಂದು ಬಗೆಯ ಪ್ರಜಾಪ್ರಭುತ್ವವು ರೂಢಿಯಲ್ಲಿತ್ತು. ಆದರೆ ಅದೊಂದು ಛಾಯೆ. ಅದಕ್ಕಿಂತ ಪ್ರಗತಿಪರ ರಾಜ್ಯವು ದಾವೀದ ಮತ್ತು ಸೊಲೋಮೋನರಿಗೆ ಕೊಡಲ್ಪಟ್ಟಿತು. ಇದು ಕ್ರಿಸ್ತನ ರಾಜ್ಯದ ಮುಂಗುರುತಾಗಿತ್ತು. ಆದರೆ ಇವರ ನಿಜವಾದ ಅರಸು ಯೆಹೋವನಾಗಿದ್ದನು. ಅರಸರು ದೇವರ ಕೈಕೆಳಗೆ ಆಳುವವರಾಗಿದ್ದರು ಎಂಬುದು ಕೀರ್ತ. 78:70,71 ರಿಂದ ನಮಗೆ ತಿಳಿದುಬರುತ್ತದೆ. ಇದೇ ವಿಷಯವನ್ನು 2ಪೂರ್ವ. ವೃ. 13:8 ಮತ್ತು 1ಪೂರ್ವ. ವೃ. 29:23ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಅಲ್ಲಿ ಇಸ್ರಾಯೇಲ್ಯರನ್ನು ಯೆಹೋವನ ರಾಜ್ಯ ಎಂದು ಸಂಬೋಧಿಸಲಾಗಿದೆ ಮತ್ತು ಸೊಲೊಮೋನನು ದಾವೀದನಿಗೆ ಬದಲಾಗಿ ಅರಸನಾಗಿ ಯೆಹೋವನ ಸಿಂಹಾಸನದಲ್ಲಿ ಕೂತುಕೊಂಡನು ಎಂದು ಬರೆಯಲಾಗಿದೆ. ಸೌಲನ ನಂತರ ದಾವೀದನು ಅದೇ ಸಿಂಹಾಸನದಲ್ಲಿ ನಲವತ್ತು ವರ್ಷ ಕಾಲ ರಾಜ್ಯವಾಳಿದ್ದನು. ಆದರೆ ಇಸ್ರಾಯೇಲ್ಯರು ದೇವರಿಗೆ ವಿರುದ್ಧವಾಗಿ ನಡೆದದ್ದರಿಂದ ದೇವರು ತನ್ನ ರಾಜ್ಯವನ್ನು ಅವರಿಂದ ಸಂಪೂರ್ಣವಾಗಿ ತೆಗೆದುಬಿಟ್ಟನು ದಾವೀದನ ಸಂತತಿಯ ಕಡೇ ಅರಸನಾದ ಚಿದ್ಕೀಯನ ಕಾಲದಲ್ಲಿ ದೇವರರಾಜದಂಡವನ್ನು ತೆಗೆಯಲಾಯಿತು. ಅಲ್ಲಿಗೆ ದೇವರ ರಾಜ್ಯವು ಮುಕ್ತಾಯವಾಯಿತು. ಇದರ ವಿಷಯವಾಗಿ ದೇವರು ಚಿದ್ಕೀಯನಿಗೆ 'ಇಸ್ರಾಯೇಲ್ಯರ ದೊರೆಯೇ ದುಷ್ಟನೇ, ಭ್ರಷ್ಟನೇ ನಿನಗೆ ಸಮಯವು ಹತ್ತರಿಸಿದೆ; ಇದೇ ನಿನ್ನ ಅಪರಾಧದ ಕಡೆಗಾಲ; ಕರ್ತನಾದ ಯೆಹೋವನು ಇಂತೆನುತ್ತಾನೆ – ಮುಂಡಾಸನವನ್ನು ಕಿತ್ತುಬಿಡು; ಕಿರೀಟವನ್ನು ಎತ್ತಿಹಾಕು ಎಲ್ಲವೂ ವ್ಯತ್ಯಾಸವಾಗಲಿ... ನಾನು ದೊಬ್ಬಿ ಬಿಡುವೆನು, ದೊಬ್ಬಿ ಬಿಡುವೆನು, ದೊಬ್ಬಿ ಬಿಡುವನು (ರಾಜ್ಯಕ್ಕೆ) ಬಾಧ್ಯನು ಬರುವುದರೊಳಗೆ ಒಂದೂ ಇದ್ದಂತಿರದು ಅವನಿಗೆ ರಾಜ್ಯವನ್ನು ವಹಿಸುವೆನು.' ಯೆಹೆಜ್ಕೆ. 21: 25–27 ಈ ಪ್ರವಾದನೆಯು ನೆರವೇರುವುದಕ್ಕಾಗಿಯೇ ಬಾಬೇಲಿನ ಅರಸನಾದ ನೇಬುಕದ್ನೇಚರನು ಇಸ್ರಾಯೇಲ್ಯರಿಗೆ ವಿರುದ್ಧವಾಗಿ ಬಂದು ಅವರನ್ನು ಸೋಲಿಸಿ ಅರಸನನ್ನು ರಾಜ್ಯದಿಂದ ತೆಗೆದು ಹಾಕಿದನು. ನಂತರ ಅವರು ಕೋರೇಷನ ಆಳ್ವಿಕೆಯಲ್ಲಿ ಜೀವಿಸುವವರಾಗಿದ್ದು ಮುಂದೆ ರಾಜ್ಯವಾಳಿದ ಮೇದ್ಯ ಪಾರಸೀಯ, ಗ್ರೀಕ್ ಮತ್ತು ರೋಮ್ ಚಕ್ರಾಧಿಪತಿಗಳಿಗೆ ಅಧೀನರಾಗಿದ್ದು ಕಪ್ಪ ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ಅಂದಿನಿಂದ ಕ್ರಿ.ಶ. 70ರವರೆಗೆ ಇಸ್ರಾಯೇಲ್ಯರು ಇತರ ದೇಶಗಳಲ್ಲಿ ಚದುರಿಹೋದರು.

ಇಸ್ರಾಯೇಲ್ ಒಂದೇ ದೇವರಿಂದ ಗುರುತಿಸಲ್ಪಟ್ಟ ರಾಷ್ಟ್ರ. ಇವರ ಹಾಗೆ ಅನೇಕ ರಾಜ್ಯಗಳಿದ್ದವು, ಆದರೆ ಅವರು ತಮ್ಮ ರಾಜ್ಯವನ್ನು ದೇವರು ಸ್ಥಾಪಿಸಿದನೆಂದಾಗಲಿ, ತಾವು ದೇವರ ಪ್ರತಿನಿಧಿಗಳೆಂದಾಗಲಿ ಹೇಳಿಕೊಳ್ಳುವ ಹಕ್ಕು ಅವರಿಗಿರಲಿಲ್ಲ. ಚಿದ್ಕೀಯನಿಂದ ಕಿರೀಟವು ತೆಗೆಯಲ್ಪಟ್ಟ ಮೇಲೆ ಇಸ್ರಾಯೇಲ್ ರಾಜ್ಯವು ಅವನತಿ ಹೊಂದಿತು ಮತ್ತು ಈ ರಾಜ್ಯದ ಬಾಧ್ಯಸ್ಥನಾದ ಕ್ರಿಸ್ತನು ಬರುವವರೆಗೂ ಹೀಗೆ ಉಳಿಯಬೇಕೆಂದು ಆಜ್ಞಾಪಿಸಲಾಯಿತು. ಆದುದರಿಂದ ದೇವರ ರಾಜ್ಯವು ಪುನಃ ಸ್ಥಾಪನೆಯಾಗುವವರೆಗೂ ಆಳ್ವಿಕೆಯಲ್ಲಿರುವ ಇತರ ಎಲ್ಲಾ ರಾಜ್ಯಗಳನ್ನು ಇಹ ಲೋಕದ ರಾಜ್ಯಗಳು ಎಂದು ಕರೆಯಲಾಗಿದೆ ಮತ್ತು ಸೈತಾನನು ಇವುಗಳಿಗೆ ಅರಸನಾಗಿರುವನು. ಕ್ರಿಸ್ತನ ಆಗಮನದಿಂದಲೇ ದೇವರ ರಾಜ್ಯವು ಸ್ಥಾಪಿತವಾಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಲೂಕ 19:12 ಅಂದಿನಿಂದ ಕ್ರಿಸ್ತನ ಜೊತೆ ಸೇವಕರಾಗುವುದಕ್ಕೆ ಅರ್ಹರಾದವರನ್ನೇ ದೇವರು ಆರಿಸುತ್ತಿರುವನು. ಕ್ರಿಸ್ತನ ಎರಡನೇ ಬರುವಿಕೆಯವರೆಗೆ ಆತನು ಈ ರಾಜ್ಯಾಧಿಕಾರವನ್ನು ವಹಿಸಿಕೊಳ್ಳುವುದಿಲ್ಲ.

ಇಸ್ರಾಯೇಲ್ ಒಂದನ್ನು ಬಿಟ್ಟರೆ ಉಳಿದ ಎಲ್ಲಾ ರಾಜ್ಯಗಳನ್ನು ಅನ್ಯಜನಾಂಗಗಳ ರಾಜ್ಯಗಳು ಎಂದು ಹೇಳಲಾಗಿದೆ. ಈ ಅನ್ಯ ಜನಾಂಗಗಳ ಸಮಯ ತೀರುವವರೆಗೆ ಯೆರುಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುತ್ತಿರುವುದು. ಲೂಕ

21:24 ಇಸ್ರಾಯೇಲ್ಯರ ಅವನತಿಯಿಂದದೇವರ ರಾಜ್ಯದ ಸ್ಥಾಪನೆಗೆ ಮಧ್ಯದ ಕಾಲವನ್ನು ವೇದೋಕ್ತಿಯ ಪ್ರಕಾರ ಅನ್ಯದೇಶದವರ ಸಮಯ ಎಂದು ಕರೆಯಲಾಗಿದೆ. ಈ ಅನ್ಯರ ಸಮಯವು ಇಷ್ಟೇ ವರ್ಷಗಳೆಂದು ಗೊತ್ತುಪಡಿಸಲಾಗಿದೆ. ಈ ಅನ್ಯರಾಜ್ಯಗಳ ಕೆಟ್ಟತನವನ್ನು ದೇವರು ಒಂದು ಒಳ್ಳೇ ಉದ್ದೇಶಕ್ಕಾಗಿಯೇ ನೇಮಿಸಿರುವನು. ರೋಮಾ. 13:1 ಇದರಿಂದ ಮಾನವನು ರಾಜ್ಯಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಅಶಕ್ತ. ರಾಜ್ಯವನ್ನು ಆಳಲು ಅರ್ಹನಲ್ಲ ಎಂದು ತಿಳಿಯಬಹುದು. ದೇವರ ಯೋಜನೆಗೆ ವಿರುದ್ಧವಾಗಿ ಯಾವ ಕೆಲಸವನ್ನು ಮಾಡದಂತೆ ರಾಜ್ಯವಾಳಲು ದೇವರು ಅವರಿಗೆ ಅವಕಾಶಕೊಟ್ಟಿರುವನು. ಹೀಗೆ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ದೇವರ ಯೋಜನೆಗನುಸಾರವಾಗಿ ಕೆಲಸ ನಡೆಸುತ್ತಿವೆ. “ಅಂತ್ಯದಲ್ಲಿ ಮನುಷ್ಯರ ಕೋಪವು ನಿನ್ನ ಘನಕ್ಕೆ ಸಾಧಕವಾಗುವುದು.” ಕೀರ್ತ. 76:10 ಮಾನವನು ಒಂದು ಉತ್ತಮ ರಾಜ್ಯವನ್ನು ಸ್ಥಾಪಿಸದೇ ಇರುವುದಕ್ಕೆ ಮುಖ್ಯ ಕಾರಣ ಕೆಟ್ಟುಹೋದ ಸ್ಥಿತಿಯಲ್ಲಿರುವ ಬಲ ಹೀನತೆ. ಈ ಬಲಹೀನತ್ವವು ಅವನು ಸ್ಥಾಪಿಸಬೇಕೆಂದಿರುವ ಉತ್ತಮ ರಾಜ್ಯದ ಪ್ರಯತ್ನಗಳನ್ನು ಹಾಳುಮಾಡಿದೆ. ಈ ಬಲ ಹೀನಸ್ಥಿತಿಯಲ್ಲಿದ್ದ ಮಾನವನನ್ನು ಸೈತಾನನು ತನ್ನ ವಶಮಾಡಿಕೊಂಡಿದ್ದಾನೆ. ಇದರಿಂದ ಸೈತಾನನು ಪ್ರಯೋಜನ ಹೊಂದಿ ಮಾನವನಿಗೆ ಒಳ್ಳೆಯದನ್ನು ಕೆಟ್ಟದ್ದಾಗಿಯೂ ಮತ್ತು ಕೆಟ್ಟದ್ದನ್ನು ಒಳ್ಳೆಯದನ್ನಾಗಿ ಮಾಡಿ ದೇವರಿಗೆ ವ್ಯತಿರಿಕ್ತವಾಗಿ ಆತನ ಯೋಜನೆಯನ್ನು ತಪ್ಪಾಗಿ ತೋರಿಸಿ ಅವರ ಕಣ್ಣು ಸತ್ಯಕ್ಕೆ ಕುರುಡಾಗುವಂತೆ ಮಾಡಿದ್ದಾನೆ. ಹೀಗೆ ಅವಿಧೇಯರ ಹೃದಯದಲ್ಲಿ ಕೆಲಸ ಮಾಡುತ್ತಾ ತನ್ನನ್ನೇ ಕರ್ತನು ಎಂದು ಮಾನವರು ಕರೆಯುವ ಹಾಗೆ ಇಹ ಲೋಕಾಧಿಪತಿಯಾಗಿ ಮಾಡಿಕೊಂಡಿದ್ದಾನೆ. ಎಫೆಸ. 2:2, ಯೋಹಾನ 14:30; 12:31 ಇವನಿಗೆ ಲೋಕಾಧಿಪತಿಯಾಗುವ ಹಕ್ಕು ಇರಲಿಲ್ಲ. ಆದರೆ ಅದನ್ನು ಕದ್ದು ಜನರನ್ನು ಮೋಸಗೊಳಿಸುತ್ತಾ ಅವರನ್ನು ತನ್ನ ವಶಮಾಡಿಕೊಂಡು ಅಧಿಪತಿಯಾಗಿದ್ದಾನೆ. ಇವನು ಮೋಸಗಾರ ನಾಗಿರುವುದರಿಂದ ಕಡೆಯಲ್ಲಿ ಇವನನ್ನು ಬಂಧಿಸಲಾಗುವುದು. ಇವನು ದೇವರಿಗೆ ಸರಿಯಾಗಿ ನಡೆದು ಇಹಲೋಕಾಧಿಪತಿ ಎನಿಸಿಕೊಂಡಿದ್ದರೆ ಅಂಥ ಶಿಕ್ಷೆಯು ಅವನಿಗೆ ಕೊಡಲ್ಪಡುತ್ತಿರಲಿಲ್ಲ.

ಭೂಲೋಕದಲ್ಲಿ ಎರಡು ವಿಧವಾದ ಆಡಳಿತವು ನಡೆಯುತ್ತಿದೆ ಆತ್ಮೀಕಕ್ಕೆ ಸಂಬಂಧಿಸಿದ ಅದೃಶ್ಯವಾದ ಆಡಳಿತ ಮತ್ತೊಂದು ಮಾನವರಿಗೆ ಸಂಬಂಧಿಸಲ್ಪಟ್ಟ ದೃಶ್ಯವಾದ ಆಡಳಿತ. ಇದು ಆತ್ಮೀಕ ಅಧಿಪತಿಯಾದ ಸೈತಾನನ ವಶದಲ್ಲಿರುವುದು. ಇಷ್ಟು ಅಧಿಕಾರವಿದ್ದುದರಿಂದಲೇ ಈ ಸೈತಾನನು ನಮ್ಮ ರಕ್ಷಕನಾದ ಯೇಸುಕ್ರಿಸ್ತನಿಗೆ ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಇವುಗಳನ್ನೆಲ್ಲಾ (ರಾಜ್ಯಗಳು) ನಿನಗೆ ಕೊಡುವೆನು ಎಂದು ಹೇಳಿದ್ದು, ಮತ್ತಾ. 4:9 ಅನ್ಯಜನಾಂಗಗಳ ಸಮಯವು ಮುಕ್ತಾಯವಾದ ಕೂಡಲೇ ಸೈತಾನನನ್ನು ಬಂಧಿಸಿ ಇಹಲೋಕದ ರಾಜ್ಯಗಳನ್ನು ನಾಶಮಾಡಲಾಗುವುದು. ಹೀಗೆ ಲೋಕವು ಪ್ರಸವವೇದನೆಯನ್ನನುಭವಿಸುತ್ತಾ ಸವೆದು ಹೋದ ದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ ಕಷ್ಟಪಡುತ್ತಾ ಸಾಗುತ್ತಾ ಇದೆ. ಆದರೂ ತತ್ವಶಾಸ್ತ್ರಜ್ಞರು ಕನಸಿನ ಸುವರ್ಣಯುಗವು ಸಮೀಪವಾಗುತ್ತಿದೆ ಎಂದು ನಿರೀಕ್ಷಿಸಿಕೊಂಡಿರುವರು. ಆದರೆ ಈ ಪ್ರಪಂಚದ ರಕ್ಷಣೆಯು ಯೇಸುಕ್ರಿಸ್ತನಿಂದಲೂ ದೇವರ ಮಕ್ಕಳೆನಿಸಿಕೊಂಡಿರುವ ಆತನ ಹಿಂಬಾಲಕರಿಂದ ಸುವರ್ಣ ಯುಗಕ್ಕಿಂತಲೂ ಉತ್ತಮವಾದ ಕಾಲ ಬರುವುದೆಂದು ಅವರಿಗೆ ಗೊತ್ತಿಲ್ಲ. ರೋಮಾ. 8:22, 19 ದೇವರು ಒಂದು ವಿಶೇಷ ಉದ್ದೇಶಕ್ಕಾಗಿ ಕೆಟ್ಟ ರಾಜ್ಯಗಳಿರಲು ಅವಕಾಶಕೊಟ್ಟಿರುವನು. ಇವುಗಳ ಅವನತಿಯು ವಿಷಯವಾಗಿ ದೇವರು ಪ್ರವಾದಿಗಳ ಮುಖಾಂತರ ಹೇಳಿಸಿದ್ದಾನೆ. ಈ ರಾಜ್ಯಗಳು ನಾಶವಾದ ಮೇಲೆ ಸಮಾಧಾನದ ಪ್ರಭುವಾದ ಯೇಸುಕ್ರಿಸ್ತನ ಕೈಕೆಳಗೆ ಶಾಶ್ವತವಾದ ನೀತಿಯ ರಾಜ್ಯವನ್ನು ಸ್ಥಾಪಿಸುವನು.

ಇಂದು ಮಾನವರ ಆಡಳಿತವು ಜಯಪ್ರದವಾಗಿಲ್ಲ. ಯೆಹೋವನಿಗೆ ವಿರುದ್ಧ ನಿಲ್ಲಲು ಸಾಧ್ಯವಿಲ್ಲ. ಇದನ್ನೇ ನೆಬುಕದ್ನೇಚರನಿಗೆ ಕನಸಿನಲ್ಲಿ ತಿಳಿಸಿ ಕ್ರಿಸ್ತನ ರಾಜ್ಯವು ಸ್ಥಾಪಿತವಾಗುವವರೆಗೆ ಬಾಬೆಲ್, ಮೇದ್ಯ ಪಾರಸೀಯ ಗ್ರೀಕ್ ಮತ್ತು ರೋಂ ಚಕ್ರಾಧಿಪತ್ಯಗಳು ಆಳಲು ಅವಕಾಶ ಕೊಡುತ್ತಾನೆ. ದಾನಿ. 2:37–43 ಇವುಗಳ ಕಾಲ ಮುಕ್ತಾಯವಾದ ಮೇಲೆ ರಾಜ್ಯಗಳು ಸಂಪೂರ್ಣವಾಗಿ ನಾಶವಾಗುತ್ತವೆ. ಪ್ರವಾದನೆಯ ಪ್ರಕಾರ ನೋಡಿದರೆ ಇಸ್ರಾಯೆಲ್ ರಾಜ್ಯವು ನಾಶವಾದ ಮೇಲೆ ಬಾಬೆಲ್ ರಾಜ್ಯದಿಂದ ಈ ಮೂರು ರಾಜ್ಯಗಳು ಪ್ರಾರಂಭಿಸುತ್ತವೆ.

### ನೆಬೂಕದ್ನೇಚರನಿಗಾದ ಭೂರಾಜ್ಯಗಳ ದರ್ಶನ

ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವುದಕ್ಕಾಗಿ ಬರೆಯಲ್ಪಟ್ಟಿತ್ತು. ನಾವು ಮೇಲಿನ ಅಧಿಕಾರಿಗಳಿಗೆ ಅಧೀನರಾಗಿರುವುದರಿಂದ ದೃಢವಾದ ನಂಬಿಕೆಯಿಂದಲೂ ಮತ್ತು ತಾಳ್ಮೆಯಿಂದಲೂ ಈ ರಾಜ್ಯಗಳ ಅಧೀನದಲ್ಲಿರುವ ನಾವು ವೇದೋಕ್ತಿಗಳ ನಿರೀಕ್ಷೆಯಿಂದ ಆ ಕಾಲದಲ್ಲಿ ನೆಬುಕದ್ನೇಚರನಿಗಾದ ಕನಸನ್ನು ಮತ್ತು ಅದರ ದೈವವಿವರಣೆಯನ್ನು ಗಮನಿಸೋಣ. ರೋಮಾ. 15:4;13:1 ಈ ಕನಸು ದಾನಿಯೇಲ 2:31–45ರಲ್ಲಿ ಕಂಡುಬರುತ್ತದೆ.

ಚರಿತ್ರೆಯ ವಿದ್ಯಾರ್ಥಿಯು ಅನೇಕ ಸಣ್ಣ ರಾಜ್ಯಗಳ ನಡುವೆ ಹುಟ್ಟಿಕೊಂಡ ನಾಲ್ಕು ರಾಜ್ಯಗಳನ್ನು ದಾನಿಯೇಲನು

ವಿವರಿಸಿರುವುದನ್ನು ನೋಡಬಹುದು. ಇವುಗಳನ್ನು ಭೂರಾಜ್ಯಗಳು ಎಂದು ಸಂಬೋಧಿಸಲಾಗಿದೆ. ಮೊದಲನೆಯದು ಬಾಬೆಲ್, ಅದು ಬಂಗಾರದ ತಲೆ. ಬಾಬೆಲನ್ನು ಗೆದ್ದ ಮೇದ್ಯ ಪಾರಸೀಯ ಎರಡನೆಯದು. ಅದರ ಎದೆ ಬೆಳ್ಳಿಯದು. ಮೇದ್ಯ ಪಾರಸೀಯವನ್ನು ಗೆದ್ದ ಗ್ರೀಕ್ ಮೂರನೆಯದು. ಅದರ ಹೊಟ್ಟೆ ತಾಮ್ರದ್ದು. ಕಟ್ಟಕಡೆಯದೇ ಪ್ರಬಲವಾದ ರೋಮ್ ಸಾಮ್ರಾಜ್ಯಗಳು ನಾಶವಾಗಿ ಹೋದವು. ಆದರೆ ನಾಲ್ಕನೆಯದಾದ ರೋಮ್ ಸಾಮ್ರಾಜ್ಯವು ಪ್ರಪಂಚದಲ್ಲೇ ಪ್ರಬಲವಾಗಿದ್ದು ನಮ್ಮ ರಕ್ಷಕನು ಜನಿಸುವ ಕಾಲದಲ್ಲಿ "ರಾಜ್ಯವೆಲ್ಲಾ ಖಾನೇಷುಮಾರಿ ಬರೆಸಿಕೊಳ್ಳಬೇಕೆಂಬ ಆಜ್ಞೆಯು ಚಕ್ರವರ್ತಿಯಾದ ಔಗುಸ್ತನಿಂದ ಹೊರಟಿತು" ಎಂದು ಓದುತ್ತೇವೆ. ಲೂಕ 2:1.

ಕಬ್ಬಿಣದಂತೆ ಬಲಶಾಲಿಯಾಗಿದ್ದ ರೋಮ್ ಚಕ್ರಾಧಿಪತ್ಯವು ಉಳಿದ ರಾಜ್ಯಗಳಿಗಿಂತ ಪ್ರಬಲವಾಗಿದ್ದು ಹೆಚ್ಚುಕಾಲ ರಾಜ್ಯವಾಳಿತು. ಈಗಲೂ ಯೂರೋಪಿನಲ್ಲಿ ಒಂದು ಸಣ್ಣ ರಾಜ್ಯವಾಗಿ ಮುಂದುವರಿಯುತ್ತಿದೆ. ಈ ವಿಭಾಗವನ್ನು ಪ್ರತಿಮೆಯ ಹತ್ತು ಬೆರಳುಗಳಿಂದ ಸೂಚಿಸಲಾಗಿದೆ. ಪಾದದಲ್ಲಾಗಿರುವ ಕಬ್ಬಿಣ ಮತ್ತು ಮಣ್ಣಿನ ಮಿಶ್ರಣವು ಸಭೆ ಮತ್ತು ರಾಜ್ಯ ಮಿಶ್ರವಾಗಿರುವುದನ್ನು ಸೂಚಿಸುತ್ತದೆ. ಇದನ್ನೇ ಸತ್ಯವೇದದಲ್ಲಿ ಬಾಬೆಲ್ ಎಂದು ಕರೆಯಲಾಗಿದೆ. ಬಾಬೆಲ್ ಎಂದರೆ ಗಲಿಬಿಲಿ ಎಂದರ್ಥ. ಸದ್ಯದಲ್ಲಿ ನಾವು ನೋಡುವ ಹಾಗೆ ಕಲ್ಲು ಸತ್ಯ ದೇವರ ರಾಜ್ಯವನ್ನು ಸೂಚಿಸುತ್ತದೆ. ಕಬ್ಬಿಣದಂಥ ರೋಮ್ ಸಾಮ್ರಾಜ್ಯವು ಸಭೆಯಿಂದ ಮಿಶ್ರವಾಗಿರುವುದರಿಂದ ನಮ್ಮ ಕರ್ತನು ಅದನ್ನು ಬಾಬೆಲ್ ಎಂದು ಕರೆದಿರುವನು. ಯಾಕೆಂದರೆ ಹೆಸರಿನ ಕ್ರೈಸ್ತ ಸಭೆಗಳು ಈ ಲೋಕದ ರಾಜ್ಯಗಳ ವ್ಯವಹಾರದಲ್ಲಿ ಬೆರೆತು ಹೋಗಿರುವುದು ಮತ್ತು ಅವರು ತಾವೇ ಕ್ರಿಸ್ತನ ರಾಜ್ಯದವರು ಎಂದು ಹೇಳಿಕೊಳ್ಳುವವರಾಗಿರುವರು. "ಕಬ್ಬಿಣವು ಜೇಡಿಮಣ್ಣಿನೊಂದಿಗೆ ಬೆರೆತಿರುವುದನ್ನು ನೀನು ನೋಡಿದ ಮೇರೆಗೆ ಆ ರಾಜ್ಯಾಂಶಗಳು ಸಂತತಿ ಸಂಬಂಧದಿಂದ ಬೆರೆತುಕೊಳ್ಳುವವು; (ಸಭೆ ಮತ್ತು ರಾಜ್ಯ = ಬಾಬೆಲ್) ಆದರೆ ಕಬ್ಬಿಣವು ಮಣ್ಣಿನೊಂದಿಗೆ ಹೇಗೆ ಕಲೆಯುವುದಿಲ್ಲವೋ ಹಾಗೆ ಅವು ಒಂದಕ್ಕೊಂದು ಅಂಟಿಕೊಳ್ಳುವುದಿಲ್ಲ" ಅವು ಸಂಪೂರ್ಣವಾಗಿ ಬೆರೆಯಲು ಸಾಧ್ಯವಿಲ್ಲ. ಆ ರಾಜರಕಾಲದಲ್ಲಿ (ಬೆರಳುಗಳು ಸೂಚಿಸುವ ಕ್ರೈಸ್ತ ರಾಜ್ಯಗಳು) ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು. ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು. ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವುದು. ದಾನಿ. 2:43, 44

ಇಲ್ಲಿ ದಾನಿಯೇಲನು, ಅನ್ಯ ಜನಾಂಗಗಳು ನಾಶವಾಗುವ ಕಾಲವನ್ನು ಸೂಚಿಸಿಲ್ಲ. ಅದು ಬೇರೆ ಕಡೆ ಕಂಡುಬರುತ್ತದೆ. ಆದರೆ ಮುಂತಿಳಿಸಿರುವ ಸಂಗತಿಗಳಿಂದ ನಾವು ಅಂತ್ಯದ ದಿನಗಳ ಬಾಗಿಲಿಗೆ ಬಂದು ನಿಂತಿದ್ದೇವೆ ಎಂದು ತಿಳಿದುಬರುತ್ತದೆ. ಪ್ರವಾದನೆಗಳಲ್ಲಿ ತಿಳಿಸಿರುವಂತೆ ಪೋಪನ ರಾಜ್ಯವು ಇತರ ರಾಜ್ಯಗಳನ್ನು ನಾಶ ಮಾಡಿದ್ದುಂಟು. ಪೋಪನ ರಾಜ್ಯ ದೇವರ ರಾಜ್ಯಕ್ಕೆ ವಿರುದ್ಧವಾದದ್ದು. ಪೋಪನ ರಾಜ್ಯವು ಇತರ ರಾಜ್ಯಗಳನ್ನು ಸಂಪೂರ್ಣವಾಗಿ ನಾಶಮಾಡದೆ ಇರುವುದಕ್ಕೆ ಕಾರಣ ಆ ರಾಜ್ಯಗಳ ಅಂತ್ಯ ಇನ್ನೂ ಬಂದಿಲ್ಲ. ಜೇಡಿಮಣ್ಣು ಒಣಗಿ ಗಡುಸಾಗಿದೆ, ಅಂಟಿಕೊಳ್ಳುವ ಶಕ್ತಿ ಕಡಿಮೆಯಾಗಿ ಹೋಗಿದೆ. ಕಬ್ಬಿಣ ಮತ್ತು ಜೇಡಿಮಣ್ಣಿನಲ್ಲಿ ಶಕ್ತಿ ಕುಂದಿಹೋಗಿರುವುದರಿಂದ ಶೀಘ್ರವೇ ಸತ್ಯಸಭೆಯೆಂಬ ಕಲ್ಲು ಗುಂಡು ಬಂದು ಹೊಡೆದು ಅದನ್ನು ಪುಡಿಪುಡಿ ಮಾಡಿಬಿಡುತ್ತದೆ. ಇದನ್ನೇ ದಾನಿಯೇಲನು "ಬೆಟ್ಟದೊಳಗಿಂದ ಒಂದುಗುಂಡು ಬಂಡೆಯು ಕೈಯಿಂದ ಒಡೆಯಲ್ಪಟ್ಟು ಕಬ್ಬಿಣ,ತಾಮ್ರ, ಮಣ್ಣು, ಬೆಳ್ಳಿ,ಬಂಗಾರಗಳನ್ನು ಚೂರುಚೂರು ಮಾಡಿದ್ದು ನಿನ್ನ ಕಣ್ಣಿಗೆ ಬಿತ್ತಲ್ಲ. ಇದರಿಂದ ಪರಲೋಕದ ದೇವರು ಮುಂದೆ ನಡೆಯುವ ವಿಷಯಗಳನ್ನು ರಾಜನಿಗೆ ತಿಳಿಯಪಡಿಸಿದ್ದಾನೆ. ಕನಸು ನಿಜ. ಅದರ ಅರ್ಥ ನಂಬತಕ್ಕದ್ದು." "ವಚನ 45. ಅನ್ಯ ರಾಜ್ಯಗಳನ್ನು ನಾಶಮಾಡುವ ಗುಂಡುಬಂಡೆಯು ಸತ್ಯಸಭೆಯನ್ನು ಸೂಚಿಸುತ್ತದೆ. ಮುಂದೆ ಇದು ಕಾರ್ಯ ನಡೆಸುವುದಕ್ಕೋಸ್ಕರ ಇದನ್ನು ಸುವಾರ್ತಾ ಯುಗದಲ್ಲಿ ರೂಪಿಸಲಾಗುತ್ತಿದೆ. ಮಾನವನ ಕೈಯಿಂದಲ್ಲ ಪವಿತ್ರಾತ್ಮನ ಶಕ್ತಿಯಿಂದ ಮತ್ತು ಯೊಹೋವನ ಅಗೋಚರವಾದ ಶಕ್ತಿಯಿಂದ. ಅದು ಸಂಪೂರ್ಣವಾದ ಕೂಡಲೇ ಈ ಲೋಕದ ರಾಜ್ಯಗಳನ್ನು ಹೊಡೆದು ನಾಶಮಾಡಿಬಿಡುವುದು. ಪ್ರತಿಮೆಯು ಸರಕಾರವನ್ನು ಸೂಚಿಸುವುದರಿಂದ ಸರಕಾರಗಳು ನಾಶವಾಗಿ ಜನರು ರಕ್ಷಿಸಲ್ಪಡುವರು ಯಾಕೆಂದರೆ ಯೇಸು ಕ್ರಿಸ್ತನು ಜನರನ್ನೂ ರಕ್ಷಿಸುವುದಕ್ಕೆ ಬಂದನೇ ಹೊರತು ನಾಶಮಾಡುವುದಕ್ಕಲ್ಲ. ಯೋಹಾನ 3:17."

ಈಗ ಈ ಬಂಡೆಯು ಸಿದ್ಧವಾಗುತ್ತಿರುವುದರಿಂದ ಜನಿಸುವ ಅಂಕುರದಲ್ಲಿರುವ ಬಂಡೆ ಎಂದು ಕರೆಯಬಹುದು. ಸುಳ್ಳುಸಭೆಗಳನ್ನು ನಾಶಮಾಡುವವರೆಗೆ ಕರ್ತನ ದಿನವು ಬರುವುದಿಲ್ಲ. ಜನಾಂಗಗಳ ಸಂಕಷ್ಟವೆಲ್ಲಾ ಮುಗಿದಮೇಲೆ ಇದು ಪರಿಪೂರ್ಣವಾದ ಪರ್ವತವಾಗುವಾಗ ನಮ್ಮ ಕರ್ತನ ದಿನವು ಬರುವುದು. ಆಗ ಎಲ್ಲಾ ರಾಜ್ಯಗಳು ಇದಕ್ಕೆ ಅಧೀನವಾಗುವವು. ಈ ಸಂದರ್ಭದಲ್ಲಿ ನಮ್ಮ ಕರ್ತನು ಸಭೆಗೆ ಮಾಡಿರುವ ವಾಗ್ದಾನವನ್ನು ನೆನಸಿಕೊಳ್ಳಿರಿ "ಜಯ ಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು." ಯಾವನು

ಜಯಶಾಲಿಯಾಗಿದ್ದು ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ಕಡೇವರೆಗೂ ನಡೆಸುತ್ತಾನೋ ಅವನಿಗೆ ನಾನು ನನ್ನ ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು. ಪ್ರಕ. 3:21; 2:26, 27: ಕೀರ್ತ. 2:8–12 ಕಬ್ಬಿಣದಕೋಲು ತನ್ನ ನಾಶನದ ಕೆಲಸವನ್ನು ಮುಗಿಸಿದ ಮೇಲೆ ಹೊಡೆದ ಕೈ ಈಗ ವಾಸಿಮಾಡಲು ಪ್ರಾರಂಭಿಸುವುದು. ಜನರು ಕರ್ತನ ಕಡೆಗೆ ತಿರುಗಿಕೊಳ್ಳುವರು. ಆತನು ಅವರನ್ನು ವಾಸಿ ಮಾಡುವನು. ಯೆಶಾಯ 19:22; ಯೆರೆ. 3:22, 23: ಹೋಶೇಯ 6:1;14:4; ಯೆಶಾಯ 2:3 ಬೂದಿಗೆ ಸೌಂದರ್ಯವನ್ನು, ಅಳುವಿಕೆಗೆ ಸಂತೋಷವೆಂಬ ಎಣ್ಣೆಯನ್ನೂ ಆತ್ಮದಲ್ಲಿ ನೊಂದವರಿಗೆ ಸ್ತೋತ್ರವೆಂಬ ಹೊದಿಕೆಯನ್ನೂ ಕೊಡುವನು.

## ದಾನಿಯೇಲನಿಗಾದ ಭೂರಾಜ್ಯಗಳ ದರ್ಶನ

ನೆಬೂಕದ್ನೆಚರನ ಕನಸಿನಲ್ಲಿ ಇಹಲೋಕ ರಾಜ್ಯಗಳು ಮಾನಮಹಿಮೆ ವೈಭವ ಮತ್ತು ಶಕ್ತಿಗಳನ್ನು ಪ್ರದರ್ಶಿಸುವುದನ್ನು ಕಂಡೆವು. ಮಾತ್ರವಲ್ಲದೆ ಅವು ಚಿನ್ನದಿಂದ ಕಬ್ಬಿಣವಾಗಿ ಕೊನೆಗೆ ಮಣ್ಣಾಗಿ ನಾಶ ಹೊಂದುವುದನ್ನು ಕಂಡೆವು. ಆದರೆ ಈ ಪ್ರಪಂಚದಿಂದ ಸತ್ಯಸಭೆಯ ಆರಿಸುವಿಕೆಯನ್ನು ಮಾನವರು ತಿರಸ್ಕರಿಸಿ ಅದರ ವೈಭವವನ್ನು ಕಾಣದೆ ಇರುವವರಾಗಿರುವುದರಿಂದ ಅದನ್ನು ಬಯಸುತ್ತಿಲ್ಲ. ಜನಗಳನ್ನು ಮೋಸಪಡಿಸುತ್ತಾ ಅವರನ್ನು ನಿರಾಶೆಗೊಳಿಸುತ್ತಿರುವ ಮತ್ತು ದಾಸ್ಯದಲ್ಲಿಟ್ಟಿರುವ ಈ ಪ್ರತಿಮೆಯ ರಾಜ್ಯಗಳನ್ನು ಲೋಕವೇ ಹೊಗಳಿ ಕೊಂಡಾಡುತ್ತಿರುವುದು. ಈ ಪ್ರತಿಮೆಯ ದೂತರಂತಿರುವ ಅಲೆಗ್ಸಾಂಡರ್ ಕೈಸರ್ ನೆಪೋಲಿಯನ್ ಬೊನಾಪಾರ್ಟ್ ಮುಂತಾದವರು ತಮ್ಮ ಸ್ವಂತ ಅಧಿಕಾರದಿಂದ ಅನೇಕ ಜನರನ್ನು ಕೊಂದು ಸ್ತ್ರೀಯರನ್ನು ವಿಧವೆಯರನ್ನಾಗಿ ಮಾಡಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿದ್ದಂತೆ ಪ್ರತಿಮೆಯ ಹತ್ತು ಬೆರಳಿನ ಶಕ್ತಿ ಇಂದೂ ಸಹ ಕಂಡುಬರುತ್ತಿದೆ.ಈಲೋಕದ ಸುಮಾರು 12 ದಶಲಕ್ಷ ಜನರು ಮಾರಕ ಶಸ್ತ್ರಾ ಯುಧಗಳನ್ನು ಸಿದ್ಧಮಾಡಿಕೊಂಡು ಮೇಲಿನ ಅಧಿಕಾರಿಯಿಂದ ಆಜ್ಞೆ ಬಂದರೆ ಇಡೀ ಲೋಕವನ್ನೇ ನಾಶಮಾಡಲು ಸಿದ್ಧರಾಗಿರುವರು. ಈಗ ಅಹಂಕಾರಿಗಳನ್ನು ಧನ್ಯರೆಂದು ಕೊಂಡಾಡಬೇಕಾಗಿ ಬಂತು. ಹೌದು ದುಷ್ಕರ್ಮಿಗಳು ಏಳಿಗೆಗೆ ಬಂದಿದ್ದಾರೆ. ಮಲಾಕಿ 3:15 ಇದನ್ನೆಲ್ಲಾ ನಾಶಮಾಡುವ ಆ ಗುಂಡು ಬಂಡೆಯು ಜನರನ್ನು ಬಿಡಿಸಿ ದೇವರ ರಾಜ್ಯವನ್ನು ಸ್ಥಾಪಿಸಿ ಜನರಿಗೆ ಆಶೀರ್ವಾದವನ್ನುಂಟು ಮಾಡುವುದು ಒಂದು ಮಹತ್ಕಾರ್ಯವೇ! ಈ ಲೋಕದ ರಾಜ್ಯಗಳನ್ನು ನಾಶಪಡಿಸಿ ದೇವರ ರಾಜ್ಯವನ್ನು ಸ್ಥಾಪಿಸುವಾಗ ಸ್ವಲ್ಪ ಸಮಯ ಸಂಕಟ ತೊಂದರೆಗಳು ಸಂಭವಿಸುವವು. ಆದರೂ ಅಂತ್ಯದಲ್ಲಿ ಇದರ ಫಲಗಳನ್ನು ತಿಳಿದು ಧನ್ಯರಾಗಬಹುದು.ನಾಲ್ಕು ಪ್ರಾಪಂಚಿಕ ರಾಜ್ಯಗಳ ವಿಷಯವನ್ನು ದೈವದೃಷ್ಟಿಯಿಂದಲೇ ದಾನಿಯೇಲನು ತನ್ನ ಕನಸಿನಲ್ಲಿ ಕಂಡಿದ್ದನ್ನು ತಿಳಿಯೋಣ. ನಮಗೆ ಈ ರಾಜ್ಯಗಳು ಮೃಗತ್ವದಿಂದಲೂ ಮಹಿಮೆಯಿಂದಲೂ ಕಂಡುಬಂದರೆ ದಾನಿಯೇಲನಿಗೆ ಅವು ಕಾಡು ಮೃಗಗಳ ರೂಪದಲ್ಲಿ ಕಂಡುಬಂದವು. "ನಾನು ರಾತ್ರಿ ಕಂಡ ಕನಸಿನಲ್ಲಿ ಆಹಾ! ಚತುರ್ದಿಕ್ಕಿನ ಗಾಳಿಗಳು ಮಹಾ ಸಾಗರದ ಮೇಲೆ ರಭಸವಾಗಿ ಬೀಸಿ ಬಡಿಯುತ್ತಿದ್ದವು. ಒಂದಕ್ಕೊಂದು ವಿಲಕ್ಷಣವಾದ ನಾಲ್ಕು ದೊಡ್ಡ ಮೃಗಗಳು ಸಾಗರದೊಳಗಿನಿಂದ ಬಂದವು. ಮೊದಲು ಕಾಣಿಸಿದ ಮೃಗವು ಸಿಂಹದ ಹಾಗಿತ್ತು."... ಆಹಾ ಮತ್ತೊಂದು ಎರಡನೆಯ ಮೃಗ ಕರಡಿಯ ಹಾಗಿತ್ತು... ಮೂರನೆಯದು ಚಿರತೆಯ ಹಾಗಿರುವುದನ್ನು ಕಂಡೆನು. ನಾನು ಕಂಡ ಕನಸಿನಲ್ಲಿ ಸ್ವಲ್ಪ ಹೊತ್ತಿನ ಮೇಲೆ ಆಹಾ ನಾಲ್ಕನೆಯ ಮೃಗವು ಕಾಣಿಸಿತು. ಅದು ಭಯಂಕರ ಹೆದರಿಸುವಂಥದು, ಅಧಿಕ ಬಲವುಳ್ಳದ್ದು, ಅದಕ್ಕೆ ಕಬ್ಬಿಣದ ದೊಡ್ಡ ಹಲ್ಲುಗಳಿದ್ದವು. ಅವು ನುಂಗುತ್ತಾ ಚೂರು ಚೂರು ಮಾಡುತ್ತಾ ಮಿಕ್ಕದ್ದನ್ನು ಕಾಲುಗಳಿಂದ ತುಳಿಯುತ್ತಾ ಇತ್ತು. ಅದು ಮುಂಚಿನ ಎಲ್ಲಾ ಮೃಗಗಳಿಗಿಂತ ವಿಲಕ್ಷಣವಾಗಿತ್ತು. ಅದಕ್ಕೆ ಹತ್ತು ಕೊಂಬುಗಳಿದ್ದವು." ದಾನಿಯೇಲ 7:2–7.

ಮೊದಲು ಕಾಣಿಸಿದ ಮೂರು ಮೃಗಗಳಲ್ಲಿ ಸಿಂಹ ಬಾಬೆಲ್ ರಾಜ್ಯವನ್ನು ಕರಡಿ ಮೇದ್ಯಪಾರಸೀಯ ರಾಜ್ಯವನ್ನು ಚಿರತೆಯು ಗ್ರೀಕ್ ರಾಜ್ಯವನ್ನು ಸೂಚಿಸುತ್ತದೆ. ಇವುಗಳ ತಲೆ ರೆಕ್ಕೆಗಳ ವಿಷಯ ಅಷ್ಟೊಂದು ಆಳವಾಗಿ ತಿಳಿಯುವುದು ಅವಶ್ಯವಿಲ್ಲ. ಯಾಕೆಂದರೆ ನಾಲ್ಕನೆಯ ಮೃಗವಾದ ರೋಮ್ ರಾಜ್ಯದ ವಿಷಯದೀರ್ಘವಾಗಿ ತಿಳಿಯುವುದು ಅಗತ್ಯವಾಗಿದೆ. ನಾಲ್ಕನೆಯ ರಾಜ್ಯವಾದ ರೋಮ್ ರಾಜ್ಯದ ವಿಷಯವಾಗಿ ದಾನಿಯೇಲನು ಹೀಗೆ ಹೇಳುತ್ತಾನೆ. ''ನಾನು ಆ ಕೊಂಬುಗಳನ್ನು ಗಮನಿಸುತ್ತಿರುವಾಗ ಇಗೋ ಅವುಗಳ ನಡುವೆ ಮತ್ತೊಂದು ಚಿಕ್ಕಕೊಂಬು ಮೊಳೆಯಿತು. ಅದರ ದೆಸೆಯಿಂದ ಮುಂಚಿನ ಕೊಂಬುಗಳಲ್ಲಿ ಮೂರು ಬೇರು ಸಹಿತ ಕೀಳಲ್ಪಟ್ಟವು. ಆಹಾ ಆ ಕೊಂಬಿನಲ್ಲಿ ಮನುಷ್ಯನ ಕಣ್ಣುಗಳಂತಿರುವ ಕಣ್ಣುಗಳು ಬಡಾಯಿಕೊಚ್ಚಿಕೊಳ್ಳುವ ಬಾಯಿ ಇದ್ದವು." ದಾನಿ. 7:7,8 ಇದೇ ರೋಮ್ ಸಾಮ್ರಾಜ್ಯ. ಮುಂದೆ ಇದರಿಂದ ಹತ್ತು ರಾಜ್ಯಗಳು ಹೊರ ಬರುವುದನ್ನು ತೋರಿಸಿದೆ. ಇವುಗಳ ಮಧ್ಯದಲ್ಲಿ ಬೆಳೆದುಕೊಂಡ ಚಿಕ್ಕ ಕೊಂಬು ಪೋಪನ ಅಧಿಕಾರವನ್ನು ಸೂಚಿಸುತ್ತದೆ. ಅದು ಮೂರು ಕೊಂಬುಗಳ ಶಕ್ತಿಯನ್ನು ಕೊನೆಗಾಣಿಸಿತು. ಪೋಪನ ಪ್ರಭಾವ ಹೆಚ್ಚಿದಂತೆಲ್ಲಾ ಹೆರುಲಿ, ಪೂರ್ವ ಎಕ್ಸರ್‌ಚೇಟ್ ಮತ್ತು ಅಟ್ರೋಗಾಸ್‌ಗಳ ಅಧಿಕಾರವನ್ನು ಕಡಿಮೆ ಮಾಡಿ ಅವುಗಳ ಜಾಗದಲ್ಲಿ ರೋಮ್ ಸಭೆಯನ್ನು ಸ್ಥಾಪಿಸಲಾಯಿತು. ಚಿಕ್ಕ ಕೊಂಬಿನ ಕಣ್ಣು ಪೋಪನ ಬುದ್ಧಿವಂತಿಕೆಯನ್ನು ಬಾಯಿ

ಬಡಾಯಿಕೊಚ್ಚಿ ಹೊಗಳಿಕೊಳ್ಳುವುದನ್ನು ಸೂಚಿಸುತ್ತದೆ. ರೋಮ್ ಸಾಮ್ರಾಜ್ಯವನ್ನು ಸೂಚಿಸುವಂಥ ನಾಲ್ಕನೆಯ ಮೃಗಕ್ಕೆ ದಾನಿಯೇಲನು ಯಾವ ಹೆಸರನ್ನು ಕೊಟ್ಟಿಲ್ಲ. ಮೂರನ್ನು ಸಿಂಹ, ಕರಡಿ ಮತ್ತು ಚಿರತೆಗೆ ಹೋಲಿಸಿರುವನು. ಆದರೆ ನಾಲ್ಕನೆಯ ಮೃಗವು ಅಷ್ಟು ಭಯಂಕರವೂ ವಿಲಕ್ಷಣವೂ ಆಗಿದ್ದುದರಿಂದ ಲೋಕದ ಯಾವ ಪ್ರಾಣಿಯೊಂದಿಗೂ ಅದನ್ನು ಹೋಲಿಸಲಾಗಲಿಲ್ಲ. ಯೋಹಾನನು ಸಹ ತನ್ನ ದರ್ಶನದಲ್ಲಿ ಇದೇ ರೀತಿಯ ವಿಲಕ್ಷಣಮೃಗವನ್ನು(ಸರಕಾರ) ಕಂಡು ಅದಕ್ಕೆ ಯಾವ ಹೆಸರನ್ನು ಕೊಡಲಾಗದೆ ಕೊನೆಯಲ್ಲಿ ಅದನ್ನು 'ಪಿಶಾಚಿ' ಎಂದು ಕರೆದಿರುವನು. ಪ್ರಕ. 12:9 ಅವನು ನಿಜವಾಗಿ ತಕ್ಕ ಹೆಸರನ್ನೇ ಸೂಚಿಸಿರುವನು. ಯಾಕೆಂದರೆ ರೋಮ್ ಸರಕಾರ ನಡೆಸಿದಂತ ಪಿಶಾಚಕೃತ್ಯವನ್ನು ಯಾವ ಸರಕಾರವೂ ನಡೆಸಿಲ್ಲ. ರೋಮ್ ವಿಗ್ರಹಾರಾಧನೆಯ ಮತದಿಂದ ಪೋಪನ ಅಧಿಕಾರಕ್ಕೆ ಬದಲಾವಣೆಯಾದಾಗ ಸೈತಾನನ ವ್ಯಕ್ತಿತ್ವವು ಪ್ರಕಟವಾಗಿದೆ. ಯಾಕೆಂದರೆ ಸೈತಾನನು ತಾನೇ ಪ್ರಕಾಶವುಳ್ಳ ದೇವದೂತನ 2 ಕೊರಿ. 11:14 ವೇಷಧರಿಸಿದ ಹಾಗೆ ವಿಗ್ರಹಾರಾಧನೆಯ ಮತದಿಂದ ಕ್ರೈಸ್ತ ಮತಕ್ಕೆ ಪರಿವರ್ತನೆ ಹೊಂದಿ ಕ್ರಿಸ್ತನ ರಾಜ್ಯವೆಂದು ಕರೆಸಿಕೊಳ್ಳುತ್ತಿದೆ. ಈ ರೋಮ್ ಸಾಮ್ರಾಜ್ಯದ ವಿವರಣೆಯನ್ನು ಕೊಡುತ್ತಾ ಕಡೆಯಲ್ಲಿ ಬಂದ ಈ ಚಿಕ್ಕ ಕೊಂಬಿನ ಅಧಿಕಾರವನ್ನು ನಾಶಮಾಡುವಾಗ ಮೃಗವನ್ನು ನಾಶಮಾಡಲಾಗುತ್ತದೆ. ಸದ್ಯದಲ್ಲಿ ರೋಮ್ ಸಾಮ್ರಾಜ್ಯದ ಅಧಿಕಾರವು ಇನ್ನೂ ಇದೆ. ಅದರ ಕೊಂಬುಗಳ ಅಧಿಕಾರವೂ ಇದೆ. ಆದರೆ ಕರ್ತನ ದಿನವು ಬರುವಾಗ ಜನಗಳೆಲ್ಲಾ ಈ ಸರಕಾರಗಳಿಗೆ ವಿರುದ್ಧವಾಗಿ ದಂಗೆಯೆದ್ದು ಅವುಗಳ ಅಧಿಕಾರವನ್ನು ನಾಶಮಾಡಿ ದೇವರ ಆಳ್ವಿಕೆಗೆ ಸಿದ್ಧಮಾಡುವರು. ಮೊದಲು ಪೋಪನ ಪ್ರಾಧಾನ್ಯತೆಯು ಕಡಿಮೆಯಾಗುತ್ತದೆ. ನೆಪೋಲಿಯನ್ನನು ಪೋಪನನ್ನು ಸೆರೆ ಹಿಡಿದು ಫ್ರಾನ್ಸಿಗೆ ತೆಗೆದುಕೊಂಡು ಹೋದಾಗಲೇ ಪೋಪನು ಅಪ್ರಿಯನಾಗಿ ಅವನ ಅಧಿಕಾರ ಕುಂದುತ್ತಾ ಬಂದಿತು. ಪೋಪನಶಾಪ ಅಥವಾ ಅವನ ಪ್ರಾರ್ಥನೆ ಅವನನ್ನು ನೆಪೋಲಿಯನ್ನನ ಹಿಡಿತದಿಂದ ಬಿಡಿಸಲಾಗಲಿಲ್ಲ. ಇದರಿಂದ ಪೋಪನಿಗೆ ದೈವ ಸಹಾಯವಿಲ್ಲ ಎಂಬುದು ಜನಗಳಿಗೆ ಮನದಟ್ಟಾಯಿತು. ಹೀಗೆ ಅವನ ಅಧಿಕಾರದ ಮದ ಕಡಿಮೆಯಾಗುತ್ತಾ ಬಂತು. 1870ರಲ್ಲಿ ಇಮ್ಮಡಿ ವಿಕ್ಟರ್ ಇಮಾನುವೇಲನು ಪೋಪನ ಅಧಿಕಾರವನ್ನು ಮತ್ತಷ್ಟು ಕಡಿಮೆ ಮಾಡಿದನು. 1870ರಲ್ಲಿ ಅದರ ನಾಶನ ಸಮೀಪಿಸಿದಾಗ ಅದು ಬೇಕಾದಷ್ಟು ದೇವದೂಷಣೆಯ ಮಾತುಗಳನ್ನಾಡಿತು. ನಾಶಕ್ಕೆ ಸ್ವಲ್ಪದಿನಗಳ ಮುಂಚೆ ಪೋಪುಗಳು ಸತ್ಯಸ್ವರೂಪ ಎಂಬುದನ್ನು ಪ್ರಕಟಿಸಿತು. ಇವೆಲ್ಲವನ್ನು ದಾನಿಯೇಲನ ಪ್ರವಾದನೆಯಲ್ಲಿ ತಿಳಿಸಲಾಗಿದೆ. 'ಆಗ ನಾನು ನೋಡುತ್ತಿರಲು ಇಗೋ, ಕೊಂಬು ಬಡಾಯಿ ಕೊಚ್ಚಿಕೊಂಡ ನಿಮಿತ್ತ ಆ ಕೊಂಬಿನ ಮೃಗವನ್ನು ಕೊಂದು ಅದರ ಹೆಣವನ್ನು ಉರಿಯುವ ಬೆಂಕಿಗೆ ಹಾಕಿ ನಾಶ ಮಾಡಿದರು.' ದಾನಿ. 7:11 ಹೀಗೆ ಹಿಂದಿನ ಚರಿತ್ರೆಯಿಂದ ಇಂದಿನವರೆಗೆ ಪರಿಶೀಲಿಸಿದರೆ ಈ ಲೋಕದ ಎಲ್ಲಾ ರಾಜ್ಯಗಳಿಗೆ ನಾಶನ ಖಂಡಿತ ಎಂಬುದು ತಿಳಿದುಬರುತ್ತದೆ. 12ನೇ ವಚನದಲ್ಲಿ ಮೊದಲಿನ ಮೂರು ರಾಜ್ಯಗಳ ಅಂತ್ಯಕ್ಕೂ ನಾಲ್ಕನೆಯ ರಾಜ್ಯದ ಅಂತ್ಯಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಲಾಗಿದೆ. ಅವು ಒಮ್ಮೆಲೆ ಸಂಪೂರ್ಣ ನಾಶವಾಗಲಿಲ್ಲ. ಆದರೆ ನಾಲ್ಕನೆಯದಾದರೋ ಒಂದೇ ಸಲಕ್ಕೆ ಸಂಪೂರ್ಣವಾಗಿ ನಾಶವಾಗುವುದು. ಅದರ ಜೊತೆಗೆ ಇತರ ರಾಜ್ಯಗಳು ಇಲ್ಲವಾಗುವವು. ದಾನಿ. 2:35 ಅವುಗಳ ನಾಶನ ಹೇಗೇ ಇರಲಿ ನಾಲ್ಕನೆಯದರ ತರುವಾಯ ಐದನೆಯ ದೇವರ ರಾಜ್ಯವು ಸ್ತಾಪಿತವಾಗುವುದು. ಕ್ರಿಸ್ತನು ಆ ರಾಜ್ಯದ ನಾಯಕನಾಗಿರುವನು, ತಕ್ಕ ಕಾಲದಲ್ಲಿ ಕ್ರಿಸ್ತನ ಐದನೇ ಸಾಮ್ರಾಜ್ಯವು ಸ್ಥಾಪಿತವಾಗುವುದು ದಾನಿ. 7:13,17 ಓದಿರಿ.

ಹೀಗೆ ಭೂಲೋಕದ ಎಲ್ಲಾರಾಜ್ಯಗಳನ್ನು ಯೆಹೋವನು ಕ್ರಿಸ್ತನಿಗೆ ಒಪ್ಪಿಸಿಕೊಡುವನು. 'ಸಮಸ್ತವನ್ನು ಆತನ ಪಾದಗಳ ಕೆಳಗೆ ಹಾಕುವನು' 1 ಕೊರಿ. 15:27 ಹೀಗೆ ಎಲ್ಲವೂ ಯೆಹೋವನ ಚಿತ್ತಕ್ಕೆ ವಿಧೇಯವಾಗುವವರೆಗೆ ಆತನು (ಕ್ರಿಸ್ತನು) ಆಳುವುದು ಅವಶ್ಯ. ಈ ಮಹಾ ಕಾರ್ಯಸಾಧನೆಯಾಗಬೇಕಾದರೆ ಇಹಲೋಕದ ರಾಜ್ಯಗಳು ನಾಶವಾಗಬೇಕು. ಈಲೋಕದ ಅರಸನು ಅಷ್ಟು ಸುಲಭವಾಗಿ ಶರಣಾಗತನಾಗುವುದಿಲ್ಲ. ಬಲಾತ್ಕಾರದಿಂದ ಅವನನ್ನು ಬಂದಿಸಬೇಕಾಗಿರುವುದು. ಅದನ್ನು ಕುರಿತು 'ಅವರ ರಾಜರನ್ನು ಸಂಕೋಲೆಯಿಂದ ಬಂಧಿಸುವರು; ಪ್ರಭುಗಳಿಗೆ ಕಬ್ಬಿಣದ ಬೇಡಿಗಳನ್ನು ಹಾಕುವರು. ಲಿಖಿತದಂತೆ ಅವರಿಗೆ ಶಿಕ್ಷೆಯನ್ನು ವಿಧಿಸುವರು; ಇದು ಆತನ ಭಕ್ತರೆಲ್ಲರಿಗೆ ಗೌರವವಾಗಿರುವುದು.' ಕೀರ್ತನೆ 149:8,9 ಹೀಗಾಗಿ ಈ ಪ್ರಪಂಚದ ರಾಜರುಗಳ ಮೃಗತ್ವ, ಸ್ವಾರ್ಥತೆ ಅವುಗಳ ಭಯಂಕರ ಕೃತ್ಯಗಳು ಇವುಗಳೆಲ್ಲಾ ನಾಶವಾಗಿ ಕ್ರಿಸ್ತನಿಂದ ಈ ಜಗತ್ತಿಗೆ ಉಂಟಾಗುವ ಪರಿಹಾರವನ್ನು ಎದುರು ನೋಡುವವರಾಗಿದ್ದೇವೆ. ಆದುದರಿಂದ ನಾವೆಲ್ಲರೂ ಇನ್ನೂ ಉತ್ಸಾಹದಿಂದ 'ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂ ಲೋಕದಲ್ಲಿಯೂ ನೇರವೇರಲಿ' ಎಂದು ಹೆಚ್ಚೆಚ್ಚಾಗಿ ಪ್ರಾರ್ಥಿಸೋಣ. ಪ್ರಾಪ್ತಸಮಯದಲ್ಲಿ ದೇವರ ರಾಜ್ಯ ಸ್ಥಾಪಿತವಾಗುವುದು. ಅದನ್ನು ಕುರಿತು 'ಆ ರಾಜರ ಕಾಲದಲ್ಲಿ ಪರಲೋಕದ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು, ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು. ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವುದು'

ದಾನಿ. 2:44 ಎಂದು ಹೇಳಲಾಗಿದೆ. ಆದುದರಿಂದ ನಮ್ಮ ಹೃದಯಗಳು ಅನ್ಯ ದೇಶದವರ ಸಮಯ ಕೊನೆಗಾಣಲಿ ಎಂದು ಕಾತುರಗೊಂಡಿದೆ. ದೇವರು ಈ ರಾಜ್ಯಗಳನ್ನು ನಾಶಮಾಡಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸುವಾಗ ಲೋಕದಲ್ಲಿ ನೀತಿ, ಸಮಾಧಾನ, ನಿತ್ಯ ಜೀವ ಸಂತೋಷಗಳು ಸದಾ ನೆಲಸಲ್ಪಡುವುದು.

**ಮತ್ತೊಂದು ದೃಷ್ಟಿಯಿಂದ ಈ ಕಾಲದ ರಾಜ್ಯಗಳ ವೀಕ್ಷಣೆ**

ಆ ಲೋಕವನ್ನು ಆಳುವವರು ಯಾರೇ ಆಗಿರಲಿ ಅದರ ಸಂಪೂರ್ಣ ಅಧಿಕಾರವು ಸೃಷ್ಟಿಕರ್ತನಾದ ಯೆಹೋವನ ಕೈಯಲ್ಲಿರುವುದು. ಈ ರಾಜಾಧಿರಾಜನಿಗೆ ಅವಿಧೇಯನಾದುದ್ದರಿಂದಲೇ ಆದಾಮನು ಬಲಹೀನನೂ ಅಸಹಾಯಕನೂ ಆಗುತ್ತಾ ಬಂದನು. ಅದರಿಂದಾಗಿ ತನ್ನ ಕೈ ಕೆಳಗಿದ್ದ ಪ್ರಾಣಿಗಳನ್ನು ಆಳುವಶಕ್ತಿಯನ್ನು ಕಳೆದುಕೊಂಡನು. ಕಡೆಗೆ ಸ್ವಯಂ ಹಿಡಿತವು ತಪ್ಪಿಹೋಗಿ ಒಳ್ಳೆಯದನ್ನು ಮಾಡುವಂತಿದ್ದರೂ ಒಳ್ಳೆಯದನ್ನು ಮಾಡದೆ ಕೆಟ್ಟದ್ದನ್ನು ಮಾಡುವಂತಿಲ್ಲದಿದ್ದರೂ ಮಾಡುತ್ತಿದ್ದನು. ಹಾಗೆಯೇ ಮಾನವ ಜನಾಂಗವು ಮಾಡುವ ಕಾರ್ಯಗಳೆಲ್ಲವೂ ವ್ಯರ್ಥವಾಗಿ ಹೋಗುತ್ತಿದೆ. ದೇವರು ಮಾನವನಿಗೆ ಸ್ವಯಂ ಆಡಳಿತದ ಅವಕಾಶ ಕೊಟ್ಟನು. ಇದನ್ನೇ ಕಾಯುತ್ತಿದ್ದ ಸೈತಾನನು ಕೂಡಲೇ ಮಾನವನ ಮೇಲೆ ಬಿದ್ದು ಅವನನ್ನು ತನ್ನ ವಶಮಾಡಿಕೊಂಡನು. ಇದರಿಂದ ಸೈತಾನನ ಪ್ರಾಬಲ್ಯ ಹೆಚ್ಚಿ ಮಾನವನು ದೇವರನ್ನೇ ಮರೆತು ರೋಮಾಪುರ 1:28 ಅದೃಶ್ಯನಾದ ಸೈತಾನನಿಗೆ ಒಪ್ಪಿಸಿಕೊಂಡನು. ಹೀಗೆ ಮಾನವನು ಸೈತಾನನ ತಂತ್ರೋಪಾಯಗಳಿಗೆ ಒಳಗಾದನು. ಇಹಲೋಕದ ರಾಜ್ಯಗಳ ಸ್ಥಿತಿಯನ್ನು ಗಮನಿಸಿದರೆ ಅನೇಕರು ತಮ್ಮ ಸ್ವಪ್ರಯತ್ನದಿಂದ ಆಳಿಕೊಳ್ಳಲು ಪ್ರಯತ್ನಿಸುತ್ತಿರುವರು. ಆದರೆ ಅನೇಕರು ಲಂಚಕೋರರು ಸ್ವಾರ್ಥಪರರೂ ಆಗಿರುವುದರಿಂದ ಜನರಿಗೆ ಸರಿಯಾದ ನ್ಯಾಯ ದೊರಕಿಸಲು ಅಸಮರ್ಥರಾಗಿರುವರು. ಇವರು ಜನಗಳ ಉದ್ಧಾರಕ್ಕಾಗಿ ಮತ್ತು ಶಾಂತಿಸ್ಥಾಪನೆಗಾಗಿ ಮಾಡುತ್ತಿರುವ ಪ್ರಯತ್ನಗಳೆಲಾ ತಾತ್ಕಾಲಿಕ. ಈ ಕಾರ್ಯವು ಎಲ್ಲಿಯವರೆಗೆ ನೆರವೇರುವುದು ಎಂಬುದೇ ಒಂದು ಪ್ರಶ್ನೆಯಾಗಿದೆ. ನ್ಯಾಯಸ್ಥಾಪನೆ ರಾಜ್ಯಾಧಿಕಾರಿಗಳ ಹಕ್ಕು ಪ್ರತಿಯೊಂದು ರಾಜ್ಯದಲ್ಲಿ ನ್ಯಾಯಕ್ಕೆ ಪ್ರಥಮ ಸ್ಥಾನವಿದೆ. ಹಿಂದೆಯೂ ಜನರ ಸ್ವತ್ತನ್ನು ರಕ್ಷಿಸುವುದಕ್ಕೆ ಮತ್ತು ಅಪರಾಧಿಗಳನ್ನು ಶಿಕ್ಷಿಸುವುದಕ್ಕೆ ನ್ಯಾಯಾಲಯಗಳಿರುತ್ತಿದ್ದವು. ಆದರೂ ರಾಜರ ಅಸಮರ್ಥನೆಯಿಂದ ಜನಗಳಿಗೆ ಸರಿಯಾದ ನ್ಯಾಯ ದೊರೆಯುತ್ತಿರಲಿಲ್ಲವೆಂದು ಹೇಳಬಹುದು. ಇದರಿಂದ ಗಮನವಿಟ್ಟು ನೋಡಿದರೆ ಕನಿಕರವಿಲ್ಲದ ಸ್ವಭಾವ ಹೊಂದಿರುವ ಇವರು ಉತ್ತಮ ಸ್ಥಾನಕ್ಕೇರಿದ್ದಲ್ಲದೆ ಸೈತಾನನ ಸಹಾಯದಿಂದ ಉನ್ನತ ಅಧಿಕಾರವನ್ನು ಹೊಂದಿ ಬಲಹೀನರಾದ ಮಾನವರನ್ನು ಆಳುತ್ತಾ ಅವರ ಸಮಾಜವನ್ನು ಉದ್ಧಾರ ಮಾಡಲು ಪ್ರಯತ್ನಿಸುತ್ತಿರುವುದನ್ನು ನಾವು ಕಾಣಬಹುದು. ದೇವರು ಮಾನವನಿಗೆ ಸ್ವಾತಂತ್ರವನ್ನು ಕೊಟ್ಟು ಪರೀಕ್ಷಿಸುತ್ತಿರುವನು. ಮಾನವನ ಹಿಂದಿನ ಸ್ಥಿತಿಯೂ ಈಗಿನ ಸ್ಥಿತಿಯೂ ಒಂದೇ ಆಗಿದೆ. ಅನ್ಯಾಯ ಮತ್ತು ದಬ್ಬಾಳಿಕೆ ಹೆಚ್ಚಿದಂತೆಲ್ಲಾ ಜನರಲ್ಲಿ ಅತೃಪ್ತಿ ಹೆಚ್ಚುತ್ತಾ ಇರುವುದು. ಇದಕ್ಕೆಲ್ಲ ಮೂಲ ಕಾರಣ ಜನರಲ್ಲಿ ತಿಳುವಳಿಕೆಯು ಹೆಚ್ಚಾಗುತ್ತಿರುವುದೇ. ಆದರೆ ಇದು ದೇವರ ಏರ್ಪಾಡಾಗಿರುತ್ತದೆ. ರಾಜ್ಯಾಡಳಿತಗಳು ಬದಲಾವಣೆಯಾದಂತೆಲ್ಲಾ ಜನರು ತಮ್ಮನ್ನು ಆಳಿಕೊಳ್ಳಲು ಶಕ್ತರೋ ಅಥವಾ ಅಶಕ್ತರೋ ಎಂಬುದನ್ನು ತೋರಿಸುತ್ತಿರುವುದು. ಜನರು ಸರಿಯಾದ ಸರಕಾರವನ್ನು ಸ್ಥಾಪಿಸಿ ಅದನ್ನು ನಡೆಸಿಕೊಂಡು ಬರಲು ಅಸಮರ್ಥರಾಗಿರುವುದರಿಂದಲೇ ದಬ್ಬಾಳಿಕೆಯು ರಾಜ್ಯಾಡಳಿತಗಳನ್ನು ಸಹಿಸಿಕೊಂಡೇ ಹೋಗುತ್ತಿರುವರು. ಈಗಿನ ಪರಿಸ್ಥಿತಿಯಲ್ಲಿ ಜನಾಭಿಪ್ರಾಯವು ಭಿನ್ನಭಿನ್ನವಾಗಿರುವುದು. ಸ್ವಾತಂತ್ರ ಮನೋಭಿಲಾಷೆ ರಾಜ್ಯಗಳಲ್ಲಿ ಹೆಚ್ಚುತ್ತಿದೆ. ಹಿಂದಿನಂತೆ ಜನರು ರಾಜಕಾರಣಿಗಳಿಗೂ, ಅಧಿಕಾರಿಗಳಿಗೂ, ರಾಜರಿಗೂ ಅಧೀನರಾಗುವಂತಿಲ್ಲ. ಏಕೆಂದರೆ ಜನರಲ್ಲಿ ಬುದ್ಧಿ ಹೆಚ್ಚುತಿರುವುದರಿಂದ ತಕ್ಷಣ ಮೋಸಹೋಗುವ ಸ್ಥಿತಿಯಲ್ಲಿಲ್ಲ. ಆದುದರಿಂದ ಈ ತರದ ಮಾನಸಿಕ ಬದಲಾವಣೆ ಮಾನವನ ಸ್ವಂತ ಆಳ್ವಿಕೆಯಿಂದ ಬಂದದ್ದಲ್ಲ. ಕೇವಲ 3 ಶತಮಾನಗಳಿಂದೀಚೆಗೆ ಜನರಲ್ಲಿ ತಿಳುವಳಿಕೆ ಹೆಚ್ಚುತ್ತಾ ಬಂದಿದೆ. ಕ್ರಿ.ಶ. 1440ರಲ್ಲಿ ಕಂಡುಹಿಡಿಯಲ್ಪಟ್ಟ ಮುದ್ರಣ ಯಂತ್ರದಿಂದಾಗಿ ಮಾನವನ ಜ್ಞಾನ ಹೆಚ್ಚುತ್ತಾ ಬಂದಿರುವುದು. ಅಂದಿನಿಂದ ಗ್ರಂಥಗಳು ಪತ್ರಿಕೆಗಳು ಹೆಚ್ಚಾದವು. ಇದರಿಂದಾಗಿ 16ನೇ ಶತಮಾನದಲ್ಲಿ ಜ್ಞಾನೋದಯಕ್ಕೆ ಮತ್ತು ಮಾನವನು ಮುಂದುವರಿಯಲು ಅನುಕೂಲವಾಯಿತು. ಸಾಮೂಹಿಕ ವಿದ್ಯಾಭ್ಯಾಸವು ಜನಪ್ರಿಯವಾಗುತ್ತಿರುವುದು. ಹೊಸ ಸಂಶೋಧನೆಗಳು ದಿನೇ ದಿನೇ ಹೆಚ್ಚುತ್ತಿವೆ. ಈ ರೀತಿಯ ಜ್ಞಾನ ಮನುಷ್ಯನಲ್ಲಿ ಹೆಚ್ಚುತ್ತಿರುವುದು ದೇವರ ರಾಜ್ಯದ ಮೊದಲು ಸಂಭವಿಸಬೇಕಾದದ್ದೆ. ಇದು ದೇವರ ರಾಜ್ಯದ ಮುಂಗುರುತಾಗಿದೆ. ಈ ತಿಳುವಳಿಕೆಯೇ ಮುಂದೆ ಸೈತಾನನನ್ನು ಬಂಧಿಸಿ ಅವನ ಶಕ್ತಿಯನ್ನು ಮುರಿಯುವುದು. ಜನಗಳಲ್ಲಿ ಜ್ಞಾನ ಹೆಚ್ಚಿದಂತೆಲ್ಲಾ ಪ್ರತಿಯೊಬ್ಬನು ತನ್ನ ಗೌರವ ಮತ್ತು ಸ್ವಾಭಾವಿಕ ಹಕ್ಕುಗಳನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸದೆ ಅದಕ್ಕೆ ವಿರುದ್ಧವಾಗಿಯೇ ಹೋಗುತ್ತಿರುವರು. ಇದನ್ನೇ ಕುರಿತು, ಪ್ರವಾದಿಗಳು ತಿಳುವಳಿಕೆ ಹೆಚ್ಚಿದಂತೆಲ್ಲಾ ಜನರಲ್ಲಿ ಅತೃಪ್ತಿ ಉಂಟಾಗಿ ಜನರ ಮನಸ್ಸು ಕೆಟ್ಟುಹೋಗಿ ಕ್ರಾಂತಿಯುಂಟಾಗಿ ದೊಂಬಿ ಏಳುವರು ಎಂದು ಪ್ರವಾದಿಸಿರುವರು. ಇಂತಹ ಗಲಿಬಿಲಿಯಿಂದ ಪಾರಾಗಲು

ಜನಗಳು ಎಷ್ಟೇ ಕಷ್ಟಪಟ್ಟು ಎಂಥ ಒಳ್ಳೆಯ ಸರಕಾರವನ್ನು ಸ್ಥಾಪಿಸಿದರೂ ಅದು ಅಸಮರ್ಪಕವಾಗಿಯೇ ಇರುವುದು. ಅವರ ಬೇಸರ ಪರಿಹಾರವಾಗುವುದಿಲ್ಲ. ಆದರೆ ದೇವರ ರಾಜ್ಯ ಸ್ಥಾಪನೆಯಾದ ಮೇಲೆ ಅವರ ಬೇಸರವೆಲ್ಲಾ ಸಂತೋಷವಾಗಿ ಪರಿವರ್ತನೆಯಾಗಿ ತೃಪ್ತಿ ದೊರೆಯುವುದು. ಆಗ ಸಮಸ್ತ ಜನಾಂಗಗಳ ಇಷ್ಟ ವಸ್ತುಗಳು ಬಂದು ಒದಗಲು ಜನರಿಗೆ ದೇವರ ಶಕ್ತಿಯ ಪ್ರಭಾವವು ಗೋಚರವಾಗುತ್ತದೆ. ಹಗ್ಗಾಯ 2:7 ದೇವರ ಯೋಜನೆಯನ್ನು ಅರಿತಿದ್ದ ಯೇಸು ಮತ್ತು ಆತನ ಶಿಷ್ಯರು ಈ ಲೋಕದ ರಾಜ್ಯದ ವಿಷಯದಲ್ಲಿ ಕೈ ಹಾಕಲಿಲ್ಲ. ಅದಕ್ಕೆ ಬದಲಾಗಿ ಅಧಿಕಾರಿಗಳಿಗೆ ಅಧೀನರಾಗಿರಿ ಎಂದು ಹೇಳಿದರು. ಇವರು ಅಧಿಕಾರಿಗಳ ದೂಷಣೆಯನ್ನು ಸಹಿಸುತ್ತಿದ್ದರು. ಆದರೆ ದೇವರ ನ್ಯಾಯಕ್ಕೆ ವಿರುದ್ಧವಾದ ಟೀಕೆಯನ್ನು ಸ್ವಲ್ಪವೂ ಸಹಿಸುತ್ತಿರಲಿಲ್ಲ. ಅ.ಕೃ. 4:19;5:29 ರೋಮಾ 13:1–7; ಮತ್ತಾಯ 22:21 ಕ್ರಿಸ್ತನು, ಅಪೋಸ್ತಲರು ಮತ್ತು ಆದಿಸಭೆಯವರು ನ್ಯಾಯಬದ್ಧವಾಗಿ ನಡೆಯುತ್ತಾ ರಾಜಕೀಯದಲ್ಲಿ ಕೈ ಹಾಕದೆ ಪ್ರತ್ಯೇಕವಾಗಿದ್ದರು.

ಈ ಲೋಕದ ರಾಜರು ದೇವರಿಂದ ಅಭಿಶಕ್ತರಾದವರು ಎಂದು ತಿಳಿದಿದ್ದರೂ ಅದರಲ್ಲಿ ಪ್ರವೇಶಿಸದೆ ಮುಂದೆ ಬರುವ ದೇವರ ರಾಜ್ಯದಲ್ಲಿ ಆಳಲು ಸಿದ್ಧರಾಗುತ್ತಾ ಜನರಿಗೆ ಮುಂದೆ ಬರುವ ನೀತಿ ರಾಜ್ಯವನ್ನು ಕುರಿತಾಗಿ ಸಾರುತ್ತಿದ್ದರು. ಅವರು ಕ್ರಿಸ್ತನ ರಾಜ್ಯದ ಹಕ್ಕುದಾರರಾದ್ದರಿಂದ ಎಫೆಸ 2:19 ಈ ಲೋಕದ ವ್ಯವಹಾರದಲ್ಲಿ ಮನಸ್ಸಿರಲಿಲ್ಲ. ಒಂದು ವೇಳೆ ಅವರು ಈ ಲೋಕದ ವ್ಯವಹಾರದಲ್ಲಿ ಪ್ರವೇಶಿಸಿ ಅದನ್ನು ತಿದ್ದಲು ಪ್ರಯತ್ನಿಸಿದ್ದರೆ ಅದು ವ್ಯರ್ಥವಾಗುತ್ತಿತ್ತು.ಯಾಕೆಂದರೆ ಸತ್ಯಸಭೆಯ ಪ್ರಭಾವ ಯಾವಾಗಲು ಚಿಕ್ಕದು. ಗಮನಿಸಲಸಾಧ್ಯವಾದಷ್ಟು ಚಿಕ್ಕದಾಗಿತ್ತು. ರಾಜಕೀಯದಲ್ಲಿ ಅದರ ಸ್ಥಾನ ಏನೂ ಇಲ್ಲವೆನ್ನಬಹುದು. ಆದರೆ ನಮ್ಮ ಕರ್ತನ ಮಾದರಿಯನ್ನು ಅನುಸರಿಸುವುದಾದರೆ ಅದು ಎಂಥಾ ಪ್ರಭಾವಶಾಲಿಯಾಗಿರುವುದು. ಮುಂದೆ ಅವರು ಕ್ರಿಸ್ತನ ಮದಲಗಿತ್ತಿಯಾಗಬೇಕಾದರೆ ಈಗ ಅವರ ಪ್ರಭಾವ ಅತ್ಯಲ್ಪ. ವೇದೋಕ್ತಿಗಳಲ್ಲಿ ತಿಳಿಸಿರುವ ದೇವರ ಯೋಜನೆಯನ್ನು ಪ್ರಕಟಿಸುತ್ತಾ ಮುಂದಿನ ದೇವರ ರಾಜ್ಯದಲ್ಲಿ ಆಸಕ್ತಿಯಿರುವುದಾದರೆ ಇಂದಿನ ರಾಜಕೀಯದಲ್ಲಿ ಆಸಕ್ತಿಯಿರುವುದಿಲ್ಲ. ಹೀಗಾಗಿ ಕ್ರಿಸ್ತನಿಗೂ ಅಪೋಸ್ತಲರಿಗೂ ರಾಜಕೀಯದಲ್ಲಿ ಬೆರೆಯಲು ಸಮಯವಿರಲಿಲ್ಲ. ಅಪೋಸ್ತಲರ ಕಾಲವಾದ ಮೇಲೆ ಆದಿಸಭೆಯೂ ಪೂರ್ವ ಶೋಧನೆಗೆ ಒಳಗಾಯಿತು. ಮಾತ್ರವಲ್ಲದೆ ಈ ಭೂಲೋಕದ ರಾಜ್ಯಗಳು ನಾಶವಾಗಿ ಮುಂದೆ ದೇವರ ರಾಜ್ಯ ಬರುವುದು ಅದಕ್ಕೆ ಕ್ರಿಸ್ತನು ಬಾಧ್ಯಸ್ಥನು ಎಂಬ ಸುವಾರ್ತಾ ಬೋಧನೆಯು ಜನರಿಗೆ ಅಪ್ರಿಯವಾಗಿದುದ್ದರಿಂದ ಅವರು ಕೊರಡೆಗಳ ಹೊಡೆತಕ್ಕೂ ನಿಂದನಾ ತಿಸ್ಕಾರಕ್ಕೂ ಗುರಿಯಾದರು. ಇದರಿಂದ ಸಭೆಯಲ್ಲಿ ಕೆಲವರು ಇಂತಹ ಹಿಂಸೆಯನ್ನು ಅನುಭವಿಸುವ ಬದಲು ಲೋಕದ ಕಾರ್ಯಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು ಸೈತಾನನು ಅವರನ್ನು ಗೆದ್ದನು. ಹೀಗೆ ಸಭೆಯು ಮತ್ತು ಭೂರಾಜ್ಯಗಳು ಒಂದಾದವು. ಇದರಿಂದ ಪೋಪಸಿಯು ಹುಟ್ಟಿ ಪ್ರಗತಿ ಹೊಂದಿ ಜನಾಂಗಗಳಿಗೆ ಯಜಮಾನಿಯೂ ರಾಣಿಯೂ ಆದಳು ಪ್ರಕ 17;3–5, 18:7 ಆ ರೀತಿಯ ಪರಿವರ್ತನೆಯಿಂದ ಸಂಕಟಗಳು ತೊಲಗಿ ಹೋಗಿ ಎಲ್ಲೆಡೆಯಲ್ಲಿ ಮಾನ ಸನ್ಮಾನ ದೊರಕಿತು. ದೀನತ್ವದ ಬದಲು ಹೆಮ್ಮೆಯೂ ಸತ್ಯದ ಬದಲು ಅಸತ್ಯ ವೃದ್ಧಿಯಾಗುತ್ತಾ ಬಂದಿತು. ಇದರಿಂದ ಅವಳು ತನ್ನನ್ನು ಖಂಡಿಸುವವರನ್ನು ತಾನೇ ಹಿಂಸಿಸುವವಳಾದಳು. ಹೊಸ ಹೊಸ ಸಿದ್ಧಾಂತಗಳನ್ನು ಸ್ಥಾಪಿಸಿದಳು. ಮೊದಲು ತನ್ನನ್ನು ಮೋಸಪಡಿಸಿಕೊಂಡು ನಂತರ ಕ್ರಿಸ್ತನ ರಾಜ್ಯವು ಬಂದಿದೆ. ಪೋಪುಗಳು ಕ್ರಿಸ್ತನ ಪ್ರತಿನಿಧಿಗಳು ಕ್ರಿಸ್ತನ ಪರವಾಗಿ ತಾವೇ ಆಳುವವರು ಎಂದು ಹೇಳಿ ಜನಾಂಗಗಳಿಗೆ ಮೋಸಮಾಡಿದಳು ಅವಳೊಂದಿಗೆ ಭೂರಾಜರು ಜಾರತ್ವ ಮಾಡಿದರು. ಪ್ರಕ 17:2 ಇದರಿಂದ ಯಾರು ತನ್ನನ್ನು ಖಂಡಿಸುವರೋ ಅಂಥವರು ನಿತ್ಯ ನರಕಕ್ಕೆ ಹೋಗುವರು ಎಂದು ಬೋಧಿಸಿದಳು, ಶೀಘ್ರವೇ ಯೂರೋಪಿನ ಸಿಂಹಾಸನದ ಮೇಲೂ ತನ್ನ ಹಕ್ಕನ್ನು ಸಾಧಿಸಿ ಬೇಕಾದವರನ್ನು ನೇಮಿಸುವುದು ಬೇಡವಾದವರನ್ನು ತೆಗೆದು ಹಾಕುವುದನ್ನು ಮಾಡಲು ಪ್ರಾರಂಭಿಸಿತು. ಹೀಗಾಗಿ ಯೂರೋಪಿನ ರಾಜ್ಯಗಳು ಕ್ರಿಸ್ತನ ರಾಜ್ಯಗಳೆಂದು ಹೇಳಿಕೊಂಡು ದೇವರ ಕೃಪೆಯಿಂದ ತಾವು ರಾಜರಾಗಿರುವೆವು ಎಂದು ಹೇಳುತ್ತಿರುವರು. ಇದಕ್ಕೆ ಕಾರಣ ಪೋಪ್ ಮತ್ತು ಪ್ರಾಟಸ್ಟೆಂಟರ ಪಂಗಡಗಳೇ ಕಾರಣ ಎಂದು ತಿಳಿದಿರುವರು. ಕೆಲವು ಸುಧಾರಕರು ಪೋಪಸಿಯ ಸುಳ್ಳುತತ್ವದಿಂದ ಮೋಸ ಹೋಗಿ ರಾಜ್ಯಗಳನ್ನು ಸ್ಥಾಪಿಸುವುದರಲ್ಲಿಯೂ, ಚಕ್ರವರ್ತಿಗಳನ್ನು ಬದಲಾಯಿಸುತ್ತಿರುವುದರಿಂದ ಅದೇ ಕ್ರಿಸ್ತನ ರಾಜ್ಯ ಎಂದು ನಾಮಕರಣ ಮಾಡಿದರು. ಈಗ ನಾವು ಕ್ರಿಸ್ತಲೋಕವೆಂಬ ವಿಚಿತ್ರವಾದ ಒಗಟನ್ನು ಕೇಳುತ್ತಿದ್ದೇವೆ, ಹೌದು ಸುವಾರ್ತೆಯ ಬೆಳಕಿನಲ್ಲಿ ನೋಡಿದರೆ ಒಂದು ಒಗಟೇ ಆಗಿದೆ. ನಮ್ಮ ಕರ್ತನು ತನ್ನ ಶಿಷ್ಯರಿಗೆ 'ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ' ಎಂದು ಹೇಳಿದನು. 'ಇಹಲೋಕದ ನಡವಳಿಕೆಯನ್ನು ಅನುಸರಿಸಬೇಡಿರಿ' ಎಂದು ಪೌಲನು ಹೇಳಿರುವನು. ಯೋಹಾನ 17:16; ರೋಮಾ 12:2

ಈ ರಾಜ್ಯಗಳು ತಮ್ಮನ್ನು ಕ್ರಿಸ್ತನ ರಾಜ್ಯ ಎಂದು ಹೇಳಿಕೊಳ್ಳುವುದನ್ನು ದೇವರು ಎಂದಿಗೂ ಒಪ್ಪುವುದಿಲ್ಲ.

ಹೀಗೆ ಕೇವಲ ಹೆಸರಿನ ರಾಜ್ಯಗಳಾಗಿ ಮೋಸದಿಂದ ಸುಳ್ಳಿನ ಬಣ್ಣದಿಂದ ತೇಲುತ್ತಿರುವವು. ನೆಬುಕದ್ನೇಚರನಿಗೆ ಕಾಣಿಸಿದಂತೆ ಆತನು ಬರುವವರೆಗೆ ಇವೆಲ್ಲವು ಅಧಿಕಾರದಲ್ಲಿರುವುದು. ನಿಜವಾದ ಕ್ರಿಸ್ತನ ರಾಜ್ಯವು ಬಂದಕೂಡಲೇ ಈ ರಾಜ್ಯಗಳೆಲ್ಲಾ ಬಿದ್ದು ಹೋಗುವುವು ಆಗ ಸಮಾಧಾನದ ಪ್ರಭುವು ಮತ್ತು ನ್ಯಾಯದಿಂದಾಳುವ ಅಧಿಪತಿಗಳು ಬರುತ್ತಾರೆ. ಯೆಶಾಯ 32:1.

ಈ ರಾಜ್ಯಗಳಲ್ಲಿರುವ ಮತ್ತೊಂದು ದೋಷವೆಂದರೆ ದೇವರ ನಿಜವಾದ ರಾಜ್ಯವನ್ನು ಮರೆತು ಕ್ರಿಸ್ತನ ತತ್ವಗಳನ್ನು ಕ್ರೂರವಾಗಿರುವ ರಾಜ್ಯಗಳೊಂದಿಗೆ ಹೊಂದಿಸಿ ಅದರ ಮೇಲೆ ಕ್ರಿಸ್ತನ ನೀತಿಯನ್ನು ಕಟ್ಟುತ್ತಿದ್ದಾರೆ. ಇದರಿಂದ ದೇವರ ರಾಜ್ಯದ ಸುವಾರ್ತೆಯನ್ನು ಕಡೆಗಾಣಿಸಿದ್ದಾರೆ. ಇನ್ನೂ ಕೆಲವರು ಇದೇ ಮೋಸಕ್ಕೊಳಗಾಗಿ ದೇವರ ಹೆಸರನ್ನು ಇತರ ದೇಶದ ರಾಜ್ಯಾಂಗಗಳಲ್ಲಿ ಸೇರಿಸಲು ಪ್ರಯತ್ನಿಸುತ್ತಿದ್ದಾರೆ. ಅದನ್ನು ಸೇರಿಸಿದರೆ ಈ ರಾಜ್ಯವು ಕ್ರಿಸ್ತನ ರಾಜ್ಯವಾಗುತ್ತದೆ ಇದರಿಂದ ಬೋಧಕರಿಂದ ಬೋಧಕರಿಗೆ ಅಧಿಕಾರ ಹೊಂದಲು ಅವಕಾಶವಾಗುತ್ತದೆ ಎಂಬುದೇ ಅವರ ಅಭಿಪ್ರಾಯ ಎಂಥಾ ಮೂರ್ಖತನ! ಎಲ್ಲಾ ಜನಾಂಗಗಳಿಗೆ ತಾಯಿಯು ತನ್ನ ಜಾರತ್ವವನ್ನು ಕುಡಿಸಿ ಮೋಸ ಮಾಡಿದ್ದಾಳೆ. ಪ್ರಕ 17: 2 ಇದೇ ರೀತಿ ಯೂರೋಪಿನ ರಾಜ್ಯಗಳು ಸೈತಾನನಿಂದ ಕ್ರಿಸ್ತನಿಗೆ ಬದಲಾಗಿ ಈಗ ಕ್ರಿಸ್ತನ ರಾಜ್ಯವಾಗಿದೆ ಎಂದು ಹೇಳುತ್ತಿರುವರು. ಇಹಲೋಕದ ರಾಜ್ಯಗಳು ಶೀಘ್ರದಲ್ಲಿಯೇ ಮುಗಿಯುತ್ತದೆ. ಮೇಸ್ಸಿಯನ ರಾಜ್ಯವಾದ ಐದನೇ ಚಕ್ರಾದಿಪತ್ಯಕ್ಕೆ ಲೋಕ ಸ್ಥಾನ ಕೊಡಲೇ ಬೇಕು. ದಾನಿಯೇ 2:44; 7; 14, 17, 27 ಆಗ ಅಸತ್ಯವನ್ನು ತೆಗೆದು ಹಾಕಿ ಸತ್ಯವನ್ನು ಸ್ಥಾಪಿಸಲಾಗುವುದು. ಈಗ ಕ್ರಿಸ್ತನ ರಾಜ್ಯ ಎಂದು ಹೇಳಿಕೊಂಡಿರುವ ರಾಜ್ಯಗಳು ತಮ್ಮದೇ ನಿಜವಾದ ಕ್ರಿಸ್ತನ ರಾಜ್ಯ ಎಂದು ತಿಳಿದು ಇಹಲೋಕಾಧಿಪತಿಯಾದ ಸೈತಾನನಿಗೇ ಮನ್ನಣೆ ಕೊಡುತ್ತಿರುವರು. ಪ್ರಕಟ 17:14;19:11–19 ಇದರಿಂದ ಜನಗಳು ಇಹ ಲೋಕದ ರಾಜ್ಯಗಳು ಕ್ರಿಸ್ತನದಲ್ಲವೆಂದು ತಿಳಿದು ಅವರ ಹಕ್ಕಿನ ವಿಷಯದಲ್ಲಿ ಪ್ರಶ್ನಿಸುವವರಾಗಿರುವರು. ಇವರು ತಮ್ಮ ಸ್ವಾತಂತ್ರವನ್ನು ಉಪಯೋಗಿಸುವುದು ದುರಾಲೋಚನೆಯಿಂದ ಕ್ರಿಸ್ತನ ಹೆಸರನ್ನು ಉಪಯೋಗಿಸುತ್ತಿರುವರು ಎಂಬುದು ಜನಗಳ ಅರಿವಿಗೆ ಬರುತ್ತಾ ಇರುವುದು. ಈಗಿನ ಸುಧಾಕರು ದೇವರು ಯೋಜನೆಯನ್ನು ಜನಗಳ ಅರುಹಿಗೆ ತಂದು ಅನೇಕ ಸುಧಾರಣೆಗಳನ್ನು ಜಾರಿಗೆ ತಂದು ನ್ಯಾಯ ಪರಿಪಾಲನೆ ಮಾಡಿದರೆ ನೀತಿಯ ರಾಜ್ಯ ಸ್ಥಾಪನೆಯಾಗುವವರೆಗೆ ಸತ್ಯ ನೆಲಸುತ್ತದೆ. ಆದರೆ ಈಗಿನ ಕೆಟ್ಟು ಹೋದ ಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ ಮತ್ತು ಪ್ರಯತ್ನಿಸುವುದಿಲ್ಲ. ಇದಕ್ಕೆ ಬದಲು ಸ್ವಾರ್ಥರಾಗಿ ಮದದಿಂದ ಅಧಿಕಾರ ಹೊಂದಲು ಸನ್ನದ್ಧರಾಗಿರುವರು. ಆದರೆ ಈ ಇಹಲೋಕದ ರಾಜ್ಯಗಳೆಲ್ಲವೂ ಒಂದು ದೊಡ್ಡ ಸಂಕಟಕ್ಕೊಳಗಾಗಿ ನಾಶವಾಗುತ್ತದೆ. ರಾಜ್ಯಗಳು ನಾಶವಾದರೂ ರಾಜ್ಯಗಳ ತತ್ವವನ್ನೇ ಹಿಡಿದಿರುವವರ ವಿರುದ್ಧವಾಗಿ ನಿಂತು ಕ್ರಿಸ್ತನು ಹೋರಾಡುತ್ತಾರೆ. ಆದರೆ ಯಾರೇ ಆಗಲಿ ಕ್ರಿಸ್ತನ ಶಕ್ತಿಯನ್ನು ಎದುರಿಸಿ ನಿಲ್ಲಲ್ಲು ಸಾಧ್ಯವಿಲ್ಲ. ವಿರೋಧಿಗಳು ವಿಫಲವಾಗಿ ಹೋಗುವರು. ಇದರ ವಿಷಯ ಕೀರ್ತ 2:1–6;10–12ರಲ್ಲಿ ವಿಷದವಾಗಿ ತಿಳಿಸಲ್ಪಟ್ಟಿದೆ ಓದಿರಿ.

## The Kingdom Near

"Watchman, tell us of the night—
What its signs of promise are.
Traveler, o'er yon mountain's height,
See that glory-beaming star!
Watchman, does its beauteous ray
Aught of hope or joy foretell?
Traveler, yes, it brings the day—
Promised day of Israel.
"Watchman, tell us of the night—
Higher yet that star ascends.
Traveler, blessedness and light,
Peace and truth its course portends.
Watchman, will its beams alone
Gild the spot that gave them birth?
Traveler, ages are its own;
See, its glory fills the earth.
"Watchman, tell us, does the morning
Of fair Zion's glory dawn?
Have the signs that mark its coming
Yet upon thy pathway shone?
Traveler, yes: arise! look round thee!
Light is breaking in the skies!
Gird thy bridal robes around thee!
Morning dawns! arise! arise!"

# ಅಧ್ಯಾಯ-14

# ದೇವರ ರಾಜ್ಯ

**ಈ ವಿಷಯದ ಪ್ರಾಮುಖ್ಯತೆ-ರಾಜ್ಯದ ಗುಣಲಕ್ಷಣಗಳು-ಸುವಾರ್ತಯುಗದಲ್ಲಿ ರಾಜ್ಯ-ಪೌಲನಿಂದ ಸರಿಪಡಿಸಲಾಗಿರುವ ತಪ್ಪು ಅಭಿಪ್ರಾಯಗಳು-ರಾಜ್ಯದ ಬಗ್ಗೆ ತಪ್ಪು ಕಲ್ಪನೆಗಳಿಂದಾಗಿರುವ ಫಲಿತಾಂಶಗಳು-ದೇವರ ರಾಜ್ಯದ ಎರಡು ಭಾಗಗಳು-ಆತ್ಮೀಕವಾದ ಭಾಗ ಮತ್ತು ಅದರ ಕೆಲಸಲೋಕದ ಭೂ ಭಾಗ ಮತ್ತು ಅದರ ಕೆಲಸ-ಅವುಗಳ ಹೊಂದಾಣಿಕೆಯಿಂದ ಕಾರ್ಯನಿರ್ವಹಣೆ-ಭೂಲೋಕ ಭಾಗದ ಮಹಿಮೆ-ಪರಲೋಕ ಭಾಗದ ಮಹಿಮೆ-ಈ ಕೊಂಬೆಗಳು ಬೆಳೆಯುವ ಒಡಂಬಡಿಕೆಯ ಬೇರು-ಭೂಲೋಕ ಭಾಗದ ರಾಜ್ಯ, ಇಸ್ರಾಯೇಲ್ಯರು-ಕಳೆದು ಹೊಸ ಕುಲಗಳು-ಪರಲೋಕದ ಯೆರುಸಲೇಮ್-ಇಸ್ರಾಯೇಲ್ಯರು ಒಂದು ಸಾಂಕೇತಿಕ ಜನರು-ಇಸ್ರಾಯೇಲ್ಯರ ನಷ್ಟ ಮತ್ತು ಪುನಃ ಪಡೆದುಕೊಳ್ಳುವುದು-ಆರಿಸಲ್ಪಟ್ಟ ಗುಂಪುಗಳು-ರಾಜ್ಯದ ಭಾಧ್ಯಸ್ತರು-ಕಬ್ಬಿಣದ ಆಳ್ವಿಕೆ-ಸಾವಿರ ವರ್ಷದ ಆಳ್ವಿಕೆಯ ಉದ್ದೇಶದ ನಿನಿನಿನಿದರ್ಶನ-ರಾಜ್ಯವನ್ನು ತಂದೆಗೆ ಒಪ್ಪಿಸುವುದು-ದೇವರ ಸಂಕಲ್ಪ ಮೂಲ ಪೂರ್ಣವಾಗಿ ನೇರವೇರುವುದು.**

**ಯಾ**ರಾದರು ಸತ್ಯವೇದದ ಸಹಾಯದಿಂದ ದೇವರ ರಾಜ್ಯದ ವಿಷಯವಾಗಿ ಓದಿದರೆ, ವೇದೋಕ್ತಿಗಳಲ್ಲಿ ಅದಕ್ಕೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ಕಂಡು ಆಶ್ಚರ್ಯಪಡುತ್ತಾರೆ. ಹಳೆ ಒಡಂಬಡಿಕೆಯ ವಾಗ್ದಾನಗಳಲ್ಲಿ ಪ್ರವಾದನೆಗಳಲ್ಲಿ ದೇವರ ರಾಜ್ಯ ಮತ್ತು ಅದರ ಪ್ರಧಾನ ವ್ಯಕ್ತಿಯಾದ ಕ್ರಿಸ್ತನ ವಿಷಯುವಾಗಿ ತುಂಬಿರುವುದು. ಪ್ರತಿಯೊಬ್ಬ ಇಸ್ರಾಯೇಲ್ಯನಿಗೆ ದೇವರು ಮೆಸ್ಸೀಯನ ನಾಯಕತ್ವದಲ್ಲಿ ತನ್ನ ರಾಜ್ಯ ಸ್ಥಾಪಿಸುವನು ಎಂಬ ನಿರೀಕ್ಷೆ ಇದ್ದಿತು. ಲೂಕ 3:15 ದೇವರ ವಾಗ್ದಾನವನ್ನು ನೆರವೇರಿಸುವುದಕ್ಕೆ ಕರ್ತನು ಅರಸನಾಗಿ ಭೂಮಿಯ ಮೇಲೆ ದೇವರ ರಾಜ್ಯವನ್ನು ಸ್ಥಾಪಿಸುವುದಕ್ಕೆ ಬಂದನು.

ಯೇಸುಕ್ರಿಸ್ತನ ಮುಂದೂತನಾದ ಸ್ನಾನಿಕನಾದ ಯೋಹಾನನು ಸಹ 'ಪರಲೋಕ ರಾಜ್ಯ ಸಮೀಪಿಸಿತು ದೇವರ ಕಡೆಗೆ ತಿರುಗಿಕೊಳ್ಳಿರಿ' ಎಂದು ಸಾರಿದನು. ಮತ್ತಾ 3:2 ಕ್ರಿಸ್ತನೂ ಸಹ ತನ್ನ ಬೋಧಕೋದ್ಯಮವನ್ನು ಇದೇ ಪ್ರಕಟನೆಯಿಂದ ಪ್ರಾರಂಭಿಸಿದನು. ಮತ್ತಾ 4:17 ಅಪೋಸ್ತಲರನ್ನು ಸಹ ದೇವರ ರಾಜ್ಯದ ಸುವಾರ್ತೆಯನ್ನು ಸಾರಲು ಕಳುಹಿಸಲಾಯಿತು. ಮತ್ತಾ 10:7: ಲೂಕ 9:2 ಕ್ರಿಸ್ತನು ತನ್ನ ಉಪದೇಶವನ್ನು ದೇವರ ರಾಜ್ಯದ ವಿಷಯವಾಗಿ ಪ್ರಾರಂಬಿಸಿದ್ದಲ್ಲದೆ ಆತನ ಉಪದೇಶದ ಮೂಲ ತಿರುಳೇ ಅದಾಗಿತ್ತು ಲೂಕ 8:1;4:43;19:11 ಮತ್ತು ಆತನ ಎಲ್ಲಾ ಬೋಧನೆಗಳು ಮತ್ತು ಸಾಮ್ಯಗಳು ಈ ವಿಷಯವನ್ನೇ ವಿವರಿಸುವುದಾಗಿತ್ತು. ಆ ರಾಜ್ಯದಲ್ಲಿ ಪಾಲು ಹೊಂದಬೇಕಾದರೆ ತಮ್ಮನ್ನೇ ಸಜೀವ ಯಜ್ಞವಾಗಿ ಪ್ರತಿಷ್ಠಿಸಿಕೊಳ್ಳಬೇಕೇ ಹೊರತು ಯೆಹೂದ್ಯರು ಅಬ್ರಹಾಮನ ವಂಶಸ್ಥರಾಗಿದ್ದರಿಂದ ರಾಜ್ಯದ ಹಕ್ಕು ತಮಗೆ ಮೀಸಲು ಎಂಬ ತಪ್ಪುತಿಳುವಳಿಕೆಯನ್ನು ಸರಿಪಡಿಸಿದನು ಮತ್ತು ತನ್ನ ಶಿಷ್ಯರಲ್ಲಿಯೂ ದೇವರ ರಾಜ್ಯದ ನಿರೀಕ್ಷೆಯನ್ನು ಹೆಚ್ಚಿಸಿದನು. ಅವರ ನಂಬಿಕೆಯನ್ನು ಹೆಚ್ಚಿಸಲು ಆತನು ಅವರಿಗೆ 'ನನ್ನ ತಂದೆಯು ನನಗೆ ರಾಜ್ಯವನ್ನು ನೇಮಿಸಿದ ಪ್ರಕಾರ ನಾನು ನಿಮಗೂ ನೇಮಿಸುತ್ತೇನೆ. ನನ್ನ ರಾಜ್ಯದಲ್ಲಿ ನೀವು ನನ್ನ ಮೇಜಿನ ಮೇಲೆ ಊಟ ಮಾಡುವಿರಿ. ಕುಡಿಯುವಿರಿ ಮತ್ತು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲ್ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವಿರಿ (ಆಳುವಿರಿ) ಲೂಕ 22:29,30 ಮತ್ತು ಪುನಃ 'ಚಿಕ್ಕ ಹಿಂಡೇ ಹೆದರಬೇಡ ರಾಜ್ಯವನ್ನು ನಿಮಗೆ ದಯಪಾಲಿಸುವುದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ' ಎಂದು ಹೇಳಿರುವನು. ಲೂಕ 12:32 ಮತ್ತು ಆತನನ್ನು ಅರಸನೆಂದು ಪರಿಗಣಿಸಿ ಕಿರೀಟಧಾರಣೆ ಮಾಡಿ ಸಿಂಹಾಸನಕ್ಕೇರಿಸುವ ಬದಲು ಮರಣಶಿಕ್ಷೆಯನ್ನು ವಿಧಿಸಿದ್ದರಿಂದ ಆತನ ಶಿಷ್ಯರಿಗೆ ತುಂಬಾ ನಿರಾಶೆಯಾಯಿತು. ಮಾತ್ರವಲ್ಲದೆ ಆತನ ಇಬ್ಬರು ಶಿಷ್ಯರು ಪುನರುತ್ಥಾನವಾದ ಮೇಲೆ ಎಮ್ಮಾಹು ಹಳ್ಳಿಗೆ ಹೋಗುತ್ತಿದ್ದಾಗ 'ಈತನೇ ಇಸ್ರಾಯೇಲ್ಯರನ್ನು ಬಿಡಿಸತಕ್ಕವನು ಎಂದು ನಂಬಿದ್ದೇವು' ಎಂದು ಅವರಲ್ಲೇ ಮಾತಾಡಿಕೊಳ್ಳುತ್ತಿದ್ದರು – ಇಸ್ರಾಯೇಲ್ಯರನ್ನು ರೋಮನ್ನರ ನೊಗದಿಂದ ಬಿಡಿಸಿ, ಮಹಿಮೆ ಮತ್ತು ಶಕ್ತಿಗಳಿಂದ ದೇವರ ರಾಜ್ಯ ಬರುವುದು ಎಂದು ತಿಳಿದಿದ್ದರು. ಆದರೆ ನಡೆದ ಘಟನೆಯಿಂದಾಗಿ ಮನಗುಂದಿದವರಾಗಿದ್ದರು. ಆದರೆ ಯೇಸು ಅವರಿಗೆ ಕಾಣಿಸಿಕೊಂಡು ದೇವರ ರಾಜ್ಯ ಸ್ಥಾಪನೆಯಾಗುವುದಕ್ಕೆ ಮೊದಲು ತನ್ನ ಯಜ್ಞಾರ್ಪಣೆಯು ಎಷ್ಟು ಅಗತ್ಯ ಎಂಬುದನ್ನು ವೇದೋಕ್ತಿಗಳ ಸಹಾಯದಿಂದಲೇ ವಿವರಿಸಿ ಅವರ ಕಣ್ಣುಗಳನ್ನು ತೆರೆದನು. ಲೂಕ 24:21, 25–27.

ಮಾನವರನ್ನು ರಕ್ಷಿಸದೆಯೇ ಯೇಸುವಿಗೆ ಈ ಲೋಕದ ಒಡೆತನವನ್ನು ಕೊಡಬಹುದಾಗಿತ್ತು. 'ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದನ್ನು ತನಗೆ ಬೇಕಾದವರಿಗೆ ಒಪ್ಪಿಸುತ್ತಾನೆ.' ದಾನಿ. 4:32 ಆದರೆ ಇದಕ್ಕಿಂತ ಅದ್ಭುತವಾದ ದೇವರ ಯೋಜನೆಯೊಂದಿದೆ. ಅದು ಅದ್ಭುತವಾದದ್ದನ್ನು ಸಾಧಿಸುವುದಾಗಿದೆ. ಇಲ್ಲವಾದಲ್ಲಿ ಮರಣ ದಂಡನೆಗೆ ಒಳಗಾದ ಜನರು ಸ್ವಲ್ಪ ಕಾಲ ಮಾತ್ರ

ದೇವರ ಆಶೀರ್ವಾದ ಹೊಂದುತ್ತಿದ್ದರು. ಆದುದರಿಂದ ತನ್ನ ಆಶೀರ್ವಾದ ಶಾಶ್ವತವಾಗಿರಲೆಂದು ಮತ್ತು ಪೂರ್ಣವಾಗಿರಲೆಂದು ಆದಾಮನಿಂದ ಬಂದ ಮರಣ ಶಿಕ್ಷೆಯಿಂದ ಬಡುಗಡೆ ಮಾಡಲು ಒಬ್ಬ ವಿಮೋಚಕನನ್ನು ನೇಮಿಸಿದನು. ಆದುದರಿಂದ ಯೇಸು ಪ್ರವಾದನೆಗಳನ್ನು ವಿವರಿಸುವಾಗ ಸ್ವರ್ಗಾರೋಹಣಕ್ಕೆ ಮುಂಚೆ ಆತನ ಶಿಷ್ಯರು ಆತನನ್ನು 'ಸ್ವಾಮೀ ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರುಗಿ ಸ್ಥಾಪಿಸಿ ಕೊಡುವಿಯೋ?' ಎಂದು ಪ್ರಶ್ನಿಸಿದಾಗ ಯೇಸು ಸ್ಪಷ್ಟವಾಗಲ್ಲದಿದ್ದರೂ ಅವರ ನಿರೀಕ್ಷೆಗೆ ಅನುಗುಣವಾಗಿ 'ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳಿದುಕೊಳ್ಳುವುದು ನಿಮ್ಮ ಕೆಲಸವಲ್ಲ' ಅ.ಕೃ. 1:6,7 ಎಂದು ಹೇಳಿದನು. ನಿಜ ಆತನ ಶಿಷ್ಯರು ಮತ್ತು ಇಡೀ ಯೆಹೂದ್ಯ ಜನಾಂಗದವರು ದೇವರ ರಾಜ್ಯದ ವಿಷಯವಾಗಿ ಅಪಾರ್ಥವನ್ನು ಕಲ್ಪಿಸಿಕೊಂಡಿದ್ದರು. ಹಾಗೆಯೇ ಇಂದಿಗೂ ಪರಲೋಕವೆಂಬ ದೇವರ ರಾಜ್ಯ ಪ್ರತ್ಯೇಕವಾಗಿರುವುದು ಎಂದು ನಂಬಿರುವರು. ಆತನ ಹೇಳಿಕೆಗಳು ಮತ್ತು ಸಾಮ್ಯಗಳು ಅವರ ಅಪಾರ್ಥವನ್ನು ತಕ್ಕ ಕಾಲದಲ್ಲಿ ಸರಿಮಾಡುವವು. ಭೂಲೋಕದಲ್ಲಿ ಒಂದು ರಾಜ್ಯವು ಸ್ಥಾಪನೆಯಾಗಿ ಜನರನ್ನಾಳಲು ಒಂದು ರಾಜ್ಯಾಡಳಿತವು ಏರ್ಪಾಡಾಗುವ ವಿಷಯವನ್ನು ಯೇಸು ತಿಳಿಸಿದ್ದನು. ಆ ರಾಜ್ಯದಲ್ಲಿ ಪಾಲು ಹೊಂದುವುದಕ್ಕೆ ಮಾತ್ರವಲ್ಲದೆ ಅದರ ಸ್ಥಾಪನೆಗೂ ಪ್ರಾರ್ಥನೆ ಮಾಡುವುದನ್ನು ಕಲಿಸಿದ್ದನು. 'ನಿನ್ನ ರಾಜ್ಯವು ಬರಲಿ ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ.' ಆದರೆ ಲೌಕಿಕರಾದ ಯೆಹೂದ್ಯರ ದೃಷ್ಟಿಯಲ್ಲಿ ನಮ್ಮ ಕರ್ತನು ಮೋಸಗಾರನು ಆತನ ಶಿಷ್ಯರು ಹುಚ್ಚರೆಂದು ಪರಿಗಣಿಸಲ್ಪಟ್ಟಿದ್ದರು. ಆತನ ಸಾಮ್ಯಗಳನ್ನು ಸೂಚಕ ಕಾರ್ಯಗಳನ್ನು ಅರ್ಥಮಾಡಿಕೊಳ್ಳಲು ಅಶಕ್ತರಾಗಿದ್ದರು. ಇದರಿಂದ ಯೇಸು ಮತ್ತು ಆತನ ಶಿಷ್ಯರು ದೇವರ ರಾಜ್ಯಕ್ಕೆ ಬಾಧ್ಯಸ್ಥರಾಗುವರು ಎಂಬ ವಿಷಯ ಯೆಹೂದ್ಯರಿಗೆ ಅಪನಂಬಿಕೆಯೂ ಅವರ ದೃಷ್ಟಿಗೆ ಅಸಹ್ಯಕರವಾಗಿಯೂ ಇದ್ದಿತು. ರೋಂ ಸಾಮ್ರಾಜ್ಯವು ತನ್ನ ಅಪರಿಮಿತ ಐಶ್ವರ್ಯ ಮತ್ತು ಶಕ್ತಿಯಿಂದ ಇಡೀ ಲೋಕವನ್ನೇ ಆಳುವವರಾಗಿದ್ದು, ದಿನೇ ದಿನೇ ಅವರ ಶಕ್ತಿ ಹೆಚ್ಚುತ್ತಿತ್ತು. ಹಾಗಾದರೆ ಈ ನಜರಾಯನು ಯಾರು? ಮತ್ತು ಹಣವಾಗಲಿ ಪ್ರಭಾವವಾಗಲಿ ಇಲ್ಲದಂತೆ ಕೇವಲ ಕೆಲವು ಸಾಮಾನ್ಯ ಜನರನ್ನು ಹಿಂಬಾಲಕರಾಗಿ ಹೊಂದಿರುವ ಈ ಬೆಸ್ತರು ಯಾರು? ಆದಿಯಿಂದಲೂ ವಾಗ್ದಾನ ಮಾಡಿರುವ ಅದ್ಭುತವಾದ ಪ್ರಭಾವವುಳ್ಳ ದೇವರ ರಾಜ್ಯವನ್ನು ಕುರಿತು ಮಾತನಾಡುವ ಇವರಾರು? ಫರಿಸಾಯರೂ ಸಹ ನಮ್ಮ ಕರ್ತನ ಬಲಹೀನತೆಯನ್ನು ಹೊರಗೆಳೆಯಲು ಮತ್ತು ಆತನ ಶಿಷ್ಯರನ್ನ ಮೋಸಪಡಿಸಲು ನೀನು ಬೋಧಿಸುವಂಥ ರಾಜ್ಯವು ಯಾವಾಗ ಪ್ರತ್ಯಕ್ಷವಾಗುವುದು. ನಿನ್ನ ಸೈನಿಕರು ಯಾವಾಗ ಬರುವರು? ದೇವರ ರಾಜ್ಯವು ಯಾವಾಗ ಬರುವುದು ಲೂಕ 17:20–31 ಎಂದು ಪ್ರಶ್ನಿಸಿದರು. ನಮ್ಮ ಕರ್ತನು ಕೊಟ್ಟ ಉತ್ತರ ಅವರಲ್ಲಿ ನೂತನ ಯೋಚನೆಯನ್ನು ಹುಟ್ಟಿಸಬಹುದಾಗಿತ್ತು ಆದರೆ ಅವರಲ್ಲಿ ಹೊಟ್ಟೆ ಕಿಚ್ಚಿದ್ದುದರಿಂದ ಅವರ ಜ್ಞಾನವೇ ಅವರನ್ನು ಕುರುಡರನ್ನಾಗಿ ಮಾಡಿತು. ಅವರು ಅಪೇಕ್ಷಿಸುವ ರೀತಿಯಲ್ಲಿ ಆ ರಾಜ್ಯವು ಎಂದಿಗೂ ಪ್ರತ್ಯಕ್ಷವಾಗುವುದಿಲ್ಲವೆಂದು ಉತ್ತರ ಕೊಟ್ಟನು. ಯಾಕೆಂದರೆ ಆ ರಾಜ್ಯವು ಅದೃಶ್ಯವಾದದ್ದು ಅವರಿಗೆ ಅದನ್ನು ನೋಡಲು ಎಂದಿಗೂ ಸಾಧ್ಯವಿಲ್ಲ. ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದಲ್ಲ, ಇಗೋ ಇಲ್ಲಿ ಇದೆ ಅಗೋ ಅಲ್ಲಿ ಇದೆ ಎಂದು ಹೇಳುವುದಕ್ಕಾಗದು ಕ್ರಿಸ್ತನು ಉತ್ತರ ಕೊಟ್ಟನು. ಆದುದರಿಂದ ಒಂದೇ ಮಾತಿನಲ್ಲಿ ದೇವರ ರಾಜ್ಯ ಬಂದ ಮೇಲೆ ಅದು ಎಲ್ಲೆಲ್ಲಿಯೂ ಇರುವುದು ಮತ್ತು ಶಕ್ತಿಯುತವಾಗಿರುವುದು ಎಂದು ತೋರಿಸಿದನು. ಹೀಗೆ ತನ್ನ ಬೋಧನೆಯಲ್ಲಿ ಆತ್ಮೀಕ ರಾಜ್ಯದ ವಿಷಯವನ್ನು ತಿಳಿಸಿದನು ಆದರೆ ಅದನ್ನು ಸ್ವೀಕರಿಸಲು ಅವರು ಸಿದ್ಧರಾಗಲಿಲ್ಲ. ಈ ಆತ್ಮೀಕ ರಾಜ್ಯದಲ್ಲಿ ಬಾಧ್ಯರಾಗುವ ಕರೆಯನ್ನು ಆ ಕಾಲದಲ್ಲಿ ಮಾಡಲಾಯಿತು. ಅದೇ ಕರೆಗೆ ಓಗೊಟ್ಟು ಈ ಸುವಾರ್ತಾಯುಗದಲ್ಲಿ ಪರಲೋಕದ ಕಡೆಗೆ ಗಮನ ಕೊಟ್ಟು ಆ ರಾಜ್ಯದಲ್ಲಿ ಪಾಲುಗಾರರಾಗುವುದೇ ನಮ್ಮೆಲ್ಲರ ನಿರೀಕ್ಷೆಯಾಗಿದೆ. ಆದುದರಿಂದಲೇ ಯೇಸು ಅದನ್ನು ಪದೇ ಪದೇ ಸೂಚಿಸುತ್ತಿದ್ದನು. ಲೂಕ 16:16 ಮುಂದುವರೆದಂತೆಲ್ಲಾ ಇದು ಸ್ಪಷ್ಟವಾಗಿ ತಿಳಿದು ಬರುವುದು.

ಆಗಿನ ಕಾಲದ ಸಾರ್ವಜನಿಕರಲ್ಲೇ ವಿರೋಧ ಮನೋಭಾವವಿದ್ದುದ್ದರಿಂದ ಫರಿಸಾಯನಾದ ನಿಕೊದೇಮನು ಈ ವಿಷಯವನ್ನೂ ಕೂಲಂಕಷವಾಗಿ ತಿಳಿದುಕೊಳ್ಳಲು ರಾತ್ರಿಯ ಸಮಯದಲ್ಲಿ ಕರ್ತನ ಬಳಿಗೆ ಬಂದನು. ಅವರಿಬ್ಬರ ನಡುವೆ ನಡೆದ ಸಂಭಾಷಣೆಯು ಯೋಹಾನ (3ನೇ ಅಧ್ಯಾಯ) ದೇವರ ರಾಜ್ಯದ ಅರ್ಥವನ್ನೂ ಮತ್ತು ದೀರ್ಘವಾಗಿ ತಿಳಿಯಲು ಸಹಾಯಮಾಡುತ್ತದೆ. ಆದುದರಿಂದ ಅವರ ಸಂಭಾಷಣೆಯನ್ನು ಈ ರೀತಿ ಭಾವಾರ್ಥಮಾಡಬಹುದು.

ನಿಕೊದೇಮನು 'ಗುರುವೇ ನೀನು ದೇವರ ಕಡೆಯಿಂದ ಬಂದ ಬೋದಕನೆಂದು ಬಲ್ಲೆವು. ನೀನು ಮಾಡುವಂಥ ಈ ಸೂಚಕ ಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವುದು ಯಾರಿಂದಲಾಗದು' ಆದರೂ ನಿನ್ನ ಹೇಳಿಕೆಗಳಲ್ಲಿ ಕೆಲವು ನನಗೆ ಚಂಚಲವಾಗಿವೆ. ಅವುಗಳ ವಿವರಣೆಯನ್ನು ಕೇಳಲು ನಾನು ನಿನ್ನ ಬಳಿಗೆ ಬಂದಿದ್ದೇನೆ ಉದಾ. ನೀನು ಮತ್ತು ನಿನ್ನ ಶಿಷ್ಯರು ಸಂಚರಿಸುತ್ತಾ 'ದೇವರ ರಾಜ್ಯವು ಸಮೀಪವಾಯಿತು ಎಂದು ಬೋದಿಸುತ್ತಿರುವಿ. ಆದರೆ ನಿನ್ನ ಬಳಿ ಸೈನ್ಯವಾಗಲಿ, ಐಶ್ವರ್ಯವಾಗಲಿ, ಪ್ರಭಾವವಾಗಲಿ ಇಲ್ಲದಿರುವುದರಿಂದ ನಿನ್ನ ಹೇಳಿಕೆಯು ಅಸತ್ಯ ಹೀಗೆ ನೀನು ಜನರನ್ನು ಮೋಸಪಡಿಸುವಂತೆ

ಕಾಣಿಸುತ್ತದೆ. ಆದರೆ ನನಗೆ ನಿನ್ನ ಉಪದೇಶದಲ್ಲಿ ಸತ್ಯ ಇರಲೇ ಬೇಕು ಎಂದು ಕಂಡುಬಂದಿದೆ ಆದುದರಿಂದ ನೀನು ಉಪದೇಶಿಸುತ್ತಿರುವ ಈ ರಾಜ್ಯ ಯಾವುದು? ಮತ್ತು ಯಾವಾಗ ಹೇಗೆ ಸ್ಥಾಪಿತವಾಗುವುದು? ಎಂಬುದನ್ನು ವಿಚಾರಿಸಲು ನಾನು ನಿನ್ನ ಬಳಿಗೆ ಬಂದಿರುವೆನು. ಯೇಸು – ಪರಲೋಕ ರಾಜ್ಯದ ವಿಷಯವಾಗಿ ದೀರ್ಘವಾಗಿ ನಿನಗೆ ತೃಪ್ತಿಯಾಗುವವರೆಗೆ ವಿವರಿಸಲು ಇದು ಸಮಯವಲ್ಲ. ಅದು ನನಗೆ ಗೊತ್ತಿಲ್ಲವೆಂದಲ್ಲ ಯಾಕೆಂದರೆ ನಾನು ವಿವರವಾಗಿ ವಿವರಿಸಿದರು ಅದನ್ನು ನೀನು ಅರ್ಥಮಾಡಿಕೊಳ್ಳುವ ಸ್ಥಿತಿಯಲಿಲ್ಲ.' 'ಯಾಕೆಂದರೆ ಒಬ್ಬ ಮನುಷ್ಯನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು' (ತಿಳಿದುಕೊಳ್ಳಲಾರನು). ದೇವರ ರಾಜ್ಯವನ್ನು ಕುರಿತಾಗಿ ಬೋಧಿಸುತ್ತಿರುವ ನನ್ನ ಶಿಷ್ಯರುಸಹ ಅದನ್ನು ವಿವರವಾಗಿ ತಿಳಿದಿಲ್ಲ. ಯಾಕೆಂದರೆ ಅವರು ಸಹ ನಿನ್ನ ಹಾಗೆಯೇ. ಆದರೆ ನಿಕೊದೇಮನೆ ದೇವರ ವ್ಯವಹಾರದಲ್ಲಿ ಒಂದು ವಿಚಿತ್ರವೇನೆಂದರೆ ಇನ್ನೂ ಹೆಚ್ಚಿನ ಬೆಳಕನ್ನು ಹೊಂದುವವರೆಗೆ ಈಗಿರುವ ಬೆಳಕಿಗೆ ಸಂಪೂರ್ಣ ವಿಧೇಯರಾಗಿರಬೇಕು. ದೇವರ ರಾಜ್ಯದಲ್ಲಿ ಪಾಲುಗಾರರಾಗುವವರಿಗೆ ನಂಬಿಕೆ ಎಂಬ ಗುಣವಿರಬೇಕು. ಹೆಜ್ಜೆ ಹೆಜ್ಜೆಗು ದೇವರಿಂದ ನಡೆಸಲ್ಪಟ್ಟವರಾದರೆ ಮುಂದಿನ ಹೆಜ್ಜೆಯು ಸ್ಪಷ್ಟವಾಗಿ ಕಾಣಿಸುವುದು. ಅವರು ನಂಬಿಕೆಯಿಂದ ನಡೆಯುವವರಾಗಿರುತ್ತಾರೆಯೇ ಹೊರತು ದೃಷ್ಟಿಯಿಂದಲ್ಲ. ನಿಕೋದೇಮನು ನಾನು ನಿನ್ನ ಹೇಳಿಕೆಯನ್ನು ಅರ್ಥಮಾಡಿಕೊಳ್ಳಲಿಲ್ಲ 'ಒಬ್ಬ ಮನುಷ್ಯನು ಮುದುಕನಾದ ಮೇಲೆ ಪುನಃ ಹುಟ್ಟುವುದು ಹೇಗೆ ಅವನು ತನ್ನ ತಾಯಿಯ ಗರ್ಭದಲ್ಲಿ ಸೇರಿ ಪುನಃ ಹುಟ್ಟುವದಾದೀತೆ' ಅಥವಾ ಸ್ನಾನಿಕನಾದ ಯೋಹಾನನು ಹೇಳಿದಂತೆ ಪಶ್ಚಾತಾಪಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆ? ಇದಲ್ಲದೆ ನಿನ್ನ ಶಿಷ್ಯರು ಬೋಧಿಸಿ ದೀಕ್ಷಾಸ್ನಾನ ಮಾಡಿಸುವುದನ್ನು ಗಮನಿಸಿದ್ದೇನೆ. ದೇವರ ರಾಜ್ಯದಲ್ಲಿ ಸೇರಲು ಇಂತಹ ಒಂದು ಹೊಸದಾಗಿ ಹುಟ್ಟುವಿಕೆಯು ಅಗತ್ಯವೋ?

ಯೇಸು ನಮ್ಮ ರಾಷ್ಟ್ರ ಒಡಂಬಡಿಕೆಯ ಜನರನ್ನು ಹೊಂದಿರುವ ಒಂದು ಪ್ರತಿಷ್ಠಿತವಾದ ಜನಾಂಗ. ಅವರೆಲ್ಲರೂ ಐಗುಪ್ತ ದೇಶವನ್ನು ಬಿಟ್ಟಾಗ ಸಮುದ್ರದಲ್ಲಿ ಮತ್ತು ಮೇಘದಲ್ಲಿ ಮೋಶೆಯೊಂದಿಗೆ ದೀಕ್ಷಾ ಸ್ನಾನಮಾಡಿಸಿಕೊಂಡಿರುವರು. ಸಿನಾಯ್ ಬೆಟ್ಟದಲ್ಲಿ ನಡೆದ ಒಡಂಬಡಿಕೆಯಲ್ಲಿ ಮಧ್ಯಸ್ಥಗಾರನಾದ ಮೋಶೆಯ ಮೂಲಕ ದೇವರು ಅವರನ್ನು ಅಂಗೀಕರಿಸಿದನು. ಆದರೆ ಅವರು ತಮ್ಮ ಒಡಂಬಡಿಕೆಯನ್ನು ಮರೆತರು. ಕೆಲವರು ಪಾಪಿಷ್ಠರಾಗಿ ಸುಂಕದವರಾಗಿರುವರು ಮತ್ತೆ ಕೆಲವರು ನೀತಿವಂತರಾಗಿಯೂ ಕಪಟಿಗಳಾಗಿರುವರು. ಆದುದರಿಂದಲೇ ಸ್ನಾನಿಕನಾದ ಯೋಹಾನನು ಮತ್ತು ನನ್ನ ಶಿಷ್ಯರು ಪಶ್ಚಾತಾಪವನ್ನು ಕುರಿತು ಬೋಧಿಸುತ್ತಿರುವರು. ಅಂದರೆ ತಮ್ಮ ಒಡಂಬಡಿಕೆಯನ್ನು ನೆನಪಿಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೊಳ್ಳುವುದೇ ಯೋಹಾನನ ಸ್ನಾನ ದೀಕ್ಷೆಯು ಪಶ್ಚಾತಾಪ ಮತ್ತು ಹೃದಯದ ಸುಧಾರಣೆಯನ್ನು ಸೂಚಿಸುತ್ತದೆಯೇ ಹೊರತು ಹೊಸದಾಗಿ ಹುಟ್ಟುವಿಕೆಯನಲ್ಲ. ಆದುದರಿಂದ ಆತ್ಮಿಕವಾಗಿ ನೀನು ಹುಟ್ಟದೇ ಹೋದರೆ ದೇವರ ರಾಜ್ಯವನ್ನು ಕಾಣಲಾರೆ. ಪಶ್ಚಾತಾಪವು ನಿನ್ನನ್ನು ನೀತಿವಂತನಾಗಿ ಮಾಡುವುದು ಆಗ ನೀನು ಮೋಶೆಯ ಛಾಯೆಯಾದ ನನ್ನನ್ನು ಮೆಸ್ಸಿಯೆನೆಂದು ತಿಳಿದು ನಿನ್ನನ್ನು ನನಗೆ ಪ್ರತಿಷ್ಠಿಸಿಕೊಂಡರೆ ದೇವರಿಂದ ಹೊಸದಾಗಿ ಹುಟ್ಟಿದವನಾಗುತ್ತಿ ದೈವ ಸ್ವಭಾವವನ್ನು ಪಡೆಯುತ್ತಿ ಹೀಗೆ ಮೊದಲನೇ ಪುನರುತ್ಥಾನದಲ್ಲಿ ಆತ್ಮಿಕ ಜೀವಿಯಾಗಿ ದೇವರ ರಾಜ್ಯವನ್ನು ಕಾಣುವುದಲ್ಲದೆ ಅದರಲ್ಲಿ ಪಾಲು ಹೊಂದುವಿ.

ಹೀಗೆ ಹೊಸ ಆತ್ಮಿಕ ಜೀವಿಯಾಗಿ ಬದಲಾವಣೆ ಹೊಂದುವುದು ನಿಜಕ್ಕೂ ಮಹತ್ವವೇ. ಯಾಕೆಂದರೆ ನಿಕೊದೇಮನೆ ದೇಹದಿಂದ ಹುಟ್ಟಿದ್ದು ದೇಹವೇ ಆತ್ಮದಿಂದ ಹುಟ್ಟಿದ್ದು ಆತ್ಮವೇ ನಮ್ಮ ಮೊದಲನೇ ಹೇಳಿಕೆಯನ್ನು ಕೇಳಿ ಆಶ್ಚರ್ಯಪಡಬೇಡ ನಿನ್ನ ಪ್ರಶ್ನೆಯನ್ನು ನೀನು ಅರ್ಥ ಮಾಡಿಕೊಳ್ಳಬೇಕಾದರೆ ಮೇಲಿನಿಂದ ನೀನು ಹುಟ್ಟಬೇಕು. 'ನೀನು ಹೊಸದಾಗಿ ಹುಟ್ಟಬೇಕು ಎಂದು ನಾನು ಹೇಳಿದ್ದರಿಂದ ಆಶ್ಚರ್ಯಪಡಬೇಡ. ದೇಹದ ಹುಟ್ಟುವಿಕೆಯಿಂದ ಆತ್ಮಿಕ ಹುಟ್ಟುವಿಕೆಗಾಗುವ ಬದಲಾವಣೆಯಿಂದಲೇ ನೀನು ದೇವರ ರಾಜ್ಯಾವನ್ನು ಸೇರುವಿ. ಇದಕ್ಕಾಗಿ ಒಂದು ಉದಾ. ಕೊಡುತ್ತೇನೆ. ನಂತರ ಆತ್ಮಿಕ ಜೀವಿಗಳ ವಿಷಯವನ್ನು ಗ್ರಹಿಸಲು ಸುಲಭವಾಗುವುದು. 'ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ. ಅದರ ಸಪ್ಪಳ ಕೇಳುತ್ತಿ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು. ಆತ್ಮನಿಂದ ಹುಟ್ಟಿದವರೆಲ್ಲರೂ ಅದರಂತೆಯೇ." ಗಾಳಿಯ ಪ್ರಬಾವ ನಿನ್ನ ಮೇಲಿದ್ದರು ಅದು ಎಲ್ಲಿ ಬೀಸಿದರೂ ನಿನಗೆ ಗೊತ್ತಾಗುವದಿಲ್ಲ. ಅದು ಎಲ್ಲಿಂದ ಬರುವುದು ಎಲ್ಲಿಗೆ ಹೋಗುವುದು ಎಂದು ನಿನಗೆ ಗೊತ್ತಾಗುವುದಿಲ್ಲ. ಆದುದರಿಂದ ಪುನರುತ್ಥಾನದಲ್ಲಿ ಆತ್ಮೀಕ ಜೀವಿಗಳಾಗಿ ದೇವರ ರಾಜ್ಯದಲ್ಲಿ ಸೇರುವರು ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿದೆ. ಆದರೂ ಗಾಳಿಯ ಹಾಗೆ ಅದೃಶ್ಯರು ಅವರು ಎಲ್ಲಿಂದ ಬರುವರು ಎಲ್ಲಿಗೆ ಹೋಗುವರು ಎಂಬುದು ಆತ್ಮಿಕವಾಗಿ ಹುಟ್ಟದೇ ಹೋದವರಿಗೆ ಅರ್ಥವಾಗುವುದಿಲ್ಲ. ನಿಕೋದೇಮನು ಅದೃಶ್ಯ ಜೀವಿಗಳು! ಇದು ಹೇಗೆ ಸಾಧ್ಯ.

ಯೇಸು – ಇಸ್ರಾಯೇಲ್ ಜನರಿಗೆ ಬೋಧಕನಾಗಿರುವ ನಿನಗೆ ಇದು ತಿಳಿಯದೋ ಆತ್ಮಿಕ ಜೀವಿಗಳು ಅದೃಶವಾಗಿಯೇ ಹಾಜರಿರಬಲ್ಲವು ಇತರರಿಗೆ ಬೋಧಿಸುವ

ನಿನಗೆ ಎಲೀಷನು ಅವನ ಸೇವಕನೂ ಅಥವಾ ಬಿಳಾಮನು ಕತ್ತೆಯು ವಿಷಯವಾಗಿ ಓದಿಲ್ಲವೋ? ಹೀಗೆಯೇ ಸತ್ಯವೇದದಲ್ಲಿ ಅನೇಕ ಸಂಗತಿಗಳು ಆತ್ಮಿಕ ಜೀವಿಗಳು ಅದೃಶ್ಯವಾಗಿ ಮನುಷ್ಯರ ನಡುವೆ ಇರಬಲ್ಲದು ಎಂದು ತಿಳಿಸುತ್ತದೆ. ಅದಲ್ಲದೆ ದೇವದೂತರು ಆತ್ಮಿಯ ಜೀವಿಗಳು ಎಂದು ಹೇಳುವ ಫರಿಸಾಯರ ಗುಂಪಿಗೆ ಸೇರಿದವನಾಗಿ ಇದು ನಿನಗೆ ತಿಳಿದಿಲ್ಲವೇ? ಆದುದರಿಂದ ಇದು ನನ್ನ ಮೊದಲನೆ ಹೇಳಿಕೆಗೆ ಸಂಬಂಧಿಸಿದ್ದಾಗಿದೆ. ಒಬ್ಬ ಮನುಷ್ಯನು ಹೊಸದಾಗಿ ಹುಟ್ಟದೇ ಹೋದರೆ ದೇವರ ರಾಜ್ಯದಲ್ಲಿ ಸೇರಲಾರನು. ನಾನು ಬೋಧಿಸುತ್ತಿರುವ ದೇವರ ರಾಜ್ಯಕ್ಕೆ ಸೇರಿ ಬಾಧ್ಯನಾಗಬೇಕಾದರೆ ಹೆಜ್ಜೆಹೆಜ್ಜೆಗೂ ಬೆಳಕನ್ನೇ ಹಿಂಬಾಲಿಸಬೇಕು. ಹಾಗೆ ಮಾಡಿದಲ್ಲಿ ಹೆಚ್ಚು ಹೆಚ್ಚುಬೆಳಕು ಬರುವುದು ಮತ್ತು ಅದನ್ನು ಸ್ವೀಕರಿಸಲು ಸಿದ್ಧನಾಗುತ್ತಿ. ಆಗ ನನ್ನ ಬೋದನೆಯನ್ನು ಅರ್ಥಮಾಡಿಕೊಳ್ಳುವೆ ಮತ್ತು ನನ್ನ ಸೂಚಕ ಕಾರ್ಯಗಳನ್ನು ಅಂಗೀಕರಿಸಿ ನಾನು ದೇವರಿಂದ ಬಂದವನೆಂದು ಒಪ್ಪಿಕೊಳ್ಳುತ್ತಿ. ಆದರೆ ನೀನು ನಂಬಿಕೆಗೆ ಅನುಗುಣವಾಗಿ ನಡೆಯದೇ ಹೋದುದ್ದರಿಂದ ನನ್ನ ಶಿಷ್ಯನಾಗಲಿಲ್ಲ. ಆದುದರಿಂದ ಹೆಚ್ಚಿನದೇನನ್ನು ನೋಡುವುದಿಲ್ಲ 'ನಿಮಗೆ ನಿಜವಾಗಿ ಹೇಳುತ್ತೇನೆ, ತಿಳಿದದ್ದನ್ನು ಹೇಳುತ್ತೇವೆ, ನೋಡಿದಕ್ಕೆ ಸಾಕ್ಷಿ ಕೊಡುತ್ತೇವೆ. ನೀವು ನಮ್ಮ ಸಾಕ್ಷಿಯನ್ನು ಒಪ್ಪುವುದಿಲ್ಲ. ನಾನು ಭೂಲೋಕದಲ್ಲಿ ನಡೆಯುವ ಕಾರ್ಯವನ್ನು ಕುರಿತು ನಿಮಗೆ ಹೇಳುವಾಗ ನೀವು ನಂಬದೇ ಹೋದರೆ ಪರಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ಹೇಗೆ ನಂಬೀರಿ?' ಆದುದರಿಂದ ಪರಲೋಕದ ವಿಷಯಗಳನ್ನು ಕುರಿತು ನಿಮಗೆ ಹೇಳುವುದು ವ್ಯರ್ಥ ಮತ್ತು ನನ್ನ ಬೋಧನೆಯು ನಿಮಗೆ ಮೂರ್ಖವಾಗಿ ಕಾಣುವುದು. ನಾನು ಹೇಳುವ ಭೂಲೋಕದ ವಿಷಯುಗಳನ್ನು ಒಂದು ವೇಳೆ ಅರ್ಥಮಾಡಿಕೊಂಡರೂ ನೀನು ನನ್ನ ಶಿಷ್ಯನಾಗದೇ ಇರುವುದರಿಂದ ಪರಲೋಕದ ವಿಷಯಗಳನ್ನು ನಿನಗೆ ಹೇಳಿದರೆ ಪ್ರಯೋಜನವಿಲ್ಲ. ಪರಲೋಕದಿಂದ ಇಳಿದು ಬಂದ ನನ್ನೊಬ್ಬನಿಗೆ ಮಾತ್ರ ಪರಲೋಕದ ಸಂಗತಿಗಳು ಅರ್ಥವಾಗುವುದು. 'ಮನುಷ್ಯಕುಮಾರನೇ ಹೊರತು ಮತ್ತಾರೂ ಪರಲೋಕಕ್ಕೆ ಏರಿಹೋದವನಲ್ಲ.' ಹೀಗೆ ಪರಲೋಕದ ವಿಷಯವಾಗಿ ಜ್ಞಾನ ಹೊಂದಬೇಕಾದರೆ ಆತ್ಮನಿಂದ ಹುಟ್ಟಬೇಕು. ಆಗ ಅವು ಪರಲೋಕ ಜೀವಿಗಳಾಗುತ್ತವೆ.

ಹೀಗೆ ದೇವರ ರಾಜ್ಯದ ವಿಷಯವಾಗಿ ತಪ್ಪಾದ ಗ್ರಹಿಕೆಯಿಂದ ಜನರಿಗೆ ನಮ್ಮ ಕರ್ತನು ಬಹು ತಾಳ್ಮೆಯಿಂದ ಉಪದೇಶಿಸುತ್ತಿದ್ದನು. ಆದರೂ ಮಸ್ಸಿಯನ ರಾಜ್ಯದಲ್ಲಿ ಪಾಲುಹೊಂದವುದಕ್ಕೆ ಇಸ್ರಾಯೇಲ್ಯರನ್ನು ಆರಿಸಿಕೊಳ್ಳುವುದಕ್ಕಾಗಿ ಏಳು ವರ್ಷಗಳ ಅವಧಿಯು ಕೊಡಲ್ಪಟ್ಟಿತು. ಅವರು ಆಜ್ಞೆಗಳನ್ನು ಕೈಗೊಳ್ಳುವುದರಲ್ಲಿ ಸಿದ್ಧರಾಗಿಲ್ಲವೆಂದು ದೇವರಿಗೆ ಗೊತ್ತಿದ್ದರಿಂದ ಆ ಭಾಗ್ಯವು ಅವರಿಂದ ತೆಗೆಯಲ್ಪಟ್ಟು ಕ್ರಿಸ್ತನನ್ನು ಅಂಗೀಕರಿಸಿದಂಥ ಅನ್ಯ ಜನಾಂಗದವರಿಗೆ ಕೊಡಲ್ಪಟ್ಟಿತು. ಅವರಲ್ಲೂ ಒಂದು ಚಿಕ್ಕ ಹಿಂಡು ಮಾತ್ರ ಆ ಭಾಗ್ಯಕ್ಕೆ ಅರ್ಹರಾಗಿ ದೇವರ ರಾಜ್ಯದ ಮಹಿಮೆಯಲ್ಲಿ ಪಾಲುಗಾರರಾಗುವಂತೆ ಅವಕಾಶವಾಯಿತು.

ವಾಗ್ದಾನದ ರಾಜ್ಯದ ವಿಷಯವಾಗಿ ಹೆಸರಿನ ಕ್ರೈಸ್ತ ಸಭೆಗಳಲ್ಲಿ ಒಂದು ತಪ್ಪು ಭಾವನೆಯು ಬೆಳೆದು ನಿಂತಿದೆ. ಸಭೆಯೇ ದೇವರ ರಾಜ್ಯ ಅಲ್ಲಿನ ಸದಸ್ಯರೇ ಕೃಪೆಯಿಂದ ಅಕ್ರೈಸ್ತರ ನಡುವೆ ಕೆಲಸ ಮಾಡುತ್ತಿರುವರು ಎಂಬುದೇ ಅವರ ಭಾವನೆಯಾಗಿದೆ. ನಿಜ ಸಭೆಯೇ ದೇವರ ರಾಜ್ಯ ನಂಬುವವರ ಹೃದಯದಲ್ಲಿ ಕೃಪೆಯ ಕಾರ್ಯವನ್ನು ನಡೆಸುತ್ತಿರುವುದು ಎಂದು ಹೇಳುವುದರಲ್ಲೂ ಅರ್ಥವಿದೆ. ಆದರೆ ಅದನ್ನು ಕುರಿತು ಸ್ವಲ್ಪ ಯೋಚಿಸಿದರೆ ಮುಂದೆ ಸತ್ಯ ದೇವರ ರಾಜ್ಯವು ಬಂದಾಗ ಈ ಸಭೆಗಳು ತಿರಸ್ಕರಿಸಲ್ಪಡದೇ ಹೋದರೆ ಆಗ ನಮ್ಮ ಕರ್ತನು ಹೇಳಿರುವ ಮಾತುಗಳನ್ನು ಅಪೋಸ್ತಲರು ಮತ್ತು ಪ್ರವಾದಿಗಳು ಬರೆದಿರುವ ವಾಗ್ದಾನದ ವಿಷಯಗಳು ವ್ಯರ್ಥವಾಗುವುದು ಇದು ಅರ್ಥವಿಲ್ಲದ್ದು. ನಮ್ಮ ಕರ್ತನು ತನ್ನ ಸಾಮ್ಯದಲ್ಲಿ ಸಭೆಯನ್ನು ದೇವರ ರಾಜ್ಯ ಎಂದು ಪದೇ ಪದೇ ಸಂಬೋಧಿಸಿರುವರು. ಹಾಗೆಯೇ ಅಪೋಸ್ತಲರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ಪ್ರಿಯ ಕುಮಾರನ ರಾಜ್ಯದಲ್ಲಿ ಸೇರಿಸಿರುವನು. ಆ ರಾಜ್ಯವನ್ನು ಕ್ರಿಸ್ತನು ಆಳುವನು ಎಂದು ಹೇಳಿರುವನು. ಕ್ರಿಸ್ತನನ್ನು ಅಂಗೀಕರಿಸಿರುವವರೆಲ್ಲರೂ ಕ್ರಿಸ್ತನು ಆ ರಾಜ್ಯದ ಆಳ್ವಿಕೆಯ ಹಕ್ಕನ್ನು ಕೊಂಡು ಕೊಂಡಿರುವನು ಎಂದು ತಿಳಿದು ಅದು ಸ್ಥಾಪಿತವಾಗುವುದಕ್ಕೆ ಮೊದಲೇ ಕೃತಜ್ಞತಾಪೂರ್ವಕವಾಗಿ ಸಂತೋಷದಿಂದ ವಿಧೇಯತೆಯಿಂದ ಆತನನ್ನು ಆರಾಧಿಸುವವರಾಗಿದ್ದೇವೆ. ದೇವರ ರಾಜ್ಯದಲ್ಲಿ ಜಾರಿಗೆ ಬರುವ ನೀತಿಯನ್ನು ಸೈತಾನನಿಗೆ ವಶವಾಗಿರುವ ಇಹಲೋಕದ ರಾಜ್ಯಗಳಲ್ಲಿರುವ ನೀತಿಗೂ ಇರುವ ವ್ಯತ್ಯಾಸವನ್ನು ಆಗ ಎಲ್ಲರೂ ಗಮನಿಸುವರು. ದೇವರ ರಾಜ್ಯದ ವಾಗ್ದಾನವು ನಮ್ಮ ವಿಧೇಯತೆಯನ್ನು ಬದಲಾಯಿಸುವುದು ಮತ್ತು ಹೊಸ ರಾಜ್ಯದಲ್ಲಿ ಆತನ ಸಹ ಉದ್ಯೋಗಿಗಳಾಗುವ ಅವಕಾಶವು ದೊರೆಯುವುದು. 'ಕ್ರಿಸ್ತನ ರಾಜ್ಯವು ಸಮುದ್ರದಿಂದ ಸಮುದ್ರದವರೆಗೂ ಯೂಪ್ರಟೀಸ್ ನದಿಯಿಂದ ಭೂಮಿಯ ಕಟ್ಟಕಡೆಯವರಿಗೆ ಇರುವುದು 'ಕೀರ್ತ. 72:8 ಎಲ್ಲಾ ಜನಾಂಗದವರು ಆತನನ್ನು ಸೇವಿಸುತ್ತಾರೆ. ಭೂ ಪರಲೋಕದಲ್ಲಿರುವ ಸಮಸ್ತರೂ ಆತನಿಗೆ ಅಡ್ಡಬೀಳುವರು. ದಾನಿ. 7:27; ಫಿಲಿಪ್ಪ. 2:10 ಚಿಕ್ಕ ಹಿಂಡಿನ ಆರಿಸುವಿಕೆಯು ಈ ವಾಗ್ದಾನವನ್ನು ದೃಢಪಡಿಸುವುದು. ಕರ್ತನ ಸಾಮ್ಯಗಳನ್ನು ಎಚ್ಚರಿಕೆಯಿಂದ

ಪರಿಶೀಲಿಸಿದರೆ ರಾಜನು ಬರುವವರೆಗೆ ರಾಜ್ಯವು ಸ್ಥಾಪನೆಯಾಗುವುದಿಲ್ಲ ಶ್ರೀಮಂತನೊಬ್ಬನು ರಾಜ್ಯಾಧಿಕಾರವನ್ನು ಪಡೆದುಕೊಂಡು ಹಿಂತಿರುಗಿ ಬಂದ ಸಾಮ್ಯವು ಲೂಕ 19:11–15 ಕ್ರಿಸ್ತನ ರಾಜ್ಯ ಸ್ಥಾಪನೆಯನ್ನು ಸ್ಪಷ್ಟಪಡಿಸುವುದು. ಅನೇಕ ವರ್ಷಗಳ ಹಿಂದೆಯೇ ಕರ್ತನು ಸಭೆಗೆ ಕಳುಹಿಸಿದ ಸಂದೇಶವೇನೆಂದರೆ ನೀನು ಸಾಯಬೇಕಾದರೂ ನಂಬಿಗಸ್ತನಾಗಿರು ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು." ಪ್ರಕ. 2:10 ಮುಂದೆ ದೇವರ ರಾಜ್ಯದಲ್ಲಿ ರಾಜರುಗಳಾಗುವವರು ಈ ಲೋಕದಲ್ಲಿ ಆಳ್ವಿಕೆ ನಡೆಸುವುದಿಲ್ಲ ಎಂದು ತಿಳಿದುಬರುವುದು. ಆದುದರಿಂದ ಸದ್ಯದಲ್ಲಿರುವ ಸಭೆಗಳು ದೇವ ಪ್ರಭಾವಗಳಿಂದ ಕೂಡಿರುವ ದೇವರ ರಾಜ್ಯವಲ್ಲ. ಅದು ಇನ್ನು ತನ್ನ ಬಾಲ್ಯಾವಸ್ಥೆಯಲ್ಲಿಯೇ ಇರುವುದು. ಹೊಸ ಒಡಂಬಡಿಕೆಯಲ್ಲಿ ಅದಕ್ಕೆ ಸಂಬಂಧಿಸಿರುವ ಹೇಳಿಕೆಗಳೆಲ್ಲವೂ ಹಾಗೆಯೇ. ದೇವರ ರಾಜ್ಯವು ಲೋಕದವರಿಂದ ಹಿಂಸೆಗೆ ಗುರಿಯಾಗಿದೆ. ಅದರ ಅರಸನು ಹಿಯಾಳಿಸಲ್ಪಟ್ಟು ಮರಣ ಶಿಕ್ಷೆಯನ್ನು ಅನುಭವಿಸಿದನು. ಆದುದರಿಂದ ಯಾರ್ಯಾರು ಕ್ರಿಸ್ತನ ಹಿಂಬಾಲಕರಾಗುವರೋ ಅವರಿಗೆ ಶ್ರಮೆ ತಪ್ಪಿದ್ದಲ್ಲ. ಪ್ರತೀ ಹೆಜ್ಜೆಗೂ ನಿಂದನಾತಿರಸ್ಕಾರಕ್ಕೆ ಗುರಿಯಾಗುವರು. ಇದು ಸತ್ಯಸಭೆಯಲ್ಲಿ ಕಂಡು ಬರುವುದೇ ಹೊರತು ಹೆಸರಿನ ಸಭೆಗಳಿಗಲ್ಲ. ಇಂದು ಕಿಸ್ತನಿಗಾಗಿ ಶ್ರಮೆಪಡುವವರು ಮುಂದೆ ಆತನೊಡನೆ ಆಳುವರು.

ಯಾಕೋಬ 2:5ರಲ್ಲಿ ಹೇಳಿರುವಂತೆ "ತಾನು ವಾಗ್ದಾನ ಮಾಡಿದ ರಾಜ್ಯಕ್ಕೆ ಬಾಧ್ಯರಾಗಲು ಬಡವರನ್ನು ಈ ಲೋಕದಲ್ಲಿ ಗಣನೆಗೆ ಬಾರದವರನ್ನು ಆರಿಸಿಕೊಂಡಿರುವನು. ಧನವಂತರು ದೇವರ ರಾಜ್ಯದಲ್ಲಿ ಸೇರುವುದು ಎಷ್ಟೋ ಕಷ್ಟ. ಮಾರ್ಕ 10:23 ಎಂದು ಯೇಸು ಹೇಳಿರುವನು. ಅದರಿಂದ ಇದು ಈ ಲೋಕದಲ್ಲಿ ಆಳುತ್ತಿರುವ ಹೆಸರಿನ ಕ್ರೈಸ್ತ ಸಭೆಗಳಿಗಲ್ಲ. ಯಾಕೆಂದರೆ ಧನವಂತರು ಅದರಲ್ಲಿ ಸೇರಿರುವರು. ಪೇತ್ರನು ದೇವರ ರಾಜ್ಯದಲ್ಲಿ ಪಾಲುಗಾರರಾಗುವವರು ತಾಳ್ಮೆಯಿಂದಲೂ, ಸದ್ಗುಣಶೀಲರಾಗಿಯೂ, ನಂಬಿಗಸ್ತರಾಗಿಯೂ ಇರಬೇಕೆಂದು ಹೇಳುತ್ತಾನೆ. ಆದುದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಅದುಕೊಂಡಿದ್ದನ್ನೂ ದೃಢಪಡಿಸಿ ಕೊಳ್ಳುವುದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವುದಿಲ್ಲ ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು. 2 ಪೇತ್ರ 1:10, 11 ಪೌಲನು ರೋಮಾ. 14:17ರಲ್ಲಿ ಹೇಳಿರುವುದನ್ನು ಕೆಲವರು ಒಂದು ಲಕ್ಷಣ ರಾಜ್ಯ ಎಂದು ತಿಳಿದಿರುವರು. ಆದರೆ ಅದು ಹಾಗಲ್ಲ. ತಿನ್ನುವುದು ಕುಡಿಯುವುದು ದೇವರ ರಾಜ್ಯಕ್ಕೆ ಬಾಧ್ಯವಲ್ಲ. ದೇವರ ರಾಜ್ಯದಲ್ಲಿ ಎಲ್ಲಾ ಸೌಕರ್ಯಗಳು ಇವೆ ಎಂಬುದನ್ನು ಮರೆಯಬಾರದು. ದೇವರ ರಾಜ್ಯಕ್ಕೆ ಬಾಧ್ಯಸ್ಥರಾಗುವ ನಂಬಿಕೆ ಆದಿ ಸಭೆಯವರಲ್ಲಿ ಬಲವಾಗಿದ್ದಿತು. ಆದುದರಿಂದ ಬಂದ ಸಂಕಷ್ಟಗಳನ್ನೆಲ್ಲಾ ತಾಳ್ಮೆಯಿಂದ ಸಹಿಸಿಕೊಂಡು ಮುಂದೆ ಸಿಕ್ಕುವ ಮಹಾ ಪದವಿಯಲ್ಲಿ ದೃಢ ನಂಬಿಕೆಯನ್ನಿಟ್ಟುಕೊಂಡಿರುವರು. ಏಳು ಸಭೆಗಳಿಗೆ ಕೊಟ್ಟ ಭರವಸೆಯು ಉತ್ಸಾಹದಾಯಕವಾಗಿ ಶಕ್ತಿಯುತವಾಗಿ ಪ್ರಕಾಶಿಸುತ್ತದೆ. ನಾನು ಜಯ ಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕುಳಿತುಕೊಂಡೆನು. ಹಾಗೆಯೇ ಜಯ ಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು. ಪ್ರಕ. 3:21 ಈ ರೀತಿಯ ಗೌರವ ವಾಗ್ದಾನಗಳನ್ನು ಹೊಂದಬೇಕಾದರೆ ಅದು ಈ ಲೋಕದಲ್ಲಿ ಕಂಡುಬರುವುದಿಲ್ಲ. ಎಲ್ಲವನ್ನು ಜಯಿಸಿ ಸತ್ತ ಮೇಲೆ ದೊರಕುವುದು. ಪ್ರಕ. 20:6 ಆದರೆ ಮಾನವಸ್ವಭಾವವು ಶ್ರಮೆಯನ್ನು ಅನುಭವಿಸದೆಯೇ ಗೌರವದ ಶಕ್ತಿಯುತವಾದ ಆಡಳಿತವನ್ನು ಹೊಂದಲುಪ್ರಯತ್ನಿಸುತ್ತದೆ. ಆದಿ ಸಭೆಯಲ್ಲಿಯೂ ಅಪೋಸ್ತಲರಲ್ಲಿ ಕೆಲವರು ಮುಂದಿನ ಕಾಲದ ಪ್ರಭಾವ ಮಹಿಮೆಗಳನ್ನು ತಮ್ಮಲ್ಲಿಯೇ ಹಂಚಿಕೊಂಡಿದ್ದರು. ಇದರಿಂದ ಅವರು ತಮ್ಮನ್ನು ಲೋಕವು ಗೌರವಿಸಬೇಕೆಂದು ಮತ್ತುಸಭೆಯು ಆಳುವ ಕಾಲ ಬಂದಿತೆಂದು ತಿಳಿಯಲಾರಂಭಿಸಿದರು. ಈ ರೀತಿಯ ಅಭಿಪ್ರಾಯವು ಕ್ರೈಸ್ತ ಸಭೆಗೆ ಧಕ್ಕೆ ತರುವುದೆಂದು ಮತ್ತು ತಮ್ಮನ್ನೇ ಸಜೀವ ಯಜ್ಞವಾಗಿ ಅರ್ಪಿಸಲು ಹಿಂಜರಿಯುವರೆಂದು ಪೌಲನು ಹೀಗೆ ಬರೆದಿರುವನು. 'ಅವರಿಗೆ ಪರಿಹಾಸ್ಯಕರವಾಗಿ ಈಗಾಗಲೇ ಐಶ್ವರ್ಯವಂತರಾದಿರಿ. ನಮ್ಮ ಸಹಾಯವಿಲ್ಲದೆ ಅರಸರಾದಿರಿ ನೀವು ನಿಜವಾಗಿ ಅರಸರಾಗಿದ್ದರೆ ನಮಗೆ ಎಷ್ಟೋ ಆನಂದವಾಗುತ್ತಿತ್ತು. ಆಗ ನಾವೂ ಸಹ (ಶ್ರಮೆ ಪಡುತ್ತಿರುವ ಅಪೋಸ್ತಲರು) ನಿಮ್ಮೊಂದಿಗೆ ಅರಸರಾಗುತ್ತಿದ್ದೆವು. 1 ಕೊರಿ. 4:8 ಅವರು ಕ್ರೈಸ್ತರಾಗಿದ್ದರೂ ಅದರಿಂದ ಹೊರಗೆ ಬಂದು ಹೆಚ್ಚು ಮಾನ ಸನ್ಮಾನಗಳನ್ನು ಹೊಂದಲು ಅಪೇಕ್ಷಿಸುವವರಾಗಿದ್ದರು. ಇವರು ಕ್ರೈಸ್ತ ಭಕ್ತರಾಗಿದ್ದರೆ ಹೀಗೆ ಮಾಡುತ್ತಿರಲಿಲ್ಲವೆಂದು ಪೌಲನು ಅರಿತಿದ್ದನು. ಇದಲ್ಲದೆ ಪೌಲನು ಅವರಿಗೆ ಈಗಾಗಲೇ ರಾಜ್ಯವು ಪ್ರಾರಂಭವಾಗಿದ್ದರೆ ನಾನು ಆಳುತ್ತಿದ್ದೆನು. ಅದು ಇನ್ನೂ ಬಂದಿಲ್ಲವಾದ್ದರಿಂದ ಸತ್ಯಕ್ಕೋಸ್ಕರ ನಾನು ಇನ್ನೂ ಶ್ರಮೆಪಡುತ್ತಿರುವೆನು ಎಂದು ಬರೆದಿರುವನು. ಮಾತ್ರವಲ್ಲದೆ ನಾವಂತೂ ಕ್ರಿಸ್ತನ ನಿಮಿತ್ತ ಹುಚ್ಚರಾಗಿದ್ದೇವೆ. ನೀವು ಕ್ರಿಸ್ತನಲ್ಲಿ ಬುದ್ಧಿವಂತರಾಗಿದ್ದೀರಿ ನಾವು ಬಲಹೀನರು. ನೀವು ಬಲಿಷ್ಠರು ನೀವು ಮಾನಸಾಲಿಗಳು ನಾವು ಮಾನಹೀನರು' ಎಂದು ತಿಳಿಸಿರುವನು. ಅವರನ್ನು ಅವಮಾನಪಡಿಸಲು

ಇದನ್ನು ಬರೆದಿಲ್ಲ. ಒಂದು ಉತ್ತಮ ಉದ್ದೇಶವನ್ನು ತಿಳಿಸುವುದಕ್ಕಾಗಿ ಬರೆದನು. ಆದುದರಿಂದ ನೀವು ಮಾನ ಹೊಂದಬೇಕಾದರೆ ಲೋಕದ ಗೌರವ ಮಾರ್ಗದಲ್ಲಿ ನಡೆದರೆ ಅದು ಎಂದಿಗೂ ದೊರಕುವುದಿಲ್ಲ. ಶ್ರಮೆಪಟ್ಟು ತನ್ನನ್ನು ನಿರಾಕರಿಸಿ ಇಕಟ್ಟಾದ ಮಾರ್ಗದಲ್ಲಿ ನಡೆದರೆ ದೇವರ ರಾಜ್ಯದಲ್ಲಿ ಬಾಧ್ಯಸ್ಥರಾಗಲು ಸಾಧ್ಯ. ಪೌಲನು ಎಚ್ಚರಿಸುವುದೇನೆಂದರೆ ನನ್ನನ್ನು ಹಿಂಬಾಲಿಸಿ ಈಗ ಶ್ರಮೆ ಹೊಂದಿ ಸಂಕಟಗಳನ್ನು ತಾಳಿದರೆ ಮುಂದೆ ನನ್ನ ಜೊತೆಯಲ್ಲಿ ಜೀವವೆಂಬ ಜಯಮಾಲೆಯಲ್ಲಿ ಪಾಲುಗಾರರಾಗುವಿರಿ. ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆದಿನದಲ್ಲಿ ನನಗೆ ಕೊಡುವನು. ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು. 1 ಕೊರಿ. 4:10–17;2 ತಿಮೋ. 4:8 ಆದಿ ಸಭೆಯು ನಂಬಿಕೆಯಿಂದ ಶ್ರಮೆಯನ್ನು ಸಹಿಸಿಕೊಂಡಿತು. ಆದರೆ ಕಾಲ ಕ್ರಮೇಣ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡು ಸಭೆಯು ಲೋಕವನ್ನು ಜಯಿಸುವುದು. ಭೂಮಿಯ ಮೇಲೆ ಪರಲೋಕದ ರಾಜ್ಯವನ್ನು ಸ್ಥಾಪಿಸುವುದು ಕ್ರಿಸ್ತನ ಪುನರಾಗಮನಕ್ಕೆ ಮುಂಚೆಯೇ ಅದು ಜನಾಂಗಗಳನ್ನು ಆಳುವುದು ಇದೇ ಅದರ ತಿರುಳು. ಹೀಗಾಗಿ ಸಭೆಗಳಲ್ಲಿ ಡಾಂಬಿಕತನ ಹೆಚ್ಚಿ ಲೌಕಿಕದ ಮದ ಐಶ್ವರ್ಯಕ್ಕೆ ಮನಸೋತಿತು. ಕ್ರಮವಾಗಿ ಪೋಪನ ರಾಜ್ಯವು ಸ್ಥಾಪಿತವಾಗಿ ಎಲ್ಲಾ ಜನರು ಅದನ್ನು ಗೌರವಿಸಿ ಮನ್ನಣೆ ಕೊಡಬೇಕೆಂದಾಯಿತು. ಹೀಗೆ ಪೋಪಿಗೆ ಒಂದು ಕಾಲದವರೆಗೆ ಯೂರೋಪಿನ ಚಕ್ರವರ್ತಿಗಳ ಕಿರೀಟವನ್ನು ತೆಗೆಯುವುದಕ್ಕೂ ಹಾಕುವುದಕ್ಕೂ ಅಧಿಕಾರವಿತ್ತು. ಇಂತಹ ಡಾಂಭಿಕ ಅಧಿಕಾರವು ಈಗ ಪ್ರಾಟಿಸ್ಟೆಂಟ್ ಸಭೆಗಳಲ್ಲೂ ಕಂಡುಬರುತ್ತಿರುವುದು. ಇವರು ಕೊರಿಂಥದವರ ಹಾಗೆ ಶ್ರೀಮಂತರುಗಳಾಗಿ ಅರಸುಗಳಂತೆ ಆಳುವವರಾಗಿದ್ದಾರೆ. ಇವರನ್ನು ಕುರಿತು ಕ್ರಿಸ್ತನೇ ವಿವರಿಸಿರುವನು. ಪ್ರಕ. 3:17,18 ಇವರು ಹೆಸರಿನ ಕ್ರೈಸ್ತರು (ಹಣಜಿ) ಕ್ರಿಸ್ತನ ಶಿಷ್ಯರಿಗಿಂತಲೂ ದೂರವಾಗಿದ್ದಾರೆ. ಇವರು ತಮ್ಮನ್ನು ಸಜೀವ ಯಜ್ಞವಾಗಿ ಅರ್ಪಿಸಿಕೊಳ್ಳುವದಿಲ್ಲ. ಸತ್ಯಕ್ಕೋಸ್ಕರ ಹಿಂಸೆಯನ್ನು ತಾಳುವುದಿಲ್ಲ. ಆದರೆ ಉಪವಾಸಗಳನ್ನ ಮಾತ್ರ ಮಾಡುತ್ತಾರೆ. ಇವರು ಇಹಲೋಕದ ರಾಜ್ಯಗಳೊಂದಿಗೆ ಆಳುತ್ತಿರುವರು. ಮುಂದೆ ಸ್ಥಾಪಿಸಲ್ಪಡುವ ದೇವರ ರಾಜ್ಯದಲ್ಲಿ ಇಂಥವರಿಗೆ ಪಾಲೇ ಇಲ್ಲ. ಅಪೋಸ್ತಲರು ಹೇಳಿರುವಂತೆ ಕ್ರಿಸ್ತನು ಬರುವವರೆಗೆ ರಾಜ್ಯವು ಬರುವುದಿಲ್ಲ. ಪ್ರಕ. 20:6; 3:21;2 ತಿಮೋ. 2:12 ಇದರಿಂದ ಪರಲೋಕ ರಾಜ್ಯವು ಮಹಿಮಾಧಿಕಾರಗಳನ್ನು ಹೊಂದುವವರೆಗೂ ಶ್ರಮೆಪಡುತ್ತಿರಬೇಕು.

**ದೇವರ ರಾಜ್ಯದ ಎರಡು (ಗುಣಲಕ್ಷಣಗಳು) ಸ್ವಭಾವಗಳು**

ನಮ್ಮ ಕ್ರಿಸ್ತನು ಹೇಳಿರುವಂತೆ ಹೊರಗಿನ ತೋರಿಕೆಯಿಂದ ದೇವರ ರಾಜ್ಯವು ಕಾಣಿಸಿಕೊಳ್ಳುವುದಿಲ್ಲ ಆದರೆ ತಕ್ಕ ಕಾಲದಲ್ಲಿ ಎಲ್ಲರಿಗೂ ಪ್ರಕಟವಾಗುವುದು. ಅದು ಸಂಪೂರ್ಣವಾಗಿ ಸ್ಥಾಪಿತವಾದಾಗ, ದೇವರ ರಾಜ್ಯವು ಎರಡು ಭಾಗವುಳ್ಳದಾಗಿರುತ್ತದೆ. ಆತ್ಮಿಕ ಅಥವಾ ಸ್ವರ್ಗೀಯ ಸ್ವಭಾವ ಮತ್ತು ಭೂಲೋಕ ಅಥವಾ ಮಾನವೀಯ ಸ್ವಭಾವ. ಆತ್ಮಿಕ ಭಾಗವು ಮಾನವರಿಗೆ ಅದೃಶ್ಯವಾಗಿರುವುದು ಅದು ದೈವಿಕ ಸ್ವಭಾವವಾಗಿರುವುದರಿಂದ ಅದನ್ನು ಯಾರು ಕಂಡಿಲ್ಲ ಮತ್ತು ಕಾಣಲಾರರು 1 ತಿಮೋ. 6:16; ಯೋಹಾನ 1:18 ಆದರೂ ಅದರ ಇರುವಿಕೆಯನ್ನು ಶಕ್ತಿಯನ್ನು ಭೂಲೋಕದಲ್ಲಿರುವ ಅವರ ಪ್ರತಿನಿಧಿಗಳ ಮೂಲಕ ಕಂಡುಬರುವುದು. ದೇವರ ರಾಜ್ಯದಲ್ಲಿ ಆತ್ಮಿಕ ಜೀವಿಗಳಾಗಿರುವವರು ಈ ಸುವಾರ್ತಾಯುಗದಲ್ಲಿ ದೇವಜನರಾಗಿದ್ದು ಕ್ರಿಸ್ತನ ದೇಹದ ಮಹಿಮೆ ಹೊಂದಿದವರಾಗಿರುತ್ತಾರೆ. ದೇವಜನರ ಪುನರುತ್ಥಾನ ಮತ್ತು ಅವರ ಘನಪಡಿಸುವಿಕೆ ಇವು ಮೊದಲು ನಡೆಯುವುದು ಅಗತ್ಯ. ಇದಾದ ಮೇಲೆಯೇ ಇವರ ಮೂಲಕ ಲೋಕದ ಸರ್ವಜನಾಂಗವನ್ನು ಆಶೀರ್ವದಿಸಲಾಗುವುದು. ಇಬ್ರಿಯ 11:39, 40 ಇದೇ ಮೊದಲನೆಯ ಪುನರುತ್ಥಾನ ಪ್ರಕ. 20:6 ದೈವ ಶಕ್ತಿಯಿಂದಲೇ ಇವರು ದೈವ ಸ್ವಭಾವವನ್ನು ಪಡೆಯುವರು. ಅನಂತರ ಪರಲೋಕದಲ್ಲಿ ಮತ್ತು ಭೂಲೋಕದಲ್ಲಿ ಮುಂದಿನ ಕಾರ್ಯಗಳು ನಡೆಯುವವು. ಮತ್ತಾ 28:18 ಕೊಲೆಸ್ಸೆ 1:20; ಎಫೆಸ. 1:10; ಫಿಲಿ. 2:10 1 ಕೊರಿ. 6:3 ಭೂಲೋಕದಲ್ಲಿ ದೇವರ ರಾಜ್ಯಕ್ಕೆ ಸಂಬಂಧಪಟ್ಟ ಅಧಿಕಾರವನ್ನು ಮಾನವರಿಗೆ ಕೊಡಲಾಗುವುದು. ಇವರು ದೇವರಿಂದ ಆ ಪದವಿಯನ್ನು ಹೊಂದಿರುತ್ತಾರೆ. ಈ ಗುಂಪಿನವರನ್ನು ಸುವಾರ್ತಾಯುಗದಲ್ಲಿ ಪ್ರತ್ಯೇಕಿಸಲಾಗಿದ್ದ ನಂಬಿಗಸ್ತರಾಗಿ ಕಂಡುಬಂದಿರುವರು. ಆದುದರಿಂದ ಪುನರುತ್ಥಾನವಾದ ಮೇಲೆ ನ್ಯಾಯ ವಿಚಾರಣೆಗೆ ಒಳಗಾಗದೆ ನಂಬಿಕೆ ಬಹುಮಾನವನ್ನು ಪಡೆದು ಕ್ಷಣಮಾತ್ರದಲ್ಲಿ ಪರಿಪೂರ್ಣ ಮಾನವನಾಗುವರು. (ಇವರಲ್ಲದೆ ಉಳಿದವರು ಕ್ರಿಸ್ತನ ಸಾವಿರ ವರ್ಷಗಳ ಆಳ್ವಿಕೆಯಲ್ಲಿ ಕ್ರಮಕ್ರಮವಾಗಿ ಪರಿಪೂರ್ಣರಾಗುವರು.) ಆತ್ಮಿಕ ಜೀವಿಗಳಾದವರು ಕ್ರಿಸ್ತನ ಪ್ರತಿನಿಧಿಗಳಾಗಿ ಮಾನವ ಜನಾಂಗವನ್ನು ರಕ್ಷಿಸಿ ಆಶೀರ್ವದಿಸುವ ಮಹಾಕಾರ್ಯವನ್ನು ಕೂಡಲೇ ಪ್ರಾರಂಬಿಸುವರು. ಕ್ರಿಸ್ತನ ಪ್ರತಿನಿಧಿಗಳಾಗಲು ಆತ್ಮಿಕ ಸ್ವಭಾವವು ಹೇಗೆ ಅವಶ್ಯವೊ ಹಾಗೆ ಮಾನವರ ನಡುವೆ ಕಾರ್ಯನಡೆಸಲು ಮಾನವೋತ್ತಮ ಸ್ವಭಾವವು ಅಗತ್ಯ. ಇವರು ಮಾನವರ ಮಧ್ಯೆ ಇದ್ದು ಕೆಲಸ ಮಾಡುತ್ತಾ ಅವರಿಗೆ

ಮಾನವೋತ್ತಮತೆಯ ಪ್ರಭಾವ ಮಾದರಿಯಾಗಿದ್ದು ಅವರನ್ನು ಪ್ರಚೋದಿಸುವವರಾಗಿರುತ್ತಾರೆ. ಪೂರ್ವ ಕಾಲದ ಪಿತೃಗಳು ಭೂಲೋಕದ ತೋರಿಕೆಯಲ್ಲಿರುತ್ತಾರೆ. ಇವರನ್ನು ಕುರಿತು ಅಪನಂಬಿಗಸ್ತರಾದ ಯೆಹೂದ್ಯರಿಗೆ ಯೇಸು ನೀವು ದೇವರ ರಾಜ್ಯದಲ್ಲಿ ಅಬ್ರಹಾಮ ಇಸಾಕ್ ಯಾಕೋಬ ಮತ್ತು ಎಲ್ಲಾ ಪ್ರವಾದಿಗಳನ್ನು ನೋಡುತ್ತೀರಿ ಎಂದು ಹೇಳಿದನು. ಆದರೆ ಯೇಸುವಾಗಲಿ ಅಪೋಸ್ತಲರಾಗಲಿ ಅಬ್ರಹಾಮನೊಂದಿಗೆ ಕಾಣಿಸಿಕೊಳ್ಳುವರು ಎಂದು ಹೇಳದೆ ಇರುವುದನ್ನು ಗಮನಿಸಬೇಕು. ಭೂಲೋಕದ ಸ್ವಭಾವದವರೊಂದಿಗೆ ಮಾತ್ರ ಮನುಷ್ಯರು ವ್ಯವಹರಿಸಬಹುದೆ ಹೊರತು ಆತ್ಮಿಕ ಜೀವಿಗಳೊಂದಿಗೆ ಬೆರೆಯಲಾಗುವುದಿಲ್ಲ.ಆಗ ಅನೇಕರು ಅಂಥ ಒಂದು ಉತ್ತಮ ಪದವಿಯನ್ನು ತಿರಸ್ಕರಿಸಿದೆವಲ್ಲಾ ಎಂದು ದುಃಖಿಸುವರು. ಈ ಎರಡು ಸ್ವಭಾವದವರು ಒಂದಕ್ಕೊಂದು ಹೊಂದಿಕೊಂಡು ಯಾವ ರೀತಿಯಲ್ಲಿ ಕೆಲಸ ಮಾಡುವರು ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ. ಆದರೆ ಹಿಂದೆ ದೇವರು ಮೋಶೆ, ಆರೋನನು, ಯೆಹೋಶುವನು ಮತ್ತು ಪ್ರವಾದಿಗಳ ಮೂಲಕ ಇಸ್ರಾಯೇಲ್ಯರೊಂದಿಗೆ ವ್ಯವಹರಿಸಿದ್ದೇ ಒಂದು ಉದಾಹರಣೆಯಾಗಿದೆ. ಆದರೆ ಮುಂದಿನ ಯುಗದಲ್ಲಿ ಒಂದು ಮಿಗಿಲಾದ ಕಾರ್ಯ ನಡೆಯಬೇಕಾಗಿದೆ. ಆಂದರೆ ಸತ್ತವರ ಪುನರುತ್ಥಾನವಾಗಬೇಕು ಮತ್ತು ನಂಬಿಗಸ್ತರು ಪರಿಪೂರ್ಣತೆಯನ್ನು ಪಡೆಯಬೇಕು. ಮಾತ್ರವಲ್ಲದೆ ಮಾನವರಲ್ಲಿ ಒಂದು ಉತ್ತಮ ರಾಜ್ಯಾಡಳಿತವನ್ನು ಸ್ಥಾಪಿಸಿ ಉತ್ತಮ ಅಧಿಕಾರಿಗಳನ್ನು ನೇಮಿಸಿ ರಾಜಕಾರ್ಯಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ಪ್ರತಿಯೊಬ್ಬರಿಗೂ ಉತ್ತಮ ವಿದ್ಯಾಭ್ಯಾಸ ಅವಶ್ಯ. ಈ ಉತ್ತಮ ಕಾರ್ಯಕ್ಕಾಗಿ ಪೂರ್ವಕಾಲದ ಪಿತೃಗಳನ್ನು ನೇಮಿಸಲಾಗುವುದು. ಈ ಲೋಕದ ರಾಜ್ಯಗಳೆಲ್ಲವು ನಾಶವಾಗಿ ಇಹಲೋಕಾಧಿಪತಿಯಾದ ಸೈತಾನನನ್ನು ಬಂಧಿಸಿದ ಕೂಡಲೇ ಈ ಮಹಾಕಾರ್ಯವು ಪ್ರಾರಂಭವಾಗುವುದು. ಹೀಗೆ ಇವರು ದೈವ ಪ್ರತಿನಿಧಿಗಳಾಗಿ ಮಾನವರ ಸಹಕಾರ ಮತ್ತು ಸನ್ಮಾನವನ್ನು ಪಡೆಯುವರು. ಹೀಗೆ ಕ್ರಮಕ್ರಮವಾಗಿ ಭೂಲೋಕದ ಸ್ವಭಾವದ ಮಾನವರು ಪರಿಪೂರ್ಣರಾಗಿ ಕ್ರಿಸ್ತನನ್ನು ಅರಿತುಕೊಳ್ಳುವರು. ಆಶೀರ್ವಾದದ ಕಾರ್ಯ ಮುಂದುವರಿದಂತೆಲ್ಲಾ ಮಾನವರು ಮಾನ ಸನ್ಮಾನಗಳನ್ನು ಪಡೆದು ಸಂತೋಷಿಸುವರು. ಕ್ರಿಸ್ತನ ಸಾವಿರ ವರ್ಷಗಳ ಆಳ್ವಿಕೆಯ ಮುಕ್ತಾಯದ ವೇಳೆಗೆ ಸಮಸ್ತವನ್ನು ಸರಿಮಾಡುವ ಕಾರ್ಯವು ಮುಗಿಯುವದು. ಆಗ ಎಲ್ಲಾ ಮಾನವರು ನಿರ್ದೋಷಿಗಳಾಗಿ ಯೆಹೋವನ ಮುಂದೆ ನಿಲ್ಲುವರು. ಮತ್ತಾ. 25:46; ಪ್ರಕ. 20:9 ಈ ಕಾರ್ಯಗಳನ್ನು ನಡೆಸಿದವರು ದೇವರ, ಕ್ರಿಸ್ತನ, ದೇವದೂತರ ಮತ್ತು ಅವರ ಜೊತೆಗಾರರೊಂದಿಗೆ ನಿಂತು ಯುಗಯುಗಾಂತರಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು. ಇವರ ಕೆಲಸ, ಶ್ರಮೆ, ರೀತಿಗಳನ್ನು ಮಾನವರಾರು ಮರೆಯುವುದಿಲ್ಲ. ಭೂಲೋಕದ ಪಿತೃಗಳ ಮಹಿಮೆ ಇಷ್ಟುಮಟ್ಟಿಗಿದ್ದರೆ ಪರಲೋಕದವರ ಮಹಿಮೆ ಎಲ್ಲದಕ್ಕಿಂತಲೂ ಹೆಚ್ಚಾಗಿರುವುದು. ಭೂಲೋಕದ ಪಿತೃಗಳು ನಕ್ಷತ್ರಗಳ ಹಾಗೆ ಹೊಳೆದರೆ ಪರಲೋಕದವರು ತೇಜೋಮಯವಾದ ಆಕಾಶ ಮಂಡಲದ ಸೂರ್ಯನಂತೆ ಪ್ರಕಾಶಿಸುವರು. ದಾನಿ. 12:3; ಕೀರ್ತನೆ 112:6 ಭೂ ಪರ ಲೋಕಗಳ ಸಮಸ್ತ ಗೌರವವನ್ನು ಕ್ರಿಸ್ತನ ಪಾದಗಳ ಬಳಿ ಇಡಲಾಗುತ್ತದೆ. ಆದರೆ ಯುಗಯುಗಾಂತರಗಳಲ್ಲಿಯೂ ಪ್ರಕಟವಾಗುವ ಪ್ರಭಾವವನ್ನು ಊಹಿಸಲು ಅಸಾಧ್ಯ ರೋಮಾ. 3:18; ಎಫೆಸ. 2:7–12.

ದೇವರ ರಾಜ್ಯದ ಈ ಎರಡು ಸ್ವಭಾವಗಳ ಮೂಲಕ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ನೆರವೇರುವುದು. 'ಭೂಮಿಯ' ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವುದು 'ನಿನ್ನ ಸಂತತಿಯನ್ನು ಹೆಚ್ಚಿಸೇ ಹೆಚ್ಚಿಸುವೆನು; ಅದನ್ನು ಆಕಾಶದ ನಕ್ಷತ್ರಗಳಂತೆಯೂ ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು.' ಇದರಲ್ಲಿ ಉಸುಬಿನದು ಭೂಲೋಕಕ್ಕೆ ಸಂಬಂಧಿಸಿದ್ದು, ಆಕಾಶದ ನಕ್ಷತ್ರಗಳು ಪರಲೋಕಕ್ಕೆ ಸಂಬಂಧಿಸಿದ್ದು, ಎರಡು ಆಶೀರ್ವಾದಗಳು ಭೂಲೋಕಕ್ಕೆ ಸಂಬಂಧ ಪಟ್ಟದ್ದು. ಈ ಎರಡನ್ನು ದೇವರು ಆದಿಯಿಂದಲೇ ನಿಷ್ಕರ್ಷಿಸಿದ್ದನು. ಅಬ್ರಹಾಮನ ಮೂಲಕ ಭೂಲೋಕದ್ದು ಕಂಡುಬಂದಿತು. ಈ ಪ್ರಾಕೃತ ಸಂತಾನದಿಂದಲೇ ದೇವರು ಆತ್ಮೀಯ ಸಂತಾನವಾಗಿ ಅಪೋಸ್ತಲರು ಮತ್ತು ಸತ್ಯ ಮಕ್ಕಳನ್ನು ಆರಿಸಿಕೊಂಡಿರುವನು. ಈ ಸತ್ಯ ಮಕ್ಕಳೇ ಮುಂದೆ ಲೋಕದ ಸರ್ವಜನಾಂಗದವರನ್ನು ಆಶೀರ್ವದಿಸುವರು.

ಪೌಲನು ರೋಮಾ 11:17 ರಲ್ಲಿ ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯ ವಿಷಯವಾಗಿ ಹೇಳುವುದೇನೆಂದರೆ ಈ ಒಡಂಬಡಿಕೆಯ ಬುಡದಿಂದ ಇಸ್ರಾಯೇಲ್ಯರು ಬೆಳೆದರು. ಆದರೆ ಇವರು ಅಪನಂಬಿಗಸ್ತರಾದುದರಿಂದ ಪ್ರಾಕೃತ ರೆಂಬೆಗಳನ್ನು ಕಡಿದರು. ಆ ಬುಡದ ರೆಂಬೆಗೆ ಅನ್ಯರನ್ನು ಕಸಿಕಟ್ಟಲಾಯಿತು. ಮೊದಲನೆಯದು ಭೂಲೋಕ (ಮಾನವ) ಎರಡನೇದು ಪರಲೋಕ (ಆತ್ಮೀಕ) ಇದರಲ್ಲಿ ವಿಂಗಡವಾದ ರೆಂಬೆಗಳಿರುವುವು. ಪುನರುತ್ಥಾನದಲ್ಲಿ ಇವು ಉತ್ತಮ ಫಲಗಳನ್ನು ಬಿಡುವವು. ಬೆಳವಣಿಗೆಯ ಕ್ರಮದಲ್ಲಿ ಮೊದಲು ಪ್ರಾಕೃತವಾದದ್ದು ನಂತರ ಆತ್ಮಿಕವಾದದ್ದು ಆದರೆ ಮುಂದೆ ಸ್ಥಾನ ಪಡೆಯುವಾಗ ಮೊದಲಿನದು ಕಡೆಯದಾಗುವುದು ಕಡೆಯದು ಮೊದಲಿನದಾಗುವುದು ಮತ್ತಾ. 19:30; ಲೂಕ 16:16. ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ಸ್ತೆಫನನು ಹೀಗೆ ಹೇಳಿರುವನು ಅ.ಕೃ. 7:5 ಇಸ್ರಾಯೇಲ್ಯರು ಅದನ್ನು

ನಂಬಿದ್ದರು ಅದು ಭೂಲೋಕದ್ದಾಗಿತ್ತು. ದೇವರು ಅದನ್ನು ಅಬ್ರಹಾಮನಿಗೆ ಸ್ವಾಸ್ತ್ಯವಾಗಿ ಕೊಡುವೆನೆಂದು ವಾಗ್ದಾನ ಮಾಡಿದನು. ಆದಿ. 13:14–17ರಲ್ಲಿ ವಾಗ್ದಾನವನ್ನು ಓದಿರಿ. ಈ ವಾಗ್ದಾನವು ಇನ್ನೂ ನೆರವೇರಲಿಲ್ಲವೆಂದು ಸ್ತೆಫನನು ಹೇಳುತ್ತಾನೆ. 'ಅವನಿಗೆ ಕಾಲಿಡುವಷ್ಟು ಭೂಮಿಯನ್ನು ಸ್ವಾಸ್ಥ್ಯವಾಗಿ ಕೊಡದೆ ಅವನಿಗೆ ಮಕ್ಕಳು ಇನ್ನೂ ಇಲ್ಲದಿರುವಾಗ ದೇವರು ಅವನ ಸಂತತಿಗೆ ವಾಗ್ದಾನ ಮಾಡಿದನು.

ಪೌಲನು ಪರಲೋಕದ ವಾಗ್ದಾನಗಳು ನೆರವೇರುವ ತನಕ ಭೂಲೋಕದ ವಾಗ್ದಾನಗಳು ನೇರವೇರುವುದಿಲ್ಲವೆಂದು ತಿಳಿಸುತ್ತಾನೆ. ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡರೂ ವಾಗ್ದಾನದ ಫಲವನ್ನು ಹೊಂದಲಿಲ್ಲ. ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು. ಇಬ್ರಿಯ 11:13, 39, 40 ಆದುದರಿಂದ ನಮ್ಮ ರಕ್ಷಕನೂ ವಿಮೋಚಕನು ಆತ್ಮೀಯ ಮಾನವರ ವಿಮೋಚನೆಗಾಗಿ ಮಾನವರೂಪದಲ್ಲೇ ಬಲಿಯಾಗಿ ಅರ್ಪಿತವಾಗಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಹೊಂದಿ ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟನು. ರೋಮಾ. 12:1; ಗಲಾತ್ಯ 3:29. ಸತ್ಯಸಭೆಯ ಆತ್ಮಿಕವಾದ ಮೇಲೆ ಎಲ್ಲಾ ಆಶೀರ್ವಾದಗಳು ಬರುವವು. ಇಸ್ರಾಯೇಲ್ ಎಂಬ ಬಿದ್ದು ಹೋದ ಗುಡಾರವನ್ನು ಎತ್ತಿ ಸರಿಪಡಿಸಲಾಗುವುದು. ಅನೇಕ ಪ್ರವಾದನೆಗಳು ದೇವರ ಯೋಜನೆಯಂತೆ ಯೆರೂಸಲೇಮನ್ನು ಭೂಲೋಕದವರೆಲ್ಲರೂ ಕೊಂಡಾಡುವರು. ಯೆಶಾ. 1:26; ಕೀರ್ತ. 45:16; ಯೆರೆ. 30:18 ಮುಂದೆ ಸಮಸ್ತವನ್ನು ಸರಿಮಾಡುವ ಕಾಲದಲ್ಲಿ ಇಸ್ರಾಯೇಲ್ ಮೊದಲು ನೂತನ ಕ್ರಮಕ್ಕೆ ಹೊಂದಿಕೊಳ್ಳುತ್ತದೆ. ಹೀಗೆ ಯೆರುಸಲೇಮ್ ಅದು ಹಾಳದ ಸ್ಥಳದಲ್ಲಿಯೇ ಕಟ್ಟಲ್ಪಡುವುದು. ಪುನಃ ಮೊದಲಿದ್ದ ಹಾಗೆ ರಾಷ್ಟ್ರವಾಗುತ್ತದೆ. ಇಸ್ರಾಯೇಲ್ ಮೊದಲಿನ ಪ್ರವಾದಿಗಳನ್ನು ಕುಲಪತಿಗಳನ್ನು ಕಂಡು ಹರ್ಷ ಪಡುವುದಕ್ಕಿಂತ ಇನ್ನಾವುದು ಹೆಚ್ಚು? ಇವರಿಗೆ ಧರ್ಮಶಾಸ್ತ್ರದ ಅರಿವಿರುವುದರಿಂದ ರಾಜ್ಯಾಧಿಕಾರಕ್ಕೆ ವಿವೇಕವನ್ನು ವಿಧೇಯುತ್ವವನ್ನು ಹೊಂದಿರುವರು. ಹೀಗೆ ಪ್ರಥಮವಾಗಿ ಇಸ್ರಾಯೇಲ್ ಆಶೀರ್ವಾದವನ್ನು ಹೊಂದುವದು. ಕರ್ತನು ಯೂದನ ಗುಡಾರವನ್ನು ಮೊದಲು ರಕ್ಷಿಸುವನು. ಎಂದು ಇಸ್ರಾಯೇಲ್ಯರನ್ನು ಕುರಿತು ಬರೆಯಲಾಗಿದೆ.

ಹಿಂದೆ ಯೆರುಸಲೇಮ್ ಹೇಗೆ ದೇವರ ರಾಜ್ಯಕ್ಕೆ ರಾಜಧಾನಿಯಾಗಿದ್ದಿತೋ ಪುನಃ ಅದೇ ಸ್ಥಾನವನ್ನು ಪಡೆಯುವುದು. ಯಾಕೆಂದರೆ ಅದು ದೊಡ್ಡ ಅರಸನ ಪಟ್ಟಣವಾಗಿರುವುದು ಕೀರ್ತ. 48:2; ಮತ್ತಾ. 5:35 ಒಂದು ಪಟ್ಟಣವು ರಾಜ್ಯಕ್ಕೆ ವಿಶೇಷವಾಗಿರುವ ಹಾಗೆ ಹೊಸ ಯೆರುಸಲೇಮ್ ಪಟ್ಟಣವು ಹೊಸ ರಾಜ್ಯಕ್ಕೆ ವಿಶೇಷವಾಗಿರುವುದು. ಆದರೆ ಆ ರಾಜ್ಯವು ಪರಲೋಕದಿಂದ ಭೂಲೋಕಕ್ಕೆ ಬರುವುದಾಗಿದೆ. ಇದು ಪ್ರಥಮವಾಗಿ ಕ್ರಿಸ್ತನ ಮದಲಗಿತ್ತಿಯಾದ ಆತ್ಮೀಕ ತರಗತಿಯವರನ್ನು ಕೂಡಿರುತ್ತದೆ. ದೇವರ ದಿನದಲ್ಲಿ ಇಹಲೋಕದ ರಾಜ್ಯಗಳು ನಾಶವಾದ ಮೇಲೆ ಕ್ರಮಕ್ರಮವಾಗಿ ಈ ಹೊಸ ರಾಜ್ಯವು ಅಧಿಕಾರವನ್ನು ಪಡೆಯುತ್ತದೆ. ತರುವಾಯ ಪಿತೃಗಳು ಭೂಲೋಕದಲ್ಲಿ ಅಧಿಕಾರವನ್ನು ಹೊಂದುವರು. ಅಬ್ರಹಾಮನು ನಿರೀಕ್ಷಿಸಿದ ಶಾಶ್ವತವಾದ ಅಸ್ತಿವಾರಗಳುಳ್ಳ ಪಟ್ಟಣವನ್ನು ಮಾತ್ರ ಕಾಣಲಾಗುವುದು. ಯಥಾರ್ಥತೆಯಿಂದ ಕೂಡಿರುವ ಕ್ರಿಸ್ತನ ರಾಜ್ಯಾಡಳಿತವು ಕ್ರಿಸ್ತನ ನೀತಿಯೆಂಬ ಬಂಡೆಯ ಮೇಲೆ ಕಟ್ಟಲ್ಪಡುವುದು ರೋಮಾ 8:31–34; 1 ಕೊರಿ. 3:11 ಸಮಾಧಾನವೆಂಬ ಮಹಿಮೆಯ ಪಟ್ಟಣದಲ್ಲಿ ಪ್ರವೇಶಿಸುವವರು ರಕ್ಷಣೆಯ ಆಶೀರ್ವಾದವನ್ನು ಹೊಂದುವರು. ನ್ಯಾಯವು ಎಂದೆಂದಿಗೂ ಕದಲದ ಅಸ್ತಿವಾರವನ್ನು ಹಾಕಿದೆ. ಇದನ್ನು ಕಟ್ಟುವವನು ಸರ್ವಶಕ್ತನಾದ ದೇವರೇ. ಈ ಮಹಿಮೆಯ ಪಟ್ಟಣದಿಂದ ಬರುವ ಪ್ರಕ. 21:24 ಬೆಳಕಿನಿಂದ ಸಮಸ್ತ ಜನಾಂಗದವರು ಉತ್ತಮರಾಗಿ ಪರಿಶುದ್ಧವಾದ ರಾಜಮಾರ್ಗದಲ್ಲಿ ನಡೆಯುವವರಾಗುತ್ತಾರೆ. ಸಾವಿರ ವರ್ಷಗಳು ಕಳೆದ ನಂತರ ಎಲ್ಲರೂ ಮಾನವೋತ್ತೋತ್ತಮರಾಗುತ್ತಾರೆ. ಮೊದಲೇ ನಿರ್ಣಯಿಸಿದಂತೆ ಭೂಲೋಕವನ್ನು ಅವರ ವಶಕ್ಕೆ ಒಪ್ಪಿಸಲಾಗುವುದು. ಆಗ ಪ್ರತಿಯೊಬ್ಬನು ಸ್ವಂತ ಅರಸನಾಗಿರುತ್ತಾನೆ. ಯೋಹಾನನಿಗಾದ ದರ್ಶನದಲ್ಲಿ ಇದು ಸ್ಪಷ್ಟವಾಗಿ ಪ್ರಕಟವಾಗಿದೆ. ಪ್ರಕ. 21:24–26 ಅಲ್ಲಿ ಜನಗಳು ಬೆಳಕಿನಲ್ಲಿ ನಡೆಯುವುದನ್ನು ಮಾತ್ರವಲ್ಲದೆ ಅರಸುಗಳು ಬೆಳಕಿನಲ್ಲಿ ಪ್ರವೇಶಿಸುವುದನ್ನು ಕಂಡನು. ಕೆಟ್ಟದನ್ನು ಮಾಡುವವರು, ಅನೀತಿಯನ್ನು ನಡೆಸುವವರು, ಮೋಸಗಾರರು ಅಲ್ಲಿರುವುದಿಲ್ಲ. ಯಜ್ಞದ ಕುರಿಯಿಂದ ಆಹ್ವಾನಿತರಾದವರು ಮಾತ್ರ ಆ ಪಟ್ಟಣದಲ್ಲಿರುತ್ತಾರೆ. ಮುಂದೆ ಯೆರುಸಲೇಮ್ ಮಹಿಮೆಯಿಂದಲೂ ವೈಭವದಿಂದಲೂ ಸ್ಥಾಪಿತವಾಗುವ ದೇವರ ರಾಜ್ಯಕ್ಕೆ ಹೊಂದಿಕೊಳ್ಳುವುದು. ಈ ಪಟ್ಟಣವು ಭೂಲೋಕದ ತೋರಿಕೆಗೆ ಪ್ರತಿನಿಧಿಯಾಗಿರುವುದರಿಂದ ಇದರ ಭವ್ಯತೆಯ ವಿಷಯವಾಗಿ ಪ್ರವಾದಿಯು ಹೀಗೆ ಹೇಳುತ್ತಾನೆ. 'ಯೆರುಸಲೇಮಿನ ಹಾಳು ಪ್ರದೇಶಗಳೇ ತಟ್ಟನೆ ಜಯಘೋಷ ಮಾಡಿ, ಒಟ್ಟಿಗೆ ಹರ್ಷಧ್ವನಿ ಗೈಯಿರಿ, ಯೆರುಸಲೇಮ್ ಪುರಿಯನ್ನು ಪ್ರೀತಿಸುವವರೇ ನೀವೆಲ್ಲರೂ ಆಕೆಯೊಂದಿಗೆ ಆನಂದಿಸಿರಿ– ಇಗೋ ನಾನು ಆಕೆಗೆ ಸುಖವನ್ನು ನದಿಯಂತೆ ದಯಪಾಲಿಸಿ ತುಂಬಿ ತುಳುಕುವ

ತೊರೆಯನ್ನೋ ಎಂಬಂತೆ ಜನಾಂಗಗಳ ವೈಭವವನ್ನು ನೀಡುವೆನು. ಆ ಕಾಲದಲ್ಲಿ ಯೆರೂಸಲೇಮನ್ನು ಯೆಹೋವನ ಸಿಂಹಾಸನವೆಂದು ಕರೆಯುವರು. ಯೆಹೋವನ ನಾಮ ಮಹತ್ವದ ಸ್ಥಾನವಾದ ಯೆರೂಸಲೇಮಿಗೆ ಸಕಲ ಜನಾಂಗಗಳು ನೆರೆದು ಬರುವರು ಹೊರಟು ಬಂದ ಬಹು ಜನಾಂಗದವರು ಬನ್ನಿರಿ ಯೆಹೋವನ ಪರ್ವತಕ್ಕೆ ಹೋಗೋಣ, ಯಾಕೋಬ್ಯರ ದೇವ ಮಂದಿರಕ್ಕೆ ಹೋಗೋಣ ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು. ನಾವು ಆತನ ದಾರಿಗಳಲ್ಲಿ ನಡೆಯುವೆವು ಎಂದು ಹೇಳುವರು. ಯಾಕೆಂದರೆ ಚಿಯೋನಿಂದ (ಆತ್ಮೀಕದ ತೋರಿಕೆ) ಧರ್ಮೋಪದೇಶವು, ಯೆರೂಸಲೇಮಿನಿಂದ (ಭೂಲೋಕದ ತೋರಿಕೆ) ಯೆಹೋವನ ವಾಕ್ಯವು ಹೊರಡುವವು' ಯೆಶಾ. 52:9; 65:18; 66:10–12; ಯರೆ. 3:17; ಯೆಶಾ. 2:3

ಇಸ್ರಾಯೇಲ್ಯರಿಗೆ ಮಾಡಿದ ಅನೇಕ ವಾಗ್ದಾನಗಳು, ಆಶೀರ್ವಾದಗಳನ್ನು ತಿಳಿಯಬೇಕಾದರೆ ನಾವು ಒಂದು ಸಂಗತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ಇಸ್ರಾಯೇಲ್ಯರು ಮುಂಗುರುತಿನ ನಿಜವಾದ ಜನರಾಗಿದ್ದರು. ಯಾಕೆಂದರೆ ಅವರ ಧರ್ಮಶಾಸ್ತ್ರ ಮತ್ತು ಒಡಂಬಡಿಕೆಯು ಮುಂದೆ ದೇವರ ರಾಜ್ಯದಲ್ಲಿಯೂ ಮುಂದಣ ಯುಗಗಳ ಹೊಸ ಒಡಂಬಡಿಕೆಗೆ ಮುಂಗುರುತಾಗಿದೆ. ಅವರ ಒಡಂಬಡಿಕೆಗೆ ಪಾಪ ನಿವಾರಿಸುವ ರಕ್ತ ಯಾಜಕತ್ವ ಮುಂದೆ ದೇವರ ರಾಜ್ಯದಲ್ಲಿ ಪಾಪನಿವಾರಣೆ ಮಾಡುವುದು. ಆಶೀರ್ವದಿಸುವ ಹೊಸ ಒಡಂಬಡಿಕೆಯ ರಕ್ತಕ್ಕೂ ರಾಜವಂಶದ ಯಾಜಕತ್ವಕ್ಕೂ ಮುಂಗುರುತಾಗಿದೆ. ಇದರಿಂದ ಅವರ ಯಾಜಕತ್ವವು ಕ್ರಿಸ್ತನಿಗೂ ಮತ್ತು ಆತನ ರಾಜ್ಯದಲ್ಲಿ ಯಜ್ಞ ಅರ್ಪಿಸಿದವರೆಲ್ಲರಿಗೂ ಗುರುತಾಗಿದೆ. ಆದುದರಿಂದ ಆಶೀರ್ವಾದವು ಲೋಕದವರೆಲ್ಲರಿಗೂ ಬರತಕ್ಕದ್ದು. ಹಿಂದಿನ ಹಾಗೆ ಮೊದಲು ಯೆಹೂದ್ಯರು ಆಶೀರ್ವಾದಕ್ಕೆ ಪಾತ್ರರಾಗುವರು. ಹಿಂದೆ ಧರ್ಮಶಾಸ್ತ್ರದಲ್ಲಿ ತರಪೇತಾಗಿರುವದರಿಂದ ತಕ್ಕ ಕಾಲದಲ್ಲಿ ಅವರನ್ನು ಕ್ರಿಸ್ತನ ಬಳಿಗೆ ತರಲಾಗುವುದು. ಅನಂತರ ಅನ್ಯ ಜನಾಂಗದವರು ಆಶೀರ್ವಾದಕ್ಕೆ ಪಾತ್ರರಾಗುವರು. ಹೀಗೆ ಲೋಕದ ಸರ್ವಜನಾಂಗಗಳು ಆಶೀರ್ವಾದವನ್ನು ಹೊಂದುವರು. ಯಾಕೆಂದರೆ ದೇವರ ರಾಜ್ಯದಲ್ಲಿ 'ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ಪ್ರತಿ ಫಲವನ್ನು ಕೊಡುವನು. ಒಳ್ಳೆಯದನ್ನು ನಡೆಸುವ ಪ್ರತಿಯೊಬ್ಬನಿಗೆ ಪ್ರಭಾವವೂ, ಮಾನವೂ, ಮನಶ್ಯಾಂತಿಯೂ ಉಂಟಾಗುವುವು. ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೂ ಸಹ ದೇವರಿಗೆ ಪಕ್ಷಪಾತವಿಲ್ಲ 'ರೋಮಾ. 2:6, 10,11 ಇಸ್ರಾಯೇಲ್ಯರು ಅಪನಂಬಿಕೆಯಿಂದ ಕ್ರಿಸ್ತನನ್ನು ತಿರಸ್ಕರಿಸಿ ಎಲ್ಲಾ ವಾಗ್ದಾನಗಳನ್ನು ಕಳೆದುಕೊಂಡಿದ್ದರೂ ದೇವರು ಅವರನ್ನು ತಿರಸ್ಕರಿಸಲಿಲ್ಲವೆಂದು ಪೌಲನು ಹೇಳುತ್ತಾನೆ. ಆದರೆ ಇಸ್ರಾಯೇಲ್ಯರು ಕಳೆದುಕೊಂಡದ್ದನ್ನು ಸುವಾರ್ತಾಯುಗದಲ್ಲಿ ಅನ್ಯಜನಗಳಿಗೆ ಕೊಡಲಾಯಿತು. ಯಾರ್‍ಯಾರು ಅದನ್ನು ಅಂಗೀಕರಿಸಿದರೋ ಅಂಥವರಲ್ಲಿ ಒಂದು ಚಿಕ್ಕ ಹಿಂಡನ್ನು ಆರಿಸಿ ದೇವರ ಮಕ್ಕಳಾಗುವ ಸೌಭಾಗ್ಯವನ್ನು ಕೊಡಲಾಯಿತು. 2 ಥೆಸ. 213; 1 ಪೇತ್ರ 1:2.

ಆದರೂ ದೇವರು ಇಸ್ರಾಯೇಲ್ಯರು ತಾವು ಕಳೆದುಕೊಂಡದ್ದನ್ನು ಪುನಃ ಪಡೆದುಕೊಳ್ಳಬೇಕಾಗಿದೆ. ಇಸ್ರಾಯೇಲ್ಯರು ಮೆಸ್ಸಿಯನನ್ನು ತಿರಸ್ಕರಿಸುವರೆಂದು ದೇವರು ಆದಿಯಿಂದಲೇ ತಿಳಿದಿದ್ದನು. ಆದರೂ ಅವರಿಗೆ ಮಾಡಿದ ವಾಗ್ದಾನಗಳಿಂದ ಅವರನ್ನು ಗಣನೆಗೆ ತಂದಿರುವನು. ಅವರು ಅಪನಂಬಿಕೆಯಲ್ಲಿ ನಿಲ್ಲದ ಪಕ್ಷಕ್ಕೆ ದೇವರು ಅವರನ್ನು ಮತ್ತೆ ಕಸಿಕಟ್ಟುವುದಕ್ಕೆ ಸಮರ್ಥನಾಗಿದ್ದಾನೆ. ರೋಮಾ. 11:23, 24 ದೇವರು ಆತ್ಮೀಕ ಅನುಗ್ರಹಗಳನ್ನು ಒಂದು ಕಾಲದವರೆಗೆ ಮುಚ್ಚಿಟ್ಟಿದ್ದನು ಇದರಿಂದ ಇಸ್ರಾಯೇಲ್ಯರು ಭೂಲೋಕದ ವಾಗ್ದಾನಗಳನ್ನು ಹೊಂದಿದ್ದರೂ ದೇವರು ಅವರಿಗೆ ಆತ್ಮೀಕ ಅನುಗ್ರಹಗಳನ್ನು ಕೊಡುವುದಕ್ಕೆ ಮನಸ್ಸು ಮಾಡಿದನು. ಇದರಿಂದ ಪರಲೋಕಕ್ಕೆ ಸಂಬಂಧಿಸಿದ ವಾಗ್ದಾನಗಳನ್ನು ಭೂಲೋಕದ ವಾಗ್ದಾನಗಳಲ್ಲಿ ಮುಚ್ಚಿಟ್ಟ ಹಾಗಾಯಿತು. ಇದರಿಂದ ಪೌಲನು ನಿರ್ಧರಿಸುವುದೇನೆಂದರೆ ಕ್ರಿಸ್ತನ ದೇಹವೆಂಬ ಸಭೆಯನ್ನು ಆದುಕೊಳ್ಳುವ ಕಾಲದಲ್ಲಿ ಅವರನ್ನು ತಳ್ಳಿದ್ದರೂ ಆತನ ದೇಹವೆಂಬ ಸಭೆಯು ಪೂರ್ಣವಾದ ಮೇಲೆ ದೈವಾನುಗ್ರಹವು ಇಸ್ರಾಯೇಲ್ಯರಿಗೆ ಹಿಂತಿರುಗುವುದು. ಆಗ ಮಹಿಮಾ ರಕ್ಷಕನು ಯಾಕೋಬನಿಂದ ಭ್ರಷ್ಟತ್ವವನ್ನು ತೆಗೆದು ಹಾಕುವನು. ಇದರಿಂದ ಇಸ್ರಾಯೇಲ್ಯರೆಲ್ಲರೂ ಆತನ ಅನುಗ್ರಹಕ್ಕೆ ಹಿಂದಿರುಗುವರು. ಇದರ ವಿಷಯವಾಗಿ ರೋಮಾ. 5:17–19; 11:25–33 ರಲ್ಲಿ ಓದಿರಿ.

### ದೇವರ ರಾಜ್ಯಕ್ಕೆ ಬಾಧ್ಯಸ್ಥರು

ಯೆಹೋವನ ಪರ್ವತವನ್ನು ಹತ್ತತಕ್ಕವನು ಯಾರು? ಆತನ ಪವಿತ್ರಸ್ಥಾನದಲ್ಲಿ ನಿಲ್ಲುವುದಕ್ಕೆ ಎಂಥವನು ಯೋಗ್ಯನು. ಶುದ್ಧ ಹಸ್ತವು ನಿರ್ಮಲ ಮನಸ್ಸುಳ್ಳವನಾಗಿದ್ದಾನೋ ಅವನೇ. ಕೀರ್ತ. 24:3, 4 ಯೆರೂಸಲೇಮ್ ಪಟ್ಟಣವನ್ನು ಒಂದು ಪರ್ವತದ ಮೇಲೆ ಕಟ್ಟಿದ್ದರು. ಎರಡು ಶಿಖರದ ಮೇಲೆ ಹೌದು ಯಾಕೆಂದರೆ ಅದು ಕುರೋಪ್ಷೆಯಿನ ಎಂಬ ಕಣಿವೆಯಿಂದ ಬೇರ್ಪಡಿಸಿತ್ತು. ಆದರೆ ಒಂದೇ ಗೋಡೆಯಿಂದ ಸುತ್ತುವರಿಯಲ್ಪಟ್ಟಿತ್ತು. ಎರಡನ್ನು ಸೇರಿಸುವುದಕ್ಕೆ ಸೇತುವೆಗಳಿದ್ದವು. ಈ ಒಂದು ಪರ್ವತದ ಮೇಲೆ ದೇವಾಲಯವು ಕಟ್ಟಲ್ಪಟ್ಟಿತ್ತು. ಇದು ರಾಜತ್ವ ಮತ್ತು ಯಾಜಕತ್ವಗಳನ್ನು ಒಂದುಗೂಡಿಸುವ ಪ್ರಭಾವದ ಸಭೆಗೆ ಗುರುತಾಗಿತ್ತು. ಇದು ದೇವರ ರಾಜ್ಯದ ಎರಡು ವಿಧಗಳನ್ನು ತೋರಿಸುತ್ತದೆ. ಹೊಸ ಆತ್ಮಿಕ ಸ್ವಭಾವ

ಭೂಲೋಕಕ್ಕೆ ಸಂಬಂಧಿಸಿದ್ದಲ್ಲ ಆದರೂ ಅದರೊಂದಿಗೆ ಐಕ್ಯವಾಗಿದೆ ಇಬ್ರಿಯ 9:11.

ಈ ಎರಡು ಸ್ಥಳಗಳನ್ನು ದಾವೀದನು ಸೂಚಿಸಿರುವನು. ಆ ಪಟ್ಟಣದಲ್ಲಿರುವುದೇ ಒಂದು ಗೌರವವಾದರೆ ಯಾಜಕರಾಗಿ ಆ ದೇವಾಲಯದೊಳಗೆ ಹೋಗುವುದು ಮಹಾ ಗೌರವ. ಆದರೆ ಆ ಮಹಾಗೌರವವನ್ನು ಹೊಂದಬೇಕಾದರೆ ನಿರ್ಮಲ ಚಿತ್ತರೂ ಸತ್ಯವಂತರೂ ಆಗಿರಬೇಕು. ನಮ್ಮ ಮಹಾ ಯಾಜಕನಾದ ಕ್ರಿಸ್ತನೊಡನೆ ಬಾಧ್ಯರಾಗಬೇಕಾದರೆ ಆತನಷ್ಟೇ ರಾಜವಂಶದ ಯಾಜಕರು ಶುದ್ಧರಾಗಿರಬೇಕು. ಈ ನಿರೀಕ್ಷೆಯನ್ನಿಟ್ಟುಕೊಂಡಿರುವವರು ಸ್ವಂತಶುದ್ಧಿಯನ್ನು ಮಾಡಿಕೊಳ್ಳುವರು. ಅನಂತರ ಕ್ರಿಸ್ತನ ಪರಿಶುದ್ಧ ರಕ್ತದಿಂದ ನೀತಿವಂತರಾಗಿ ದೇಹದಿಂದಲ್ಲ ಆತ್ಮದಿಂದ ನಡೆಯುವವರಾಗುತ್ತಾರೆ. ಆದುದರಿಂದ ದೇವರ ರಾಜ್ಯದಲ್ಲಿ ಭೂಲೋಕದ ತೋರಿಕೆಗೆ ಸೇರುವವರು ಸಹ ಶುದ್ಧರಾಗಿ ವಿಧೇಯರಾಗಿ ತಮ್ಮ ದೇಹವನ್ನು ಪ್ರತಿಷ್ಠಿಸಿ ಕೊಂಡವರಾಗಿರಬೇಕು. ಹಿಂದಿನ ಕಾಲದ ಭಕ್ತರು ನೀತಿಯನ್ನು ಪ್ರೀತಿಸಿ ಅನೀತಿಯನ್ನು ದ್ವೇಷಿಸುವವರಾಗಿದ್ದರು. ಅವರೇನಾದರೂ ತಮ್ಮ ಬಲಹೀನತೆಯಿಂದ ಎಡವಿ ತಪ್ಪು ಮಾಡಿದರೆ ದುಃಖಪಡುತ್ತಾ ಪಶ್ಚಾತಾಪ ಪಡುವವರಾಗಿದ್ದರು. ಇದರಿಂದ ದೇವರ ಏರ್ಪಾಡಿನಂತೆ ಆ ಪಟ್ಟಣವನ್ನು ಪ್ರವೇಶಿಸುವವರು ಹೃದಯದಲ್ಲಿಯೂ ಜೀವಿತದಲ್ಲಿಯೂ ನಿರ್ಮಲತೆಯನ್ನು ಹೊಂದುವುದಕ್ಕೆ ಪ್ರಯಾಸಪಡಬೇಕು. ಆ ಪಟ್ಟಣವೇ ಭೂಲೋಕದ ಆದಿಯಿಂದಲೂ ಸಿದ್ಧಮಾಡಿರುವ ದೇವರ ರಾಜ್ಯವಾಗಿದೆ.

### ಕಬ್ಬಿಣದ ಆಡಳಿತ

ಕ್ರಿಸ್ತನ ರಾಜ್ಯವು ಸ್ಥಾಪನೆಯಾದ ಮೇಲೆ ಇತರರನ್ನು ಮೋಸ ಗೊಳಿಸುವ ಕೆಟ್ಟ ಕಾರ್ಯಗಳೆಲ್ಲವೂ ಕ್ರಿಸ್ತನ ಸಾವಿರ ವರ್ಷಗಳ ಆಡಳಿತದಲ್ಲಿ ಸಂಪೂರ್ಣವಾಗಿ ತೆಗೆದುಹಾಕಲಾಗುವುದು. ಆಗ ಅಲ್ಲಿ ಒಳ್ಳೆಯದನ್ನು ಮಾತ್ರ ಮಾಡುವ ಸ್ವಾತಂತ್ರ್ಯವಿರುವುದು. ಕೇಡು ಮಾಡುವುದನ್ನೆಲ್ಲಾ ದೇವರ ರಾಜ್ಯದಿಂದ ತೆಗೆದುಬಿಡಲಾಗುವುದು ಯೆಶಾಯ 11:9; ರೋಮಾ. 8:21 ಅಲ್ಲಿ ದೃಢವಾದ ಆಡಳಿತ ಇರುವುದರಿಂದ ಅನೇಕರಿಗೆ ತಮ್ಮ ದುರಭ್ಯಾಸಗಳನ್ನು ಬಿಡಲು ಕಷ್ಟಕರವಾಗುವುದು. ಅಲ್ಲಿ ಎಲ್ಲವೂ ಕಠಿಣವಾಗಿರುವುದರಿಂದ ಅದನ್ನು ಕಬ್ಬಿಣದ ಆಡಳಿತ ಎನ್ನುವರು. 'ಆತನು ಅವರನ್ನು ಕಬ್ಬಿಣದ ಕೋಲಿನಿಂದ ಆಳುವನು.' ಪ್ರಕ. 2:26.27; ಕೀರ್ತನೆ 2:8–12 ಮತ್ತು 49:14 ಹೋಲಿಸಿರಿ ಆಗ "ನಾನು ನ್ಯಾಯವನ್ನು ನೂಲನ್ನಾಗಿಯೂ ಧರ್ಮವನ್ನು ಮಟ್ಟಗೋಲನ್ನಾಗಿಯೂ ಮಾಡುವೆನು, ಕಲ್ಮಳೆಯು ಅಸತ್ಯದ ಆಶ್ರಯವನ್ನು ಬಡಿದುಕೊಂಡು ಹೋಗುವದು ಜಲಪ್ರವಾಹವು ಮೋಸದ ಮರೆಯನ್ನು ಮುಳುಗಿಸುವುದು." ಎಂಬ ಹೇಳಿಕೆಯು ನೆರವೇರುವುದು ಆಗ ಬಚ್ಚಿಟ್ಟಿದ್ದೆಲ್ಲವು ಪ್ರಕಟವಾಗುವುದು. ಯೆಶಾಯ 28:17: ಮತ್ತಾ. 10:26.

ಅನೇಕರು ಈ ನ್ಯಾಯದ ಆಡಳಿತವಾಗಿ ದಂಗೆ ಏಳುವರು. ಯಾಕೆಂದರೆ ಹಿಂದೆ ಸೈತಾನನ ಆಳಿತದಲ್ಲಿ ಜನರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದವರಿಗೆ ಈ ರಾಜ್ಯವು ವಿರೋಧವಾಗಿದೆಯೆಂದು ತಿಳಿಯುತ್ತಾರೆ. ಅಂಥವರಿಗೆ ಕಠಿಣವಾದ ಹೊಡೆತಗಳು ಬೀಳುವವು. ಅನಂತರ ಅವರು ನೀತಿ ಸಮಾನತ್ವ ಯಥಾರ್ಥತೆಯ ಪಾಠಗಳನ್ನು ಕಲಿಯುವರು. ಕೀರ್ತ. 89:32; ಲೂಕ 12:47, 48 ಈ ಪಾಠವು ಮೊದಲು ಬದುಕಿರುವ ಜನಾಂಗಕ್ಕೆ ಬರುವುದು ಅದು ಈಗಲೇ ಸಮೀಪವಾಗಿದೆ ಯಾಕೋಬ 5.

ಜೀವ ಸ್ವರೂಪನಾದ ಅರಸನು ಸಮಾನತೆಯನ್ನು ನೀತಿ ನ್ಯಾಯವನ್ನು ದೃಢವಾದ ಆಡಳಿತದಿಂದ ಜಾರಿಗೆ ತರುವನೋ ಆಗ ಜನರೆಲ್ಲರು "ನೀನು ಧರ್ಮವನ್ನು ಪ್ರೀತಿಸಿದಿ ಅಧರ್ಮವನ್ನು ದ್ವೇಷಿಸಿದಿ" ಎಂದು ತಿಳಿಯುವರು. ಕೊನೆಗೆ ಎಲ್ಲಕ್ಕಿಂತ ದೇವರ ಯೋಜನೆ ಮತ್ತು ನ್ಯಾಯ ವಿಧಿಗಳೇ ಉತ್ತಮ ಎಂದು ತಿಳಿದು ನೀತಿಯನ್ನು ಪ್ರೀತಿಸಿ ಅನೀತಿಯನ್ನು ದ್ವೇಷಿಸುವರು. ಕೀರ್ತ 45:7; ಇಬ್ರಿಯ 1:9 ಆ ಕಾಲದಲ್ಲಿಯೂ ಯಾರ್ಯಾರು ಪ್ರೀತಿಸುವುದನ್ನು ಕಲಿಯುವುದಿಲ್ಲವೋ ಅಂಥವರನ್ನು ನಿತ್ಯ ಜೀವಕ್ಕೆ ಅನೀತಿವಂಥರೆಂದು ಪರಿಗಣಿಸಿ ಜನರ ಮಧ್ಯದೊಳಗಿಂದ ಅವರನ್ನು ನಾಶಮಾಡಲಾಗುವುದು. ಅ.ಕೃ. 3:23; ಪ್ರಕ. 20:9; ಕೀರ್ತ. 11:5–7.

### ಶಾಶ್ವತವಾದ ರಾಜ್ಯ

"ಯಹೋವನು ಭೂಲೋಕಕ್ಕೆಲ್ಲಾ ರಾಜನಾಗಿರುವನು" ಜೆಕರ್ಯ 14:9 ಕ್ರಿಸ್ತನ ಸಾವಿರ ವರ್ಷಗಳ ಆಳ್ವಿಕೆಯ ಕಾಲದಲ್ಲಿ ಕ್ರಿಸ್ತನ ಕೈಯಲ್ಲಿ ಸ್ಥಾಪಿತವಾಗುವ ರಾಜ್ಯವೇ ಯೆಹೋವನ ರಾಜ್ಯವಾಗಿರುವುದು. ಅದು ಕ್ರಿಸ್ತನ ನೇರವಾದ ಹಿಡಿತದಲ್ಲಿರುವುದು. ಕ್ರಿಸ್ತನ ಈ ವಿಶೇಷ ಆಡಳಿತವು ಒಂದು ವಿಶೇಷ ಉದ್ದೇಶ ಪೂರೈಕೆಗಾಗಿರುವುದು. ಆ ಉದ್ದೇಶ ಪೂರ್ಣವಾದ ಕೂಡಲೇ ಆತನ ಆಳ್ವಿಕೆಯು ಮುಕ್ತಾಯವಾಗುವುದು. ಮಾನವನು ದೇವರಿಗೆ ವಿರುದ್ಧವಾಗಿ ನಡೆದುದ್ದರಿಂದ ದೇವರು ಕೊಟ್ಟ ಎಲ್ಲಾ ಹಕ್ಕು ಕಳೆದುಕೊಂಡರು. ಆದರೆ ಕ್ರಿಸ್ತನು ಮಾನವನು ಕಳೆದುಕೊಂಡ ಎಲ್ಲಾ ಹಕ್ಕುಗಳನ್ನು ಮತ್ತೆ ಅನುಗ್ರಹಿಸಿ ಪುನಃ ಮಾನವರು ಭೂಲೋಕದ ಅರಸರಾಗುವಂತೆ ಮಾಡುವನು. ಅದಕ್ಕಾಗಿಯೇ ಮಾನವನಿಗೆ ಸ್ವಯಂ ಆಡಳಿತವನ್ನು ಕೊಟ್ಟು ಅವರಿಂದ ಜೀವಿತದ ಎಲ್ಲಾ ಕಷ್ಟಗಳನ್ನು ಅನುಭವಿಸಿದ ಮೇಲೆ ಮನುಷ್ಯನು ತಿದ್ದಿಕೊಂಡು ಬಾಳುವುದನ್ನು ಕಲಿಯುವವರೆಗೆ ಕ್ರಿಸ್ತನಿಗೆ ಎಲ್ಲಾ ಹಕ್ಕುಗಳು ಇರುವುದು. "ಆತನು ತನ್ನ ಎಲ್ಲಾ ಶತ್ರುಗಳನ್ನು ತನ್ನ ಪಾದಗಳ ಕೆಳಗೆ

ಹಾಕಿಕೊಳ್ಳುವ ತನಕ ಆಳಬೇಕು" ಅಲ್ಲಿ ಯಾರು ಕ್ರಿಸ್ತನನ್ನು ಅಂಗೀಕರಿಸುವುದಿಲ್ಲವೋ ಅಂಥವರನ್ನು ನಾಶಮಾಡ ಲಾಗುವುದು. ಹೀಗೆ ಸಮಸ್ತವು ಕ್ರಿಸ್ತನಿಗೆ ಅಧೀನವಾದ ಮೇಲೆ ತಂದೆಯಾದ ಯೆಹೋವನಿಗೆ ರಾಜ್ಯವನ್ನು ಒಪ್ಪಿಸಿಕೊಡುವನು. 1 ಕೊರಿ. 15:25–28. ಆಮೇಲೆ ಅದು ದೇವರ ರಾಜ್ಯವಾಗುತ್ತದೆ. ಮಾನವರೆಲ್ಲರೂ ದೇವರಿಗೆ ಪರಿಪೂರ್ಣ ವಿಧೇಯರಾಗುವರು. ಅಲ್ಲಿಯೂ ಲಿಖಿತರೂಪವಾದ ಒಡಂಬಡಿಕೆಯು ಮರಣವನ್ನುಂಟುಮಾಡುತ್ತದೆ. ದೇವರಾತ್ಮ ಸಂಬಂಧವಾದದ್ದು ಜೀವವನ್ನುಂಟುಮಾಡುತ್ತದೆ. 2 ಕೋರಿ 3:6. ಪರಿಪೂರ್ಣರಾಗುವವರೆಗೆ "ಜೀವ ಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾದದ್ದು "ಇಬ್ರಿ. 10:31 ಆದರೆ ಕ್ರಿಸ್ತನು ಎಲ್ಲಾ ಅನೀತಿಯನ್ನು ತೆಗೆದುಹಾಕಿ ಭಯವನ್ನು ಹೋಗಲಾಡಿಸಿ ಮೊದಲಿನಂತೆಯೇ ಪರಿಪೂರ್ಣರಾಗಿ ಮಾಡಿ ತಂದೆಗೆ ಒಪ್ಪಿಸುವನು. ಸಾವಿರ ವರ್ಷದ ಅಂತ್ಯದಲ್ಲಿ ಕ್ರಿಸ್ತನು ತಂದೆಗೆ ರಾಜ್ಯವನ್ನು ಕೊಡುವಾಗ ಮೊದಲೇ ನಿರ್ಣಯಿಸಿದ್ದ ಪ್ರತಿನಿಧಿಗಳ ಕೈಗೆ ಒಪ್ಪಿಸುವನು. 1ಕೊರಿ. 15:24 ಮತ್ತಾ. 25:34 ಇದೇ ಶಾಶ್ವತವಾದ ದೇವರ ರಾಜ್ಯ" ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ ನನ್ನ ತಂದೆಯ ಆಶೀರ್ವಾದವನ್ನ ಹೊಂದಿದವರೆ ಬನ್ನಿರಿ ಲೋಕಾದಿಯಿಂದ ನಿಮಗೋಸ್ಕರ ಸಿದ್ಧವಾಡಿದ ರಾಜ್ಯವನ್ನು ಸ್ವಾಸ್ಥ್ಯವಾಗಿ ತೆಗೆದುಕೊಳ್ಳಿರಿ" ಎಂದು ಹೇಳುವನು. ಮಾನವರಿಗೆ ಇರುವ ಮಹಿಮೆಯನ್ನು ಆತನ ಸತ್ಯಸಭೆಗೆ ಇರುವ ಮಹಿಮೆಯೊಂದಿಗೆ ಹೋಲಿಸಕೂಡದು "ಅದು ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿದ ಮಹಿಮೆ ಅವರು ಜಗದುತ್ಪತ್ತಿಗೆ ಮೊದಲೇ ಕ್ರಿಸ್ತನಲ್ಲಿ ಆರಿಸಲ್ಪಟ್ಟವರು 1ಕೊರಿ. 2:7 ಸತ್ಯಸಭೆಯು ಕ್ರಿಸ್ತನ ಮದಲಗಿತ್ತಿಯಾಗಿ ಆತನ ಮಹಿಮೆಯಲ್ಲಿ ಪಾಲು ಹೊಂದುವುದು. ಯೆಹೋವ ಪ್ರತಿನಿಧಿಗಳಾಗಿ ದೈವ ಅಧಿಕಾರವನ್ನು ಭೂಮಿಯಲ್ಲಿ ನಡೆಸುವದು. ಅಂತಹ ಮಹಿಮೆಯುಳ್ಳ ರಾಜ್ಯ ಸ್ಥಾಪನೆಗಾಗಿಯೇ ದಿನವು "ನಿನ್ನ ರಾಜ್ಯವು ಬರಲಿ ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರವೇ ಭೂಲೋಕದಲ್ಲಿಯೂ ನೆರವೇರಲಿ" ಎಂದು ಭಕ್ತರು ಎಡೆ ಬಿಡದೆ ಪ್ರಾರ್ಥಿಸುತ್ತಿರುವರು. ಆದ್ದರಿಂದ ಆತನ ರಾಜ್ಯದ ಬರುವಿಕೆಗೋಸ್ಕರ ಜಗತ್ತೆಲ್ಲವೂ ಪ್ರಸವವೇದನೆ ಪಡುತ್ತಾ ದೇವರ ಪುತ್ರರ ಮಹಿಮೆಯನ್ನು ಎದುರು ನೋಡುತ್ತಿದೆ. ರಾಜ್ಯವು ಕೆಟ್ಟದ್ದನ್ನು ನಾಶಮಾಡಿ ಎಲ್ಲಾ ಜನಾಂಗದವರನ್ನು ಆಶೀರ್ವದಿಸಿ ಸ್ವಸ್ಥಮಾಡುತ್ತದೆ. ರೋಮಾ. 8:19;16:20.

# ಅಧ್ಯಾಯ-15

# ಯೆಹೋವನ ದಿನ

**"ಯೆಹೋವನ ದಿನ", "ಮುಯ್ಯಿ ತೀರಿಸುವದಿನ", "ಕೋಪದ ದಿನ"-ಘೋರವಾದ ಇಕ್ಕಟಿನ ದಿನ-ಅದರ ಕಾರಣ-ಅದರ ಕುರಿತು ಸತ್ಯವೇದದ ಸಾಕ್ಷಿ-ಅದರ ಬೆಂಕಿ ಮತ್ತು ಬಿರುಗಾಳಿ, ಅದರ ಕಂಪನ ಮತ್ತು ಕರಗುವಿಕೆ, ಸಾಂಕೇತಿಕವಾಗಿ ತೋರಿಸಲಾಗಿದೆ-ದಾವೀದನ ಸಾಕ್ಷಿ-ಪ್ರಕಟಿಸುವವನ ಸಾಕ್ಷಿ-ಪ್ರಸ್ತುತ ಪರಿಸ್ಥಿತಿ ಮತ್ತು ಭವಿಷ್ಯತಿನ ದೃಷ್ಟಿಕೋನ, ವಿರೋಧಿಸುವ ಪಕ್ಷಗಳವರು ಕಂಡಂತೆ,**

ಇಹಲೋಕದ ಸೈತಾನನ ರಾಜ್ಯಗಳೆಲ್ಲವು ನಾಶವಾದ ಮೇಲೆ ಕ್ರಿಸ್ತನ ನೇತೃತ್ವದಲ್ಲಿ ಭೂಮಿಯ ಮೇಲೆ ಸ್ಥಾಪಿತವಾದ ದೇವರ ರಾಜ್ಯದ ಕಾಲಕ್ಕೆ ಯೆಹೋವನ ದಿನ ಎಂದು ಹೆಸರು. ಇದನ್ನು ಅನೇಕ ಕಡೆಗಳಲ್ಲಿ ಮಹಾ ಸಂಕಟದಿಂದ ಕೂಡಿದ ಕತ್ತಲೆಯದಿನವೆಂದು ಕರೆಯಲಾಗಿದೆ. ಆಗ ಉಂಟಾಗುವ ಜನಾಂಗಗಳ ದೊಂಬಿಯಿಂದ ಮಹಾಸಂಕಟವುಂಟಾಗುವುದು. ಅಂಥ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ ಇನ್ನು ಮೇಲೆಯೂ ಆಗುವುದಿಲ್ಲ. ದಾನಿ. 12:1; ಮತ್ತಾಯ 24:21,22 ಆ ದಿನದಲ್ಲಿ ಕ್ರಿಸ್ತನು ಯೆಹೋವನ ಪ್ರತಿನಿಧಿಯಾಗಿ ರಾಜಬಿರುದುಗಳಿಂದಲೂ ಅಧಿಕಾರದಿಂದ ಬಂದು ಸಂಕಷ್ಟಗಳನ್ನು ನಿವಾರಿಸಿ ಸಮಾಧಾನದ ಪ್ರಭುವಾಗಿ ಎಲ್ಲವನ್ನು ಆಶೀರ್ವದಿಸುವುದರಿಂದ ಅದನ್ನು ಯೆಹೋವನ ದಿನ ಎಂದು ಕರೆಯಲಾಗಿದೆ. ಆ ದಿನದಲ್ಲಿ ಕ್ರಿಸ್ತನು ಸೇನಾಧಿಪತಿಯಾಗಿ ಎಲ್ಲವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವನು. ಆಗ ಲೋಕದ ಸುಳ್ಳು ಸಂಸ್ಥೆಗಳೆಲ್ಲಾ ಬಿದ್ದುಹೋಗುವವು. ಎಲ್ಲರೂ ಕ್ರಿಸ್ತನನ್ನು ರಾಜಾಧಿರಾಜನೆಂದು ಪರಿಗಣಿಸುವರು. ಇದನ್ನೇ ಕ್ರಿಸ್ತನ ರಾಜ್ಯದಲ್ಲಿ ಯೆಹೋವನ ಕೆಲಸವು ನಡೆಯುವುದು ಎಂದು ಪ್ರವಾದಿಗಳು ಪ್ರವಾದಿಸಿರುವರು. "ನಾನು ಅನ್ಯಜನಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು ಭೂಮಿಯ ಕಟ್ಟ ಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ಥ್ಯವಾಗಿ ಕೊಡುವೆನು." ಕೀರ್ತ. 2:8 "ಆ ರಾಜರ ಕಾಲದಲ್ಲಿ ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು" ದಾನಿ. 2:44 ಮಹಾ ವೃದ್ಧನೊಬ್ಬನು ಆಸೀನನಾದನು. ಮನುಷ್ಯ ಕುಮಾರನನ್ನು ಆತನ ಸನ್ನಿಧಿಗೆ ತಂದರು. ಸಕಲ ಜನಾಂಗದವರು ಅವನನ್ನು ಸೇವಿಸಲೆಂದು ಆತನಿಗೆ ರಾಜ್ಯವು ಕೊಡೋಣವಾಯಿತು. ದಾನಿ. 7:9,13,14, 22,27 ಕ್ರಿಸ್ತನು ಆ ರಾಜ್ಯದ ಉದ್ದೇಶವನ್ನು ನೆರವೇರಿಸಿದಾಗ "ಮಗನು ಸಮಸ್ತವನ್ನೂ ತನಗೆ ಅಧೀನಮಾಡಿ ಕೊಟ್ಟಾತನಿಗೆ ತಾನೇ ಅಧೀನನಾಗುವನು. ಸಮಸ್ತವನ್ನು ಆತನ ಪಾದದ ಕೆಳಗೆ ಹಾಕುವನು ಎಂದು ಪೌಲನು ಹೇಳಿರುವನು. 1 ಕೊರಿ. 15:28. ಆ ಕಾಲವನ್ನು 'ದೇವರು ಮುಯ್ಯಿ ತೀರಿಸುವ ದಿನ" 'ಕೋಪದ ದಿನ' ಎಂದು ಕರೆಯಲಾಗಿದೆ. ಯೆಶಾ. 61:2;63:1-4; ಕೀರ್ತ. 110:5 ಆದರೂ ದೇವರ ಕೋಪವನ್ನು ಮಾತ್ರ ಎಂದು ಪರಿಗಣಿಸುವವನು ತಪ್ಪಿತಸ್ಥನು. ದೇವರು ಕೆಲವು ನಿಯಮಗಳಿಗನುಗುಣವಾಗಿ ಕಾರ್ಯ ನಡೆಸುವನು. ಅದನ್ನು ವಿರೋಧಿಸಿದವರಿಗೆ ಶಿಕ್ಷೆಯು ವಿಧಿಸಲ್ಪಡುವುದು. ಅನೇಕರಿಗೆ ದೇವರ ಜ್ಞಾನವು ಇಷ್ಟವಿಲ್ಲದಿರುವುದರಿಂದ ದೇವರು ಅವರನ್ನು ಅನಿಷ್ಟ ಸ್ವಭಾವಕ್ಕೆ ಒಪ್ಪಿಸಿರುವನು. ರೋಮಾ. 1:28 ಆದರೆ ಅಬ್ರಹಾಮನು ದೇವರ ಆಜ್ಞೆಯನ್ನು ವಿಧೇಯನಾಗಿ ಕೈಗೊಳ್ಳುತ್ತಿದ್ದರಿಂದ ದೇವರು ಅವನಿಗೂ ಅವನ ಸಂತತಿಗೂ ವಿಶೇಷ ಗಮನಕೊಟ್ಟನು. ಆದರೆ ಇಸ್ರಾಯೇಲ್ಯರು ಅವಿಧೇಯರಾಗಿ ಮೊಂಡರಾಗಿ ಮೆಸ್ಸಿಯನನ್ನೇ ತಿರಸ್ಕರಿಸಿದ್ದರಿಂದ ಕಷ್ಟಕ್ಕೊಳಗಾಗಿ ಅವರ ಜನಾಂಗವೇ ಅಳಿಸಿ ಹೋಯಿತು. ಈ ಸುವಾರ್ತಾಯುಗದಲ್ಲಿ ಕ್ರಿಸ್ತನ ಸತ್ಯ ಸಭೆಯು ಲೋಕಕ್ಕೆ ಬೆಳಕನ್ನು ತೋರಿಸಿ ಸರಿಯಾದದ್ದಕ್ಕೂ ಒಳ್ಳೆಯದಕ್ಕಿರುವ ವ್ಯತ್ಯಾಸವನ್ನೂ, ಸರಿಯಾದದ್ದು ತಪ್ಪಾದದ್ದಕ್ಕೂ ಇರುವ ವ್ಯತ್ಯಾಸವನ್ನು ತೋರಿಸಿಕೊಟ್ಟು ಸಾಕ್ಷಿ ಕೊಡುತ್ತಿರುವುದು. ಯೋಹಾನ 16:8-11; ಅ.ಕೃ. 24:25 ಆದರೆ ಮಾನವನು ಕರ್ತನ ಎಚ್ಚರಿಕೆಗೆ ಗಮನ ಕೊಡದೆ ಸ್ವಇಚ್ಛೆಯಿಂದ ನಡೆಯುತ್ತಿರುವುದರಿಂದ ಈ ರೀತಿಯ ಸಂಕಟದಿನವು ಬರುತ್ತಿದೆ. ಮಾನವನ ಪಾಪದ ಫಲವೇ ಈ ಸಂಕಟದ ದಿನ ಎಂದು ಹೇಳಬಹುದು. ಜನರು ದೇವರ ಯೋಜನೆಯಂತೆ ನಡೆದಿದ್ದರೆ ಅದರ ಪರಿಣಾಮ ಬೇರೆಯಾಗಿರುತ್ತಿತ್ತು.

"ನಿಮ್ಮ ದೇಹಗಳನ್ನು ಸಜೀವ ಯಜ್ಞವಾಗಿ ಅರ್ಪಿಸಿರಿ" ರೋಮಾ. 12:1 ಎಂಬುದೇ ದೇವರು ಸಭೆಗೆ ಕೊಟ್ಟ ಸಂದೇಶವಾಗಿದೆ. "ಕೆಟ್ಟದಕ್ಕೆ ಹೋಗದಂತೆ ನಾಲಿಗೆಯನ್ನು ಕಾದುಕೋ, ವಂಚನೆಯ ಮಾತುಗಳಿಗೆ ಬಿಡದೆ ತುಟಿಗಳನ್ನು ಇಟ್ಟುಕೋ, ಕೆಟ್ಟದನ್ನು ಬಿಟ್ಟು ಒಳ್ಳೆಯದನ್ನು ಮಾಡು, ಸಮಾಧಾನವನ್ನು ಹಾರೈಸಿ ಅದಕ್ಕಾಗಿ ಪ್ರಯತ್ನ ಪಡು" ಕೀರ್ತ. 34:13,14 ಇದು ಲೋಕಕ್ಕೆ ಕೊಟ್ಟ ಸಂದೇಶವಾಗಿದೆ. ಕೆಲವರು ಮಾತ್ರ ಎರಡು ಸಂದೇಶಕ್ಕೂ ಗಮನ ಕೊಟ್ಟಿರುವರು. ಚಿಕ್ಕ ಹಿಂಡು ಮಾತ್ರ ಸಜೀವ ಯಜ್ಞವಾಗಿ ಅರ್ಪಿತವಾಗುತ್ತಲಿದೆ ಉಳಿದವರು

ಪ್ರಾಮಾಣೀಕತೆಯೇ ಅತ್ಯುತ್ತಮ ನಿಯಮ ಎಂದು ಹೇಳಿದರು ಅದರಂತೆ ನಡೆಯದೆ ಪ್ರಾಮಾಣಿಕತೆಯು ಮಣ್ಣುಪಾಲಾಗಿದೆ. ಮಾನವನು ಪ್ರಪಂಚದಲ್ಲಿ ಹಣ, ಅಧಿಕಾರ, ಮಾನವನ್ನು ಹೊಂದಲು ಯಾವ ಅನೀತಿಯ ಮಾರ್ಗ ಬೇಕಾದರೂ ಹಿಡಿಯಲು ಸಿದ್ಧನಾಗಿರುವನು. ತನ್ನ ಲಾಭದ ಚಿಂತೆ ಅವನಿಗಾಗಿದೆಯೇ ಹೊರತು ಇತರ ನಷ್ಟದ ಕಡೆಗಲ್ಲ. ದೇವರ ಧರ್ಮಶಾಸ್ತ್ರವನ್ನು ಸ್ವಲ್ಪ ಮಟ್ಟಿಗಾದರೂ ಅನುಸರಿಸಿದ್ದರೆ ಸಂಕಟದ ದಿನಗಳು ಬರುತ್ತಿರಲಿಲ್ಲ. ದೇವರನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಮತ್ತಾ. 22:37–39 ಎಂಬ ಆಜ್ಞೆಯನ್ನು ನೀಚಬುಧ್ಧಿಯಿಂದಲೇ ವಿರೋಧಿಸಿರುವರು. ಆದುದರಿಂದ ಸಂಕಟಬರುವುದು ಸ್ವಾಭಾವಿಕ; ಬಿತ್ತಿದ ಮೇಲೆ ಕೊಯ್ಯಲೇಬೇಕು. ಕ್ರಿಸ್ತನ ನೀತಿರಾಜ್ಯ ಬರುವವರೆಗೆ ಈ ರೀತಿಯ ಅನ್ಯಾಯ ಲೋಕದಲ್ಲಿರುವುದು. ಆಗ ಎಲ್ಲರೂ ಆ ರಾಜ್ಯದಲ್ಲಿರುವ ನೀತಿ ಮತ್ತು ಪ್ರೀತಿಯನ್ನು ಕಂಡು ಸಂತೋಷಿಸುವರು. ಮನುಷ್ಯನ ಸ್ವಾರ್ಥವೆಂಬ ಕಲ್ಲಿನ ಹೃದಯವು ದೇವರು ಹೇಳಿರುವಂತೆ ಮೃದುವಾಗುವುದು. ಯೆಹೆ. 36:26 ಮಾನವನು ತನಗೆ ದೊರಕಿದ ದೈವಾನುಗ್ರಹವನ್ನು ತನ್ನ ಅವಿಧೇಯತೆಯಿಂದಲೇ ಕಳೆದುಕೊಂಡನು. ಎಲ್ಲಾ ಸುಖ ಸಂತೋಷಗಳನ್ನು ಅನುಭವಿಸುತ್ತಿದ್ದ ಏದೇನ್ ತೋಟದಿಂದ ಹೊರದೂಡಲ್ಪಟ್ಟನು. ಆಗಲೇ ಸ್ವಾರ್ಥತೆ ಎಂಬುದು ಮಾನವನ ಹೃದಯವನ್ನು ಹೊಕ್ಕಿತು. ಹೊರದೂಡಲ್ಪಟ್ಟ ಆದಿ ತಂದೆ ತಾಯಿಗಳು ಜೀವನವನ್ನು ಮುಂದುರಿಸಲು ಹೊರಟಾಗ ಅವರಿಗೆ ಕಂಡು ಬಂದದ್ದು ಬಂಜರು ಭೂಮಿ. ದೇವರು ಶಪಿಸಿದಂತೆ ಆ ಭೂಮಿಯಲ್ಲಿ ಬೆವರು ಸುರಿಸಿ ಕಷ್ಟಪಟ್ಟು ದುಡಿಯಬೇಕಾಯಿತು. ಅವನು ದೈಹಿಕ ಶ್ರಮದಲ್ಲೇ ಮಗ್ನನಾಗಿರುವುದರಿಂದ ನೈತಿಕ ಮಟ್ಟವು ಕಡಿಮೆಯಾಗಿ ಕೀಳು ಗುಣಗಳೇ ಅವನ ಮನದಲ್ಲಿ ಹೊಕ್ಕಿ ಅದರಿಂದಲೇ ಜೀವಿಸುವುದು ಅವನ ಮುಖ್ಯ ಧ್ಯೇಯವಾಯಿತು. ಇದರಿಂದ ಮಾನವನಿಗೆ ಹಣವೇ ಧಣಿಯಾಯಿತು. ಸ್ವಾರ್ಥತೆ ಮತ್ತು ದುರಾಶೆಯಿಂದ ಮಾನವನು ಹಣ ಸಂಪಾದನೆ ಮಾಡಲು ತೊಡಗಿರುವನು. ಇಂಥ ಯೋಚನೆಗಳು ಮಾನವರಲ್ಲಿ ಉದ್ಭವಿಸಿದ್ದರಿಂದಲೇ ಸೈತಾನನು ಪ್ರಬಲನಾಗಿ ಮಾನವನನ್ನು ಆಳಲು ಪ್ರಾರಂಭಿಸಿದನು. ಹಿಂದಿನ ಕಾಲದಲ್ಲಿ ಐಶ್ವರ್ಯವು ಕೆಲವು ಜನರ ಕೈಯಲ್ಲಿ ಕೇಂದ್ರೀಕೃತವಾಗಿತ್ತು. ಅವರು ಪ್ರಬಲರಾಗಿದ್ದರು. ಉಳಿದವರು ಅವರಿಗೆ ಗುಲಾಮರಾಗಿ ವಿಧೇಯತೆಯಿಂದ ಅವರಿಗಾಗಿ ದುಡಿಯುವವರಾಗಿದ್ದರು. ಇತರರ ದುಡಿಮೆಯಿಂದ ಸಮಾಜದ ಒಂದು ಗುಂಪು ಐಶ್ವರ್ಯದ ಮದದಿಂದ ಮೆರೆಯುತ್ತಿತ್ತು. ಆದರೆ ಸಮಸ್ತವು ಸರಿಮಾಡುವ ಕಾಲದಲ್ಲಿ ಯೆಹೋವನು ಜನರಲ್ಲಿದ್ದ ಅಜ್ಞಾನದ ತೆರೆಯನ್ನು ತೆರೆದನು. ವಿಜ್ಞಾನದ ಮುನ್ನಡೆಯಿಂದ ಮನುಷ್ಯನ ಜ್ಞಾನ ಹೆಚ್ಚಿತು. ಭೂರಾಜರು ಕಡಿಮೆಯಾಗುತ್ತಾ ಬಂದರು. ಹೀಗೆ ಲೋಕದ ಐಶ್ವರ್ಯವು ಅರಸರಿಂದ ಸಮಾಜದ ಗಣ್ಯರ ಕೈಗೆ ಬಂದಿದೆ. ಐಶ್ವರ್ಯವು ಕೆಟ್ಟತನವಾದರೂ ಅದರಿಂದ ಅನೇಕ ಪ್ರಯೋಜನವಿದೆ. ಹೇಗೆಂದರೆ ಶ್ರೀಮಂತರು ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದು ರಾಜ್ಯದೊಂದಿಗೆ ಸಹಕರಿಸಬಹುದು. ಆದುದರಿಂದ ಶ್ರೀಮಂತರು ಹಣ ಖರ್ಚಾದರೂ ಸರಿಯೇ ಸಮಾಜದಲ್ಲಿ ಹೆಚ್ಚಿನ ಸ್ಥಾನ ಮಾನಗಳನ್ನು ಪಡೆಯಲು ಹೆಣಗಾಡುವರು. ತಿಳಿವಳಿಕೆ ಹೆಚ್ಚುತ್ತಿರುವುದರಿಂದ ಜನರು ವೃದ್ಧಿಯಾಗುತ್ತಿರುವುದರಿಂದ ವಿದ್ಯಾಭ್ಯಾಸದ ಪ್ರಾಮುಖ್ಯತೆ ಹೆಚ್ಚುತ್ತಿದೆ. ಕಲಿತವರಲ್ಲಿ ಮುಂದಾಲೋಚನೆ ಹೆಚ್ಚುತ್ತಿದೆ. ಕಲಿತ ಅಲ್ಪವಿದ್ಯೆಯಿಂದಲೇ ಸ್ವಾರ್ಥಪರರಾಗಿ ಮುಂದುವರಿಯಲು ಪ್ರಯತ್ನಿಸಿ ಸಹಾಯಕ್ಕಾಗಿ ಶ್ರೀಮಂತರನ್ನೇ ಆಶ್ರಯಿಸುವರು. ಶ್ರೀಮಂತರು ತಮಗೆ ಆಶ್ರಯ ಕೊಡಬಹುದು ಕರುಣೆ ತೋರಿಸಬಹುದು ಎಂಬ ಅವರ ಊಹೆ ಸುಳ್ಳಾಗುತ್ತದೆ. ಹೆಚ್ಚಿನ ಹಣವಿದ್ದರೂ ಹಣವನ್ನು ಇತರರಿಗಾಗಿ ಉಪಯೋಗಿ ಸುವುದರಲ್ಲಿ ಅವರಿಗೆ ಮನಸ್ಸಿರುವುದಿಲ್ಲ. ಯಾಕೆಂದರೆ ಅವರಲ್ಲಿಯೂ ಕಠಿಣರು ಸ್ವಾರ್ಥಪರರೂ ದೀನರಾಗಿ ಬಡತನದಲ್ಲಿದ್ದು ತಕ್ಷಣವೇ ಐಶ್ವರ್ಯವಂತರಾದವರೂ ಇರುವರು. ಆದರೆ ಅವರಲ್ಲಿ ಎಲ್ಲರೂ ಸ್ವಾರ್ಥಿಗಳಲ್ಲ. ಯಾಕೆಂದರೆ ಬಡವರಿಗೆ, ರೋಗಿಗಳಿಗೆ, ಅನಾಥರಿಗೆ ಸೌಕರ್ಯಗಳನ್ನು ಕಲ್ಪಿಸುವ ಹಾಗೆ ಅನಾಥಾಲಯಗಳು, ಆಸ್ಪತ್ರೆಗಳು, ಪುಸ್ತಕ ಭಂಡಾರಗಳು ಮುಂತಾದವುಗಳನ್ನು ತೆರಿಗೆಯ ಹಣದಿಂದಲೂ ಶ್ರೀಮಂತರ ದಾನದಿಂದಲೂ ನಡೆಸಲಾಗುತ್ತಿದೆ. ಇಂತಹ ಅನೇಕ ಸಂಸ್ಥೆಗಳು ಉದಾರಿ ಶ್ರೀಮಂತರಿಗೆ ಚಿರಋಣಿಗಳಾಗಿವೆ. ಶ್ರೀಮಂತರ ಎಷ್ಟೋ ಒಳ್ಳೆಯ ಕಾರ್ಯಗಳು ಸಾಮಾನ್ಯರ ಗಮನಕ್ಕೆ ಬರುವುದಿಲ್ಲ. ಇದರಿಂದ ಮಾಲಿಕನಿಗೂ ಕೂಲಿಗಾರನಿಗೂ ದ್ವೇಷ ಇದ್ದೇ ಇದೆ. ಕೂಲಿಗಾರರಿಗೆ ಅವರ ಕೆಲಸದಲ್ಲಿ ಕಹಿ ಉಂಟಾಗುತ್ತದೆ. ಶ್ರೀಮಂತರಿಗೆ ನ್ಯಾಯಾಲಯವು ತಮ್ಮ ಹಕ್ಕನ್ನು ಕಾಪಾಡುವುದು ಎಂಬ ಭರವಸೆ ಇದೆ. ಇದರಿಂದ ಶ್ರೀಮಂತರು ಸರ್ಕಾರದ ಕಡೆಗೆ ಸೆಳೆಯಲ್ಪಡುತ್ತಾರೆ. ಆಗ ಕೂಲಿಗಾರರಲ್ಲಿ ಅಸಾಮಾದಾನ ಉಂಟಾಗಿ ಸರಕಾರ ಇರುವುದೇ ಶ್ರೀಮಂತರಿಗಾಗಿ ಎಂದು ಭಾವಿಸಿ ಅದಕ್ಕೆ ವಿರೋಧವಾದ ಸಮತಾವಾದದ ಕಡೆಗೂ ದೊಂಬಿಯ ಕಡೆಗೂ ಸೆಳೆಯಲ್ಪಡುತ್ತಾರೆ ಇದರಿಂದ ತಮ್ಮ ಆಸಕ್ತಿ ಕೈಗೂಡುವುದೆಂದು ಯೋಚಿಸುವರು. ಆದರೆ ಅದೆಲ್ಲಾ ವ್ಯರ್ಥ ಎಲ್ಲಾ ರೀತಿಯ ಸರಕಾರದಲ್ಲಿ ಕುಂದುಕೊರತೆಗಳಿದ್ದೇ ಇರುವುದು ಎಲ್ಲವು ನಾಶವಾಗಲೇಬೇಕು. ಸತ್ಯವೇದದಲ್ಲಿಯೂ ಅದರ ನಾಶವನ್ನು ಮುಂತಿಳಿಸಲಾಗಿದೆ.

ಹಳೆ ಒಡಂಬಡಿಕೆಯಲ್ಲಿರುವ ಪ್ರವಾದನೆಗಳು ಹೆಚ್ಚಾಗಿ

ಐಗುಪ್ತ, ಬಾಬೆಲ್ ಮತ್ತು ಇಸ್ರಾಯೇಲ್ಯರಿಗೆ ಸಂಬಂಧಿಸಿವೆ. ಈ ಹೆಸರಿನ ರಾಜ್ಯಗಳು ಇದ್ದವು ಮತ್ತು ಹೇಳಿಕೆಯ ಪ್ರಕಾರ ನಾಶವಾಗಿಯೂ ಹೋದವು. ಬಾಬೆಲ್ ನಾಶವಾಗಿ ಎಷ್ಟೋ ವರ್ಷಗಳಾದ ಮೇಲೆ ಪ್ರಕಟನೆಯಲ್ಲಿ ಇದರ ವಿಷಯವಾಗಿ ಪ್ರವಾದನೆಯಿದೆ. ಅದು ಸಾಂಕೇತಿಕ ಬಾಬೆಲನ್ನು ಸೂಚಿಸುವುದು. ವಾಸ್ತವವಾಗಿ ಐಗುಪ್ತವು ಪ್ರಪಂಚವನ್ನು, ಬಾಬೆಲ್ ಹೆಸರಿನ ಕ್ರೈಸ್ತ ಸಭೆಯನ್ನು, ಇಸ್ರಾಯೇಲ್ ಯಥಾರ್ಥವಾದ ಪ್ರಪಂಚವನ್ನು ಸೂಚಿಸುತ್ತದೆ. ಇದರಿಂದ ಅಥವಾ ಇದಲ್ಲದೆ ಇಸ್ರಾಯೇಲ್‌ಗೆ ಆಶೀರ್ವಾದವು, ಐಗುಪ್ತಕ್ಕೆ ಉಪದ್ರವಗಳು ಬರುವವು. ಬಾಬೆಲಿಗೆ ನಿತ್ಯನಾಶನವು ಬರುವುದು. ಬೀಸುವ ದೊಡ್ಡ ಕಲ್ಲಿನಂತಿರುವ ಅದನ್ನು ಸಮುದ್ರದೊಳಗೆ ಬಿಸಾಡಿ ಎಂದೆಂದಿಗೂ ತಲೆಯೆತ್ತದಿರುವಂತೆ ನಾಶಮಾಡಲಾಗುವುದು. ಪ್ರಕ. 18:21.

ಬಂಡವಾಳದಾರರಿಗೂ ಕಾರ್ಮಿಕರಿಗೂ ಇರುವ ವ್ಯತ್ಯಾಸದ ಫಲಿತಾಂಶವನ್ನು ಯಾಕೋಬ 5:1–4ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಈ ರೀತಿ ನೀತಿವಂತರಿಂದ ಹಣನ್ನು ಕಸಿದು ಮರೆಯುತ್ತಿರುವವರಿಗೆ ಸಂಕಟವು ಬರುವುದು. ಪೌಲನು ಸತ್ಯ ಮಕ್ಕಳಿಗೆ ತಾಳ್ಮೆಯಿಂದಿದ್ದು ಕರ್ತನ ಮೂಲಕ ಬಿಡುಗಡೆ ಹೊಂದುವುದನ್ನು ಎದುರು ನೋಡುತ್ತಾ ಇರಿ ಎಂದು ಹೇಳುತ್ತಾನೆ. ಯಾರು ಎಚ್ಚರಿಕೆಯಿಂದ ವಾಕ್ಯಗಳನ್ನು ಓದಿ ಪ್ರಪಂಚದಲ್ಲಿ ಸಂಭವಿಸುತ್ತಿರುವ ಕಾರ್ಯಗಳನ್ನು ಗಮನಿಸುತ್ತಾರೋ ಅಂತವರಿಗೆ ಕಡೆಗಾಲವು ಸಮೀಪದಲ್ಲಿದೆ ಎಂದು ಸುಲಭವಾಗಿ ಗ್ರಹಿಸಬಹುದು. ಆದರೆ ಭೂಮಿಯ ಮೇಲಿರುವ ಸಂಕಟವನ್ನು ಮಾನವ ಹೃದಯವು ಗ್ರಹಿಸಲಾರದಾಗಿದೆ. ಕೂಲಿಯನ್ನು ಕಡಿಮೆ ಮಾಡಿ ಎಂದು ಹೇಳುವ ಬಂಡವಾಳಗಾರರು, ಬೆಲೆಗಳ ಏರಿಕೆ, ಕೂಲಿಗಾರರ ಸತ್ಯಾಗ್ರಹ ಇವೆಲ್ಲವುಗಳಿಂದ ಮಾನವನ ಮಟ್ಟ ಕೆಳದರ್ಜೆಗೆ ಇಳಿದು ಹೋಗಿದೆ. ಹೀಗೆ ಎಷ್ಟು ದಿನ? ಎಂಬುದೇ ಒಂದು ದೊಡ್ಡ ಪ್ರಶ್ನೆ. ಒಂದಲ್ಲ ಒಂದು ದಿನ ದಂಗೆಯಾಗಲೇಬೇಕು. ಇದು ದೇಶದ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮವನ್ನುಂಟುಮಾಡುವುದು. ಬ್ಯಾಂಕುಗಳು ದಿವಾಳಿಯಾಗುವವು ಕಾರ್ಖಾನೆಗಳು ಮುಚ್ಚಲ್ಪಡುವವು. ಜನರು ನಿರುದ್ಯೋಗಿಗಳಾಗಿ ಅಲೆದಾಡುವರು. ನ್ಯಾಯವನ್ನೇ ಧಿಕ್ಕರಿಸಿ ನಡೆಯುವರು. ಪ್ರವಾದಿಯು ತಿಳಿಸಿರುವಂತೆ ಕೊಂಡುಕೊಳ್ಳುವವನು ಹರ್ಷಪಡುವುದಿಲ್ಲ ಮಾರುವವನು ದುಃಖಿಸದಿರಲಿ ಯೆಹೆಜ್ಕೆ 7:10–9. ಆಸ್ತಿಯ ರಕ್ಷಣೆಗೆ ಯಾರೂ ಕೈ ಹಾಕುವುದಿಲ್ಲ; ಯಾಕೆಂದರೆ ಸಂಕಟವು ಎಲ್ಲರಿಗೂ ಬರುವುದು. ಆ ಸಂಕಟವನ್ನು ಕೊನೆಗಾಣಿಸಲು ಯಾರ ಕೈಯಲ್ಲಿಯೂ ಆಗುವುದಿಲ್ಲ. ಯಾಕೆಂದರೆ ಎಲ್ಲರೂ ಬಲಹೀನರಾಗುವರು. ಬೀದಿಯಲ್ಲಿ ಬಂಗಾರವನ್ನು ಬಿಸಾಡುವರು. ಬೆಳ್ಳಿಯನ್ನು ತೂರುವರು. ದೇವರ ರೌದ್ರದ ದಿನದಲ್ಲಿ ಬೆಳ್ಳಿ ಬಂಗಾರಗಳು ಅವರನ್ನು ರಕ್ಷಿಸಲಾರವು.

ಇಸ್ರಾಯೇಲ್ಯರ ಸಂಕಟ ಕಾಲವು ಸುಮಾರು 40 ವರ್ಷಗಳ ಕಾಲವಿದ್ದಿತು. ಆಕಾಲವೆಲ್ಲಾ ಸಂಕಟದ ಕಾಲವಾಗಿತ್ತು ಆ ಸಂಕಟವು ಕ್ರೈಸ್ತ ರಾಜ್ಯದಲ್ಲಿ ಇನ್ನೂ ಭಯಂಕರವಾಗಿರುವುದು. ಯಾಕೆಂದರೆ ಇಸ್ರಾಯೇಲ್ಯರು ದೈವಾನುಗ್ರಹವನ್ನು ಹೊಂದಿದ್ದು ಸುವಾರ್ತಾಯುಗಕ್ಕೆ ಮುಂಗುರುತು. ಕರ್ತನ ದಿನವನ್ನು ಪ್ರವಾದನೆಗಳೆಲ್ಲವೂ ಹೆಚ್ಚು ಕಡಿಮೆ ಇಸ್ರಾಯೇಲ್ ಮತ್ತು ಯೆರುಸಲೇಮಿಗೆ ಸಂಬಂಧಿಸಿದ್ದಾದರು ಒಟ್ಟಿನಲ್ಲಿ ಎಲ್ಲಾ ಮಾನವ ಜನಾಂಗವನ್ನು ಸೂಚಿಸುವದೆಂದು ಕಂಡುಕೊಳ್ಳಬಹುದು. ಇದರ ವಿಷಯವಾಗಿರುವ ಮತ್ತೊಂದು ಪ್ರವಾದನೆಯನ್ನು ನೋಡೋಣ. ಕರ್ತನಾದ ಯೆಹೋವನ ಸನ್ನಿಧಿಯಲ್ಲಿ ಮೌನವಾಗಿರಿ, ಯೆಹೋವನ ದಿನವು ಸಮೀಪಿಸಿತು. ಯೆಹೋವನು ಯಜ್ಞದ ಔತಣವನ್ನು ಸಿದ್ಧಪಡಿಸಿದ್ದಾನೆ. ಕರೆದವರನ್ನು ಪ್ರತಿಷ್ಠೆಪಡಿಸಿದ್ದಾನೆ. ಯೆಹೋವನು ಆ ಯಜ್ಞದ ದಿನದಲ್ಲಿ ನಾನು ದೇಶಾಧಿಪತಿಗಳನ್ನೂ ರಾಜವಂಶದವರನ್ನು ವಿಶೇಷ ವಸ್ತ್ರಧಾರಿಗಳೆಲ್ಲರನ್ನು ದಂಡಿಸುವೆನು. ಹೊಸ್ತಿಲ ದಾರಿ ನುಗ್ಗಿ ಮೋಸ ಹಿಂಸೆಗಳಿಂದ ದೋಚಿದ್ದನ್ನು ತಮ್ಮ ಒಡೆಯನ ಮನೆಯೊಳಗೆ ತುಂಬಿಸುವವರೆಲ್ಲರನ್ನು ಆ ದಿನದಲ್ಲಿ ದಂಡಿಸುವೆನು. (ಇದರಿಂದ ಬರುವ ಸಂಕಟವು ಸಕಲ ಜನರಿಗೂ ದುಃಖವನ್ನು ತರುವುದು) "ಯೆಹೋವನ ಮಹಾ ದಿನವು ಹತ್ತಿರವಾಯಿತು, ಸಮೀಪಿಸಿತು, ಬಹು ತ್ವರೆಯಾಗಿಬರುತ್ತಿದೆ; ಆಹಾ, ಕಿವಿಗೊಡರಿ, ಯೆಹೋವನ ದಿನವೇ ಬಂದಿತು; ಇಗೋ, ಅಲ್ಲಿ ಒಬ್ಬ ಶೂರನು ಘೋರವಾಗಿ ಗೋಳಾಡುತ್ತಿದ್ದಾನೆ! ಆ ದಿನವು ರೌದ್ರನ ದಿನ, ಶ್ರಮೆ ಸಂಕಟದ ದಿನ, ಹಾಳುಮಾಡುವ ದಿನ, ಕತ್ತಲಿನ ಮೊಬ್ಬಿನ ದಿನ, ಕಾರ್ಮುಗಿಲ (ಸಂಕಟ) ಕಗ್ಗತ್ತಲಿನ ದಿನ. ಕೋಟೆಗಳನ್ನೂ ದೊಡ್ಡ ಕೊತ್ತಲಗಳನ್ನೂ ಹಿಡಿಯಲು ಆರ್ಭಟಿಸಿ ಕೊಂಬೂದುವ ದಿನ. ಯೆಹೋವನಾದ ನನಗೆ ಜನರು ಪಾಪ ಮಾಡಿದ ಕಾರಣ ಕುರುಡರಂತೆ ನಡೆಯುವ ಹಾಗೆ ಅವರನ್ನು ಸಂಕಟಪಡಿಸುವೆನು; ಅವರ ರಕ್ತವು ದೂಳಿನಂತೆ ಚೆಲ್ಲಿ ಹೋಗುವುದು, ಅವರ ಮಾಂಸವು ಮಲದ ಹಾಗೆ ಬಿದ್ದಿರುವುದು. ಯೆಹೋವನ ರೌದ್ರದ ದಿನದಲ್ಲಿ ಅವರ ಬೆಳ್ಳಿ ಬಂಗಾರವು ಕೂಡ ಅವರನ್ನು ರಕ್ಷಿಸಲಾರವು; ಆತನ ರೋಷಾಗ್ನಿಯು ದೇಶವನ್ನೆಲ್ಲಾ ನುಂಗಿಬಿಡುವುದು; ಆತನು ದೇಶ ನಿವಾಸಿಗಳೆಲ್ಲರನ್ನೂ ಕೊನೆಗಾಣಿಸುವನು, ಹೌದು, ಘೋರವಾಗಿ ನಿರ್ಮೂಲನ ಮಾಡುವನು. ಜೆಫನ್ಯ 1:7–9, 14–18 ಇದನ್ನು ಪ್ರಕ. 19:17 ರೊಂದಿಗೆ ಹೋಲಿಸಿ.

ಆ ದಿನದಲ್ಲಿ ಶ್ರೀಮಂತರೆಲ್ಲಾ ನಾಶವಾಗಿ ಹೋಗುವರು ಎಂದು ಆ ದಿನದ ವಿಷಯವಾದ ಪ್ರವಾದನೆಗಳನ್ನು

ವಿವರಿಸುವುದಕ್ಕಾಗುವುದಿಲ್ಲ. ದೇವರ ರೋಷಾಗ್ನಿಯು ದೇಶವನ್ನೆಲ್ಲಾ ನುಂಗುವುದು. ಬೆಂಕಿಯನ್ನು ಸೂಚಿಸುತ್ತಾ ಪ್ರವಾದಿಯಾದ ಚೆಫನ್ಯನು ಹೀಗೆನ್ನುತ್ತಾನೆ. ಯೆಹೋವನು ಹೀಗೆನ್ನುತ್ತಾನೆ. ಹೀಗಿರಲು ನನ್ನನ್ನು ಕಾದುಕೊಂಡಿರಿ, ನಾನು ಬೇಟೆಯಾಡಲು ಏಳುವ ದಿನವನ್ನು ಎದುರು ನೋಡಿರಿ; ಜನಾಂಗ ರಾಜ್ಯಗಳ ಮೇಲೆ ರೌದ್ರವನ್ನು, ಹೌದು, ನನ್ನ ಉಗ್ರಕೋಪವನ್ನೆಲ್ಲಾ ಹೊಯ್ದು ಬಿಡುವುದಕ್ಕಾಗಿ ಆ ಜನಾಂಗಗಳನ್ನು ಸೇರಿಸಿ ಆ ರಾಜ್ಯಗಳನ್ನು ಕೂಡಿಸಬೇಕೆಂದು ತೀರ್ಮಾನಿಸಿದ್ದೇನೆ. ( ಎಲ್ಲಾ ಜನಾಂಗದವರು ಈಗ ಸರಕಾರದ ವಿರುದ್ಧ ಕೂಡುತ್ತಿರುವರು) ಸಾರ್ವಜನಿಕ ರಕ್ಷಣೆಗಾಗಿ ರಾಜ್ಯವೆಲ್ಲಾ ಒಂದು ಗೂಡಿದರೆ ಯಾರು ಸಫಲರಾಗುವುದಿಲ್ಲ. ಆಗ (ಈ ರಾಜ್ಯಗಳೆಲ್ಲಾ ನಾಶವಾಗಿ ಈಗಿನ ಸಮಾಜವು ಬೆಂಕಿಯಲ್ಲಿ ನಾಶವಾದ ಮೇಲೆ) ಎಲ್ಲರೂ ಒಂದೇ ಮನಸ್ಸಿನಿಂದ ಯೆಹೋವನನನ್ನು ಸೇವಿಸಿ ಆತನ ಹೆಸರೆತ್ತಿ ಪ್ರಾರ್ಥಿಸುವಂತೆ ಜನಾಂಗದವರ ತುಟಿಗಳನ್ನು ಮಾರ್ಪಡಿಸಿ ಶುದ್ಧಮಾಡುವನು. ಚೆಫನ್ಯ 3:8–9 ವೇದೋಕ್ತಿಗಳಲ್ಲಿ ಭೂಲೋಕವು ಈಗಿನ ಸಮಾಜವನ್ನೂ, ಪರ್ವತಗಳು ರಾಜ್ಯಗಳನ್ನೂ, ಆಕಾಶವು ಆತ್ಮೀಯ ಆಡಳಿತವನ್ನೂ, ಸಮುದ್ರವು ಸಮಾಧಾನವಿಲ್ಲದ ಅತೃಪ್ತಿಯ ಜನರ ಗುಂಪನ್ನು ಸೂಚಿಸುತ್ತದೆ.ಬೆಂಕಿಯು ಎಲ್ಲವನ್ನು ಸುಡುವುದರಿಂದ ನಾಶನದ ಗುರುತಾಗಿದೆ. ಗಂಧ'ಕವನ್ನು ಅದಕ್ಕೆ ಸೇರಿಸಿದಾಗ ಇನ್ನು ವಿನಾಶಕಾರಿಯಾಗುವುದು. ಯಾಕೆಂದರೆ ಎಲ್ಲಾ ಜೀವಿಗಳಿಗೆ ಗಂಧಕದ ಹೊಗೆಯೇ ವಿನಾಶಕಾರಿಯಾಗಿರುವುದು ಇದನ್ನು ಗಮನದಲ್ಲಿಟ್ಟುಕೊಂಡು ಪೇತ್ರನ ಪ್ರವಾದನೆಯನ್ನು ಗಮನಿಸಿದರೆ ಆ ನೀರುಗಳಿಂದಲೇ ಆ ಕಾಲದಲ್ಲಿದ್ದ ಲೋಕವು ಜಲ ಪ್ರಳಯದಲ್ಲಿ ನಾಶವಾಯಿತು." ಆದರೆ ಈಗಿರುವ ಭೂಮ್ಯಾಕಾಶ ಅದೇ ವಾಕ್ಯದ (ದೈವಶಕ್ತಿಯಿಂದ) ಬಲದಿಂದ ಬೆಂಕಿಯ ಮೂಲಕ ನಾಶವಾಗುವುದಕ್ಕೆ ಇಡಲ್ಪಟ್ಟಿದೆ. 2 ಪೇತ್ರ 3:6,7. ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. (ಯಾರು ಗೊತ್ತು ಮಾಡಲಾರರು) ಆ ದಿನದಲ್ಲಿ ಆಕಾಶ ಮಂಡಲವು (ವಾಯುಮಂಡಲದಲ್ಲಿರುವ ದುರಾತ್ಮ ಸೇನೆಗಳು ಇದಕ್ಕೆ ಸೈತಾನನೇ ಅಧಿಪತಿ) ಮಹಾಘೋಷದಿಂದ ಇಲ್ಲದೆ ಹೋಗುವುದು. ಸೂರ್ಯ ಚಂದ್ರ ನಕ್ಷತ್ರಗಳು ಲಯವಾಗಿ ಹೋಗುವವು ಭೂಮಿಯು (ಈಗಿನ ಸಾಮಾಜಿಕ ಪದ್ಧತಿ) ಅದರಲ್ಲಿರುವ ಕೆಲಸಗಳು (ಹೆಮ್ಮೆ,ದರ್ಜೆ, ಐಶ್ವರ್ಯ ಮತ್ತು ರಾಜತ್ವ) ಸುಟ್ಟು ಹೋಗುವವು. ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶವನ್ನು (ಕ್ರಿಸ್ತನ ರಾಜ್ಯ) ನೂತನ ಭೂ ಮಂಡಲವನ್ನು (ಪ್ರೀತಿ ಮತ್ತು ನ್ಯಾಯದ ಆಧಾರದ ಮೇಲೆ ರಚಿವಾಗುವ ಹೊಸ ಸಮಾಜ) ಎದುರು ನೋಡುತ್ತಾ ಇದ್ದೇವೆ. 2 ಪೇತ್ರ 3:10–13 ಅಪೋಸ್ತಲರೂ ಸಹ ಪ್ರವಾದಿಗಳಾಗಿದ್ದರೆಂಬುದನ್ನು ಗಮನಿಸಬೇಕು. ಮುಖ್ಯರಾದವರೆಂದರೆ ಪೇತ್ರ ಯೋಹಾನ ಮತ್ತು ಪೌಲ. ಇವರು ದೇವರ ಬಾಯಾಗಿದ್ದು ಸಭೆಯ ಪ್ರಯೋಜನಕ್ಕೋಸ್ಕರ ಹಿಂದಿನ ಪ್ರವಾದಿಗಳ ಹೇಳಿಕೆಯನ್ನು ವಿವರಿಸುವವರಾಗಿದ್ದರು ಮತ್ತು ಮುಂದೆ ಬರುವುದನ್ನು ಪ್ರವಾದಿಸುವವರಾಗಿದ್ದರು. ದೇವರು ತಕ್ಕ ಕಾಲದಲ್ಲಿ ತನ್ನ ಪ್ರವಾದಿಗಳನ್ನು ಎಬ್ಬಿಸುವವನಾಗಿರುವನು. (ಇದರ ವಿಷಯವಾಗಿ ನಮ್ಮ ಕರ್ತನ ಹೇಳಿಕೆಯನ್ನು ನೋಡಿರಿ. ಮತ್ತಾಯ 24:45, 46 ಇದೇ ರೀತಿ ಅವರು ತಮ್ಮ ಕಾಲದಲ್ಲಿದ್ದದ್ದನ್ನು ಬರೆಯದೆ ಮುಂದಿನ ಕಾಲದ್ದನ್ನು ಬರೆಯುವವರಾದರು ಹಿಂದಿನ ಪ್ರವಾದಿಗಳಂತೆ ಸರಿಯಾಗಿ ಮೆಚ್ಚುವುದಕ್ಕಾಗುತ್ತಿರಲಿಲ್ಲ 1 ಪೇತ್ರ 1:12,13 ಆದರೂ ಅವರು ವಿಶೇಷವಾಗಿ ನಡೆಸಲ್ಪಟ್ಟು ಬರೆದರು. ಅವರು ಗೂಢಾರ್ಥದಿಂದ ಬರೆಯುತ್ತಿದ್ದರಿಂದ ಅವರಿಗೇ ಅದು ಅರ್ಥವಾಗುತ್ತಿರಲಿಲ್ಲ. ಇದರಿಂದ ಬರೆಯುವವರಾದ ಅವರು ಹೇಗಿದ್ದರೂ ದೇವರ ವಾಕ್ಯದಲ್ಲಿ ನಂಬಿಕೆಯಿಡುವುದಕ್ಕೆ ಸಹಾಯವಾಗುತ್ತದೆ. ಮಲಾಕಿಯನು ಕರ್ತನ ದಿನದ ವಿಷಯವಾಗಿ "ಇಗೋ ಆ ದಿನವು ಬರುತ್ತಿದೆ, ಒಲೆಯಂತೆ ಉರಿಯುತ್ತಿದೆ, ಸಕಲ ಅಹಂಕಾರಿಗಳು ದುಷ್ಕರ್ಮಿಗಳು ಹೊಟ್ಟಿನಂತಿರುವರು, ಬರುತ್ತಿರುವ ಆ ದಿನವು ಅವರಿಗೆ ಅಗ್ನಿ ಪ್ರಳಯವಾಗುವುದು ಬುಡರೆಂಬೆಗಳು ಯಾವುದನ್ನು ಉಳಿಸದು "ಮಲಾಕಿ 4:1ಎಂದು ಹೇಳಿರುವನು. ಯಾವ ದಬ್ಬಾಳಿಕೆಯೂ ಹೆಮ್ಮೆಯೂ ಮುಂದೆ ಚಿಗುರದಂತೆ ನಾಶಮಾಡಲಾಗುವುದು. ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯ ನಂತರವೂ ಅದು ಮೇಲೇರಿ ಬರಲಾಗದು. ಪ್ರಕ. 20:9 ಗರ್ವವನ್ನು ಬುಡಸಮೇತ ಕಿತ್ತು ಹಾಕಲಾಗುವುದು. ಎಲ್ಲಾ ದುಷ್ಟ ಅಹಂಕಾರಿಗಳು ನಾಶವಾಗಿ ಹೋಗುವರು. ಇವರಿಗೆ ಏನಾದರೂ ಉದ್ಧಾರವಿದೆಯೇ, ಇಲ್ಲವೇ ಇಲ್ಲ ದೇವರ ರೋಷಾಗ್ನಿಯು ಉರಿಯುತ್ತಿದ್ದರೂ ಆ ನ್ಯಾಯಾಧಿಪತಿಯು ಅದರಿಂದ ಆಚೆಗೆಳೆಯಲು ಅನುಮತಿಯನ್ನಿಯುತ್ತಾನೆ. ಯೂದ 23ನೇ ವಚನ. ಯಾರು ಇದನ್ನು ತಿರಸ್ಕರಿಸುತ್ತಾರೋ ಅವರು ತಮ್ಮ ಗರ್ವದಿಂದಲೇ ನಾಶವಾಗಿ ಹೋಗುವರು. ಯಾಕೆಂದರೆ ಅದರ ಸ್ವಭಾವವೇ ಅದು. ಪ್ರವಾದಿಯು ಆ ದಿನವನ್ನು ವರ್ಣಿಸುತ್ತಾ ಹೇಗೆ ದೇವರು ಅಗ್ನಿಯಿಂದ ತನ್ನ ಮಕ್ಕಳನ್ನು ಶುದ್ಧೀಕರಿಸಿ ತನ್ನ ಬಳಿಗೆ ತರುವುದನ್ನು "ಇಗೋ ನನ್ನ ದೂತನನ್ನ ಕಳುಹಿಸುತ್ತೇನೆ, ಆತನು ನನ್ನ ಮುಂದೆ ದಾರಿಯನ್ನು ಸರಿಮಾಡುವನು; ನೀವು ಹಂಬಲಿಸುವ ಕರ್ತನು ತನ್ನ ಆಲಯಕ್ಕೆ ಪಕ್ಕನೆ ಬರುವನು ಆತನು ಬರುವ ದಿನವನ್ನು ಯಾರೂ ತಾಳರು? ಬೆಳ್ಳಿ,ಬಂಗಾರಗಳನ್ನೋ ಎಂಬಂತೆ ಶುದ್ಧೀಕರಿಸುವನು; ಅವರು ಸಧರ್ಮಿಗಳಾಗಿ ಯೆಹೋವನಿಗೆ ನೈವೇದ್ಯಗಳನ್ನು ತಂದೊಪ್ಪಿಸುವರು." ಮಲಾಕಿ 3:1–3 ಪೌಲನು ಸಹ ಇದೇ ಬೆಂಕಿಯನ್ನು ಸೂಚಿಸುತ್ತಾನೆ.

ಅಪನಂಬಿಕೆಯವರಿಂದ ಎಲ್ಲಾ ಸುಳ್ಳುಗಳನ್ನು ತೆಗೆದು ಶುದ್ಧಮಾಡಲಾಗುವುದು ಯಾರು ಕ್ರಿಸ್ತ ನಂಬಿಕೆಯೆಂಬ ಆಸ್ತಿವಾರದ ಮೇಲೆ ಕಟ್ಟುತ್ತಿರುವರೋ ಅವರಿಗೆ ಯೇಸುವಿನ ವಿಮೋಚನ ಕಾರ್ಯವನ್ನು ಸೂಚಿಸುತ್ತಾ ಆ ಆಸ್ತಿವಾರದ ಮೇಲೆ ಚಿನ್ನ ರತ್ನ ಬೆಳ್ಳಿ ಕಟ್ಟಿಗೆ ಹುಲ್ಲು ಆಪು ಮುಂತಾದವುಗಳಲ್ಲಿ ಯಾವುದರಿಂದ ಕಟ್ಟಿದರೂ ಅವನ ಕೆಲಸವು ವ್ಯಕ್ತವಾಗುವುದು. ಕ್ರಿಸ್ತನು ಬರುವ ದಿನವು ಬೆಂಕಿಯಂತೆ ಉದಯವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸಬಹುದು. 1 ಕೊರಿ. 3:12–15 ಪೌಲನು ಇದನ್ನೇ ಸೂಚಿಸುತ್ತಾ ಹೀಗೆ ಹೇಳುತ್ತಾನೆ, ಒಬ್ಬನು ಕಟ್ಟಿದ್ದು ಸುಟ್ಟು ಹೋದರೆ ಅವನ ಸಂಬಳ ನಷ್ಟವಾಗುವುದು. ಇದನ್ನು ಹುಲ್ಲು ಕಟ್ಟಿಗೆ ಆಪುಗಳಿಂದ ಕಟ್ಟಿರುವುದು ಸುಡುವುದು ಆದರೆ ಸತ್ಯವಾದ ಆಸ್ತಿವಾರದ ಮೇಲೆ ಚಿನ್ನ ಬೆಳ್ಳಿ ರತ್ನಗಳಿಂದ ಕಟ್ಟಿದ್ದು ಸುಟ್ಟು ಹೋಗುವುದಿಲ್ಲ 2 ಪೇತ್ರ 1:5–11 ಆದರೆ ಯಾರು ಹೆಚ್ಚು ದೈವ ಜ್ಞಾನವನ್ನು ಹೊಂದಿ ಆತನನ್ನು ತಿರಸ್ಕರಿಸುತ್ತಾರೋ ಅವರು ಎರಡನೇ ಮರಣಕ್ಕೆ ಹೋಗುವರು. ಇಬ್ರಿಯ 6:4–8; 10: 26–31 ಇದೇ ದಿನದ ವಿಷಯವಾಗಿ ಪೌಲನು ವಿವರಿಸುತ್ತಾ ಹೇಳುವುದೇನೆಂದರೆ ಆತನ ಧ್ವನಿಯು ಆ ಕಾಲದಲ್ಲಿ ಭೂಮಿಯನ್ನು ಕದಲಿಸಿತು. ಅಂದರೆ ದೇವರು ಸಿನಾಯಿ ಪರ್ವತದಲ್ಲಿ ಧರ್ಮಶಾಸ್ತ್ರವನ್ನು ಕೊಟ್ಟಿದ್ದು ಮುಂದೆ ಕ್ರಿಸ್ತನ ರಾಜ್ಯದಲ್ಲಿ ಹೊಸ ಒಡಂಬಡಿಕೆಯನ್ನು ಪರಿಚಯ ಮಾಡಿಸುವುದರ ಗುರುತಾಗಿದೆ. ಆಗ ದೈವ ವಾಣಿಯು ಭೂಮಿಯನ್ನು ನಡುಗಿಸಿತು. ಈಗ ಆತನು ವಾಗ್ದಾನದಂತೆ ಭೂಮಿಯನ್ನು ಮಾತ್ರವಲ್ಲದೆ ಪರಲೋಕವನ್ನೂ ನಡುಗಿಸುವೆನು ಎಂದು ಹೇಳಿರುವನು ಇನ್ನೊಂದು ಸಾರಿ ಎಂಬ ಮಾತನ್ನು ಯೋಚಿಸಿದರೆ ಕದಲಿರುವ ವಸ್ತುಗಳು ನಿರ್ಮಿತವಾದುವುಗಳಿಂದ ತೆಗೆದು ಹಾಕಲ್ಪಡಬೇಕು. (ಅಸತ್ಯದ ವಸ್ತುಗಳು) ಆಗ ಕದಲಿಸದೇ ಇರುವ ವಸ್ತುಗಳ (ಸತ್ಯ ಮತ್ತು ಒಳ್ಳೆಯದು) ಸ್ಥಿರವಾಗಿ ನಿಲ್ಲುವುದು. ಆದ ಕಾರಣ ಯಾರು ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಯಭಕ್ತಿಯಿಂದ ಮಾಡೋಣ ಯಾಕೆಂದರೆ ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ. ಇಬ್ರಿ. 12:26–29 ಸುಳ್ಳಿನ ತತ್ವಗಳೆಲ್ಲಾ ಆ ಬೆಂಕಿಯಲ್ಲಿ ನಾಶವಾಗಿ ಹೋಗುವುದು. ತಪ್ಪು ಅಭಿಪ್ರಾಯಗಳೆಲ್ಲವೂ ಆ ದಿನದಲ್ಲಿ ಬಿರುಗಾಳಿಯಲ್ಲಿ ಹಾರಿ ಹೋಗುವವು. ಸೈತಾನನಿಂದ ಬಂದ ಕೆಟ್ಟ ಕಾರ್ಯಗಳೆಲ್ಲಾ ಹಾಳಾಗುವುದನ್ನು ಕಂಡು ಸಂತೋಷವಾಗುವುದು. ಬೆಂಕಿಯ ರೌದ್ರದಿನಗಳು ಕಳೆದ ಮೇಲೆ ನೀತಿ ಸೂರ್ಯನಾದ ಕ್ರಿಸ್ತನ ರಾಜ್ಯವು ಉದಯವಾಗಿ ಕ್ರಿಸ್ತನು ಪ್ರಕಾಶ ರೂಪದಲ್ಲಿ ಬಂದು ಜನರನ್ನು ಆಶೀರ್ವದಿಸಿ ಸ್ವಸ್ಥಪಡಿಸಿ ಲೋಕವನ್ನು ಉದ್ಧಾರ ಮಾಡುವನು.

ಪ್ರವಾದಿಯಾಗಿದ್ದ ದಾವೀದನೂ ಕೂಡ ರೌದ್ರದ ದಿನದ ವಿಷಯವಾಗಿ ಅನೇಕ ಪದಗಳನ್ನು ಉಪಯೋಗಿಸಿ ವರ್ಣಿಸಿರುವುದನ್ನು ಗಮನಿಸಬಹುದು. ಇದರ ವಿಷಯವಾಗಿ ಕೀರ್ತನೆ 50:3; 97:2–6;110:2–6:1–5ರಲ್ಲಿ ಅಗ್ನಿ, ಬಿರುಗಾಳಿ ಮತ್ತು ಕತ್ತಲೆ ಎಂದು ಪ್ರಬೋಧಿಸಲಾಗಿದೆ.ಎಲ್ಲಾ ಕೆಟ್ಟತನವನ್ನು ನಾಶಮಾಡುವುದರ ವಿಷಯವಾಗಿ ಪ್ರಕಟನೆಯಲ್ಲಿ ಕಾಣಬಹುದು. ಪ್ರಕಟನೆ 11:17,18; 19:15, 19 ರಲ್ಲಿ ಮೃಗ, ಸುಳ್ಳು ಪ್ರಾವಾದಿ, ವಿಗ್ರಹ, ಬೆಂಕಿಯ ಕೆರೆ, ಕುದುರೆ ಮುಂತಾದ ಪದಗಳು ಸೂಚಿಸುತ್ತದೆ. ಆಗ ಮಹಾ ಸಂತೋಷದ ಯುದ್ಧವಾಗಿ ಭೂಲೋಕದಿಂದ ದ್ರಾಕ್ಷಿಯನ್ನು ಕೊಯ್ಯಲಾಗುವುದು ಅದು ಈ ಯುಗದ ಸಮಾಪ್ತಿಯನ್ನು ಮೆಸ್ಸಿಯನ ರಾಜ್ಯದ ಪ್ರಾರಂಭವನ್ನು ಸೂಚಿಸುತ್ತದೆ. ಪ್ರಕ. 20:1–3 ದ್ರಾಕ್ಷಿಯನ್ನು ಕೊಯ್ಯುವುದರ ವಿಷಯವಾಗಿ ಯೋವೇಲ 2:9–16 ಮತ್ತು ಯೆಶಾಯ 13:1–11ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

### ಈಗಿನ ಕಾಲದ ಸ್ಥಿತಿ

ಪ್ರವಾದನೆಯ ಹೇಳಿಕೆಗಳನ್ನು ಬಿಟ್ಟು ಈಗಿನ ಕಾಲದ ಸ್ಥಿತಿಗೆ ಬರೋಣ.ಈಗಿನ ಕಾರ್ಯಕಲಾಪಗಳು ರೂಪುಗೊಂಡು ಒಂದಕ್ಕೊಂದು ಕಲಹವಾಡುವುದಕ್ಕೆ ಸಿದ್ಧವಾಗುತ್ತಿದೆ. ಈ ಕಲಹವು ವಿಷಮವಾದರೆ ಸ್ವಲ್ಪ ಕಾಲದಲ್ಲಿ ಮಾನವ ಜನಾಂಗವು ಭೂಮಿಯ ಮೇಲಿಂದ ಅಳಿದು ಹೋಗುವುದು. ಈ ಯುದ್ಧಕ್ಕೆ ಎರಡು ಪಂಗಡದವರು ಸಿದ್ಧವಾಗುತ್ತಿರುವುದನ್ನು ಕಾಣಬಹುದು. ಒಂದು ಕಡೆ ಐಶ್ವರ್ಯ, ಹೆಮ್ಮೆ, ಅಂಹಕಾರ. ಮತ್ತೊಂದು ಕಡೆ ಬಡತನ, ಅಜ್ಞಾನ ಮತ್ತು ಭ್ರಾಂತಿ ಆದರೆ ಅವರಿಗೆ ಅನ್ಯಾಯವಾಗಿರುವ ವಿಷಯದಲ್ಲಿ ವಿವೇಕವಿರುವುದು. ಎರಡು ಗುಂಪಿನವರು ಸ್ವಾರ್ಥತೆಯಿಂದ ಕೋಪಭರಿತರಾಗಿ ಸೈನ್ಯಗಳನ್ನು ನಾಗರಿಕತೆಯ ಲೋಕದಲ್ಲಿ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಸತ್ಯದ ಕಣ್ಣಿನಿಂದ ನೋಡಿದರೆ ಪರ್ವತಗಳ ಕಡೆ ಸಮುದ್ರವು ನೊರೆ ಕಾರುತ್ತಾ ಅಪ್ಪಳಿಸುತ್ತಿರುವುದನ್ನು ಕಾಣಬಹುದು. ಇವೆಲ್ಲವೂ ಅತೃಪ್ತಿಯ ಪರಿಣಾಮ. ಈ ಸಾಮಾಜಿಕ ಕಲಹಗಳು ಒಂದನ್ನೊಂದು ಉಜ್ಜುತ್ತಾ ಪ್ರವಾದಿಗಳು ಹೇಳಿದಂತೆ ಭೂಲೋಕವು ಬೆಂಕಿ ಹತ್ತಿಕೊಂಡು ಉರಿಯುವವರೆಗೆ ಹೋಗುತ್ತದೆ. ಇವುಗಳ ಉಜ್ಜುವಿಕೆಯಿಂದ ಉಂಟಾದ ಶಾಖದಿಂದ ಎಲ್ಲವು ಕರಗಿ ಚೂರುಚೂರಾಗಿ ಹೋಗುವುದನ್ನು ನೋಡಬಹುದು. ಬಂಡವಾಳಶಾಹಿಗಳು ಲೋಕದಲ್ಲಿನ ವಸ್ತುಗಳು ತಮ್ಮ ಪಾಲಿಗೆ ಬರಬೇಕೆಂದು ಅವುಗಳ ಬೆಲೆಯನ್ನು ಕಡಿಮೆ ಮಾಡಿ ಅವುಗಳ ವ್ಯವಹಾರವನ್ನು ತಾವೇ ನಡಿಸಿ ಹೆಚ್ಚು ಲಾಭವನ್ನು ಪಡೆದು ಹಣ ಸಂಗ್ರಹಿಸಬೇಕೆಂಬುದು ಅವರ ಆಸೆ. ಪ್ರಪಂಚದಲ್ಲಿ ಶ್ರೀಮಂತರೂ ಮತ್ತು ಬಡವರು

ಯಾವಾಗಲು ಇರುತ್ತಾರೆ ಕೆಲವರಿಗೆ ಮುಂಜಾನೆ ಹಣಕೊಟ್ಟು ಧನಿಕರಾಗಿ ಮಾಡಿದರೆ ಸಂಜೆಯ ವೇಳೆಗೆ ದುಂದುವೆಚ್ಚ ಮಾಡಿ ಪುನಃ ತಮ್ಮ ಹಿಂದಿನ ಸ್ಥಿತಿಗೇ ಬರುತ್ತಾರೆ. ಕೆಲವರು ಮಿತಿಯಾಗಿ ಖರ್ಚುಮಾಡುತ್ತಾ ಎಚ್ಚರಿಕೆಯಿಂದಿದ್ದು ಐಶ್ವರ್ಯ ವಂತರಾಗುತ್ತಾರೆ ಇದರಿಂದ ಜನರು ಬುದ್ಧಿವಂತರಾಗಿದ್ದರೆ ಕೈಗಾರಿಕೆಗಳನ್ನು ಸ್ಥಾಪಿಸಿ ಜನರಿಗೆ ಉದ್ಯೋಗಗಳನ್ನು ಒದಗಿಸಲು ಸಾಧ್ಯವಿಲ್ಲವೇ ಎಂದು ಯೋಚಿಸುವರು. ಇದಕ್ಕೆ ಸರಿಹೊಂದಿದಂತೆ ಕೂಲಿಗಾರರಿಗೂ ಸಹ ಹಿಂದಿನ ಕಾಲಕ್ಕಿಂತ ಈಗಿನ ಕಾಲದಲ್ಲಿ ಸೌಕರ್ಯ ಹೆಚ್ಚಾಗಿದೆ. ಕೂಲಿಗೆ ತಕ್ಕಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತದೆ. ಇತರ ಉದ್ಯೋಗಿಗಳಿಗಿರುವ ಗೌರವ ಕಾರ್ಮಿಕರಿಗೂ ದೊರಕಿದೆ ಎದು ಹೇಳುವವರಾಗಿದ್ದಾರೆ. ಆದರೆ ಕಳೆದ ಐವತ್ತು ವರ್ಷಗಳಿಂದ ವೈಜಾನಿಕ ಸಂಶೋಧನೆಗಳು ಹೆಚ್ಚಿ ಯಂತ್ರಗಳ ನಿರ್ಮಾಣದಿಂದ ಮಾನವನ ದುಡಿತ ಕಡಿಮೆಯಾಗುತ್ತಿರುವುದು ಯಂತ್ರಗಳ ಬಳಕೆಯಿಂದ ಕಾರ್ಮಿಕರ ಸಂಬಳ ಇಳಿಯುತ್ತಿದೆ. ನಿರುದ್ಯೋಗಸ್ಥರ ಸಂಖ್ಯೆಯು ಹೆಚ್ಚುತ್ತಿರುವುದು. ಸಂಶೋಧನೆಗಳು ಹೆಚ್ಚಿದಂತೆಲ್ಲಾ ಬೆಳೆಗಳು ಹೆಚ್ಚುತ್ತಿವೆ, ಐಶ್ವರ್ಯವು ಹೆಚ್ಚುತ್ತಿದೆ. 15 ಜನ ಮಾಡುವ ಕೆಲಸವನ್ನು ಯಂತ್ರದ ಸಹಾಯದಿಂದ ಒಬ್ಬನು ಮಾಡಿ ಮುಗಿಸುತ್ತಿರುವನು. ಉಳಿದ ಹದಿನಾಲ್ಕು ಮಂದಿ ನಿರುದ್ಯೋಗಿಗಳಾಗುವರು, ಇವರು ಕೆಲಸವಿಲ್ಲದೆ ಸೋಮಾರಿಗಳಾಗುತ್ತಾರೆ, ಇಂತವರಿಗೆ ಊಟ ಬಟ್ಟೆ ವಸತಿಯುನ್ನು ಒದಗಿಸುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಇದರ ನಿವಾರಣೆಗಾಗಿ ಕಸುಬುದಾರರು ಮತ್ತು ಕೂಲಿಗಾರರು ಸೇರಿ ಸಂಘಗಳನ್ನೇರ್ಪಡಿಸಿ ಯಂತ್ರದಿಂದ ಹೆಚ್ಚು ಉತ್ಪತ್ತಿಯನ್ನು ಮಾಡದೆ ಹೆಚ್ಚು ಜನರನ್ನು ಕೆಲಸಕ್ಕೆ ಸೇರಿಸಿ ಅವರಿಗೆ ಕೂಲಿಯನ್ನು ಕೊಟ್ಟು ದುಡಿತದ ಕಾಲವನ್ನು ಕಡಿಮೆಮಾಡಿ ಉತ್ಪತ್ತಿಗೆ ಸಮನಾಗುವಂತೆ ಮಾಡಿದರೆ ಅವರು ಮುಂದೆ ಬರುವುದಕ್ಕೆ ಮಾರ್ಗವನ್ನು ಕಲ್ಪಿಸಿದಂತಾಗುತ್ತದೆ. ಅದಕ್ಕೆ ತಕ್ಕಂತೆ ಬಡ್ಡಿಯದರವನ್ನು ಕಡಿಮೆ ಮಾಡಬೇಕು. ಸಾಲ ಕೊಡುವವರು ಧಾರಾಳವಾಗಿ ಬಡವರಿಗೆ ಸಾಲ ಕೊಡುವಂತೆ ಮಾಡಬೇಕು. ಹೀಗೆ ಇವೆಲ್ಲವನ್ನು ಸಾಧಿಸಬೇಕಾದರೆ ಒಂದು ಸಂಘಸಂಸ್ಥೆಯು ಅವಶ್ಯ. ಕಾರ್ಮಿಕರೂ ಸಾಮಾನ್ಯರು ಒಂದುಗೂಡದಿದ್ದರೆ ಬಂಡವಾಳಗಾರರು ಮತ್ತು ಐಶ್ವರ್ಯವಂತರ ವಿರೋಧವಾಗಿ ಏನೂ ಸಾಧಿಸಲು ಸಾಧ್ಯವಿಲ್ಲ. ಐಶ್ವರ್ಯವಂತರು ತಾವು ಸಂಪಾದಿಸಿದ್ದರಲ್ಲಿಯೇ ತೃಪ್ತರಾಗಿ ಜನರೊಂದಿಗೆ ಸಹಕರಿಸಿ ಅವರಿಗೆ ಸೌಲಭ್ಯಗಳನ್ನು ಏರ್ಪಡಿಸಲು ಪ್ರಯತ್ನಿಸಬೇಕು. ಕಾರ್ಮಿಕರು ತಮಗೆ ದೊರತದ್ದರಲ್ಲಿ ತೃಪ್ತಿಯನ್ನು ಪಡೆಯಬೇಕು. ಇವೆಲ್ಲವೂ ನಡೆಯಬೇಕಾದರೆ ನ್ಯಾಯ ಮತ್ತು ಪ್ರೀತಿಯ ಕಟ್ಟಳೆ ಜಾರಿಯಲ್ಲಿ ತರಬೇಕು.

ಆದರೆ ವರ್ತಕರಾಗಲಿ ಬಂಡವಾಳದಾರರಾಗಲಿ ಕಾರ್ಮಿಕರ ಕೆಲಸದ ವೇಳೆಯನ್ನು ಕಡಿಮೆಮಾಡಿ ಹೆಚ್ಚು ಕೂಲಿಯನ್ನು ಕೊಡಲು ಸಾಧ್ಯವಿಲ್ಲ. ಯಾಕೆಂದರೆ ಆಗ ಪೈಪೋಟಿ ಜಾಸ್ತಿಯಾಗಿ ಬೆಲೆಗಳು ಇಳಿಯುತ್ತವೆ. ಇದರಿಂದ ಆರ್ಥಿಕ ಅವನತಿ ಉಂಟಾಗುತ್ತದೆ. ಎರಡು ಪಂಗಡದಲ್ಲೂ ಸ್ವಾರ್ಥವೇ ಹೆಚ್ಚಾಗಿದೆ. ಕಾರ್ಮಿಕರಲ್ಲೂ ಸ್ವಾರ್ಥತೆ ಹೆಚ್ಚಿ ತಮ್ಮ ಅವನತಿಗೆ ತಾವೇ ಕಾರಣರಾಗುತ್ತಾರೆ. ಕೂಲಿಗಾರರಲ್ಲಿ ತೃಪ್ತಿ ಎನ್ನುವುದು ಇಲ್ಲದಿರುವಾಗ ಬಂಡವಾಳದಾರರ ಕೊಡುವಿಕೆಯೂ ಕಡಿಮೆಯಾಗುತ್ತದೆ. ಪರಿಣಾಮ ದೊಂಬಿ, ಕೊಲೆ, ದರೋಡೆ ಸಮಾಜದಲ್ಲಿ ನ್ಯಾಯ, ಶಾಂತಿ ಕೊಚ್ಚಿಕೊಂಡು ಹೋಗುತ್ತದೆ. ಸಮುದ್ರವು ಪರ್ವತಗಳನ್ನು ನುಂಗಿಬಿಡುವುದು. ಹೀಗೆ ಭೂಲೋಕ (ಸಮಾಜ) ಆಕಾಶ (ಹೆಸರಿನ ಕ್ರೈಸ್ತ ಸಭೆಗಳು) ಕರಗಿಹೋಗುವವು. ಅಹಂಕಾರಿಗಳು ದುಷ್ಟರು ಹೊಟ್ಟೆನಂತಾಗುವರು. ಶೂರರು ದುಃಖಿಸುವರು. ಶ್ರೀಮಂತರು ಅರಚಿಕೊಳ್ಳುವರು. ಜನರೆಲ್ಲರಿಗೂ ಆಪತ್ತು ಭಯ ಉಂಟಾಗುವುದು. ಈಗಲೂ ಕೂಡ ಕ್ರಿಸ್ತನು ಹೇಳಿರುವಂತೆ ಮುಂದಾಗುವುದನ್ನು ಕಂಡು ಜ್ಞಾನಿಗಳಿಗೂ ಭಯವಾಗುತ್ತಿದೆ. ಲೂಕ 21:26 ಈ ರೀತಿಯಾಗಿ ರಾಜ್ಯಗಳಲ್ಲೆಲ್ಲಾ ಗಲಿಬಿಲಿ ಯುಂಟಾಗುವಾಗ ಹೆಸರಿನ ಕ್ರೈಸ್ತ ಸಭೆಗಳು ಜನರ ಪ್ರೀತಿಯನ್ನು ಕಳೆದುಕೊಂಡು ಕ್ರಮೇಣ ಐಶ್ವರ್ಯವಂತರ ಕಡೆಗೆ ಎಳೆಯಲ್ಪಡುವರು. ಅಂತ್ಯದಲ್ಲಿ ಸರಕಾರದೊಂದಿಗೆ ಕ್ರೈಸ್ತ ಸಭೆಯೂ ನಾಶವಾಗುವುದು. ಹೀಗೆ ಆಕಾಶಕ್ಕೆ (ಸಭೆಯ ಆಡಳಿತಕ್ಕೆ) ಬೆಂಕಿಬಿದ್ದು ಮಹಾಘೋಷದಿಂದ ಇಲ್ಲದೆ ಹೋಗುವುದು. ಈ ಸಂಕಟದ ದಿನವನ್ನು ಯಾರೂ ತಡೆಯಲಾರರು. ಈ ಕಷ್ಟಗಳಿಂದ ಮಾನವನಿಗೆ ತಾನು ಮಾಡುವದೆಲ್ಲಾ ವ್ಯರ್ಥ ಎಂದು ತಿಳಿದು ಬರುವುದು. ನೀತಿ ರಾಜ್ಯದ ಸ್ಥಾಪನೆಯೇ ಈ ಸಂಕಟಗಳಿಗೆ ಪರಿಹಾರ ಎಂದು ಕಂಡುಕೊಳ್ಳುವನು. ಅದೇ ನ್ಯಾಯ ಯಾಕೆಂದರೆ ದೇವರು ಕ್ರಿಸ್ತನ ಮೂಲಕ ಸಾವಿರ ವರ್ಷದ ಆಳ್ವಿಕೆಯಲ್ಲಿ ಮಾನವರು ಸಾಧಿಸಲಾಗದ್ದನ್ನು ಸಾಧಿಸಿ ತನ್ನ ವಾಗ್ದಾನವನ್ನು ಪೂರೈಸುವನು ಯೆಹೆಜ್ಕೆ. 11:19;36: 25, 36; ಯೆರೆ. 31: 29–34; ಜೆಫನ್ಯ 3:9; ಕೀರ್ತನೆ 46:8–10.

ಆಗ ಯೆಹೋವನ ಧರ್ಮವನ್ನು ಕೈಗೊಂಡು ನಡೆಯುವ ದೀನರೆಲ್ಲರಿಗೆ ಯೆಹೋವನನ್ನು ಆಶ್ರಯಿಸಿರಿ, ಸಧರ್ಮವನ್ನು ಅಭ್ಯಾಸಿಸಿರಿ, ದೈನ್ಯವನ್ನು ಹೊಂದಿಕೊಳ್ಳಿರಿ ಯೆಹೋವನ ಸಿಟ್ಟಿನ ದಿನದಲ್ಲಿ ಒಂದು ವೇಳೆ ಮರೆಯಾಗುವಿರಿ ಜೆಫನ್ಯ 2:3 ಕಷ್ಟದ ದಿನಗಳನ್ನು ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ ಆದರೆ

ನೀತಿವಂತರಿಗೆ ಅದು ಅಷ್ಟು ಕಷ್ಟಕರವಾಗಿರುವುದಿಲ್ಲ ಯಾಕೆಂದರೆ ಆ ದಿನದ ಅರಿವು ಅವರಿಗಿರುವುದು ಆದರೆ ಅದರ ಅರಿವಿಲ್ಲದವರಿಗೆ ಉರಿಯು ಹೊಟ್ಟನ್ನು ಸುಡುವ ಹಾಗೆ ಇದ್ದಕ್ಕಿಂದತೆ ಶೀಘ್ರವಾಗಿ ಬುರುವುದು. ಚೆಫನ್ಯ 2:3. ಆದರೆ ಸತ್ಯವೇದದಲ್ಲಿ ಹೇಳಿರುವ ಈ ಮಹಾ ದಿನದ ಕಾರ್ಯಗಳು ಕೇವಲ ಇಪ್ಪತ್ತನಾಲ್ಕು ಘಂಟೆಗಳಲ್ಲಿ ಮುಗಿದು ಹೋಗುವುದೆಂದು ತಿಳಿದಿರುವರು. ಅದು ರಾತ್ರಿಯಲ್ಲಿ ಕಳ್ಳನು ಬರುವ ಹಾಗೆ ಇದೆ. ಪೌಲನು ಇದನ್ನು ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ ಬರುವುದು ಎಂದು ತಿಳಿಸಿರುವನು. ಸಂಕಟವು ಕ್ರಮಕ್ರಮವಾಗಿ ಹೆಚ್ಚುತ್ತಾ ನಾಶವಾಗಿ ಹೋಗುವುದು.ಹೊಸ ಆಡಳಿತ ಬಂದ ಮೇಲೆ ಇವೆಲ್ಲವು ಪರಿಹಾರವಾಗುವುದು. ನೂತನ ಆಕಾಶ (ಕ್ರಿಸ್ತನ ಆತ್ಮೀಯ ಆಡಳಿತ) ನೂತನ ಭೂಮಂಡಲ ಪರಿಷ್ಕರಿಸಿದ ಸಮಾಜದಲ್ಲಿ ನೀತಿಯು ವಾಸವಾಗಿರುವುದು. ದಬ್ಬಾಳಿಕೆ ಮತ್ತು ಸ್ವಾರ್ಥತೆಯ ಬದಲಾಗಿ ನ್ಯಾಯ ಪ್ರೀತಿಯು ನೆಲಸುತ್ತದೆ. ಪ್ರವಾದಿಯು ಹೇಳಿರುವಂತೆ ಮೊಟ್ಟ ಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವುದು. 1ಥೆಸ. 5:2,3 2 ಪೇತ್ರ 3:10, 13 ದೇವರಿಗೆ ಸ್ತೋತ್ರ ಯಾಕೆಂದರೆ ಆತನ ಭರವಸೆಯಂತೆ ಮುಂದೆ ಈ ರೀತಿಯ ಸಂಕಟಗಳು ಬರುವುದಿಲ್ಲ.

ಮೋಶೆ, ಇಸ್ರಾಯೇಲ್ಯರನ್ನು ಉಪದ್ರವಗಳಿಂದ ಐಗುಪ್ತರಿಂದ ರಕ್ಷಿಸಿದ ಹಾಗೆ ಈ ಲೋಕದ ಉಪದ್ರವಗಳಿಂದ ಮೋಶೆಗಿಂತ ಹೆಚ್ಚಿನವನಾದ ಯೇಸುವಿನಿಂದ ರಕ್ಷಣೆ ಕೊಡಲಾಗುತ್ತದೆ. ಈ ಲೋಕವನ್ನೂ ಮಾನವರನ್ನೂ ಸೈತಾನನ ಉಪದ್ರವಗಳಿಂದ ರಕ್ಷಿಸಲಾಗುವುದು. ಹೇಗೆ ಐಗುಪ್ತದಲ್ಲಿ ಒಂದೊಂದು ಉಪದ್ರವವು ಬಂದ ಹಾಗೆಲ್ಲಾ ಅವರ ಹೃದಯವು ಕಠಿಣವಾಗುತ್ತಿತ್ತೋ ಹಾಗೆ ಯೆಹೋವನ ದಿನದಲ್ಲಿ ಸಂಕಟವು ಕಳೆದು ಸಂತೋಷ ಬಂದ ಹಾಗೆಲ್ಲಾ ಕೆಲವರು ಕಠಿಣ ಹೃದಯಿಗಳಾಗಿ ಐಗುಪ್ತರು ಇಸ್ರಾಯೇಲ್ಯರಿಗೆ ಹೇಳಿದಂತೆ ಬಡವರಿಗೆ ನೀವು ಸೋಮಾರಿಗಳಾಗಿದ್ದೀರಿ ಎಂದು ಹೇಳುವರು ಮತ್ತು ಬಡವರ ಕಷ್ಟವನ್ನು ಹೆಚ್ಚಿಸುವರು. ವಿಮೋ. 5:4–23, 12:30–33 ಅಂತ್ಯದಲ್ಲಿ ಈಗಿನ ಕಠಿಣ ಹೃದಯರು ಫರೋಹನನು ಕೊನೆಯ ಉಪದ್ರವದ ರಾತ್ರಿಯಲ್ಲಿ ಯೋಚಿಸಿದ ಹಾಗೆ ಬಡವರಿಗೆ ನಾವು ದಯೆ ತೋರಿಸಬೇಕಾಗಿತ್ತು ಎಂದು ಅಂದುಕೊಳ್ಳುವರು. ಇಲ್ಲಿ ದೇವರ ರೌದ್ರದ ದಿನವು ಏಳು ಉಪದ್ರವಗಳಿಂದ ತುಂಬಿದೆ. ಏಳನೇ ಉಪದ್ರವವು ಸಂಭವಿಸಿದ ಕೂಡಲೇ ಮಹಾ ಭೂಕಂಪ (ದಂಗೆ)ವಾಗಿ ಬೆಟ್ಟ (ರಾಜ್ಯಗಳು) ಗಳೆಲ್ಲಾ ಕಣ್ಣಿಗೆ ಕಾಣದಂತೆ ಓಡಿ ಹೋಗುವವು. ಪ್ರಕ. 16:17–20. ಈ ಸಂಕಟವು ಹೆಚ್ಚು ಉತ್ಪತ್ತಿಯಿಂದಲೂ, ಯಂತ್ರಗಳ ಸಂಶೋಧನೆಯಿಂದಲೂ ಸ್ವಾರ್ಥತೆಯಿಂದಲೂ ಬರುವದಾಗಿದೆ. ಈಗ ದೇವರು ಅಜ್ಞಾನದ ತೆರೆಯನ್ನೇ ತೆಗೆದಿರುವುದರಿಂದ ಜನರೆಲ್ಲರೂ ವಿದ್ಯಾವಂತರಾಗಿ ತಿಳುವಳಿಕೆಯನ್ನು ಪಡೆಯುತ್ತಿರುವರು. ಜ್ಞಾನ ಹೆಚ್ಚಿದಂತೆಲ್ಲಾ ಜನರು ಅತ್ತಿತ್ತ ತಿರುಗಾಡುವರು ದಾನಿ. 12:4, 1 ಸಂಕಟ ಹೆಚ್ಚಿದಂತೆಲ್ಲಾ ನಮ್ಮನ್ನು ನಾವು ಆಳುವುದಕ್ಕೆ ಅಶಕ್ತರು ಎಂದು ತಿಳಿದುಕೊಳ್ಳುವರು. ಜನರು ತವಕಪಡುವ ನೀತಿ ನ್ಯಾಯ ಸ್ಥಾಪಿತವಾದಾಗ ದೇವರಿಂದ ಆತನ ರಾಜ್ಯದಲ್ಲಿ ಆಶೀರ್ವಾದ ಪಡೆಯುವರು. ಆತನು ಮಾನವರನ್ನು ಕಬ್ಬಿಣದ ಕೋಲಿನಿಂದ ಆಳಿ ಮುಂದೆ ಮಾನವರು ಜ್ಞಾನದಿಂದಲೂ ನೀತಿಯಿಂದ ದೇವರ ಸಹಾಯದಿಂದ ಮೊದಲಿನ ಉತ್ತಮತೆಯನ್ನು ಹೊಂದಿ ನಿತ್ಯ ಜೀವವನ್ನು ಪಡೆಯುವರು.

### ದೇವ ಜನರ ಕರ್ತವ್ಯ

ದೇವ ಜನರು ಇಹಲೋಕದ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು ಮತ್ತು ಅವರ ಕರ್ತವ್ಯವೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅವರು ಶರೀರಧಾರಿಗಳಾಗಿದ್ದರೂ ವಾಕ್ಯದ ಸಹಾಯದಿಂದ ಆ ದಿನವನ್ನು ಮುಂದಾಗಿ ತಿಳಿದಿರುವುದರಿಂದ ಸುರಕ್ಷಿತರಾಗಿದ್ದು ಇತರರಂತೆ ಆ ದಿನವನ್ನು ಭಯದಿಂದ ನಿರೀಕ್ಷಿಸುವುದಿಲ್ಲ. ಮುಂದೆ ಲೋಕವು ಆಶೀರ್ವದಿಸಲ್ಪಡುವ ಮೊದಲು ಅದು ಸಂಕಟಕ್ಕೊಳಗಾಗಲೇ ಬೇಕು. ಆದುದರಿಂದ ದೇವ ಜನರು ಸಂತೋಷದಿಂದ ಸಂಕಟ ಕಾಲವನ್ನು ಎದುರು ನೋಡುತ್ತಿರುವರು. ಕೀರ್ತ. 91, ಯೆಶಾಯ 33:2–114, 15–24 ಅವರಿಗೆ ದೈವಾಶೀರ್ವಾದದ ಭರವಸೆಯಿರುವುದರಿಂದ ಸಂಕಟ ಅತೃಪ್ತಿಗಳ ಮಧ್ಯದಲ್ಲೂ ಸಂತೋಷವಳ್ಳವರಾಗಿ ತಮ್ಮ ನೀತಿ ನ್ಯಾಯಗಳಿಂದ ಇತರರಿಗೆ ಮಾದರಿಯಾಗಿರುವರು. ಪೌಲನು ಬರೆದಿರುವಂತೆ ಸಂತುಷ್ಟಿ ಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ. ಇದು ಯಾವಾಗಲು ನಿಜವಾಗಿದ್ದರು ಲೋಕಕ್ಕೆ ಅತೃಪ್ತಿಯೆಂಬ ರೋಗವು ಹಿಡಿದಿರುವುದು. ಈ ಕಾಲದಲ್ಲಿರುವಷ್ಟು ಅತೃಪ್ತಿಯು ಮತ್ತಾವ ಕಾಲದಲ್ಲೂ ಇರಲಿಲ್ಲ. ಆದರೂ ಮಾನವನು ಅನುಭವಿಸುತ್ತಿರುವ ಸೌಲಭ್ಯಗಳು ಯಾವುದಕ್ಕೂ ಕಡಿಮೆಯಿಲ್ಲ. ಸೊಲೋಮೋನನು ಸಹ ತನ್ನ ಪೂರ್ಣ ವೈಭವದಿಂದಿದ್ದಾಗ ಅವನಿಗಿಲ್ಲದಂತ ಸೌಲಭ್ಯಗಳನ್ನು ಇಂದಿನ ಮಾನವರು ಹೊಂದಿದವರಾಗಿದ್ದಾರೆ. ಮಧ್ಯಮವರ್ಗದವರೂ ಸಹ ತಮ್ಮ ಮನೆಗಳಲ್ಲಿ ಎಲ್ಲಾ ಸೌಕರ್ಯವಸ್ತುಗಳನ್ನು ಹೊಂದಿದ್ದಾರೆ. ಇಷ್ಟೆಲ್ಲಾ ಸೌಲಭ್ಯಗಳಿದ್ದರೂ ಅತೃಪ್ತಿಯೇ. ಮಾನವನ ಬೇಡಿಕೆಗಳು ದಿನೇದಿನೇ ಹೆಚ್ಚುತ್ತಿದೆ. ಅವರ ಆಶೆಗೆ ಮೇರೆಯೇ ಇಲ್ಲ. ಮಾನವರಿಗೆ ಸ್ವಾರ್ಥತ್ವವೆಂಬ ಡಂಬವು ಹಿಡಿದಿರುವುದು. ಪ್ರತಿಯೊಬ್ಬನು ಹಣದ ಗಂಟನ್ನು ದೋಚಲು ಹುಚ್ಚನಾಗಿ ಮುಣುಗತ್ತಿರುವರು. ಕೆಲವರಿಗೆ

ದೊರಕದೆ, ದೊರಕದೇ ಇರುವವರಲ್ಲಿ ಅತೃಪ್ತಿಯಿಂದ ನರಳುವವರಾಗಿರುವರು.

ಈ ಹೋರಾಟದಲ್ಲಿ ದೇವ ಜನರು ಭಾಗವಹಿಸುವುದಿಲ್ಲ. ಅವರು ಈ ಲೋಕದಲ್ಲಿ ಇರುವುದರಲ್ಲೇ ತೃಪ್ತರಾಗಿ ಹೆಚ್ಚಿನ ಮಟ್ಟದ ಪರಲೋಕದ ನಿಧಿಯನ್ನು ಅತ್ಯಾಶೆಯಿಂದ ಎದುರು ನೋಡುವವರಾಗಿರುವರು. ದೇವರ ವಾಕ್ಯದಲ್ಲಿ ಜ್ಞಾನ ಹೊಂದಿ ಹರ್ಷ ಚಿತ್ತರಾಗಿ ಹಾಡುತ್ತಿದ್ದಾರೆ. ಆದರೆ ಲೋಕದವರು ಇವರನ್ನು ಅನುಸರಿಸದೆ ದೇವರ ಚಿತ್ತದಂತೆಯೂ ನಡೆಯದೆ ಈ ಪ್ರಪಂಚದಲ್ಲಿನ ವಸ್ತುಗಳನ್ನು ಆಶಿಸುತ್ತಾ ಅದನ್ನು ಪಡೆಯದಿದ್ದರೂ ಲೋಕದ ಅತೃಪ್ತಿಯಲ್ಲಿ ಮಾತ್ರ ಪಾಲನ್ನು ಹೊಂದುತ್ತಿದ್ದಾರೆ. ಆದ್ದರಿಂದ ದೇವ ಜನರು ಇಹಲೋಕಕ್ಕೆ ಸಂಕಟ ಬಂದರೂ ಮುಂದೆ ದೇವರ ರಾಜ್ಯಬರುವುದೆಂದು ಜನರಿಗೆ ಬೋಧಿಸುತ್ತಿರುವರು. ಲೂಕ 3:14; ಇಬ್ರಿಯ 13:5 ಫಿಲಿಪ್ಪಿ. 4:11 ಈಗ ಜನರಲ್ಲಿ ಅತೃಪ್ತಿಯ ವೇದನೆ ಹೆಚ್ಚಾಗಿರುವುದರಿಂದ ಅವರಿಗೆ ವಿರೋಧವಾಗಿ ಮಾತನಾಡಿ ಅವರ ಅತೃಪ್ತಿಯ ನೋವನ್ನು ಹೆಚ್ಚಿಸದೆ ಅದರ ಬದಲು ವಿಮೋಚನೆಯ ಶುಭವಾರ್ತೆಯನ್ನು ಅದರಿಂದ ಬರುವ ಆಶೀರ್ವಾದವನ್ನು ಬೋಧಿಸಿದರೆ ನಮ್ಮ ಕರ್ತವ್ಯವನ್ನು ನೇರವೇರಿದಂತಾಗುವುದು ಮಾತ್ರವಲ್ಲದೆ ಕ್ರಿಸ್ತನ ರಾಜ್ಯದ ನಿಜದೂತರಂತಿರುತ್ತೇವೆ ಮತ್ತು ಸಮಾಧಾನದ ರಾಯಭಾರಿಗಳಾಗುತ್ತೇವೆ. ಪರ್ವತಗಳ (ರಾಜ್ಯಗಳ) ಮೇಲೆ ತ್ವರೆಪಡುತ್ತಾ ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು (ಕ್ರಿಸ್ತನ ದೇಹದ ಕೊನೆಯ ಸದಸ್ಯರು) ಎಷ್ಟೋ ಅಂದವಾಗಿದೆ. ಯೆಶಾಯ 52:7 ಸಂಕಟಕರವಾದ ಯೆಹೋವನ ದಿನದಲ್ಲಿ ಮುಂದೆ ಬರುವ ಒಳ್ಳೆಯ ಅವಕಾಶವಾಗಿದೆ. ದೇವ ಜನರು ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಡೆಯುತ್ತಾ ಒಳ್ಳೇ ಸಮಾರ್ಯದವನಂತೆ ಗಾಯವನ್ನು ಕಟ್ಟಿ ಅದರಲ್ಲಿ ಎಣ್ಣೆಯನ್ನು ದ್ರಾಕ್ಷರಸವನ್ನು ಅಂದರೆ ಸಮಾಧಾನ ಮತ್ತು ಹರ್ಷವನ್ನು ಸುರಿಸುವವರು ಧನ್ಯರು. ಇವರ ಒಳ್ಳೆಯ ಕಾರ್ಯವು ಎಂದಿಗೂ ವ್ಯರ್ಥವಾಗುವುದಿಲ್ಲ ಯಾಕೆಂದರೆ ಮುಂದೆ ಯೆಹೋವನು ಧರ್ಮ ಕಾರ್ಯಗಳನ್ನು ನಡೆಸುವಾಗ ಭೂನಿವಾಸಿಗಳು ಧರ್ಮ ಜ್ಞಾನವನ್ನು ಪಡೆದುಕೊಳ್ಳುವರು. ಯೆಶಾ 26:9 ದೇವರು ತನ್ನ ಮಕ್ಕಳಿಗಾಗಿ ಚಿಂತಿಸುವ ಪ್ರಕಾರವೇ ಸತ್ಯ ಮಕ್ಕಳು ಸಹ ಸಂಕಟ ಪಡುವ ಜನಾಂಗದವರಿಗೆ ಸಂತಾಪ ಸೂಚಿಸುವುದು ಮಾತ್ರವಲ್ಲದೆ, ಅವರನ್ನು ಅದರಿಂದ ರಕ್ಷಿಸಲು ಕೈಲಾದ ಪ್ರಯತ್ನವನ್ನು ಮಾಡುತ್ತಿರುವರು. ಕರ್ತನಿಗೆ ವಿರುದ್ಧವಾಗಿ ನಡೆಯುವವರಿಗೆ ಕರುಣೆ ತೋರಿಸುವುದು ವ್ಯರ್ಥ ಅವರ ಸಮಾಜಿಕ ಅಥವಾ ರಾಜಕೀಯ ಸಮಸ್ಯೆಗಳಿಗೆ ಕಿವಿಕೊಡುವುದು ತಪ್ಪು. ಯಾಕೆಂದರೆ ಇದು ಕರ್ತನ, ಯೆಹೋವನ ಮಾರ್ಗಕ್ಕೆ ಯಾರೂ ಅಡ್ಡಿ ಬರಬಾರದು. ಆದುದರಿಂದ ಯೆಹೋವನ ದಿನದಲ್ಲಾಗುವ ಕಲಹದಲ್ಲಿ ಇವರು ಪಾಲುವಹಿಸದೆ ದೇವರಿಂದ ಬರುವ ರಕ್ಷಣೆಯನ್ನು ಎದುರು ನೋಡುವರು. ಆದುದರಿಂದ ಎಲ್ಲಾ ತರಗತಿಯವರಿಗೆ ತಕ್ಕ ಪ್ರತಿಫಲ ಕೊಡಲು ದೇವರ ರಾಜ್ಯವು ಸಮೀಪದಲ್ಲಿರುವುದು.

# ಅಧ್ಯಾಯ-16

## ಮುಕ್ತಾಯದ ಮಾತುಗಳು

### ಸತ್ಯದ ಬಗ್ಗೆ ನಮ್ಮ ಕರ್ತವ್ಯ..... ಅದರ ವೆಚ್ಚ, ಅದರ ಮೌಲ್ಯ, ಅದರ ಲಾಭ.

ನಾವು ಹಿಂದಿನ ಅಧ್ಯಾಯಗಳಲ್ಲಿ ಜ್ಞಾನವೆಂಬ ಬೆಳಕಿನ ಮೂಲಕ ಪ್ರಕಟಿತವಾಗಿರುವ ಪ್ರಕಾರ ಜ್ಞಾನಿಯೂ, ಸರ್ವಶಕ್ತನೂ, ನೀತಿವಂತನಾದ ದೇವರೇ ಸಮಸ್ತ ಸೃಷ್ಟಿಗೂ ಮೂಲಕರ್ತನು ಎಂಬುದನ್ನು ತಿಳಿದುಕೊಂಡೆವು. ಸಮಸ್ತಕ್ಕೂ ಆತನೇ ಅಧಿಕಾರಿ, ಜೀವ ನಿರ್ಜೀವ ವಸ್ತುಗಳೆಲ್ಲವೂ ಆತನ ಅಧೀನ. ಸತ್ಯವೇದ ಆತನ ಯೋಜನೆ ಮತ್ತು ವ್ಯಕ್ತಿತ್ವವನ್ನು ಪ್ರಕಟಿಸುತ್ತದೆ. ಇಹಲೋಕವು ಈಗ ಕತ್ತಲೆಯಿಂದ ತುಂಬಿದ್ದರೂ ತಕ್ಕ ಕಾಲದಲ್ಲಿ ದೇವರಿಂದ ಬೆಳಕು ಬಂದು ಭೂಲೋಕವೆಲ್ಲವೂ ಆತನ ಪ್ರಭಾವದಿಂದ ತುಂಬಿಕೊಳ್ಳುವುದು. ದೇವರ ಯೋಜನೆ ಯುಗಯುಗಾಂತರಗಳ ಯೋಜನೆಯಾಗಿದೆ. ಅದು ಪರಿಪೂರ್ಣವಾಗಲು ಮತ್ತೊಂದು ಯುಗ ಅವಶ್ಯ. ದೇವರು ಮನುಷ್ಯನನ್ನು ಮರೆತನೋ ಏನೋ ಎನ್ನುವ ಕಾಲದಲ್ಲಿಯೇ ಮಾನವರ ಆಶೀರ್ವಾದಕ್ಕಾಗಿ ನಿಶ್ಶಬ್ದವಾಗಿ ವೈಭವವಾಗಿ ಕೆಲಸ ನಡೆಯುತ್ತಾ ಇರುವುದು. ಅನೇಕರಿಗೆ ದೇವರ ಯೋಜನೆಯ ರಹಸ್ಯಗಳು ಮರೆಯಾಗಿದ್ದರೂ ಭೂಲೋಕದ ಮೇಲೆ ಉದಯಿಸುವ ನೂತನ ದಿನದಲ್ಲಿ ಅನುಕೂಲವಾದ ಸನ್ನಿವೇಶದಲ್ಲಿ ಮಾನವರೆಲ್ಲರಿಗೂ ನಿತ್ಯ ಜೀವಕ್ಕಾಗಿ ಒಬ್ಬೊಬ್ಬನಿಗೂ ವಿಚಾರಣೆಗಾಗಿ ಸಿದ್ಧಮಾಡಲಾಗುತ್ತಿವೆ. ಈ ಆರುಸಾವಿರ ವರ್ಷಗಳಿಂದ ಕೆಟ್ಟತನವು ಇದ್ದರೂ ಈಗ ಅದರ ಅನುಭವದಿಂದ ನ್ಯಾಯವಿಚಾರಣೆಯ ದಿನದಲ್ಲಿ ಮಾನವರೆಲ್ಲರಿಗೂ ಪ್ರಯೋಜನವಾಗುತ್ತದೆ. ಮಾನವರು ಪಾಪದಿಂದ ಶಿಕ್ಷಣ ಹೊಂದುತ್ತಿರುವಾಗಲೇ ಅವರ ರಕ್ಷಣೆಗಾಗಿ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಆತನು ದೀನನಾಗಿ ಬಂದಿದ್ದರಿಂದ ಜನಾಂಗವು ಆತನನ್ನು ಅರಿಯಲಿಲ್ಲ. ಕ್ರಿಸ್ತನು ದೇವರಿಂದ ಅಭಿಷಕ್ತನಾದವನು, ನಮ್ಮ ರಕ್ಷಣೆಗಾಗಿ ಬಂದಿರುವನು ಎಂಬುದನ್ನು ಗ್ರಹಿಸಲ್ಲಿಲ್ಲ. ಯಾರ್ಯಾರು ದೇವರ ಕಡೆಗೆ ತಮ್ಮ ಮನಸ್ಸನ್ನು ತಿರುಗಿಸಿ ಆತನ ವಾಗ್ದಾನಗಳಲ್ಲಿ ನಂಬಿಕೆಯಿಟ್ಟಿರುವರೋ ಅವರನ್ನು ತನ್ನ ರಾಜ್ಯದಲ್ಲಿ ಪಾಲುಗಾರರನ್ನಾಗಿ ಮಾಡಬೇಕೆಂದು (ಆದಿಯಿಂದಲೂ, ಕಳೆದ ಎರಡು ಯುಗಗಳಿಂದ ಎರಡು ಪಂಗಡಗಳನ್ನು ಆದುಕೊಳ್ಳುತ್ತಿದ್ದಾನೆ. ಈ ಎರಡು ಪಂಗಡದವರು ನಾವು ತಿಳಿದಂತೆ ದೇವರ ರಾಜ್ಯದ ಎರಡು ವಿಧಗಳಲ್ಲಿ ಭಾಗಿಗಳಾಗುವರು. ಭೂಲೋಕ ರೀತಿಯಲ್ಲಿ ದೇವರ ರಾಜ್ಯವು ಏರ್ಪಟ್ಟು ಅದರ ನ್ಯಾಯ ಮತ್ತು ಜ್ಞಾನ ಆಡಳಿತದಲ್ಲಿ ಪ್ರತಿಯೊಬ್ಬನೂ ತಾನು ನಿತ್ಯ ಜೀವಕ್ಕೆ ಅರ್ಹನೋ ಅನರ್ಹನೋ ಎಂದು ನಿಷ್ಕರ್ಷಿಸುವುದಕ್ಕೆ ಅವಕಾಶವನ್ನು ಕಲ್ಪಿಸಲಾಗುತ್ತದೆ. ಕ್ರಿಸ್ತನ ಅಮೂಲ್ಯವಾದ ರಕ್ತದಿಂದ ಮಾನವರಿಗೆ ಪಾಪ ವಿಮೋಚನೆಯಾದುದರಿಂದ ಇಬ್ರಿ. 2:9 ಪರಿಶುದ್ಧವಾದ ರಾಜವಾರ್ಗವನ್ನು ತೆರೆಯಲಾಗುವುದು. ಕರ್ತನಿಂದ ವಿಮೋಚನೆ ಹೊಂದಿದ ಸಮಸ್ತ ಜನರು ಅದರಲ್ಲಿ ನಡೆಯುವರು. ಪ್ರತಿಯೊಬ್ಬನ ಹೆಜ್ಜೆಗೂ ಅನುಕೂಲವಾಗಿರುತ್ತದೆ ಮತ್ತು ಅವರ ಹೆಜ್ಜೆಗೆ ಅಡ್ಡಿಪಡಿಸುವ ಎಲ್ಲಾ ಕಲ್ಲುಗಳನ್ನು ತೆಗೆಯಲಾಗುವುದು. ಧನ್ಯರಾದವರೆಲ್ಲರೂ ರಾಜಮಾರ್ಗಧಲ್ಲಿ ನಡೆದು ಶ್ರೇಷ್ಠತೆಗೂ ಮತ್ತು ನಿತ್ಯ ಜೀವಕ್ಕೂ ಹೋಗಬಹುದು. ಯೆಹೋವನು ನೇಮಿಸಿದಂತೆ ನ್ಯಾಯಾಧಿಪತಿಯಾದ ಕ್ರಿಸ್ತನು ಬರುವವರೆಗೂ ನ್ಯಾಯವಿಚಾರಣೆಯು ಪ್ರಾರಂಭವಾಗುವುದಿಲ್ಲ. ಎರಡನೆ ಸಲ ಆತನು ದೀನತ್ವದಿಂದ ಬರುವುದಿಲ್ಲ. ಮಹಿಮಾಧಿಕಾರಗಳಿಂದ ಬರುವನು. ಲೋಕವನ್ನು ರಕ್ಷಿಸುವುದಕ್ಕೂ ಮತ್ತು ಲೋಕವನ್ನು ನೀತಿಯಿಂದ ಆಳುವುದಕ್ಕೂ ಬರುತ್ತಾನೆ. ಕ್ರಿಸ್ತನು ಮಹಿಮೆಯಿಂದ ಬಂದು ಸಿಂಹಾಸನದ ಮೇಲೆ ಕುಳಿತುಕೊಳ್ಳುವಾಗ ಆತನ ಮುಂದೆ ಸಮಸ್ತ ಜನಾಂಗದವರನ್ನು ಕೂಡಿಸಲಾಗುವುದು. ಆತನು ಅವರವರ ಕೃತ್ಯಗಳಿಗನುಸಾರವಾಗಿ ನ್ಯಾಯ ತೀರಿಸುವನು. ಲೋಕವು ಕರ್ತನ ಜ್ಞಾನದಿಂದ ತುಂಬಿಕೊಳ್ಳುವುದು. ಅವರವರ ನಡತೆಗಳಿಗನುಸಾರವಾಗಿ ಅವರಿಗೆಲ್ಲಾ ಸಹಾಯಗಳನ್ನು ಒದಗಿಸಿ ನಂತರ ನಿತ್ಯಜೀವಕ್ಕೆ ಯಾರು ಅರ್ಹರೋ ಎಂಬುದನ್ನು ವಿಚಾರಿಸಲಾಗುತ್ತದೆ. ಮತ್ತಾ. 25:31; ಪ್ರಕ. 20:11-13.

ದೇವರ ರಾಜ್ಯದ ಸ್ಥಾಪನೆಯ ವಿಷಯವಾಗಿ ನಿರೀಕ್ಷಿಸುವವರೆಲ್ಲರಿಗೂ ಕರ್ತನ ಪುನರಾಗಮನ ಆನಂದವಾಗುವುದು. ಆ ದಿನವು ದೇವರರಾಜ್ಯದ ಸ್ಥಾಪನೆಗೋಸ್ಕರ ಶ್ರಮಪಟ್ಟ ಚಿಕ್ಕ ಹಿಂಡಿಗೆ ಅತ್ಯಂತ ಸಂತೋಷದ ದಿನವಾಗಿರುವುದು. ಆ ದಿನವು ನಿಶ್ಚಿತಾರ್ಥಹೊಂದಿರುವ ಸಭೆಯೆಂಬ ಕನ್ಯೆಗೆ ಹರ್ಷದ ದಿನ ಯಾಕೆಂದರೆ ಆಗ ಮದಲಗಿತ್ತಿಯಾಗಿ ಕುರಿಮರಿಯ ಹೆಂಡತಿಯಾಗಿ ನಲ್ಲನನ್ನು ಒರಗಿಕೊಂಡು ಅವಳು ಆತನ ಮಹಿಮಾ ಭಾಗ್ಯದಲ್ಲಿ ಪ್ರವೇಸಿಸುತ್ತಾಳೆ. ಆ ದಿನದಲ್ಲಿ ಸಭೆಯು ಶಿರದೊಂದಿಗೆ ಮಹಿಮೆ ಹೊಂದಿ ದೈವಾಡಳಿತ ಮತ್ತು ಅಧಿಕಾರವನ್ನು ವಹಿಸಿಕೊಂಡು ಲೋಕೋದ್ಧಾರದ ಮಹಾಕಾರ್ಯವನ್ನು ಪ್ರಾರಂಬಿಸಿ ಸಮಸ್ತವನ್ನು ಸರಿಮಾಡಲಾಗುವುದು. ಆಗ ಸಮುದ್ರದ ನೀರಿನಂತೆ ದೇವರ

ಜ್ಞಾನವು ಭೂಲೋಕದಲ್ಲಿ ತುಂಬಿಕೊಳ್ಳುವುದು.

ಆದರೆ ದೇವರು ಪರಲೋಕದ ಪ್ರತಿಫಲದ ಕಡೆಗೆ ಓಗೊಡುವವನಿಗೆ ಸತ್ಯದ ಪರಿಜ್ಞಾನ ಮತ್ತು ಅದನ್ನು ಗ್ರಹಿಸಲು ಶಕ್ತಿಯನ್ನು ಕೊಡಲು ಇಚ್ಛಿಸುತ್ತಾನೆ. 2 ಪೇತ್ರ 1:2–4.

ನೀವು ನಿಮ್ಮನ್ನು ದೇವರಿಗಾಗಿ ಪ್ರತಿಷ್ಠಿಸಿಕೊಂಡರೆ ನಿಮ್ಮ ಕಾಲವನ್ನೆಲ್ಲಾ ದೇವರ ಆರಾಧನೆಗಾಗಿ ವಿನಿಯೋಗಿಸಬೇಕು. ನಿಮ್ಮ ಯಜ್ಞದ ಒಡಂಬಡಿಕೆಯ ಪ್ರಕಾರ ಎಲ್ಲವನ್ನು ಕೊಡಲು ಆಶಿಸುತ್ತಿರೋ? ನಿಮ್ಮ ಯೋಜನೆ ಆಚಾರ ಪದ್ಧತಿಗಳನ್ನು ಇತರರಿಗೆ ಬಿಟ್ಟು ದೇವರ ಯೋಜನೆಯನ್ನು ಪೂರೈಸಲು, ಆತನ ಮಾರ್ಗವನ್ನು ಅನುಸರಿಸಲು, ಆತನ ಕಾರ್ಯವನ್ನು ಮಾಡಲು ಸಿದ್ಧರಾಗಿರುವಿರೋ? ಇದಕ್ಕಾಗಿ ನಿನ್ನ ಸ್ನೇಹಿತರು ಮತ್ತು ಸಾಮಾಜಿಕ ಬಂಧನಗಳನ್ನು ಬಿಡಲು ಸಿದ್ಧನಿರುವಿಯೋ? ನೀನು ಮಹಿಮಾತಿಶಯ ವಿಷಯಗಳನ್ನು ಗ್ರಹಿಸಲು ನಿನ್ನ ವ್ಯವಹಾರಗಳನ್ನೆಲ್ಲಾ ತ್ಯಜಿಸಿ ಸಂಪೂರ್ಣ ಸಮಯವನ್ನು ಅದಕ್ಕಾಗಿ ಮೀಸಲಿಡಬೇಕು. ನೀನು ಇದಕ್ಕೆ ಕೊಟ್ಟ ಕಾಲವನ್ನು ನಿನ್ನ ಯಜ್ಞದ ಪರಿಶುದ್ಧತೆಯನ್ನು ಪೂರ್ಣವಾಗಿ ಪರೀಕ್ಷಿಸಲಾಗುವುದು. ಇದರಿಂದ ನೀನು ದೇವರ ರಾಜ್ಯದಲ್ಲಿ ಚಿಕ್ಕ ಹಿಂಡಿನೊಂದಿಗೆ ಗೌರವ ಹೊಂದಲು ಯೋಗ್ಯನೋ ಅಲ್ಲವೋ? ಎಂದು ತೀರ್ಮಾನಿಸಲಾಗುವುದು.ದೇವರ ವಾಕ್ಯಕ್ಕೆ ಗಮನಕೊಟ್ಟು ಅದರಲ್ಲಿರುವ ಸತ್ಯವನ್ನೂ ನಿಷ್ಕಪಟ ಮನಸ್ಸಿನಿಂದ ಅಂಗೀಕರಿಸಿದರೆ ಆಗ ದೇವರ ಮೇಲೂ ದೇವರ ಯೋಜನೆಯ ಮೇಲೂ ಪ್ರೀತಿ ಗೌರವಗಳು ಹುಟ್ಟುತ್ತವೆ. ಹಾಗೇ ಇತರರಿಗೂ ಸುವಾರ್ತೆ ಸಾರಬೇಕೆಂಬ ಕುತೂಹಲ ಉಂಟಾಗುತ್ತದೆ ಮತ್ತು ಅದೇ ಜೀವಮಾನದ ಉದ್ದೇಶವಾಗುತ್ತದೆ. ಇದರಿಂದ ನೀನು ಲೋಕದವರಿಂದಲೂ ಹೆಸರಿನ ಕ್ರೈಸ್ತರಿಂದಲೂ ಪ್ರತ್ಯೇಕಿಸಲ್ಪಡುವಿ. ಲೋಕವು ನಿನ್ನನ್ನು ಪ್ರೀತಿಸುವುದಿಲ್ಲ. ನಿನ್ನನ್ನು ತಿರಸ್ಕರಿಸಿ ಕ್ರಿಸ್ತನಿಗೋಸ್ಕರ ಹುಚ್ಚನೆಂದು ಎಣಿಸುತ್ತಾರೆ. ಯಾವ ರೀತಿ ಕರ್ತನನ್ನು ಅರಿಯಲಿಲ್ಲವೋ ಹಾಗೆಯೇ ನಮ್ಮನ್ನೂ ತಿಳಿಯುವುದಿಲ್ಲ. 2 ಕೊರಿ. 4:8–10; ಲೂಕ 6: 22; 1 ಯೋಹಾನ 4:1; 1 ಕೊರಿಂಥ 3:18 ದೇವರ ಯೋಜನೆಗಳನ್ನು ಮೂಲ ಗ್ರಂಥದಿಂದ ಅನುವಾದಿಸುವುದರಿಂದ ಅನೇಕರು ಉತ್ಸಾಹಿತರಾಗಿ ದೇವರ ಆರಾಧನೆಗೆ ಸಿದ್ಧರಾಗಿ ಸಜೀವ ಯಜ್ಞವಾಗಿ ಅರ್ಪಿತವಾಗಲು ಸಿದ್ಧರಾಗುತ್ತಾರೆ. ಇದನ್ನು ದೇವರ ವಾಕ್ಯದೊಂದಿಗೆ ಹೋಲಿಸಿ ಸಾಧಿಸಬಹುದು. ಆದರೆ ಇಲ್ಲಿ ಹೇಳಲ್ಪಟ್ಟಿರುವ ದೇವರ ಯೋಜನೆಯು ಒಂದೇ ಪೂರ್ಣವಾಗಿದ್ದು ಅದರ ವಿವಿಧ ಭಾಗಗಳೊಂದಿಗೆ ಹೊಂದಿಕೊಂಡು ವೇದೋಕ್ತಿಗಳಲ್ಲಿ ತೋರಿಸಿರುವ ದೈವಲೇಖನದ ಗುಣಗಳೊಂದಿಗೆ ಉತ್ತಮವಾಗಿ ಒಪ್ಪುವಂತಿವೆ. ಇದು ಜ್ಞಾನ, ನ್ಯಾಯ, ಪ್ರೀತಿ, ಶಕ್ತಿಯ ಉತ್ತಮ ತೋರಿಕೆ, ದೇವರ ವಾಕ್ಯದ ಸಾಕ್ಷಿಯು ಅಮಾನುಷ ರಚನೆಯಿಂದಲೂ ಮಾನವರ ಸಂಶೋಧನೆಗೆ ಮೀರಿದಾಗಿ ಅರ್ಥಮಾಡಿಕೊಳ್ಳದೇ ಇರುವವರೆಗೂ ಹೋಗುತ್ತದೆ. ಅನೇಕರಿಗೆ ಸಂದೇಹವಾದರೆ ಅಂಥವರು ಸತ್ಯವೇದವನ್ನು ಎಚ್ಚರಿಕೆಯಿಂದ ಓದಿದರೆ ಸಂದೇಹ ನಿವಾರಣೆಯಾಗುವುದು.

ನಾವು ಸತ್ಯದಿಂದ ನಿರೀಕ್ಷಿಸಬೇಕಾದ ದೇವರ ಅಪಾರವಾದ ಜ್ಞಾನ ಮತ್ತು ಕೃಪೆಯು ನಿಜವಾಗಿಯೂ ಅದ್ಭುತವಾಗಿದೆ. ಸತ್ಯವೇದವು ತೆರೆಯಲ್ಪಟ್ಟು ಜನರಿಗೆಲ್ಲಾ ಅದ್ಭುತ ವಸ್ತುಗಳನ್ನು ತೋರಿಸುತ್ತದೆ. ಕೀರ್ತ. 119:18 ಸತ್ಯವು ತಕ್ಕ ಕಾಲದಲ್ಲಿ ಮನೆಯವರಿಗೆ ಆಹಾರವಾಗಿ ಮತ್ತಾ. 24:45 ಅದರಿಂದ ಅವರು ಬೆಳೆಯುವರು. ಸತ್ಯವನ್ನು ನಾವು ಸ್ವೀಕರಿಸಿದರೆ ಅದರ ಜವಾಬ್ದಾರಿ ನಮ್ಮ ಮೇಲೆ ಇದೆ. ಇದರಿಂದ ಯಾರು ಅದನ್ನು ಸ್ವೀಕರಿಸುವರೋ ಅವರು ಅದಕ್ಕೆ ಸಾಲಗಾರರಾಗುವರು. ಹೀಗಾಗಿ ನಾವು ಸತ್ಯವನ್ನು ದೇವರ ಕುಟುಂಬದ ಇತರ ಸದಸ್ಯರಿಗೆ ಹಂಚಬೇಕು. ನಿಮ್ಮ ಬೆಳಕು ಪ್ರಕಾಶಿಸಲಿ, ಪುನಃ ಕತ್ತಲೆ ಬರುವುದಾದರೆ ಅದು ಕಾರ್ಗತ್ತಲಾಗುವುದು! ಬೆಳಕನ್ನು ಎತ್ತಿ ಹಿಡಿಯಿರಿ ಅದು ಜನರಿಗೆ ಯೋಗ್ಯವಾಗುವುದು.

## The Divine Weaving

"See the mystic Weaver sitting
High in heaven—His loom below.
Up and down the treadles go.
Takes, for web, the world's dark ages,
Takes, for woof, the kings and sages.
Takes the nobles and their pages,
Takes all stations and all stages.

Thrones are bobbins in His shuttle.
Armies make them scud and scuttle—
Web into the woof must flow:
Up and down the nations go!
At the Weaver's *will* they go!
"Calmly see the mystic Weaver
Throw His shuttle to and fro;
'Mid the noise and wild confusion,
Well the Weaver seems to know
What each motion, and commotion,
What each fusion, and confusion,
In the grand result will show!
"Glorious wonder! What a weaving!
To the *dull*, beyond believing.
Such no fabled ages know.
Only faith can see the mystery,
How, along the aisles of history,
Where the feet of sages go,
Loveliest to the fairest eyes,
Grand the mystic tapet lies!
Soft and smooth, and ever spreading,
As if made for angels' treading—
Tufted circles touching ever:
Every figure has its plaidings,
Brighter forms and softer shadings,
Each illumined—what a riddle!
From a cross that gems the middle.
"'Tis a saying—some reject it—
That its light is all reflected;
That the tapet's lines are given
By a Sun that shines in heaven!
'Tis believed—by all believing—
That great God, Himself, is weaving,
Bringing out the world's dark mystery,
In the light of faith and history;
And, as web and woof diminish,
Comes the grand and glorious finish,
When begin the Golden Ages,
Long foretold by seers and sages."

## ವೇದೋಕ್ತಿಗಳಲ್ಲಿ ಪಾಠಗಳು – ಮೊದಲನೆಯ ಭಾಗ

### ಆಧಾರ ಸತ್ಯವೇದ ವಚನಗಳ ಅನುಕ್ರಮಣಿಕೆ

**ಆದಿಕಾಂಡ**
1:26, 31
1:27
2:4
2:9, 16, 17
2:17
3:15
3:22
5
5:1
7:13
12:3
13:14–17
18:1,2
18:1, 2
18:18
19:24
19.36–38
22:18
26:4
38
49:10
29:28

**ವಿಮೋಚನಾಕಾಂಡ**
5:4–23
12:30–33
12:49
18:13–26
19:17–25
21:26, 27
22:21–24
22:25
23:4,5
23:9
23:12
24:12
26:30

**ಯಾಜಕಕಾಂಡ**
1:1
19:13
19:14
19:17
19:32
19:33, 34
24:22
25:9, 13–23, 27–30
25:36, 37
26:14–16

**ಅರಣ್ಯಕಾಂಡ**
11:16, 17, 24–30
26:52–56

**ಧರ್ಮೋಪದೇಶಕಾಂಡ**
1:15
1:16,17
1:17
5:1–5
9:9–11
12:19
14:27
18:15
18:15,19
22:10
24:14, 15
25:4
26:5
28:1–14
28:15 , 32
31:9–27
31:10–13

**ಯೆಹೋಶುವನು**
23:6–11, 12–16

**ನ್ಯಾಯಾಸ್ಥಾಪಕರು**
3:9–11
6:11–22
13:20

**1. ಸಮುವೇಲನು**
8:6–22
10:19
15:3

**1. ಅರಸುಗಳು**
18:4, 10,17,18
18:40
19:10

**1. ಪೂರ್ವಕಾಲ ವೃತ್ತಾಂತ**
16:16, 17
16:31–34
29:23

**2. ಪೂರ್ವಕಾಲ ವೃತ್ತಾಂತ**
13:8

**ನೆಹೆಮಿಯನು**
2:17
6:7

**ಯೋಬನು**
14:10, 21
38:7

**ಕೀರ್ತನೆಗಳು**
1:1
2:1–6, 10–12
2:8
2:8–12
5:4
8:4–8
8:5
8:5, 6
10:6
11:5–7
16:10
17:15
24:3, 4
25:14
27:5
30:5
34:7
34:13, 14
34:19
34:20
37:9
37:35
39:11
41:1
45:7
45:16
46:1–5
46:6
46;6–10
46:8–10
48:2
49:7, 15
49:14
50:3
72:7
72:8
76:10
77:18
78:70,71
88:3
89:32
91
94:13
97:2–6
97:11
107:26
107:39
110:1
110:2–6
110:5
112:6
119:18
119:105
141:5
149:8, 9

**ಜ್ಞಾನೋಕ್ತಿಗಳು**
4:18
15:3

**ಪ್ರಸಂಗಿ**
1:4
7:14
7:29
9:10
11:3
12:14

**ಯೆಶಾಯನು**
1:18

2:19
1:26
2:3
8:20
11:9
13:1–11
14:14
14:24–27
19:22
22:12
26:9
28:21
32:1
33:2–14, 15–24
35:1–6
35:8
35:8,9
35:9
35;10
40:5
42:1–7
42:7
45:7
45:11, 12,18
45:17
46:9–11
49:6
52:7
52:9
53:4
53:3–6
53:8,9,11
53:11
53:12
55:8,9
55:11
60:2,3
61:1
61:2
62:10
63:1–4
65:18
65:20
66:10–12
ಯೆರೆಮಿಯನು
3:17
3:22, 23
16:19
24:5–7
30:28
31:28
31–29, 30
31:29–34
31:34
32:40–42
33:6–16
38:6
48:16
51:2
ಪ್ರಲಾಪಗಳು
1:21
ಯೆಹೆಜ್ಕೇಲನು
7:10–19
11:19
16:48–54, 55
16:48–63
18:4
21:25–27
36:25, 36
36:26
37:11–14
ದಾನಿಯೇಲನು
2:31–45
2:35
2:37–43
2:44
2:43, 44,45
4:32
7:2–7
7:7,8
7:9, 13, 14, 22, 27
7:11
7:13–27
7:14, 17, 27
7:27
9:24–27
9:26
10:6, 10, 15,17
10:13
12:1
12:1, 4,10
12;3
12:4, 1
ಹೋಶೇಯನು
6:1
14:4
ಯೋವೇಲನು
2:9–16
ಆಮೋಸನು
3:2
3:6
ಮೀಕನು
5:2
ಹಬಕ್ಕೂಕನು
2:1–3,13,14
3:2–11
ಚೆಫನ್ಯನು
1:7–9, 14–18
2:2,3
2:2, 3
3:8,9
ಹಗ್ಗಾಯನು
2:7
ಜೆಕರ್ಯನು
1:15
9:11
11:12
14:1,6,7
14:9
ಮಲಾಕೀಯನು
1:11
3:1–3
3:15
3:15,18
4:1
4:2
ಮತ್ತಯನು
1:2–16
1:21
3:2
3:16,17
4:9
4:17
5:35
7:13,14
7:15
8:16,17
8:22
10:5,6
10:7
10:26
11:23,24
12:40
13:43
13:38,39,41,29
13:41–43
13:52
14:5
15:29
15:24
16:27
19:30
22:21
22:37–39
22:37–40
23:38
24:14
24:21,22
24:39,39
24:45
24:45,46
25:31
25:31–46
23:34
25:46
26:64
28:18
28:20
ಮಾರ್ಕನು
3:22–27
5:30
10:23

12:30,31

**ಲೂಕನು**

2:1
2:10
2:10,11
2:32
3:14
3:15
3:17, 21,22
3:22
3:23, 31,33,34
3:38
4:1,18
4:19
4:43
6:19
6:22
8:1
8:10
9:2
10:27
12:32
12:42
12:47,48
14:11
14:23
16:16
17:20–30
17:26
17:29
19:10
19:11
19:11–15
19:12
19:44
21:24
21:26
21:34, 35
22:29,30
24:21
24:21, 25–27

**ಯೋಹಾನನು**

1:9
1:14
1:18
1:29
3
3:5,6
3:8
3:13
3:16
3:17
3:36
5:22
5:26
5:44
12:31
14:3
14:26
14:30
15:5
16:8–11
16:12,13
16:13
16:33
17:5
17:16
17:22
19:36
20:19,26

**ಅಪೋಸ್ತಲರ ಕೃತ್ಯಗಳು**

1:6
1:6,7
2;31
3:19
3:19–21
3:20,21
3:21
3:22
3:23
4:12
4:19
5:29
5:31
7:5
9:7
10:28
10:37,38
10:38
10:45
11:1–3
11:1–18
11:9
15:14
15:6
15:14–16
17:11
17:31
24:25
26:9

**ರೋಮಾಪುರದವರಿಗೆ**

1:28
2:6,10,11
2:14
3:10
3:10,19,20
5:1,8
5:10,12,17–19,21
5:12
5:14
5:17
5:17–19
5:18,19
6:8
6:10,11
6:23
8:9
8:11
8:13,14
8:17
8:18
8:19
8:19–22
8:21
8:21,22
8:22,19
8:23–25
8:24
8:28–31
8:30
8:31–34
8:33,34
9:16
9:20,21
9:20
10:13,14
11:2
11:17
11:22
11:23,24
11:25,26
11:25–33
11:26–29
11:28–33
12:1
12:2
13:1
13:1–7
13:10
14:9
14;14,17
15:4
16:20

**1 ಕೊರಿಂಥದವರಿಗೆ**

2:6–14
2:7
2:8
2:13
2:14
3:11
3:12–15
3:18
4:5
4:8
4:8–10
4:10–17
5:5
6:2
6:3
12:12–28
14:1–6
15:13–22
15:21
15:22
15:24
15:25

15:25,26
15:25–28
15:27
15:28
15:38,44
15:38–49
15:44,52
15:49
15:53,54

**2 ಕೊರಿಂಥದವರಿಗೆ**

1:21
3:6
4:17
5:14
5:17
6:1
6:2
8:12
11:3
11:14
12:2–4
12:4
12:7
12:9

**ಗಲಾತ್ಯದವರಿಗೆ**

1:4
2:2
2:2,12,14
2:11–14
3:15–18
3:16
3:27,29
3:28
3:29
4

**ಎಫೆಸದವರಿಗೆ**

1:4,5
1:9,10,17,18
1:10
1:11
1:13,14
1:14
1:20,21
1:22
2:2
2:7
2:7–12
2:8
2:19
3:4–6
3:9
4:11–16
5:25–30
6:12

**ಫಿಲಿಪ್ಪಿಯವರಿಗೆ**

2:7,8
2:8,9
2:10
3:8–15
3:21
4:11

**ಕೊಲೆಸ್ಸೆಯವರಿಗೆ**

1:18
1:20
1:26
1:27
3;4

**1 ಥೆಸಲೊನೀಕ**

2:16
5:2,3

**2 ಥೆಸಲೊನೀಕ**

2:13
2:14

**1 ತಿಮೊಥೆಯನಿಗೆ**

2:3–6
2:4
2:4–6
2:5,6
2:6
2:11,12
2:14
4:10
5:24
6:6–12
6:14–12
6:–16
6:15
6:16

**2 ತಿಮೊಥೆಯನಿಗೆ**

1:10
2:11,12
2:12
2:13
3:1–4
3:1,13
3:12
3:15
3:15–17
4:8

**ತೀತನಿಗೆ**

1:12

**ಇಬ್ರಿಯರಿಗೆ**

1:3
1:3–5
1:4
1:9
1:14
2:5
2:7
2:7–9
2:9
2:14
2:16
3:1
3:5,6
3:8,9
4:1
5:14
6:4–8
6:6
6:18
7:19
9:11
9:11–20
10:1
10:4
10:8–18
10:16,29
10:20
10:26–31
10:31
10:38,39
11:13,39,40
11:19
11:32–38
11:39,40
11:40
12:1
12:26–29
13:5

**ಯಾಕೋಬನು**

1:18
2:5
2:10
2:23
4:4
5:1–4
5

**1ಪೇತ್ರನು**

1:2
1:3
1:10
1:10–13
1:11
1:12
1:12,13
1:19
2:2
2:4–6
2:9
2:21
3:15
3:18
3;20
5:4
5:5,6
5:10

**2 ಪೇತ್ರನು**

1:2–4
1:4
1:5–11
1:10,11

1:19
2:1
2:9
2:16
3:6
3:6,7
3:10–13
3:10–13
3:13

**1ಯೋಹಾನನು**

1:9
2:1
2:2
2:15
2:27
2:29
3:1
3:2
3:9
4:7
4:8
5:1,18
5:18

**ಯೂದನು**

11
23

**ಪ್ರಕಟಣೆ**

1:3
1:7
2:10
2:2,27
3:17,18
3:21
4:11
5:12
7:9–17
7:14,15
10:7
11:15
11:17,18
11:18
12:9
14:1
14:14
16:17–20
17:2
17:3–5
17:14
18:7
5:18
18:21
19:6,7,9
19:7
19:11–19
19:15,19
19:17
20:1–3
20:2
20:3
20:4
20:5
20:6
20:9
20:11–13
20:15
21:1
21:3–5
21:4
21:8
21:24–26
22:12,20
22:17

# Studies in the Scriptures



## The Most Comprehensive Bible Study Available!

---

**THE DIVINE PLAN OF THE AGES**—Gives an outline of the Divine Plan revealed in the Bible, relating to man's redemption and restitution. Contains 358 pages. Cloth bound pocket edition.

**THE TIME IS AT HAND**—Deals with Bible chronology and time prophecies, identifies the Antichrist, and points out the time and manner of our Lord's return. Contains 371 pages. Cloth bound pocket edition.

**THY KINGDOM COME**—Discusses time prophecies relating to the work of the church at this end of the age, the restoration of Israel, and the setting up of Christ's kingdom. One chapter pertains to the Great Pyramid of Egypt. Contains 384 pages. Cloth bound edition.

**THE BATTLE OF ARMAGEDDON**—Shows the dissolution of the present order. It discusses many prophecies relating to the end of the age, noting especially our Lord's great prophecy of Matt. 24. Contains 660 pages. Cloth bound pocket edition.

**THE ATONEMENT BETWEEN GOD AND MAN**—Contains 498 pages devoted to the fact and philosophy of Christ's atoning work; the nature of man, the divine punishment for sin, the truth about hell, and the operation of the Holy Spirit. Cloth bound pocket edition.

**THE NEW CREATION**—The first chapter deals with the Genesis account of creation. The remainder of the book discusses the laws, duties, privileges, and hopes of the consecrated followers of Jesus. Contains 738 pages. Cloth bound pocket edition.

---

*Write publishers for further information and Kannada Publications*

**THE BANGALORE BIBLE STUDENTS**
No. 149, 2nd Floor, Ejipura Main Road,
Vivek Nagar, Bangalore - 560 047. Email : bangalorebiblestudents@yahoo.com